ಗುರುವಾರ, ಮಾರ್ಚ್ 7, 2024 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗು
ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ನಟಿ ಸೋನಾಕ್ಷಿ ಸಿನ್ಹಾ ಕಾಣಿಸಿಕೊಂಡಿದ್ದು ಹೀಗೆ...

ಇನ್ವೆಸ್ಟ್ ಕರ್ನಾಟಕ

ಕರ್ನಾಟಕ ಸರ್ಕಾರ

ಪ್ರಗತಿಯ 250+ ದಿನಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಕರ್ನಾಟಕ

ಹೂಡಿಕೆಗೆ ವಿಪುಲ ಅವಕಾಶಗಳಿರುವ ರಾಜ್ಯ

ಭಾರತದ ನಾವೀನ್ಯತೆ, ತಯಾರಿಕೆ ಹಾಗೂ ಪ್ರತಿಭೆಯ ರಾಜಧಾನಿ

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ **ಶ್ರೀ ಎಂ.ಬಿ. ಪಾಟೀಲ** ಅವರು ಕೆ.ಎಚ್.ಐ.ಆರ್. ಸಿಟಿ ಬಗ್ಗೆ ಮಾತನಾಡುತ್ತಿರುವುದು.

"ಕರ್ನಾಟಕದ **'ಜ್ಞಾನ, ಆರೋಗ್ಯ, ನಾವೀನ್ಯತೆ ಮತ್ತು ಸಂಶೋಧನಾ ನಗರ (KHIR-City)'**, ಭಾರತದ ಬೌದ್ಧಿಕ-ಆಸ್ತಿ ಆಧಾರಿತ ಆರ್ಥಿಕತೆಯನ್ನು ಮುನ್ನಡೆಸಲಿದೆ ಹಾಗೂ ಮುಂಬರುವ ದಶಕಗಳಲ್ಲಿ ರಾಷ್ಟ್ರದ ನಾವೀನ್ಯತೆ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿಯ ಪ್ರಶಸ್ತ ತಾಣವಾಗಲಿದೆ."

ಆಕರ್ಷಿಸಿರುವ ಹೂಡಿಕೆ ಮೊತ್ತ **₹96,480 ಕೋಟಿ**

1,00,000+ ಉದ್ಯೋಗ ಅವಕಾಶಗಳು

240+ ಹೊಸ ಯೋಜನೆಗಳು

ಫಾಕ್ಸ್‌ಕಾನ್‌ನ ಬೃಹತ್ ಹೂಡಿಕೆ:
₹21,000+ ಕೋಟಿ
50,000+ ಉದ್ಯೋಗಗಳು

ವಿಸ್ಟ್ರಾನ್‌ನ ಲ್ಯಾಪ್‌ಟಾಪ್ ತಯಾರಿಕೆ ಯೋಜನೆ:
₹4,000+ ಕೋಟಿ
3,000+ ಉದ್ಯೋಗಗಳು

ಟಾಟಾ ಸಮೂಹದಿಂದ ವಿಮಾನಯಾನ ನೆಲೆಗೆ ಹೂಡಿಕೆ:
₹2,300+ ಕೋಟಿ
ಬೆಂಗಳೂರು ಪ್ರದೇಶವು ದಕ್ಷಿಣ ಭಾರತದ ವಿಮಾನಯಾನ ನೆಲೆಯಾಗಿ ಹೊರಹೊಮ್ಮಲಿದೆ

ಕೆಹೆಚ್‌ಐಆರ್ ಸಿಟಿ ನಿರ್ಮಾಣ:
- ₹40,000 ಕೋಟಿ ಹೂಡಿಕೆ ಗುರಿ
- 80,000+ ಉದ್ಯೋಗಾವಕಾಶಗಳು

"ದಾವೋಸ್-2024" ವಿಶ್ವ ಆರ್ಥಿಕ ಶೃಂಗದಲ್ಲಿ ಕರ್ನಾಟಕ ನಿಯೋಗ:
6,000ಕ್ಕೂ ಹೆಚ್ಚು ಉದ್ಯೋಗಾವಕಾಶಗಳ ನಿರೀಕ್ಷೆಯೊಂದಿಗೆ ಒಟ್ಟು ₹29,500 ಕೋಟಿ ಮೊತ್ತದ ಒಪ್ಪಂದಗಳಿಗೆ ಸಹಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನುಡಿದಂತೆ ನಡೆದಿದ್ದೇವೆ...
ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹಜ್ಯೋತಿ – ಪ್ರತಿ ಮನೆಗೆ 200 ಯುನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ – 10 kg
ಗೃಹಲಕ್ಷ್ಮಿ – ₹2000
ಯುವನಿಧಿ – ₹3000 | ₹1500

ಕೈಗಾರಿಕೆ ಹಾಗೂ ವಾಣಿಜ್ಯ ಇಲಾಖೆ, ಕರ್ನಾಟಕ

ನಾನು ಬರೀ ರಾಮ ಎನ್ನುವುದಿಲ್ಲ, 'ಸೀತಾರಾಮ' ಎನ್ನುತ್ತೇನೆ: ಮುಖ್ಯಮಂತ್ರಿ ಸಿದ್ದರಾಮಯ್ಯ

'ದೇವರ ಹೆಸರಲ್ಲಿ ರಾಜಕೀಯ ಮಾಡಲ್ಲ'

ಪ್ರಜಾವಾಣಿ ವಾರ್ತೆ

ಕೊಟ್ಟಲಗಿ (ಬೆಳಗಾವಿ ಜಿಲ್ಲೆ): 'ಬಿಜೆಪಿಯವರು ಮತ ಕೇಳಲೆಂದೇ ರಾಮಮಂದಿರ ಕಟ್ಟಿದರು. ಏನೇ ಕೇಳಿದರೂ ಬರೀ ರಾಮ ರಾಮ ರಾಮ ಎನ್ನುತ್ತಾರೆ. ನಾನೂ ನಮ್ಮೂರಿನಲ್ಲಿ ಎರಡು ಮಂದಿರ ಕಟ್ಟಿಸಿದ್ದೇನೆ. ನಾನು ಬರೀ ರಾಮ ಎನ್ನುವುದಿಲ್ಲ 'ಸೀತಾರಾಮ' ಎನ್ನುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅಥಣಿ ತಾಲ್ಲೂಕಿನ ಕೊಟ್ಟಲಗಿಯಲ್ಲಿ ₹1,486 ಕೋಟಿ ವೆಚ್ಚದ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

'ರಾಮ ಮಂದಿರವೆಂದರೆ ಬರೀ ರಾಮನಲ್ಲ. ಸೀತಾ, ಲಕ್ಷ್ಮಣ, ಹನುಮಂತ ಕೂಡ ಅಲ್ಲಿರುತ್ತಾರೆ. ನಾವು ಕೂಡ ಹನುಮನ ಜನ್ಮ ನೆಲೆ ಅಂಜನಾದ್ರಿ ಅಭಿವೃದ್ಧಿಗೆ ₹100 ಕೋಟಿ ಕೊಟ್ಟಿದ್ದೇವೆ. ಆದರೆ, ಅವರಂತೆ ದೇವರ ಹೆಸರಲ್ಲಿ ರಾಜಕೀಯ ಮಾಡುವುದಿಲ್ಲ' ಎಂದರು.

'ನರೇಂದ್ರ ಮೋದಿ ಸೇರಿ ಎಲ್ಲರೂ ಬರೀ ಬುರುಡೆ ಬಿಡುತ್ತಾರೆ. ಧರ್ಮ, ದೇವರ ಹೆಸರಲ್ಲಿ ಸಮಾಜದಲ್ಲಿ ಕಂದಕ ಮೂಡಿಸುತ್ತಾರೆ. ಮೋದಿ ಮಾತಿಗೆ ಕೋಲೆಬಸವನಂತೆ ತಲೆ ಅಲ್ಲಾಡಿಸುವವರನ್ನು ಲೋಕಸಭೆಗೆ ಕಳಿಸಬೇಡಿ. ರಾಜ್ಯದ ಪರ ಧ್ವನಿ ಎತ್ತುವ ನಮ್ಮ ಅಭ್ಯರ್ಥಿ ಗೆಲ್ಲಿಸಿ' ಎಂದು ಕರೆ ನೀಡಿದರು.

'ಶಾಸಕ ಲಕ್ಷ್ಮಣ ಸವದಿಗೆ ಮುಂದಿನ ದಿನಗಳಲ್ಲಿ ಸಚಿವ ಸ್ಥಾನ ಸಿಗಲಿದೆ. ಒಳ್ಳೆಯ ಕೆಲಸಗಾರ. ಅವರಿಗೆ ಪಕ್ಷದಲ್ಲಿ ಭವಿಷ್ಯವಿದೆ' ಎಂದರು.

'ರಾಜ್ಯ ಸರ್ಕಾರವು ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿದೆ. ಆದರೆ, ಬೃಹತ್ ಯೋಜನೆಗಳಿಗೆ ಕೇಂದ್ರವೇ ಅಡ್ಡಗಾಲು ಹಾಕಿದೆ. ಕೃಷ್ಣಾ ಮೇಲ್ದಂಡೆ ಯೋಜನೆ, ಭದ್ರಾ ಮೇಲ್ದಂಡೆ, ಮೇಕೆದಾಟು ಯೋಜನೆಗಳಿಗೆ ನೋಟಿಫಿಕೇಷನ್ ಹೊರಡಿಸುತ್ತಿಲ್ಲ. ಬಹುನಿರೀಕ್ಷೆಯ ಮಹದಾಯಿ ಯೋಜನೆಗೆ ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ನೀಡಿಲ್ಲ. ಹೀಗಾದರೆ ರೈತರು ಬದುಕುವುದು ಹೇಗೆ' ಎಂದು ಪ್ರಶ್ನಿಸಿದರು.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಟ್ಟಲಗಿಯಲ್ಲಿ ಬುಧವಾರ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಸಚಿವರಾದ ಎಂ.ಬಿ.ಪಾಟೀಲ, ಡಿ.ಕೆ.ಶಿವಕುಮಾರ್, ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ ಮತ್ತಿತರರು ಪಾಲ್ಗೊಂಡಿದ್ದರು

'ಅಧಿಕಾರಕ್ಕೆ ಬಂದರೆ ಎಂಎಸ್‌ಪಿ ಜಾರಿ'

ಬೆಳಗಾವಿ: 'ದೇಶದ ರೈತರು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಶ್ರಮಿಸುತ್ತಿದ್ದಾರೆ. ಇಲ್ಲದಿದ್ದರೆ, ನಾವು ಬೇರೆ ದೇಶಗಳ ಬಳಿ ಕೈಚಾಚಬೇಕಿತ್ತು. ಈ ಸಲ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತಂದರೆ, ಕೃಷಿಕರು ಬೆಳೆದ ಎಲ್ಲ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಒದಗಿಸುವ ಕಾಯ್ದೆ ಜಾರಿಗೆ ತರುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಇಲ್ಲಿನ ಸುವರ್ಣ ವಿಧಾನಸೌಧ ಆವರಣದಲ್ಲಿ ಬುಧವಾರ ಬೆಳಗಾವಿ ವಿಭಾಗದ ರೈತ ಫಲಾನುಭವಿಗಳಿಗೆ ವಿವಿಧ ಕೃಷಿ ಸಲಕರಣೆಗಳನ್ನು ವಿತರಿಸಿ ಅವರು ಮಾತನಾಡಿದರು.

'ಎಂಎಸ್‌ಪಿ ಕಾಯ್ದೆ ಜಾರಿಗೆ ಒತ್ತಾಯಿಸಿ, ರೈತರು ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿಲ್ಲ. ರೈತರಿಗೆ ಎಂಎಸ್‌ಪಿ ಜಾರಿಗೊಳಿಸುವುದು ಸರ್ಕಾರದ ಕರ್ತವ್ಯ. ಇದರಿಂದ ಅವರು ನಷ್ಟ ಅನುಭವಿಸುವುದು ತಪ್ಪುತ್ತದೆ. ಕೇಂದ್ರದಲ್ಲಿ ನಾವು ಅಧಿಕಾರ ಹಿಡಿದರೆ, ಇದನ್ನು ಜಾರಿಗೊಳಿಸುತ್ತೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಘೋಷಿಸಿದ್ದಾರೆ' ಎಂದರು.

'₹900 ಕೋಟಿ ಮೊತ್ತದ ಸಲಕರಣೆ ವಿತರಣೆ': 'ರೈತರು ಇಂದಿನ ಕಾಲಘಟ್ಟಕ್ಕೆ ತಕ್ಕಂತೆ ಬೇಸಾಯ ಮಾಡಬೇಕು. ಇದಕ್ಕೆ ಪೂರಕವಾಗಿ ಕೃಷಿ ಯಂತ್ರೋಪಕರಣಗಳನ್ನು ಬಳಸಬೇಕು. ಹಾಗಾಗಿ ಸಬ್ಸಿಡಿ ದರದಲ್ಲಿ ಯಂತ್ರೋಪಕರಣ ನೀಡುತ್ತಿದ್ದೇವೆ. ಬೆಳಗಾವಿ ವಿಭಾಗಮಟ್ಟದಲ್ಲಿ ಇಂದು 2,700 ರೈತರಿಗೆ ₹13.12 ಕೋಟಿ ಮೊತ್ತದ ಕೃಷಿ ಸಲಕರಣೆ ವಿತರಿಸಿದ್ದೇವೆ. ಇದೇ ಮಾದರಿಯಲ್ಲಿ ರಾಜ್ಯದಾದ್ಯಂತ ₹900 ಕೋಟಿಗಿಂತ ಅಧಿಕ ಮೊತ್ತದ ಸಲಕರಣೆ ವಿತರಿಸುತ್ತಿದ್ದೇವೆ' ಎಂದು ಸಿದ್ದರಾಮಯ್ಯ ಹೇಳಿದರು.

ಸುದ್ದಿ 2 ನಿಮಿಷ

'ಅಮೇಠಿಯಿಂದ ರಾಹುಲ್ ಸ್ಪರ್ಧೆ'

ಅಮೇಠಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರು ಅಮೇಠಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ನಾಯಕರೊಬ್ಬರು ಬುಧವಾರ ತಿಳಿಸಿದರು.

ದೆಹಲಿಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿ ಹಿಂದಿರುಗಿದ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಪ್ರದೀಪ್ ಸಿಂಘಾಲ್, 'ರಾಹುಲ್ ಗಾಂಧಿ ಅವರು ಅಮೇಠಿಯಿಂದ ಕಣಕ್ಕಿಳಿಯಬಹುದು. ಅವರ ಹೆಸರನ್ನು ಶೀಘ್ರವೇ ಘೋಷಿಸಲಾಗುತ್ತದೆ ಎಂದು ಹೇಳಿದರು. ಆದರೆ, ಪಕ್ಷದ ಕೇಂದ್ರ ನಾಯಕತ್ವವು ಈ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

ರಾಹುಲ್, 2004ರಿಂದ 2019ರವರೆಗೆ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 2019ರಲ್ಲಿ ಬಿಜೆಪಿ ಅಭ್ಯರ್ಥಿ ಸ್ಮೃತಿ ಇರಾನಿ ಎದುರು ಪರಾಭವಗೊಂಡಿದ್ದರು.

ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಟಿಪ್ರಾ ಮೋಥಾ ಶೀಘ್ರ ಸೇರ್ಪಡೆ

ಅಗರ್ತಲಾ (ಪಿಟಿಐ): ತ್ರಿಪುರಾದ ಪ್ರಮುಖ ವಿರೋಧ ಪಕ್ಷ ಟಿಪ್ರಾ ಮೋಥಾ, ಲೋಕಸಭಾ ಚುನಾವಣೆಗೂ ಮೊದಲೇ ಬಿಜೆಪಿ ನೇತೃತ್ವದ ಸರ್ಕಾರದ ಜೊತೆ ಸೇರಲಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ರಾಜೀವ್ ಭಟ್ಟಾಚಾರ್ಯ ಬುಧವಾರ ತಿಳಿಸಿದರು.

60 ಸದಸ್ಯ ಬಲದ ವಿಧಾನಸಭೆಯಲ್ಲಿ ಟಿಪ್ರ ಮೋಥಾದ 13 ಶಾಸಕರಿದ್ದಾರೆ. ಪಕ್ಷವು ಎರಡು ಬಣಗಳಾಗುವ ಸಾಧ್ಯತೆ ಇದೆ ಎಂದೂ ಅವರು ಹೇಳಿದರು.

'ನೂತನ ಸಚಿವರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದ ದಿನಾಂಕವನ್ನು ಇನ್ನೂ ಅಂತಿಮಗೊಳಿಸಿಲ್ಲ' ಎಂದು ತಿಳಿಸಿದರು.

ಎಂವಿಎ: ಸೀಟು ಹಂಚಿಕೆಗೆ ಸಹಮತ

ಪ್ರಜಾವಾಣಿ ವಾರ್ತೆ

ಮುಂಬೈ: ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಸೀಟು ಹಂಚಿಕೆ ಮಾಡಿಕೊಳ್ಳುವ ಬಗ್ಗೆ ಮುಂಬೈನಲ್ಲಿ ನಡೆದ ವಿರೋಧ ಪಕ್ಷಗಳ ಒಕ್ಕೂಟ ಮಹಾ ವಿಕಾಸ್ ಆಘಾಡಿ (ಎಂವಿಎ) ಸಭೆಯಲ್ಲಿ ಕೆಲವು ವಿಚಾರದಲ್ಲಿ ಒಮ್ಮತದ ಅಭಿಪ್ರಾಯ ಮೂಡಿದೆ. ಈ ಕುರಿತ ಅಂತಿಮ ನಿರ್ಣಯಕ್ಕಾಗಿ ಮಾ.9ರಂದು ಎಂವಿಎ ಮತ್ತೆ ಸಭೆ ಸೇರುವ ಸಾಧ್ಯತೆ ಇದೆ.

ಸಭೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್, ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ, ಎನ್‌ಸಿಪಿ (ಶರದ್ ಪವಾರ್ ಬಣ) ಮುಖ್ಯಸ್ಥ ಶರದ್ ಪವಾರ್ ಹಾಗೂ ವಂಚಿತ್ ಬಹುಜನ ಆಘಾಡಿ ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಮತ್ತಿತರರು ಭಾಗಿಯಾಗಿದ್ದರು.

ಬಾಗಲಕೋಟೆ ಲೋಕಸಭಾ ಕ್ಷೇತ್ರ: ಕಾಂಗ್ರೆಸ್‌ನಿಂದ ಸ್ಪರ್ಧೆಗೆ ತೀವ್ರ ಪೈಪೋಟಿ

ಅರ್ಜಿ ಸಲ್ಲಿಸದವರ ಹೆಸರೂ ಮುಂಚೂಣಿಗೆ

• ಬಸವರಾಜ ಹವಾಲ್ದಾರ

ಪ್ರಜಾವಾಣಿ ವಿಶೇಷ

ಬಾಗಲಕೋಟೆ: ಲೋಕಸಭಾ ಚುನಾವಣೆಯಲ್ಲಿ ಬಾಗಲಕೋಟೆ ಕ್ಷೇತ್ರದಿಂದ ಸ್ಪರ್ಧಿಸಲು ವೀಕ್ಷಕರ ಮುಂದೆ ಅರ್ಜಿ ಸಲ್ಲಿಸಿ, ಟಿಕೆಟ್‌ಗಾಗಿ ಪ್ರಯತ್ನಿಸುತ್ತಿರುವವರ ನಡುವೆಯೇ ಎರಡು ಹೊಸ ಹೆಸರುಗಳು ಸೇರ್ಪಡೆಯಾಗಿವೆ.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಪುತ್ರಿ ಸಂಯುಕ್ತಾ ಪಾಟೀಲ ಹೆಸರು ಒಂದೆಡೆ ಕೇಳಿ ಬಂದರೆ, ಇನ್ನೊಂದೆಡೆ ಮಾಜಿ ಶಾಸಕ ಆನಂದ ನ್ಯಾಮಗೌಡ ಹೆಸರೂ ಮುಂಚೂಣಿಯಲ್ಲಿದೆ. ಆದರೆ, ಇವರಿಬ್ಬರೂ ವೀಕ್ಷಕರಿಗೆ ಅರ್ಜಿ ಸಲ್ಲಿಸಿಲ್ಲ. ಕಳೆದ ಬಾರಿ ಸ್ಪರ್ಧಿಸಿದ್ದ ವೀಣಾ ಕಾಶಪ್ಪನವರ, ಮಾಜಿ ಸಚಿವ ಅಜಯಕುಮಾರ ಸರನಾಯಕ ಸೇರಿ 8 ಮಂದಿ ಆಕಾಂಕ್ಷಿಗಳು ಟಿಕೆಟ್‌ಗಾಗಿ ಲೋಕ ಸಭಾ ಚುನಾವಣಾ ವೀಕ್ಷಕ, ಸಚಿವ ಪ್ರಿಯಾಂಕ ಖರ್ಗೆ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ.

ವಿಜಯಪುರ ಜಿಲ್ಲೆಯ ಸಚಿವ ಶಿವಾನಂದ ಪಾಟೀಲ ತಮ್ಮ ಪುತ್ರಿ ಸಂಯುಕ್ತಾ ಪಾಟೀಲ ಅವರಿಗೆ ಬಾಗಲಕೋಟೆಯಿಂದ ಟಿಕೆಟ್ ಕೊಡಿಸಲು ಪ್ರಯತ್ನ ನಡೆಸಿದ್ದಾರೆ. ಜಿಲ್ಲೆ ಮುಖಂಡರ ಜೊತೆಗೆ ಅವರು ಈಗಾಗಲೇ ಮಾತುಕತೆಯನ್ನೂ ನಡೆಸಿದ್ದಾರೆ. ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕಿ ಆಗಿರುವ ಸಂಯುಕ್ತಾ ಪಾಟೀಲ ಅವರು ಕಾಂಗ್ರೆಸ್ ಯುವ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದಾರೆ.

ಕೇಂದ್ರದ ಮಾಜಿ ಸಚಿವ ಸಿದ್ದು ನ್ಯಾಮಗೌಡರ ಪುತ್ರ, ಮಾಜಿ ಶಾಸಕ ಆನಂದ ನ್ಯಾಮಗೌಡ ಅವರಿಗೆ ಲೋಕಸಭಾ ಚುನಾವಣೆಗೆ ಸಿದ್ಧರಿರುವಂತೆ ಪಕ್ಷದ ಹೈಕಮಾಂಡ್ ಸೂಚಿಸಿದೆ. 'ವಿಧಾನಸಭಾ ಚುನಾವಣೆಗೆ ಆಕಾಂಕ್ಷಿಯಾಗಿದ್ದ ಅವರು, ಲೋಕಸಭಾ ಚುನಾವಣೆಗೆ ಕಣಕ್ಕಿಳಿಯಲು ಹಿಂಜರಿಯುತ್ತಿದ್ದಾರೆ' ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

'4 ಬಾರಿ ಬಿಜೆಪಿಯಿಂದ ಗೆದ್ದಿರುವ ಪಿ.ಸಿ.ಗದ್ದಿಗೌಡರ ಗಾಣಿಗ ಸಮಾಜದವರು. ಅವರ ವಿರುದ್ಧ ಅದೇ ಸಮುದಾಯಕ್ಕೆ ಸೇರಿದ ಆನಂದ ನ್ಯಾಮಗೌಡ ಅವರನ್ನು ಕಣಕ್ಕಿಳಿಸಿ, ಮತ ವಿಭಜನೆ ಮೂಲಕ ಪಕ್ಷ ಗೆಲುವಿನ ಲೆಕ್ಕ ಹಾಕಿದೆ. ಇದಕ್ಕೆ ಒತ್ತಾಸೆಯಾಗಿ ಗಾಣಿಗ ಸಮುದಾಯದ ಮುಖಂಡ, ಶಾಸಕ ಲಕ್ಷ್ಮಣ ಸವದಿ ನಿಂತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಂತೆ ಪಕ್ಷದ ಮುಖಂಡರು ತಿಳಿಸಿದ್ದಾರೆ. ಜಮಖಂಡಿ ಕ್ಷೇತ್ರದಲ್ಲಿ ಎಲ್ಲರೊಂದಿಗೆ ಚರ್ಚಿಸಿ, ನಿರ್ಧರಿಸಲು ಸ್ವಲ್ಪ ಸಮಯ ತೆಗೆದುಕೊಂಡಿರುವೆ

ಆನಂದ ನ್ಯಾಮಗೌಡ, ಮಾಜಿ ಶಾಸಕ

ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ ಮತ್ತು ರಾಜ್ಯ ನಾಯಕರಿಗೆ ಅರ್ಜಿ ಸಲ್ಲಿಸಿರುವೆ. ಪಕ್ಷ ಅವಕಾಶ ನೀಡಿದರೆ, ಬಾಗಲಕೋಟೆ ಕ್ಷೇತ್ರದಿಂದ ಸ್ಪರ್ಧಿಸುವೆ

ಸಂಯುಕ್ತಾ ಪಾಟೀಲ, ಕಾಂಗ್ರೆಸ್ ನಾಯಕಿ

ಶಿಂದೆ, ಅಜಿತ್ ಜೊತೆ ಶಾ ಸಭೆ

ಮುಂಬೈ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರೊಂದಿಗೆ ಬುಧವಾರ ಸಭೆ ನಡೆಸಿದರು. ರಾಜ್ಯದ 48 ಲೋಕಸಭಾ ಕ್ಷೇತ್ರಗಳ ಸೀಟು ಹಂಚಿಕೆ ಕುರಿತು ಮಾತುಕತೆ ನಡೆದಿದೆ ಎಂದು ಹೇಳಲಾಗಿದೆ.

30 ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಬಿಜೆಪಿ ಹೇಳುತ್ತಿದೆ. ಅಜಿತ್ ಪವಾರ್ ಅವರ ಪಕ್ಷಕ್ಕಿಂತ ಶಿಂದೆ ನೇತೃತ್ವದ ಶಿವಸೇನಾ ಹೆಚ್ಚು ಕಡೆಗಳಲ್ಲಿ ಕಣಕ್ಕಿಳಿಯಲಿದೆ ಎಂದೂ ಮೂಲಗಳು ತಿಳಿಸಿವೆ.

ಚುನಾವಣೆಯಲ್ಲಿ ಬಿಜೆಪಿಯು 370ಕ್ಕೂ ಹೆಚ್ಚು ಸ್ಥಾನಗಳಲ್ಲಿ ಹಾಗೂ ಎನ್‌ಡಿಎ 400 ಸ್ಥಾನಗಳಲ್ಲಿ ಜಯಭೇರಿ ಬಾರಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಪದೇ ಪದೇ ಹೇಳುತ್ತಿದ್ದಾರೆ. ಬಿಜೆಪಿ ಗುರಿ ಸಾಧಿಸಲು ಮಹಾರಾಷ್ಟ್ರ ನಿರ್ಣಾಯಕ ಪಾತ್ರ ವಹಿಸುತ್ತದೆ. 48 ಕ್ಷೇತ್ರಗಳ ಪೈಕಿ 45ರಲ್ಲಿ ಜಯ ಗಳಿಸುವ ಗುರಿಯನ್ನು ಬಿಜೆಪಿ ಹೊಂದಿದೆ.

'ಕಾಂಗ್ರೆಸ್‌ನಿಂದ ಆಹ್ವಾನ; ವಾರದಲ್ಲಿ ತೀರ್ಮಾನ'

ಪ್ರಜಾವಾಣಿ ವಾರ್ತೆ



ಜಯಪ್ರಕಾಶ್ ಹೆಗ್ಡೆ

ಬೆಂಗಳೂರು: 'ಕಾಂಗ್ರೆಸ್ ಸೇರುವಂತೆ ಆ ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆಹ್ವಾನಿಸಿದ್ದಾರೆ. ಸ್ನೇಹಿತರು, ಆಪ್ತರ ಜೊತೆ ಚರ್ಚಿಸಿ ಇನ್ನೊಂದು ವಾರದಲ್ಲಿ ಈ ಬಗ್ಗೆ ತೀರ್ಮಾನಿಸುತ್ತೇನೆ' ಎಂದು ಹಿಂದುಳಿದ ವರ್ಗಗಳ ಆಯೋಗದ ನಿಕಟಪೂರ್ವ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಹೇಳಿದರು.

ಸುರ್ಜೇವಾಲಾ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ ಬಗ್ಗೆ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಭೇಟಿ ಮಾಡುವಂತೆ ಅವರು ಕರೆದಿದ್ದರು. ಹೀಗಾಗಿ ಭೇಟಿ ಮಾಡಿ, ಕೆಲವು ವಿಚಾರಗಳನ್ನು ಚರ್ಚಿಸಿದ್ದೇನೆ' ಎಂದರು.

'ಲೋಕಸಭೆ ಚುನಾವಣೆಗೆ ಸ್ಪರ್ಧಿಸುವಂತೆ ಹಿತೈಷಿಗಳು ಹೇಳಿದರೆ ಕಣಕ್ಕಿಳಿಯುತ್ತೇನೆ' ಎಂದ ಅವರು, 'ಬಿಜೆಪಿಯ ಯಾವೊಬ್ಬ ನಾಯಕರೂ ನನ್ನನ್ನು ಇದುವರೆಗೆ ಸಂಪರ್ಕಿಸಿಲ್ಲ. ನಾನೂ ಅವರನ್ನು ಭೇಟಿ ಮಾಡಿಲ್ಲ' ಎಂದರು.

ಸಂಪುಟ ಸಭೆಯಲ್ಲಿ ಚರ್ಚಿಸಿ ಅಂಗೀಕರಿಸಬೇಕು: 'ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಅಂಗೀಕರಿಸಬೇಕು. ಸಮೀಕ್ಷಾ ವರದಿ ಅವೈಜ್ಞಾನಿಕವಾಗಿದೆ ಎಂಬುದು ಸುಳ್ಳು. ಒಟ್ಟು 5.98 ಕೋಟಿ ಜನರ ಸಮೀಕ್ಷೆ ನಡೆಸಲಾಗಿದೆ' ಎಂದು ಅವರು ಹೇಳಿದರು.

ಸಮೀಕ್ಷೆ ನಡೆಸುವಾಗ ನನ್ನನ್ನು ಯಾರೂ ಭೇಟಿ ಮಾಡಿಲ್ಲ' ಎಂದು ತುಮಕೂರಿನ ಸಿದ್ಧಗಂಗಾ ಶ್ರೀ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಹೆಗ್ಡೆ, 'ಶಿಕ್ಷಕರು ಸಮೀಕ್ಷಾ ಕಾರ್ಯದಲ್ಲಿ ಭಾಗಿಯಾಗಿದ್ದರು. ಮನೆಯ ಸದಸ್ಯರಿಂದ ಅವರು ಮಾಹಿತಿ ಪಡೆದಿದ್ದಾರೆ. ಮನೆಯಲ್ಲಿ ಇಲ್ಲದ ವೇಳೆ ಕುಟುಂಬದ ಸದಸ್ಯರಿಂದ ಮಾಹಿತಿ ಪಡೆದಿರುತ್ತಾರೆ. ಹೀಗಾಗಿ, ತಮ್ಮನ್ನು ಭೇಟಿ ಮಾಡಿಲ್ಲವೆಂದು ಶ್ರೀಗಳು ಹೇಳಿರಬಹುದು' ಎಂದರು.

ಬಿಜೆಪಿ: 8ರಿಂದ 10 ಸಂಸದರಿಗೆ ಟಿಕೆಟ್ ತಪ್ಪುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸ್ಪರ್ಧೆಗೆ ಒಲವು ತೋರದ ಜೈಶಂಕರ್
- ಶೋಭಾಗೆ ಟಿಕೆಟ್ ಕೊಡಿಸಲು ಬಿಎಸ್‌ವೈ ಪ್ರಯತ್ನ
- ಹಾವೇರಿ ಕ್ಷೇತ್ರದ ಟಿಕೆಟ್‌ಗೆ ಬೊಮ್ಮಾಯಿಗೋ, ಶೆಟ್ಟರ್‌ಗೋ?

ನವದೆಹಲಿ: ಲೋಕಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸುವ ಸಂಬಂಧ ಕರ್ನಾಟಕದ ಹಿರಿಯ ನಾಯಕರ ಜತೆಗೆ ಬಿಜೆಪಿ ವರಿಷ್ಠರು ಬುಧವಾರ ಸಂಜೆ ಸಮಾಲೋಚನೆ ನಡೆಸಿದರು.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತಿತರರು ಭಾಗವಹಿಸಿದ್ದರು.

ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿವೆ. ಜೆಡಿಎಸ್‌ಗೆ ಮೂರರಿಂದ ನಾಲ್ಕು ಕ್ಷೇತ್ರಗಳನ್ನು ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಸಹಮತ ಸೂಚಿಸಿದ್ದಾರೆ. ಬುಧವಾರದ ಸಭೆಯಲ್ಲಿ 15ರಿಂದ 18 ಕ್ಷೇತ್ರಗಳಿಗೆ ಸಂಭಾವ್ಯರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದು ಗೊತ್ತಾಗಿದೆ. ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸಭೆ ಇದೇ 8 ರಂದು ನಡೆಯಲಿದೆ. ಎರಡನೇ ಪಟ್ಟಿಯಲ್ಲಿ ರಾಜ್ಯದ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಇರುವ ಸಂಭವ ಇದೆ.

ಆಡಳಿತ ವಿರೋಧಿ ಅಲೆ ಹಾಗೂ ವಯಸ್ಸಿನ ಕಾರಣಕ್ಕೆ 8ರಿಂದ 10 ಸಂಸದರಿಗೆ ಟಿಕೆಟ್ ಕೈ ತಪ್ಪುವ ಸಾಧ್ಯತೆ ಇದೆ. ಬಿಜೆಪಿ ವರಿಷ್ಠರು ರಾಜ್ಯದಲ್ಲಿ ಮೂರು ಸಮೀಕ್ಷೆಗಳನ್ನು ನಡೆಸಿದ್ದಾರೆ. ಕೆಲವು ಸಂಸದರು ತೀವ್ರ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ ಎಂಬ ಪ್ರಸ್ತಾಪ ಇದೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಕಾರ್ಯವೈಖರಿಗೆ ಕಾರ್ಯಕರ್ತರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ, ಶೋಭಾ ಅವರಿಗೆ ಯಡಿಯೂರಪ್ಪ ಬೆಂಬಲ ಇದೆ. ಹೀಗಾಗಿ, ಅವರು ಉಡುಪಿ- ಚಿಕ್ಕಮಗಳೂರಿನಿಂದಲೇ ಮತ್ತೆ ಕಣಕ್ಕಿಳಿಯುವ ಸಾಧ್ಯತೆ ಇದೆ.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಜತೆಗೆ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಹೆಸರನ್ನು ಹುಬ್ಬಳ್ಳಿ ಧಾರವಾಡಕ್ಕೆ ರಾಜ್ಯ ನಾಯಕರು ಶಿಫಾರಸು ಮಾಡಿದ್ದಾರೆ. ಹಾವೇರಿ ಕ್ಷೇತ್ರಕ್ಕೂ ಶೆಟ್ಟರ್ ಹೆಸರಿದೆ. ಈ ಕ್ಷೇತ್ರಕ್ಕೆ ಬಸವರಾಜ ಬೊಮ್ಮಾಯಿ ಅಭ್ಯರ್ಥಿಯಾಗುವ ಸಾಧ್ಯತೆ ದಟ್ಟವಾಗಿದೆ.

ಬೀದರ್ ಕ್ಷೇತ್ರದಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಅವರಿಗೆ ಸ್ಥಳೀಯ ನಾಯಕರ ತೀವ್ರ ವಿರೋಧ ಇದೆ. ಖೂಬಾ ಜತೆಗೆ ಗುರುರಾಜ್ ಕೊಳ್ಳೂರು ಹೆಸರನ್ನು ರಾಜ್ಯದಿಂದ ಕಳುಹಿಸಲಾಗಿದೆ.

ಚಿತ್ರದುರ್ಗ ಕ್ಷೇತ್ರದಲ್ಲಿ ಸ್ಪರ್ಧಿಸಲು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಉತ್ಸುಕರಾಗಿಲ್ಲ. ಹಾಗಾಗಿ, ಅಚ್ಚರಿಯ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಂಭವ ಇದೆ ಎಂದು ಮೂಲಗಳು ಹೇಳಿವೆ.

ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಸಂಸದ ನಳಿನ್ ಕುಮಾರ್ ಕಟೀಲು ಬದಲು ಬ್ರಿಜೇಶ್ ಚೌಟ ಅವರಿಗೆ ಅವಕಾಶ ಲಭಿಸಬಹುದು. ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಅರುಣ್ ಪುತ್ತಿಲ ಈಗಾಗಲೇ ಘೋಷಿಸಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ಮಾಜಿ ಸಚಿವ ಡಾ.ಕೆ.ಸುಧಾಕರ್ ಹಾಗೂ ಶಾಸಕ ಎಸ್.ಆರ್.ವಿಶ್ವನಾಥ್ ಪುತ್ರ ಅಲೋಕ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಅಲೋಕ್ ಕಣಕ್ಕಿಳಿಸಲು ಬಿಎಸ್‌ವೈ ಉತ್ಸುಕತೆ ತೋರಿದ್ದಾರೆ. ಬೆಂಗಳೂರು ದಕ್ಷಿಣದಿಂದ ವಿದೇಶಾಂಗ ಸಚಿವ ಜೈಶಂಕರ್ ಸ್ಪರ್ಧೆ ಮಾಡಲಿದ್ದಾರೆ ಎಂಬ ಸುದ್ದಿಗಳು ಹರಡಿದ್ದವು. ಆದರೆ, ಕಣಕ್ಕಿಳಿಯಲು ಅವರು ಒಲವು ತೋರುತ್ತಿಲ್ಲ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

ದೆಹಲಿಯಲ್ಲಿ ಇಂದು ಸಿಇಸಿ ಸಭೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಲೋಕಸಭಾ ಚುನಾವಣೆಗೆ ಕರ್ನಾಟಕ ಸೇರಿದಂತೆ 12 ರಾಜ್ಯಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿಯ (ಸಿಇಸಿ) ಮೊದಲ ಸಭೆ ಗುರುವಾರ ಸಂಜೆ ನಡೆಯಲಿದೆ.

ದೆಹಲಿ, ಛತ್ತೀಸಗಢ, ರಾಜಸ್ಥಾನ, ತೆಲಂಗಾಣ, ಆಂಧ್ರ ಪ್ರದೇಶ, ಕೇರಳ, ಮಣಿಪುರ, ಮೇಘಾಲಯ, ತ್ರಿಪುರಾ, ನಾಗಾಲ್ಯಾಂಡ್ ಮತ್ತು ಸಿಕ್ಕಿಂ ರಾಜ್ಯಗಳ ಅಭ್ಯರ್ಥಿಗಳ ಕುರಿತೂ ಸಭೆಯಲ್ಲಿ ಚರ್ಚೆಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ರಾಜ್ಯಗಳ ಅಭ್ಯರ್ಥಿಗಳ ಹೆಸರನ್ನು ಪಕ್ಷವು ಗುರುವಾರ ಘೋಷಿಸುತ್ತದೆಯೋ ಅಥವಾ ಒಂದೆರಡು ದಿನಗಳ ನಂತರ ಪ್ರಕಟಿಸುತ್ತದೆಯೋ ಎಂಬುದು ಸ್ಪಷ್ಟವಾಗಿಲ್ಲ.

ವಿವಿಧ ರಾಜ್ಯಗಳಲ್ಲಿನ ಪರಿಶೀಲನಾ ಸಮಿತಿಗಳು ಈಗಾಗಲೇ ಸಭೆಗಳನ್ನು ನಡೆಸಿ ಹೆಸರುಗಳನ್ನು ಸಿಇಸಿಗೆ ರವಾನಿಸಿವೆ. ರಾಹುಲ್ ಗಾಂಧಿ ಅವರು ಅಮೇಠಿ ಮತ್ತು ವಯನಾಡ್‌ನಿಂದ ಮತ್ತೊಮ್ಮೆ ಸ್ಪರ್ಧಿಸಲಿದ್ದಾರೆ ಎಂಬ ಊಹಾಪೋಹಗಳಿವೆ. ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರಾಯ್‌ಬರೇಲಿಯಿಂದ ಕಣಕ್ಕಿಳಿಯಲಿದ್ದಾರೆ ಎನ್ನಲಾಗುತ್ತಿದೆ. ಆದರೆ ಪಕ್ಷದ ನಾಯಕರು ಈ ಕುರಿತು ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಈ ಕುರಿತು ಸಿಇಸಿ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಮೂಲಗಳು ಹೇಳಿವೆ.

2-3 ದಿನಗಳಲ್ಲಿ ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಲಿದೆ. ಇದರ ಬಗ್ಗೆ ಪಕ್ಷದ ಕೇಂದ್ರ ಸಮಿತಿ ಯೊಂದಿಗೆ ಚರ್ಚಿಸಲು ದೆಹಲಿಗೆ ತೆರಳುವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಗುರುವಾರ ದೆಹಲಿಯಲ್ಲಿ ಚುನಾವಣಾ ಸಮಿತಿ ಸಭೆ ನಡೆಯಲಿದ್ದು, ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗುವುದು

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕಿ ಸೋನಿಯಾ ಗಾಂಧಿ, ಸಂಸದ ರಾಹುಲ್ ಗಾಂಧಿ ಹಾಗೂ ಸಮಿತಿಯ ಸದಸ್ಯರು ಸಭೆಯಲ್ಲಿ ಇರಲಿದ್ದಾರೆ.

ಪ್ರಣಾಳಿಕೆಯ ಕರಡು ಸಲ್ಲಿಕೆ: ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಕಾಂಗ್ರೆಸ್ ಪಕ್ಷವು ಪ್ರಣಾಳಿಕೆ ಸಿದ್ಧಪಡಿಸುವ ಕೆಲಸವನ್ನೂ ಮುಗಿಸಿದೆ. ಪ್ರಣಾಳಿಕೆ ಸಮಿತಿಯ ಅಧ್ಯಕ್ಷ ಪಿ. ಚಿದಂಬರಂ ಅವರು ಖರ್ಗೆ ಅವರಿಗೆ ಬುಧವಾರ ಕರಡು ಪ್ರತಿಯನ್ನು ಸಲ್ಲಿಸಿದರು. ಈ ಕರಡು ಅನುಮೋದನೆಗೂ ಮುನ್ನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಯಾಗಲಿದೆ.

ಪಾಕಿಸ್ತಾನ ಪರ ಘೋಷಣೆ- ಪೊಲೀಸ್ ಇಲಾಖೆ ವರದಿಯೇ ಅಧಿಕೃತ: ಮುಖ್ಯಮಂತ್ರಿ

ಬಿಜೆಪಿಗೆ ಬದ್ಧತೆ ಇದೆಯೇ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪಾಕ್ ಪರ ಘೋಷಣೆ ಕೂಗಿದ ಪ್ರಕರಣದ ಬಗ್ಗೆ ನಮ್ಮ ಸರ್ಕಾರ ತನಿಖೆ ನಡೆಸಿದೆ. ಆದರೆ ಬಿಜೆಪಿ ತನ್ನ ಅವಧಿಯಲ್ಲಿ ಪಾಕ್ ಪರ ಘೋಷಣೆ ಕೂಗಿದ ಪ್ರಕರಣಕ್ಕೆ ತನಿಖೆಯೇ ನಡೆಸಲಿಲ್ಲ. ಅವರಿಗೆ ದೇಶದ ಬಗ್ಗೆ ಬದ್ಧತೆ ಇದೆಯೇ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು ಪಾಕ್ ಪರ ಘೋಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, 'ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾಗ ಬಿಜೆಪಿ ಸರ್ಕಾರ ಅವರನ್ನು ಯಾಕೆ ಬಂಧಿಸಲಿಲ್ಲ? ನಾವು ರಾಜಕೀಯ ಮಾಡಬಾರದು ಎಂದು ಸುಮ್ಮನೆ ಇದ್ದೆವು. ಅವರ ಈ ಢೋಂಗಿ ಆಟಗಳನ್ನು ನೋಡಿ ನಮ್ಮ ಸ್ಥಳೀಯ ಶಾಸಕರು ದೂರು ನೀಡಿದ್ದು, ತನಿಖೆ ನಡೆಸುತ್ತಿದ್ದೇವೆ' ಎಂದು ಹೇಳಿದರು.

'ಕೊಲೆ ಕೊಲೆಯೇ, ಕಳ್ಳತನ ಕಳ್ಳತನವೇ, ನುಡಿಮುತ್ತು ನುಡಿಮುತ್ತೇ ಅಲ್ಲವೇ? ದೇಶದ್ರೋಹ ದೇಶದ್ರೋಹವೇ ಅಲ್ಲವೇ? ನಮ್ಮ ಸರ್ಕಾರದಲ್ಲಿ ಘೋಷಣೆ ಕೂಗಿದವರ ವಿರುದ್ಧ ವಿಚಾರಣೆ ನಡೆಸಿದ್ದೇವೆ. ದೇಶದ ಬಗ್ಗೆ ಬದ್ಧತೆ ನಮಗಿದೆಯೋ? ಬಿಜೆಪಿಯವರಿಗೆ ಇದೆಯೋ?'' ಎಂದು ತಿರುಗೇಟು ನೀಡಿದರು.

ದೇಶದ ಜನರಿಗೆ ಸ್ವಾತಂತ್ರ್ಯದ ಹಕ್ಕು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ನಮಗಿದ್ದಷ್ಟು ದೇಶಾಭಿಮಾನ ಬಿಜೆಪಿಗಿಲ್ಲ. ಅವರು ದ್ವೇಷ ಪ್ರೇಮಿಗಳು, ನಾವು ದೇಶಪ್ರೇಮಿಗಳು

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ವರ್ತಕ ಶಫಿ ನಾಶಿಪುಡಿ ಗಡಿಪಾರಿಗೆ ಒತ್ತಾಯ- ಬ್ಯಾಡಗಿ (ಹಾವೇರಿ ಜಿಲ್ಲೆ): 'ಪಾಕಿಸ್ತಾನದ ಪರ ಘೋಷಣೆ ಕೂಗಿ ದೇಶದ್ರೋಹ ಕೆಲಸ ಮಾಡಿದ ಆರೋಪಿ ಬ್ಯಾಡಗಿ ವರ್ತಕ ಮೊಹಮ್ಮದ್ ಶಫಿ ನಾಶಿಪುಡಿ ಅವರನ್ನು ಗಡಿಪಾರು ಮಾಡಬೇಕು' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಮೋಟೆಬೆನ್ನೂರ ಗ್ರಾಮ ಘಟಕದ ಕಾರ್ಯಕರ್ತರು ತಹಶೀಲ್ದಾರ್ ಪುಟ್ಟರಾಜಗೌಡ್ರ ಅವರಿಗೆ ಮನವಿ ಸಲ್ಲಿಸಿದರು.

'ಪಾಸ್ ನೀಡಿರುವ ಆರೋಪ ಸತ್ಯಕ್ಕೆ ದೂರ'

ಬ್ಯಾಡಗಿ (ಹಾವೇರಿ ಜಿಲ್ಲೆ): 'ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪದ ಮೇಲೆ ವರ್ತಕ ಮೊಹಮ್ಮದ್ ಶಫಿ ನಾಸಿಪುಡಿ ಮೇಲೆ ಸರ್ಕಾರ ಕೈಕೊಳ್ಳುವ ಎಲ್ಲಾ ಕಾನೂನು ಕ್ರಮಗಳನ್ನು ಸ್ವಾಗತಿಸುವೆ' ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

'ಫೆಬ್ರುವರಿ 27ರಂದು ಮೊಹಮ್ಮದ್ ಶಫಿ ಬೆಂಗಳೂರಿಗೆ ಬಂದಿದ್ದು ನನಗೆ ಗೊತ್ತಿಲ್ಲ. ನನ್ನನ್ನು ಭೇಟಿಯೂ ಆಗಿಲ್ಲ. ಪಾಕಿಸ್ತಾನ ಪರ ಘೋಷಣೆ ಕೂಗಿದ್ದು ಮಾಧ್ಯಮಗಳಿಂದ ತಿಳಿದು ಬಂತು. ಯಾರು ತಪ್ಪು ಮಾಡಿದ್ದಾರೆ, ಅವರಿಗೆ ಕಾನೂನು ರೀತಿ ಶಿಕ್ಷೆ ಆಗುತ್ತೆ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಉತ್ತಮ ವ್ಯಾಪಾರ ಮಾಡಿಕೊಂಡಿದ್ದ ಮೊಹಮ್ಮದ್ ಶಫಿ, ದೇಶದ ವಿರುದ್ಧ ಘೋಷಣೆ ಕೂಗಿದ್ದು ನನಗೆ ನೋವಾಗಿದೆ. ವಿಧಾನಸೌಧಕ್ಕೆ ಹೋಗುವ ಮೊದಲು ನನ್ನ ಹತ್ತಿರ ಬಂದಿಲ್ಲ. ಮುಖ ಸಹ ತೋರಿಸಿಲ್ಲ. ಅವರಿಗೆ ಪಾಸ್ ಕೊಡುವ ವಿಷಯ ಉದ್ಭವಿಸುವುದಿಲ್ಲ. ಅವರಿಗೆ ಪಾಸ್ ನೀಡಿದ ಆರೋಪ ಸತ್ಯಕ್ಕೆ ದೂರ' ಎಂದರು.

'ಎಫ್‌ಎಸ್‌ಎಲ್ ವರದಿ ಒಪ್ಪಲ್ಲ

'ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆಗೆ ಸಂಬಂಧಿಸಿದಂತೆ ಖಾಸಗಿ ಸಂಸ್ಥೆಗಳು ನೀಡುವ ಎಫ್‌ಎಸ್‌ಎಲ್ ವರದಿಯನ್ನು ಸರ್ಕಾರ ಒಪ್ಪಲ್ಲ. ಪೊಲೀಸ್ ಇಲಾಖೆ ನೀಡುವ ವರದಿಯೇ ಅಧಿಕೃತ. ಅದನ್ನು ಆಧರಿಸಿ ತನಿಖೆ ನಡೆಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಿರಸಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಹಿಂದಿನ ಪ್ರಕರಣ ಒಬ್ಬನ ಬಂಧನ

ಮಂಡ್ಯ: ಎರಡು ವರ್ಷಗಳ ಹಿಂದೆ ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪದ ಮೇಲೆ, ಬಿಜೆಪಿ ಕಾರ್ಯಕರ್ತರಾದ ಶಿವಕುಮಾರ್ ಆರಾಧ್ಯ ಮತ್ತು ರವಿ ಎಂಬುವವರ ವಿರುದ್ಧ ನಗರದ ಪಶ್ಚಿಮ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ರವಿ ಅವರನ್ನು ಬಂಧಿಸ ಲಾಗಿದೆ. ಕಾಂಗ್ರೆಸ್ ಕಾರ್ಯಕರ್ತ ಕನ್ನಂಬಾಡಿ ಕುಮಾರ್ ದೂರು ನೀಡಿದ್ದರು.

ಮೋದಿ ವಿರುದ್ಧ ಪಾಕಿಸ್ತಾನ ವಿದೇಶಾಂಗ ಸಚಿವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ 2022, ಡಿ.18ರಂದು ನಗರದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಆರೋಪಿ ರವಿ, 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿದ್ದ, ಮತ್ತೊಬ್ಬ ಕಾರ್ಯಕರ್ತ ಆತನ ಬಾಯಿ ಮುಚ್ಚಿದ್ದರು. ಆ ಕುರಿತ ವಿಡಿಯೊ ವೈರಲ್ ಆಗಿತ್ತು.

ಗುರುವಾರ, ಮಾರ್ಚ್ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 67 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ದ್ವೀಪರಾಷ್ಟ್ರ ಮಾಲ್ದೀವ್ಸ್ ರಾಜಕೀಯ ಆಯಾಮ–ಪರಿಣಾಮಗಳು

ಸೆನ್ಸೆಕ್ಸ್ 74,085 | ನಿಫ್ಟಿ 22,474 | ಚಿನ್ನ (Std. 10g) ₹66,650 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹73,600 (ಬೆಂಗಳೂರು) | ₹/$ 82.83

‘ಪ್ರತಿಭಟನೆಯ ಬಿರುಸು ಒಪ್ಪಿದ ಕೇಂದ್ರ’ 11

5,8,9 ಹಾಗೂ 11 ನೇ ತರಗತಿಗೆ ಸಂಬಂಧಿಸಿ ಹೈಕೋರ್ಟ್ ಮಹತ್ವದ ತೀರ್ಪು

ಬೋರ್ಡ್ ಪರೀಕ್ಷೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆ ಹಾಗೂ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಮೂಲಕ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧದ ಅಧಿಸೂಚನೆ ಪ್ರಶ್ನಿಸಿ ‘ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ ಕರ್ನಾಟಕ’ (ರುಪ್ಸಾ) ಹಾಗೂ ‘ಅನುದಾನರಹಿತ ಮಾನ್ಯತೆ ಹೊಂದಿದ ಶಾಲೆಗಳ ಸಂಘಟನೆ’ (ಅವರ್ ಸ್ಕೂಲ್ಸ್) ಸಲ್ಲಿಸಿದ್ದ ಎರಡು ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ರವಿ ವಿ.ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ.

‘ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 22ರ ಅನುಸಾರ ಪರೀಕ್ಷಾ ವ್ಯವಸ್ಥೆಯಲ್ಲಿ ಆಂತರಿಕ ಅಥವಾ ಬಾಹ್ಯ ಮೌಲ್ಯಮಾಪನ ಮಾಡಲು ನಿಯಮಗಳಿಗೆ ತಿದ್ದುಪಡಿ ಮಾಡಬೇಕು ಎಂದು ಹೇಳಲಾಗಿದೆ. ಅಲ್ಲದೆ, ಕಲಂ 145 (4)ರ ಪ್ರಕಾರ ಯಾವುದೇ ನಿಯಮದಲ್ಲಿ ಬದಲಾವಣೆ ತರಬೇಕಾದರೆ ಅದನ್ನು ಶಾಸನ ಸಭೆಯಲ್ಲಿ ಚರ್ಚಿಸಿದ ಬಳಿಕವೇ ಕ್ರಮಕ್ಕೆ ಮುಂದಾಗಬೇಕು ಎಂದು ಹೇಳಲಾಗಿದೆ. ಆದರೆ, ಸರ್ಕಾರ ಬೋರ್ಡ್ ಪರೀಕ್ಷೆ ನಡೆಸುವುದಕ್ಕೆ ಈ ರೀತಿಯ ಯಾವುದೇ ನಿಯಮಕ್ಕೆ ತಿದ್ದುಪಡಿ ಮಾಡಿಲ್ಲ. ಆದ್ದರಿಂದ, ಬೋರ್ಡ್ ಪರೀಕ್ಷೆ ನಡೆಸಲು ಮುಂದಾಗಿರುವ ಕ್ರಮ ಶಿಕ್ಷಣ ಕಾಯ್ದೆಯ ಕಲಂ 22ಕ್ಕೆ ತದ್ವಿರುದ್ಧವಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

4ನೇ ಪುಟ ನೋಡಿ

ಮುಖ್ಯಾಂಶಗಳು

- ಬೋರ್ಡ್ ಪರೀಕ್ಷೆ ಕೋಮಲ ಮನಸ್ಸುಗಳಿಗೆ ಹೊರೆ
- ಅಧಿಸೂಚನೆಗೆ ಮುನ್ನ ಅಹವಾಲುಗಳನ್ನು ಆಲಿಸಿಲ್ಲ
- ನಿಯಮಗಳನ್ನು ರೂಪಿಸದೆ ಲೋಪ

ಎರಡು ಅಧಿಸೂಚನೆಗಳು

‘2023–24ನೇ ಸಾಲಿನಿಂದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ 5,8,9ನೇ ತರಗತಿಗಳ ವಿದ್ಯಾರ್ಥಿಗಳಿಗೆ ಸಂಕಲನಾತ್ಮಕ ಮೌಲ್ಯಮಾಪನ (ಎಸ್‌ಎ–2) ಮತ್ತು 11ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಮೂಲಕ ನಡೆಸಲಾಗುತ್ತದೆ’ ಎಂದು ರಾಜ್ಯ ಸರ್ಕಾರ 2023ರ ಅಕ್ಟೋಬರ್ 6 ಮತ್ತು 9ರಂದು ಎರಡು ಪ್ರತ್ಯೇಕ ಅಧಿಸೂಚನೆಗಳನ್ನು ಹೊರಡಿಸಿತ್ತು. ಅರ್ಜಿದಾರರು ಈ ಅಧಿಸೂಚನೆಗಳನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಹೊಸ ಪರೀಕ್ಷಾ ಯೋಜನೆಯನ್ನು ಕಾನೂನು ಬದ್ಧಗೊಳಿಸಲು ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 145ರ ಪಾಲನೆ ಕಡ್ಡಾಯ. ಈ ಪ್ರಕರಣದಲ್ಲಿನ ಅಧಿಸೂಚನೆಗಳು ಆರ್‌ಟಿಇ ಕಲಂ 30ಕ್ಕೆ ವಿರುದ್ಧವಾಗಿವೆ.
ರವಿ ವಿ.ಹೊಸಮನಿ, ನ್ಯಾಯಮೂರ್ತಿ

ಶಂಕಿತನ ಸುಳಿವು ನೀಡಿದರೆ ₹10 ಲಕ್ಷ

ಬೆಂಗಳೂರು: ನಗರದ ‘ದಿ ರಾಮೇಶ್ವರಂ ಕೆಫೆ’ಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಆರಂಭಿಸಿರುವ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಶಂಕಿತ ಆರೋಪಿ ಫೋಟೊವನ್ನು ಬಿಡುಗಡೆ ಮಾಡಿ, ಸುಳಿವು ನೀಡಿದವರಿಗೆ ₹10 ಲಕ್ಷ ಬಹುಮಾನ ಘೋಷಿಸಿದೆ. 4

ಒಳ ಪುಟಗಳು

ದೆಹಲಿ: ಬಿಜೆಪಿ ಶಾಸಕರ ಅಮಾನತು ರದ್ದು 11

ಜಟಾಯು ಲಕ್ಷದ್ವೀಪದ ಮಿನಿಕಾಯ್‌ನಲ್ಲಿ ‘ಐಎನ್‌ಎಸ್ ಜಟಾಯು’ ನೌಕಾನೆಲೆಗೆ ಬುಧವಾರ ಚಾಲನೆ ನೀಡಿದ ನಂತರ ನೌಕಾಪಡೆಯ ಅಧಿಕಾರಿಗಳು ಪಥಸಂಚಲನ ನಡೆಸಿದರು –ಪಿಟಿಐ ಚಿತ್ರ

ಚಿನಕುರಳಿ

ಪ್ರಕಾಶ್ ಶೆಟ್ಟಿ



Scan to subscribe
KAS ಪೂರ್ವಭಾವಿ ಪರೀಕ್ಷಾ ಸರಣಿ
12 ಪರೀಕ್ಷೆಗಳು
24 ಗಂಟೆಗಳ ಒಳಗೆ ಪರಿಹಾರ ಮತ್ತು ಶ್ರೇಯಾಂಕ
ಪ್ರತಿ ಪರೀಕ್ಷೆಗೆ 3 ಪ್ರಯತ್ನ
ನಿಮ್ಮ ತಯಾರಿಯನ್ನು ಪೂರ್ಣಗೊಳಿಸಿ
EXAM DH ಪ್ರಜಾವಾಣಿ MASTERMIND
ಇಂದೇ ಚಂದಾದಾರರಾಗಿ!
ಹೆಚ್ಚಿನ ಮಾಹಿತಿಗಾಗಿ ವಾಟ್ಸಾಪ್: 96069 66128

ತ್ಯಾಜ್ಯ ನೀರು ಮರುಬಳಕೆ ವಾರದೊಳಗೆ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿರುವ ಬೆನ್ನಲ್ಲೇ, ಅಪಾರ್ಟ್‌ಮೆಂಟ್‌ಗಳ ತ್ಯಾಜ್ಯ ನೀರನ್ನು ಸಂಸ್ಕರಿಸಿ, ಶುದ್ಧೀಕರಿಸಿ ಮರುಬಳಕೆಗಾಗಿ ಮಾರಾಟ ಮಾಡಲು ಅವಕಾಶ ನೀಡುವ ಮಾನದಂಡಗಳನ್ನು ರೂಪಿಸಿ ವಾರದೊಳಗೆ ಆದೇಶ ಹೊರಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬಿಬಿಎಂಪಿ, ಬಿಡಿಎ, ನಗರಾಭಿವೃದ್ಧಿ ಇಲಾಖೆ, ಪರಿಸರ ಇಲಾಖೆಯ ಅಧಿಕಾರಿಗಳು ಮತ್ತು ಅಪಾರ್ಟ್‌ಮೆಂಟ್‌ಗಳ ನಿವಾಸಿಗಳ ಸಂಘದ ಪ್ರತಿನಿಧಿಗಳು ಹಾಗೂ ಬಾಧ್ಯಸ್ಥರ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಈ ವಿಷಯ ತಿಳಿಸಿದರು.

‘ಬೆಂಗಳೂರಿನ ದೊಡ್ಡ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ಗಳು ಸಂಸ್ಕರಿಸಿದ ಹೆಚ್ಚುವರಿ ನೀರನ್ನು ಕುಡಿಯಲು ಯೋಗ್ಯವಲ್ಲದ ಉದ್ದೇಶಗಳಿಗೆ ಬಳಕೆ ಮಾಡಬಹುದು. ಸಂಸ್ಕರಿಸಿದ ನೀರನ್ನು ಮಾರಾಟ ಮಾಡಲು ಮಾರ್ಗಸೂಚಿ ಮತ್ತು ಮಾನದಂಡಗಳನ್ನು ಹೊರಡಿಸಲಾಗುವುದು’ ಎಂದು ಹೇಳಿದರು.

‘ರಾಜಧಾನಿ ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಆದರೆ, ಅದಕ್ಕೆ ಪೂರಕವಾಗಿ ಕುಡಿಯುವ ನೀರು ಪೂರೈಕೆ ಕಷ್ಟಸಾಧ್ಯವಾಗುತ್ತಿದೆ. ಹೀಗಾಗಿ ಜಲಮೂಲಗಳ ರಕ್ಷಣೆ ಮತ್ತು ನೀರಿನ ಮರುಬಳಕೆಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ’ ಎಂದು ಖಂಡ್ರೆ ಪ್ರತಿಪಾದಿಸಿದರು.

ಬೆಂಗಳೂರಿನ ನೀರಿನ ಅವಶ್ಯಕತೆಯು ದಿನಕ್ಕೆ 2,600 ದಶಲಕ್ಷ ಲೀಟರ್ (ಎಂಎಲ್‌ಡಿ) ದಾಟಿದೆ. ಅದರಲ್ಲಿ 1,460 ಎಂಎಲ್‌ಡಿಯಷ್ಟು ಮಾತ್ರ ಕಾವೇರಿ ನೀರು ಪೂರೈಕೆಯಾಗುತ್ತಿದೆ. ಅಧಿಕಾರಿಗಳ ಪ್ರಕಾರ ಅಂದಾಜು 1,392 ಎಂಎಲ್‌ಡಿಯಷ್ಟು ನೀರು ಕೊಳವೆಬಾವಿಗಳಿಂದ ಪೂರೈಕೆ ಆಗುತ್ತಿದೆ. ಮುಂಗಾರು ಕೊರತೆಯಿಂದಾಗಿ ನೀರಿನ ಅಭಾವ ಉಲ್ಬಣಗೊಂಡಿದೆ. ಬೆಂಗಳೂರು, ಮೈಸೂರು ಮತ್ತು ಮಂಡ್ಯದ ನೀರಿನ ಮೂಲವಾಗಿರುವ ಕೆಆರ್‌ಎಸ್ ಜಲಾಶಯದಲ್ಲಿ ಈಗ 15.72 ಟಿಎಂಸಿ ಅಡಿ ನೀರಿದೆ. 2023ರಲ್ಲಿ ಇದೇ ದಿನ (ಮಾರ್ಚ್ 6) 28.44 ಟಿಎಂಸಿ ಅಡಿ ನೀರು ಸಂಗ್ರಹ ಇತ್ತು.

ನೀರಿನ ಕೊರತೆ ಇದ್ದರೂ, ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸಿಕೊಳ್ಳಲು ಬೆಂಗಳೂರಿನವರು ಹಿಂದೇಟು ಹಾಕುತ್ತಿದ್ದಾರೆ. ಮಳೆ ನೀರು ಕೊಯ್ಲು ಘಟಕಗಳನ್ನು ಸ್ಥಾಪಿಸದ ಕಾರಣಕ್ಕೆ ಕಳೆದ ತಿಂಗಳ ಅಂತ್ಯದವರೆಗೆ 39,291 ವಸತಿ ಘಟಕಗಳು ಪ್ರತಿ ತಿಂಗಳು ₹1.94 ಕೋಟಿ ದಂಡ ಪಾವತಿಸಿವೆ.

4ನೇ ಪುಟ ನೋಡಿ

ಕಟ್ಟಡಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ಆ ನೀರನ್ನು ಸಮೀಪದ ಕೆರೆಗಳಿಗೆ ಹರಿಸಿದರೆ ಕೆರೆಗಳನ್ನು ಪುನರುಜ್ಜೀವನಗೊಳಿಸಬಹುದು
ಈಶ್ವರ ಖಂಡ್ರೆ, ಅರಣ್ಯ, ಪರಿಸರ ಸಚಿವ

ಕಿಟ್‌ಗಳ ಅಕ್ರಮ ಮಾರಾಟ: ಹೆಣ್ಣುಭ್ರೂಣ ಹತ್ಯೆಯ ಶಂಕೆ

₹440ರ ಮಾತ್ರೆ ₹4 ಸಾವಿರಕ್ಕೆ ಮಾರಾಟ?

• ಎಂ.ಎನ್.ಯೋಗೇಶ್

ಮಂಡ್ಯ: ‘ಭ್ರೂಣಹತ್ಯೆಗೆ ಬಳಸುವ ವೈದ್ಯಕೀಯ ಕಿಟ್‌ಗಳನ್ನು ಜಿಲ್ಲೆಯಾದ್ಯಂತ ಕಾಳಸಂತೆಯಲ್ಲಿ 10 ಪಟ್ಟು ಹೆಚ್ಚು ಬೆಲೆಗೆ ಮಾರಾಟ ಮಾಡಲಾಗಿದೆ. ₹440 ಮುಖಬೆಲೆಯ ಮಾತ್ರೆ ಗಳನ್ನು ₹4 ಸಾವಿರದವರೆಗೂ ಮಾರಿದ್ದಾರೆ’ ಎಂಬ ಅಂಶ ಬೆಳಕಿಗೆ ಬಂದಿದೆ.

‘ಜಿಲ್ಲೆಯಲ್ಲಿ ಅವ್ಯಾಹತವಾಗಿ ಹೆಣ್ಣು-ಭ್ರೂಣಹತ್ಯೆ ನಡೆದಿದೆ’ ಎನ್ನಲಾದ ಪ್ರಕರಣ ಸಂಬಂಧ ಆರೋಗ್ಯ ಇಲಾಖೆ ಅಧಿಕಾರಿಗಳು ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ಇಂಥ ಕುತೂಹಲಕಾರಿ ಅಂಶಗಳು ಪತ್ತೆಯಾಗಿವೆ.

‘2023 ಜನವರಿಯಿಂದ ಡಿ. 12ರವರೆಗೆ ಜಿಲ್ಲೆಯ 12 ಸಗಟು ಔಷಧ ಮಾರಾಟ ಮಳಿಗೆಗಳಲ್ಲಿ 6,626 ಎಂಟಿಪಿ (ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ) ಕಿಟ್ ಮಾರಾಟವಾಗಿವೆ. ಈ ಕಿಟ್‌ನಲ್ಲಿ ಮಿಫೆಪ್ರಿಸ್ಟಾನ್, ಮಿಸೋಪ್ರೋಸ್ಟ್ ಮಾತ್ರೆಗಳಿದ್ದು, ಅವುಗಳ ಮುಖಬೆಲೆ ₹440. ಆದರೆ ಕೆಲ ವೈದ್ಯರು, ಔಷಧಿ ಅಂಗಡಿಗಳ ಮಾಲೀಕರು ನೇರವಾಗಿ ₹4 ಸಾವಿರದವರೆಗೂ ಮಾರಾಟ ಮಾಡಿದ್ದಾರೆ’ ಎಂಬುದು ಆರೋಗ್ಯ ಇಲಾಖೆಯ ತನಿಖೆಯಿಂದ ಪತ್ತೆಯಾಗಿದೆ.

4ನೇ ಪುಟ ನೋಡಿ

ಏಕರೂಪ ನೀತಿ ಜಾರಿಗೆ ಒತ್ತಾಯ

‘ಹೆಣ್ಣುಭ್ರೂಣಹತ್ಯೆ ಪ್ರಕರಣವನ್ನು ಆರೋಗ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿರುವುದರಿಂದ ಜಿಲ್ಲೆಯಾದ್ಯಂತ ಎಂಟಿಪಿ ಕಿಟ್‌ಗಳು ದೊರೆಯುತ್ತಿಲ್ಲ. ಕೆಲವರು ಹೊರ ಜಿಲ್ಲೆಗಳಿಂದ ತರಿಸುತ್ತಿದ್ದು, ಹೆಣ್ಣು ಭ್ರೂಣ ಹತ್ಯೆ ತಡೆಯಲು ಸಾಧ್ಯವಾಗಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ತುರ್ತು ಪರಿಸ್ಥಿತಿ ಹೊರತುಪಡಿಸಿ ಯಾವುದೇ ವೈದ್ಯಕೀಯ ಚಟುವಟಿಕೆಗೆ ಕಿಟ್ ದೊರೆಯಬಾರದು’ ಎಂಬುದು ತಜ್ಞ ವೈದ್ಯರೊಬ್ಬರ ಅಭಿಪ್ರಾಯ.

‘ಆಸರೆ’ ಆಸ್ಪತ್ರೆ ವಿರುದ್ಧ ಎಫ್‌ಐಆರ್

ಬೆಂಗಳೂರು: ನಿಯಮ ಉಲ್ಲಂಘಿಸಿ 74 ಗರ್ಭಪಾತಗಳನ್ನು ನಡೆಸಿದ್ದಾರೆಂಬ ಆರೋಪದ ಮೇಲೆ ನೆಲಮಂಗಲದ ಆಸರೆ ಆಸ್ಪತ್ರೆಯ ಮಾಲೀಕ ರವಿಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ದೂರು ನೀಡಿದ್ದು, ನೆಲಮಂಗಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಆಸ್ಪತ್ರೆಯಲ್ಲಿದ್ದ ಶಸ್ತ್ರಚಿಕಿತ್ಸಾ ಕಡತವನ್ನು ಆರೋಗ್ಯ ಅಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದಾರೆ.

‘ನೆಲಮಂಗಲದ ಬಿ.ಎಚ್. ರಸ್ತೆಯಲ್ಲಿರುವ ಆಸರೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದಾಗ ಈ ಕೃತ್ಯ ನಡೆಸಿರುವುದು ಗೊತ್ತಾಯಿತು. ಪರವಾನಗಿ ಪಡೆಯದೆ ಗರ್ಭಪಾತ ನಡೆಸಲಾಗಿದೆ. ವೈದ್ಯಕೀಯ ಗರ್ಭಪಾತ ಕಾಯ್ದೆ–1971 ಅನ್ನು ಉಲ್ಲಂಘಿಸಲಾಗಿದೆ’ ಎಂದು ದೂರು ನೀಡಿದ್ದಾರೆ.

‘ಆಸ್ಪತ್ರೆಯಲ್ಲಿ ನಡೆಸಿದ ಗರ್ಭಪಾತಗಳಿಗೆ ಸಂಬಂಧಿಸಿದ ಕಡತವನ್ನು ನಿರ್ವಹಣೆ ಮಾಡಿಲ್ಲ. ಬದಲಿಗೆ ಗರ್ಭಪಾತಕ್ಕೆ ಸಂಬಂಧಿಸಿದಂತೆ ಎಲ್ಲ ವಿವರಗಳನ್ನು ತಮ್ಮ ಸಂಸ್ಥೆಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿರುವ ಕಡತದಲ್ಲಿ ನಮೂದಿಸಲಾಗಿದೆ. ಇದು ನಿಯಮ ಉಲ್ಲಂಘನೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಆಸ್ಪತ್ರೆಯಲ್ಲಿ ನಡೆಸಿರುವ ಗರ್ಭಪಾತ ಪ್ರಕರಣಗಳಿಗೆ ಪೂರಕ ದಾಖಲೆಗಳು (ಅಲ್ಟ್ರಾಸೌಂಡ್ ರಿಪೋರ್ಟ್‌ಗಳು) ಕೇಸ್ ಶೀಟ್‌ನಲ್ಲಿ ಲಭ್ಯ ಇರುವುದಿಲ್ಲ. ಗರ್ಭಪಾತ ನಡೆಸಿದ ತಿಂಗಳ ವಿವರಗಳನ್ನು ಇದುವರೆಗೂ ನಿಗದಿತ ನಮೂನೆಯಲ್ಲಿ ಜಿಲ್ಲಾ ಪ್ರಾಧಿಕಾರಕ್ಕೆ ಸಲ್ಲಿಸಿರುವುದಕ್ಕೆ ಆಸ್ಪತ್ರೆಯಲ್ಲಿ ಯಾವುದೇ ದಾಖಲೆ ಇಲ್ಲ’ ಎಂದು ದೂರಿನಲ್ಲಿ ಹೇಳಲಾಗಿದೆ.



ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಪ್ರದರ್ಶನ ತಾಕುಗಳಲ್ಲಿ ಬುಧವಾರ ಮಹಿಳೆಯೊಬ್ಬರು ಮಗುವಿನೊಂದಿಗೆ ಗಿಡಗಳನ್ನು ವೀಕ್ಷಿಸಿದರು

ಮೇಳದಲ್ಲಿ ಹೂವಿನ ತಾಕುಗಳಲ್ಲಿ ಶಾಲಾ ಮಕ್ಕಳು ಮಾಹಿತಿ ಪಡೆದುಕೊಂಡರು

–ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್

ಮೀಟರ್ ಅಲಸಂದೆ ತಳಿ

ಸೆಲ್ಫಿ ಪಾಯಿಂಟ್‌ನಲ್ಲಿ ಫೋಟೊ ತೆಗೆಯುತ್ತಿರುವ ಬಾಲಕಿ

ರಾಷ್ಟ್ರೀಯ ತೋಟಗಾರಿಕೆ ಮೇಳಕ್ಕೆ ರೈತರು, ಆಸಕ್ತರ ದಂಡು • 25 ಸಾವಿರ ಜನ ಭೇಟಿ

ಹೊಸ ತಂತ್ರಜ್ಞಾನದ ಹುಡುಕಾಟ ವಿಜ್ಞಾನಿಗಳ ಮಾರ್ಗದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಐಐಎಚ್‌ಆರ್ ಆವರಣದಲ್ಲಿ ನಡೆಯುತ್ತಿರುವ 'ರಾಷ್ಟ್ರೀಯ ತೋಟಗಾರಿಕೆ ಮೇಳ'ದ ಎರಡನೇ ದಿನವಾದ ಬುಧವಾರ ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.

ಕಡಿಮೆ ನೀರಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ರೈತರು ಮೇಳದಲ್ಲಿ ಮಾಹಿತಿ ಪಡೆದರು. ನಗರ ನಿವಾಸಿಗಳು ಮಣ್ಣು ರಹಿತ ಕೃಷಿ, ಲಂಬ ಕೃಷಿ (ವರ್ಟಿಕಲ್ ಗಾರ್ಡನ್), ಹೈಡ್ರೋಪೋನಿಕ್ಸ್‌ನಂತಹ ಕೃಷಿ ಕುರಿತು ವಿಜ್ಞಾನಿಗಳಿಂದ ಮಾರ್ಗದರ್ಶನ ಪಡೆದರು. ನಗರ ಕೃಷಿ, ತಾರಸಿ ತೋಟ, ಮಣ್ಣು ರಹಿತ ಕೃಷಿಗೆ ಸಂಬಂಧಿಸಿದಂತೆ ಐಐಎಚ್‌ಆರ್ ಮೂರು ದಿನಗಳ ಕಾರ್ಯಾಗಾರವನ್ನು ಆಯೋಜಿಸಿದೆ.

ಮೇಳಕ್ಕೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಐಐಎಚ್‌ಆರ್‌ನ ಆವರಣದಲ್ಲಿ ಬೆಳೆದಿರುವ ಆಕರ್ಷಕ ಹೂವಿನ ಲೋಕದಲ್ಲಿ ನಿಂತುಕೊಂಡು ಸೆಲ್ಫಿಗೆ ಪೋಸ್ ನೀಡುತ್ತಿದ್ದರೆ, ಇತ್ತ ರೈತರು ಕೃಷಿಯಲ್ಲಿನ ಹೊಸ ತಂತ್ರಜ್ಞಾನದ ಹುಡುಕಾಟದಲ್ಲಿ ನಿರತರಾಗಿದ್ದರು.

ತೋಟದಲ್ಲೇ ದಿನ ಕಳೆದ ಜನ: ಹೂವಿನ ಗಿಡ, ಅಲಂಕಾರಿಕ ಪುಷ್ಪಗಳು, ಔಷಧೀಯ ಗಿಡಗಳು, ಸೌಗಂಧಿಕ ಬೆಳೆಗಳು, ಅಣಬೆ ಬೆಳೆಗಳ ಉತ್ಪಾದನೆ ಮತ್ತು ಮೌಲ್ಯವರ್ಧಿತ ತಂತ್ರಜ್ಞಾನಗಳ ನೋಟ ಮೇಳಕ್ಕೆ ಮೆರುಗು ನೀಡುತ್ತಿವೆ. ಪ್ರತಿಯೊಂದು ತಾಕಿಗೆ ಅಳವಡಿಸಿರುವ ಕ್ಯೂಆರ್ ಕೋಡ್ ಅನ್ನು ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿದ ರೈತರು ಮತ್ತು ಯುವಕರು ಅದರ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದರು.

'ಮಾವಿನ ಬೆಳೆಯಲ್ಲಿ ಬೇರೆ ಯಾವ ಬೆಳೆಗಳನ್ನು ಹಾಕಬಹುದು ಎಂಬುದರ ಬಗ್ಗೆ ಮಾಹಿತಿ ಪಡೆದುಕೊಳ್ಳಲು ತೋಟಗಾರಿಕೆ ಮೇಳಕ್ಕೆ ಬಂದಿದ್ದೇನೆ. ಇಲ್ಲಿರುವ ನೂತನ ತಂತ್ರಜ್ಞಾನವನ್ನು ಅರಿತುಕೊಂಡು, ನಮ್ಮ ತೋಟದಲ್ಲೂ ಅಳವಡಿಸಿಕೊಳ್ಳುವ ಬಗ್ಗೆ ವಿಜ್ಞಾನಿಗಳೊಂದಿಗೆ ಚರ್ಚಿಸುತ್ತೇನೆ. ನಂತರ ಪ್ರಾಯೋಗಿಕವಾಗಿ ಅನುಷ್ಠಾನ ಮಾಡುವ ಚಿಂತನೆಯೂ ಇದೆ' ಎಂದು ಧಾರವಾಡದ ರೈತ ಪ್ರಕಾಶ ಹೇಳಿದರು.

ಗಮನ ಸೆಳೆದ ಪ್ಯಾಟಿಪ್ಯಾನ್

ಮೇಳದಲ್ಲಿ ಪ್ಯಾಟಿಪ್ಯಾನ್ ಎಂಬ ನಕ್ಷತ್ರ ಆಕಾರದ ಕುಂಬಳ ಕಾಯಿಯನ್ನು ರೈತರು ಬಹಳ ಕುತೂಹಲದಿಂದ ವೀಕ್ಷಿಸಿದರು. 'ಇದರಲ್ಲಿ ಸಕ್ಕರೆ ಅಂಶ ಕಡಿಮೆ ಇದೆ. ಹೆಕ್ಟೇರ್‌ಗೆ ಕನಿಷ್ಠ 55 ಟನ್ ಇಳುವರಿ ನೀಡಲಿದ್ದು, 60 ದಿನಗಳಲ್ಲಿ 300 ರಿಂದ 400 ಗ್ರಾಮ ತೂಕದ ಕಾಯಿಗಳನ್ನು ಬಿಡುತ್ತದೆ. ಇದನ್ನು ಅಭಿವೃದ್ಧಿಪಡಿಸಿ ಬಹಳ ವರ್ಷಗಳಾಗಿವೆ. ಇನ್ನೂ ಹೆಚ್ಚು ಜನರಿಗೆ ತಲುಪಬೇಕಿದೆ' ಎಂದು ವಿಜ್ಞಾನಿ ರಾಜಾ ಶಂಕರ್ ಅಭಿಪ್ರಾಯಪಟ್ಟರು.

ಅಬ್ಬಬ್ಬಾ ಮೀಟರ್ ಅಲಸಂದೆ

ಅಬ್ಬಬ್ಬಾ ಅಂದರೆ ಅಲಸಂದೆ ಐದಾರು ಇಂಚು ಉದ್ದ ಬೆಳೆಯುತ್ತದೆ. ಇಲ್ಲಿನ ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಬರೋಬ್ಬರಿ 3-4 ಮೀಟರ್ ಉದ್ದದ ಅಲಸಂದೆ ರೈತರು ಹಾಗೂ ವೀಕ್ಷಕರ ಗಮನ ಸೆಳೆಯಿತು. ಇದರ ಕಾಯಿಗಳು 80 ಸೆ.ಮೀ ಬೆಳೆಯುತ್ತದೆ. ಈ ತಳಿಯು ತಿಳಿ ಹಸಿರು ಬಣ್ಣದ ದುಂಡಗೆ ಪೆನ್ಸಿಲ್ ಆಕಾರದ ನಾರು ರಹಿತ ಕಾಯಿಗಳನ್ನು ಬಿತ್ತನೆ ಮಾಡಿದ ಸರಾಸರಿ 60 ದಿನಗಳಲ್ಲಿ ಬಿಡುತ್ತದೆ. ಒಂದು ಹೆಕ್ಟೇರ್‌ಗೆ 25 ಟನ್ ಇಳುವರಿಯನ್ನು ಪಡೆಯಬಹುದು.

ನರ್ಸರಿಗೆ ಭೇಟಿ

ಹೆಸರಘಟ್ಟ: ಮೇಳದಲ್ಲಿ ರೈತರು ಮೊದಲು ಪ್ರಾಯೋಗಿಕ ತಾಕುಗಳಿಗೆ, ನಂತರ ನರ್ಸರಿ ಮಳಿಗೆಗಳಿಗೆ ಭೇಟಿ ನೀಡುತ್ತಿದ್ದರು. ಮಾವು, ನಿಂಬೆ, ಸಪೋಟ ಸೇರಿದಂತೆ, ವಿವಿಧ ರೀತಿಯ ಹಣ್ಣಿನ ಗಿಡಗಳನ್ನು ಖರೀದಿಸಿದರು.

'ಇಲ್ಲಿ ಸಿಗುವಂತಹ ಗುಣಮಟ್ಟದ ಗಿಡಗಳು ಬೇರೆ ಎಲ್ಲಿಯೂ ಸಿಗುವುದಿಲ್ಲ. ಹಾಗಾಗಿ ಗಿಡಗಳ ಖರೀದಿಸಲು ಮೇಳಕ್ಕೆ ಬಂದಿದ್ದೇನೆ' ಎಂದು ಬೆಂಗಳೂರು ಉತ್ತರ ತಾಲ್ಲೂಕಿನ ಅಗ್ರಹಾರದ ರೇಣು ಹೇಳಿದರು. 'ಪ್ರತಿ ವರ್ಷ ಮೇಳಕ್ಕೆ ಬರುತ್ತೇನೆ. ಈ ಬಾರಿ ಕುಂಡದಲ್ಲಿ ಬೆಳೆಸುವಂತಹ ಗಿಡಗಳು ಅಷ್ಟಾಗಿ ಸಿಗಲಿಲ್ಲ. ಅದೊಂದು ಬೇಸರ ತಂದಿದೆ' ಎಂದು ಹೆಸರಘಟ್ಟ ಪಕ್ಕದ ಹುರುಳಿ ಚಿಕ್ಕನಹಳ್ಳಿಯ ಮೇರಿ ವಿಮಲ ಹೇಳಿದರು. 'ಬಹಳ ಬಿಸಿಲಿದೆ. ಇನ್ನು ಮುಂದೆ ಜನವರಿ ಮತ್ತು ಫೆಬ್ರುವರಿಯಲ್ಲಿ ಮೇಳ ಆಯೋಜಿಸಿದರೆ, ಜನರಿಗೆ ಅನುಕೂಲ' ಎಂದೂ ಸಲಹೆ ನೀಡಿದರು.

ವಿವಿಧ ಬಗೆಯ ಬಾಳೆಗಿಡಗಳನ್ನು ಕುತೂಹಲದಿಂದ ವೀಕ್ಷಿಸಿದ ಲಂಬಾಣಿ ಮಹಿಳೆಯರು

ಆರ್.ವಿ. ಭದ್ರಯ್ಯ's
ಸಮಸ್ತ ಪೂಜಾ ಭಂಡಾರ
ಬಾಳೆಎಲೆ * ವೀಳ್ಯದೆಲೆ * ಗ್ರಂಧಿಗೆ ಸಾಮಗ್ರಿ
ಭಾರತ್‌ನಗರ – 72047 57064
ಅಂಜನಾನಗರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560 091
ಜಯನಗರ – 73489 26035
ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.
ದೇಶದಲ್ಲೇ ಬೃಹತ್ ಗ್ರಂಧಿಗೆ ಭಂಡಾರ
ಶಿವರಾತ್ರಿಯ ಹಿಂದಿನ ದಿನ ನಮ್ಮ ಗ್ರಾಹಕರಿಗೆ ಬಿಲ್ವಪತ್ರೆ ಹಾಗೂ ಉತ್ತರಾಣಿ ಕಡ್ಡಿಯನ್ನು ಸೇವೆಯ ರೂಪದಲ್ಲಿ ನೀಡಲಾಗುವುದು.
ಒಮ್ಮೆ ಭೇಟಿ ಕೊಟ್ಟರೆ ಮತ್ತೊಮ್ಮೆ ಭೇಟಿ ನೀಡಬೇಕೆನ್ನುವ ಮಳಿಗೆ

ಮಹಾ ಶಿವರಾತ್ರಿಯ ಶುಭಾಶಯಗಳು
1 ಮುಖದಿಂದ, 14 ಮುಖದವರೆಗಿನ ರುದ್ರಾಕ್ಷಿಗಳು ದೊರೆಯುತ್ತದೆ.
- ರುದ್ರಾಕ್ಷಿಮಾಲೆ
- ಸ್ಪಟಿಕ ಮಾಲೆ
- ಕಲ್ಲಿನ ಲಿಂಗು
- ಸ್ಪಟಿಕ ಲಿಂಗು
- ಪಾದರಸ ಲಿಂಗು
- ಗಂಗಾಜಲ
- ಶಿವ ಸಾಲಿಗ್ರಾಮ
- ಶೃಂಗಿ, ಭೃಂಗಿ
- ರುದ್ರಾಭಿಶೇಕದ ಸಾಮಾಗ್ರಿ
- ಭೆರಣಿಯ ಭಸ್ಮದ ವಿಭೂತಿ
- ಮೇಧಿಗೆ
- ದೂಪದ ಕೊಡ
- ಅಭಿಷೇಕದ ಶಂಕು
- ಊದುವ ಶಂಕು
- ವಸ್ತ್ರಗಳು
- ಡಮರುಗಗಳು

ಡಾ. ಆರ್.ಬಿ. ಬಸವರಾಜು 98452 83644
ಆರ್.ಬಿ. ಚಂದನ್ ಕುಮಾರ್ 98441 91036

ಶ್ರೀ ಶ್ರೀ ಶ್ರೀ ಸಿದ್ದೇಶ್ವರ ದೇವಾಲಯ ಟ್ರಸ್ಟ್
SRI SRI SRI SIDESHWAR TEMPLE TRUST
ನಂ. 181, 80 ಅಡಿ ರಸ್ತೆ, ಟಿವಿಎಸ್ ರಸ್ತೆ, ಅತ್ತಿಬೆಲೆ ಗ್ರಾಮ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.
ದೂರವಾಣಿ : 080-25714070, ಮೊ : 94488 44679, ವಾಟ್ಸಪ್ : 96864 79293



ಶ್ರೀಮತಿ ಎಸ್. ರಂಜನಿಯಮ್ಮಾಳ್
ಅಧ್ಯಕ್ಷರು

ಶ್ರೀ ಎಂ. ರಾಜಶೇಖರ್
ವ್ಯವಸ್ಥಾಪಕ ಟ್ರಸ್ಟಿ, ನಿವೃತ್ತ ಆದಾಯ ತೆರಿಗೆ ಇಲಾಖೆ

ಶ್ರೀ ಶ್ರೀ ಶ್ರೀ ಸಿದ್ದೇಶ್ವರ ದೇವಸ್ಥಾನವು
ನಂ. 181, 80 ಅಡಿ ರಸ್ತೆ, ಟಿವಿಎಸ್ ರೋಡ್, ಅತ್ತಿಬೆಲೆ, ಅನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿ ನೆಲೆಗೊಂಡಿದೆ.

ದೇವಸ್ಥಾನವನ್ನು ಶ್ರೀ ರಾಜಶೇಖರ್, ಬಿ.ಕಾಂ, ನಿವೃತ್ತ ಆದಾಯ ತೆರಿಗೆ ಅಧಿಕಾರಿ ರವರು ನಿರ್ಮಿಸುತ್ತಿದ್ದಾರೆ ಮತ್ತು ಇವರ ಪತ್ನಿ ಶ್ರೀಮತಿ ಎಸ್.ರಜಿನಿಅಮ್ಮಾಳ್ ರವರು ದೇವಸ್ಥಾನದ ಅಧ್ಯಕ್ಷರಾಗಿದ್ದಾರೆ ಹಾಗೂ ಶ್ರೀ ಎಂ.ರಾಜಶೇಖರ್ ರವರು ದೇವಸ್ಥಾನದ ಆಡಳಿತ ವ್ಯವಸ್ಥಾಪಕ ಟ್ರಸ್ಟಿಯಾಗಿದ್ದಾರೆ.

ಶ್ರೀ ಎಂ.ರಾಜಶೇಖರ್ ರವರು ಲಕ್ಕವಳ್ಳಿ, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ಇಲ್ಲಿನ ಕೃಷಿ ಕುಟುಂಬದಲ್ಲಿ ಜನಿಸಿದ್ದಾರೆ. ಇವರ ಇಡೀ ಕುಟುಂಬ ಶಿವನ ಪರಮ ಭಕ್ತರಾಗಿದ್ದಾರೆ.

ಈ ದೇವಸ್ಥಾನವು ಶ್ರೀ ಎಂ.ರಾಜಶೇಖರ್ ಮತ್ತು ಇವರ ಪತ್ನಿ ಶ್ರೀಮತಿ ಎಸ್.ರಜಿನಿಅಮ್ಮಾಳ್ ಅವರು ತಮಿಳುನಾಡಿನ ತಂಜಾವೂರ್‌ನಲ್ಲಿರುವ ಶ್ರೀ ಬ್ರಿದೇಶ್ವರ ದೇವಸ್ಥಾನಕ್ಕೆ ಭೇಟಿ ಮಾಡಿದಾಗ ದೇವಸ್ಥಾನ ನಿರ್ಮಿಸಲು ಪ್ರೇರಣೆಯಾಗಿದ್ದು, ಅತ್ತಿಬೆಲೆಯ ತಮ್ಮ 6 ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ ಅದೇ ರೀತಿಯಲ್ಲಿ ದೇವಸ್ಥಾನ ನಿರ್ಮಿಸಲು ನಿರ್ಧರಿಸಿದರು. ಈ ಜಾಗವು ಭಾರತದ ಮಾಜಿ ಪ್ರಧಾನಮಂತ್ರಿ ಶ್ರೀ ಎಚ್.ಡಿ.ದೇವೇಗೌಡಜೀ ರವರ ಕುಟುಂಬದ ಒಡೆತನದಲ್ಲಿತ್ತು ಮತ್ತು ಅವರು ಸಹ ಈ ದೇವಸ್ಥಾನದ ಪರಮ ಭಕ್ತರಾಗಿದ್ದಾರೆ.

ಈ ದೇವಸ್ಥಾನ ನಿರ್ಮಾಣಕ್ಕೆ 36 ಕೋಟಿ ವೆಚ್ಚ ತಗುಲಬಹುದೆಂದು ಅಂದಾಜಿಸಲಾಗಿದ್ದು ಮತ್ತು ಅಷ್ಟೂ ವೆಚ್ಚವನ್ನು ಶ್ರೀ ಎಂ.ರಾಜಶೇಖರ್ ಮತ್ತು ಇವರ ಪತ್ನಿ ಶ್ರೀಮತಿ ಎಸ್.ರಜಿನಿಅಮ್ಮಾಳ್ ರವರೇ ಭರಿಸುತ್ತಿದ್ದಾರೆ. 2014ರ ಫೆಬ್ರವರಿ 27ರಂದು ಈ ದೇವಸ್ಥಾನಕ್ಕೆ ಭೂಮಿ ಪೂಜೆ ನೆರವೇರಿಸಿದ್ದು, ನಿರ್ಮಾಣ ಕಾರ್ಯವು ನಿರಂತರವಾಗಿ ನಡೆಯುತ್ತಿದ್ದು, ಇದೀಗ ಪೂರ್ಣಗೊಳ್ಳುವ ಹಂತದಲ್ಲಿದೆ. ಉತ್ತಮ ಸಂಸ್ಕೃತಿ, ಆಧ್ಯಾತ್ಮಿಕ ಹಿನ್ನೆಲೆಯ ಕಲ್ಲುಗಳಿಂದ ದೇವಸ್ಥಾವನ್ನು ನಿರ್ಮಿಸಲಾಗುತ್ತಿದೆ.

ಪ್ರಸ್ತುತ 63 ಅಡಿ ರಾಜಗೋಪುರವನ್ನು ನಿರ್ಮಿಸಲಾಗಿದೆ ಮತ್ತು 2021ರ ಡಿಸೆಂಬರ್ 29ರಂದು ರೂ. 9 ಲಕ್ಷ ಮೌಲ್ಯದ ನವರತ್ನಗಳೊಂದಿಗೆ ನಿರ್ಮಿಸಲಾಗಿದೆ. ನಿಗದಿತ ಅವಧಿಯೊಳಗೆ 5.5 ಅಡಿಯ ತಡೆಗೋಡೆ ಪೂರ್ಣಗೊಳ್ಳಲಿದೆ ಮತ್ತು 2022ರ ಮಾರ್ಚ್ 1 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಕಲಶ ಸ್ಥಾಪಿಸಲ್ಪಟ್ಟಿದೆ.

ಪ್ರತಿ ದಿನ 100 ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದು, ಸೋಮವಾರದಂದು ಸುಮಾರು 500 ರಿಂದ 1000 ಭಕ್ತರು ಭಗವಂತ ಶ್ರೀ ಶ್ರೀ ಶ್ರೀ ಸಿದ್ದೇಶ್ವರರ ಆಶೀರ್ವಾದ ಪಡೆಯುತ್ತಿದ್ದಾರೆ. ಶಿವರಾತ್ರಿ ಹಬ್ಬದಂದು ಸುಮಾರು 50,000 ದಿಂದ 60,000 ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ದೇವಸ್ಥಾನಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ಭಕ್ತರಿಗೂ ದೇವಸ್ಥಾನದಲ್ಲಿ ಕಂಪನದ ಅರಿವಾಗುತ್ತದೆ ಮತ್ತು ಭಕ್ತರು ಶ್ರೀ ಶ್ರೀ ಶ್ರೀ ಸಿದ್ದೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಬಳಿಕ ತಮ್ಮಲ್ಲಾದ ಸಂತಸವನ್ನು ವ್ಯಕ್ತಪಡಿಸುತ್ತಾರೆ ಮತ್ತು ಅಂತಹ ಒಂದು ಪವಾಡವು ಇಲ್ಲಿ ನಡೆಯುತ್ತದೆ. ಶ್ರೀ ಶ್ರೀ ಶ್ರೀ ಸಿದ್ದೇಶ್ವರರ ಆಶೀರ್ವಾದದಿಂದ ಶ್ರೀ ಎಂ.ರಾಜಶೇಖರ್ ಮತ್ತು ಪತ್ನಿ ಶ್ರೀಮತಿ ಎಸ್ .ರಂಜಿನಿಯಮ್ಮಾಳ್ ರವರು ಅಸಾಧ್ಯವನ್ನೂ ಸಾಧಿಸುತ್ತಿದ್ದಾರೆ.

ಅತಿಶೀಘ್ರದಲ್ಲೇ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ಮತ್ತು ಪ್ರಧಾನಮಂತ್ರಿಯವರ ಉಪಸ್ಥಿತಿಯಲ್ಲಿ ಕುಂಭಾಭಿಷೇಕವನ್ನು ನೆರವೇರಿಸಲು ಶ್ರೀ ಎಂ.ರಾಜಶೇಖರ್ ಮತ್ತು ಇವರ ಪತ್ನಿ ಶ್ರೀಮತಿ ಎಸ್.ರಂಜಿನಿಯಮ್ಮಾಳ್ ರವರು ಬಯಸಿದ್ದಾರೆ.

ಸರಿಯಾದ ಸಮಯದಲ್ಲಿ ಶ್ರೀ ಶ್ರೀ ಶ್ರೀ ಸಿದೇಶ್ವರ ಕನ್ವೆನ್ಷನ್ ಹಾಲ್ (ಕಲ್ಯಾಣ ಮಂಟಪ) ತೆರೆಯಲಿದ್ದೇವೆ. ಮದುವೆಯ ಸಂದರ್ಭದಲ್ಲಿ ದೇವಸ್ಥಾನದ ವತಿಯಿಂದ ಬಡವರಿಗೆ ಉಚಿತವಾಗಿ ಮಾಂಗಲ್ಯ ನೀಡಲು ನಿರ್ಧರಿಸಿದ್ದೇವೆ ಮತ್ತು ಮಧ್ಯಾಹ್ನ 1.00 ಗಂಟೆಯಿಂದ ಉಚಿತ ಅನ್ನದಾನ ವ್ಯವಸ್ಥೆಯಿರುತ್ತದೆ. ಧರ್ಮಸ್ಥಳದಂತೆ ಇಲ್ಲೂ ಪ್ರತಿ ಸೋಮವಾರ ಮಧ್ಯಾಹ್ನ 1.00 ಗಂಟೆಯಿಂದ ಎಲ್ಲರಿಗೂ ಅನ್ನದಾನ ವ್ಯವಸ್ಥೆಯಿರುತ್ತದೆ.

ಸ್ಮಶಾನ, ದೇವಸ್ಥಾನ ನೆಲಸಮ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಭೋಗನಹಳ್ಳಿಯ ಸ್ಮಶಾನ ಹಾಗೂ ದೇವಾಲಯವನ್ನು ನೆಲಸಮ ಮಾಡಿ ಆ ಜಾಗವನ್ನು ಆದರ್ಶ ಡೆವಲಪರ್ಸ್‌ನವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆಯ ನೂರಾರು ಕಾರ್ಯಕರ್ತರು ಬಿಬಿಎಂಪಿ ಮಹದೇವಪುರ ವಲಯ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ವರ್ತೂರು ಹೋಬಳಿ ಭೋಗನಹಳ್ಳಿ ಗ್ರಾಮದ ಸರ್ವೆ 33/1 ರಲ್ಲಿ 1 ಎಕರೆ 39 ಗುಂಟೆ ಜಾಗದಲ್ಲಿ ಸ್ಮಶಾನ ಇದ್ದು ಅಲ್ಲಿ ಚಿಕ್ಕದಾದ ಶ್ರೀಅಂಗಳ ಪರಮೇಶ್ವರಿ ದೇವಾಲಯ ಇತ್ತು. ಗ್ರಾಮಸ್ಥರು ಶವ ಸಂಸ್ಕಾರದ ವೇಳೆ ಈ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಅಂತ್ಯಕ್ರಿಯೆ ವಿಧಿ ವಿಧಾನಗಳು ನಡೆಸುವ ಪದ್ಧತಿ ರೂಢಿಯಲ್ಲಿದೆ. ಈಗ ಆದರ್ಶ ಡೆವಲಪರ್ಸ್‌ನವರು ಇದೇ ಜಾಗ ಒತ್ತುವರಿ ಮಾಡಿದ್ದಾರೆ ಎಂದು ಕಾರ್ಯಕರ್ತರು ದೂರಿದರು.

ಸ್ಮಶಾನ ಮತ್ತು ದೇವಾಲಯ ನೆಲ ಸಮ ಮಾಡಿರುವ ಕುರಿತು ತಹಶೀಲ್ದಾರ್‌ಗೆ ದೂರು ಸಲ್ಲಿಸಿದ್ದೆವು. ತಹಶೀಲ್ದಾರ್ ಸ್ಥಳದ ಸರ್ವೆ ನಡೆಸಲು ಆದೇಶಿಸಿದ್ದರು. ನಂತರ ಸರ್ವೆ ಪ್ರಕಾರ ಈ ಜಾಗ ಸ್ಮಶಾನಕ್ಕೆ ಸೇರಿದೆ ಎಂದು ನಾಮಫಲಕ ಹಾಕಿಸಿದ್ದರು. ಆದರ್ಶ ಡೆವಲಪರ್ಸ್‌ನವರು ನಾಮಫಲಕ ಕಿತ್ತುಹಾಕಿದ್ದಾರೆ. ಈ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಬೇಕು. ಜಾಗವನ್ನು ಸ್ಮಶಾನಕ್ಕೆ ಮೀಸಲಿಟ್ಟು ಕಾಂಪೌಂಡ್ ನಿರ್ಮಿಸಬೇಕು' ಎಂದು ರಾಜ್ಯಾಧ್ಯಕ್ಷ ಸೋರಹುಣಸೆ ಎನ್. ವೆಂಕಟೇಶ್ ಒತ್ತಾಯಿಸಿದರು.

ಕರ್ನಾಟಕ ದಲಿತ ರಕ್ಷಣಾ ವೇದಿಕೆ ಉಪಾಧ್ಯಕ್ಷರಾದ ರಾಮಕೃಷ್ಣ, ಜಯಕುಮಾರ್, ರಾಜ್ಯ ಯುವ ಘಟಕ ಅಧ್ಯಕ್ಷ ಎನ್.ವಿಜಯಕುಮಾರ್, ಮಹಿಳಾ ಘಟಕ ಅಧ್ಯಕ್ಷೆ ಸತ್ಯವತಿ ಇದ್ದರು.

ಕರ್ನಾಟಕ ದಲಿತ ರಕ್ಷಣಾ ವೇದಿಕೆಯ ನೂರಾರು ಕಾರ್ಯಕರ್ತರು ಬಿಬಿಎಂಪಿ ಮಹದೇವಪುರ ವಲಯ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು

ದಿ ಮಲ್ಲೇಶ್ವರಂ ಬ್ಯಾಂಕ್: ಶತಮಾನೋತ್ಸವ 10ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ 103 ವರ್ಷಗಳನ್ನು ಪೂರೈಸಿದ್ದು, ಇದೇ 10ರಂದು ಅರಮನೆ ಮೈದಾನದ ತ್ರಿಪುರ ವಾಸಿನಿ ಸಭಾಂಗಣದಲ್ಲಿ ಶತಮಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ರಮೇಶ್ ಬಿ., ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಿ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್ ನೂರು ವರ್ಷಗಳಿಂದ ಗ್ರಾಹಕರ ನಂಬಿಕೆಗಳಿಸಿ ಲಾಭದ ಹಾದಿಯಲ್ಲಿ ಸಾಗುತ್ತಿದೆ. 1920ರ ಜೂನ್ 20ರಂದು ಮಲ್ಲೇಶ್ವರದ 7ನೇ ಅಡ್ಡ ರಸ್ತೆಯಲ್ಲಿ ಚಿಕ್ಕ ಕೊಠಡಿಯಲ್ಲಿ ಬ್ಯಾಂಕ್ ವ್ಯವಹಾರ ಪ್ರಾರಂಭಿಸಲಾಗಿತ್ತು. ವ್ಯವಹಾರ ದಿನೇ ದಿನೇ ಪ್ರವರ್ಧಮಾನಗೊಂಡು, ಕೊಠಡಿಯಿಂದ ಚಿಕ್ಕ ಮನೆಗೆ ಅಲ್ಲಿಂದ ವಿಶಾಲ ಕಟ್ಟಡಕ್ಕೆ ಬದಲಾಗುತ್ತಾ ಬ್ಯಾಂಕ್ ಸದೃಢವಾಗಿ ತಲೆ ಎತ್ತಿ ನಿಂತಿದೆ' ಎಂದು ಹೇಳಿದರು.

'ಹೆಚ್ಚು ಬಡ್ಡಿ, ಸುಲಿಗೆ ಮಾಡುವ ಲೇವಾದೇವಿದಾರರಿಂದ ಬಡ, ಮಧ್ಯಮ ವರ್ಗದ ಜನರನ್ನು ರಕ್ಷಿಸಬೇಕು. ಅವರ ಕೈಗೆಟಕುವ ಬಡ್ಡಿ ದರದಲ್ಲಿ ಅಗತ್ಯ ಸಾಲ ಸೌಲಭ್ಯ ಸುಲಭವಾಗಿ ದೊರಕಿಸುವುದು ಬ್ಯಾಂಕ್‌ನ ಸದಾಶಯವಾಗಿತ್ತು. ಅದರಂತೆಯೇ ಬ್ಯಾಂಕ್‌ನ ಆಡಳಿತ ಮಂಡಳಿ ಕೆಲಸ ಮಾಡುತ್ತಿದೆ' ಎಂದರು.

'ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಕೇಂದ್ರ ಕಚೇರಿ ಸೇರಿ ರಾಜಾಜಿನಗರ, ವೈಯ್ಯಾಲಿಕಾವಲ್, ಯಶವಂತಪುರ, ಗಂಗಾನಗರ ಮತ್ತು ಆರ್.ಪಿ.ಸಿ ಲೇಔಟ್‌ಗಳಲ್ಲಿ ಶಾಖೆಗಳನ್ನು ತೆರೆದು ವ್ಯವಹಾರವನ್ನು ವೃದ್ಧಿಸಿಕೊಂಡಿದೆ. ಬ್ಯಾಂಕಿನಲ್ಲಿ ಒಟ್ಟು 19,161 ಸದಸ್ಯರು ಇದ್ದಾರೆ. 96,285 ಗ್ರಾಹಕರಿಗೆ ಉತ್ತಮ ಸೇವೆ ನೀಡಲಾಗುತ್ತಿದೆ' ಎಂದರು

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಚಿವರಾದ ಕೆ.ಎನ್. ರಾಜಣ್ಣ, ಎಚ್.ಕೆ. ಪಾಟೀಲ, ಸಂಸದ ಡಿ.ವಿ. ಸದಾನಂದಗೌಡ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅತಿಥಿಗಳಾಗಿ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಬ್ಯಾಂಕ್‌ನ ಉಪಾಧ್ಯಕ್ಷ ಶಂಕರ್ ವಿ., ಅನಂತನ್ ಎ.ಆರ್., ಕರ್ನಾಟಕ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್. ಎಂ. ಸುರೇಶ್ ಭಾಗವಹಿಸಿದ್ದರು.

ಶಾಲಾ ಕಾಲೇಜುಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮದಲ್ಲಿ ಸಚಿವ ತಂಗಡಗಿ

ಕಡಿಮೆ ಬೆಲೆಗೆ 'ಕುಮಾರವ್ಯಾಸ ಭಾರತ' ಸಂಪುಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಸ್ತಕ ಪ್ರಾಧಿಕಾರದ ವತಿಯಿಂದ 'ಕುಮಾರವ್ಯಾಸ ಭಾರತ' ಸಂಪುಟವನ್ನು ಅತ್ಯಂತ ಕಡಿಮೆ ಬೆಲೆಗೆ ಓದುಗರಿಗೆ ತಲುಪಿಸಲು ನಿರ್ಧಾರ ಮಾಡಲಾಗಿದೆ' ಎಂದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ನಯನಾ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 46 ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಹಾಗೂ ಶಾಲಾ ಕಾಲೇಜುಗಳಿಗೆ ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶೀಘ್ರದಲ್ಲೇ ಕುಮಾರವ್ಯಾಸ ಭಾರತದ ಎರಡು ಸಂಪುಟಗಳು ₹200 ಬೆಲೆಗೆ ಓದುಗರಿಗೆ ತಲುಪಲಿವೆ' ಎಂದು ಅವರು ಭರವಸೆ ನೀಡಿದರು.

'ಮನುಷ್ಯನನ್ನು ಎಚ್ಚರಿಸುವ ಶಕ್ತಿ ಬರವಣಿಗೆಗೆ ಮಾತ್ರ ಇದೆ. ಓದಿನಿಂದ ಮನುಷ್ಯ ಪರಿಪೂರ್ಣರಾಗಲು ಸಾಧ್ಯ. ಯುವ ಪೀಳಿಗೆ ಬರೆಯುವ ಹಾಗೂ ಪುಸ್ತಕ ಓದುವ ಗೀಳನ್ನು ಹೆಚ್ಚಿಸಿಕೊಳ್ಳಬೇಕು. ಆಧುನಿಕ ಜೀವನ ಶೈಲಿಯ ನಡುವೆ ಪುಸ್ತಕ ಓದುವ ಅಭ್ಯಾಸ ಕಡಿಮೆಯಾಗುತ್ತಿದೆ. ಮೊಬೈಲೇ ಬದುಕಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಮಾತನಾಡಿ, 'ಯುವ ಲೇಖಕರು ಆತ್ಮ ವಿಶ್ವಾಸ, ಅಧ್ಯಯನಶೀಲತೆ ಬೆಳೆಸಿಕೊಳ್ಳಬೇಕು. ಬರೆಯುವ ಜತೆಗೆ ಸಾಹಿತ್ಯ ಪರಂಪರೆಯನ್ನು ತಿಳಿದುಕೊಂಡು ಮುಂದುವರಿಯಬೇಕು. ಸಮಾಜದಲ್ಲಿ ಅಲ್ಪಸ್ವಲ್ಪ ಮರ್ಯಾದೆ ಉಳಿದುಕೊಂಡಿದ್ದರೆ, ಅದು ಸಾಹಿತಿಗಳಿಂದ ಮಾತ್ರ' ಎಂದು ಹೇಳಿದರು.

ಸಾಹಿತಿ ಗಿರೀಶ್ ರಾವ್ ಹತ್ವಾರ್(ಜೋಗಿ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬುಧವಾರ ಆಯೋಜಿಸಿದ್ದ ಯುವ ಬರಹಗಾರರ ಚೊಚ್ಚಲ ಪುಸ್ತಕಗಳನ್ನು ಸಚಿವ ಶಿವರಾಜ ಎಸ್ ತಂಗಡಗಿ ಬಿಡುಗಡೆಗೊಳಿಸಿದರು. ಕಿರಣ್ ಸಿಂಗ್, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಗಿರೀಶ್ ರಾವ್ ಹತ್ವಾರ್ (ಜೋಗಿ) ಮತ್ತು ಬರಗೂರು ರಾಮಚಂದ್ರಪ್ಪ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ವಿಚಾರ ಸಂಕಿರಣದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಭರವಸೆ

‘ಆ್ಯಸಿಡ್ ದಾಳಿ ಸಂತ್ರಸ್ತರಿಗೆ ನಿವೇಶನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಅವರ ಮೇಲೆ ದೌರ್ಜನ್ಯ ನಡೆದರೆ ಸಹಿಸುವುದಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಪರಿಹಾರ ಸಂಸ್ಥೆ ಸಹಯೋಗದಲ್ಲಿ ಬುಧವಾರ ನಡೆದ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಪೊಲೀಸರು ಜನಸ್ನೇಹಿಯಾಗಿ ಕೆಲಸ ಮಾಡಬೇಕು ಎಂದು ಸೂಚಿಸಿದ್ದೇನೆ. ಮಹಿಳೆಯರು ತಮ್ಮ ಸಮಸ್ಯೆಗಳ ಕುರಿತು ದೂರು ನೀಡಲು ಠಾಣೆಗೆ ಬಂದರೆ ಕೂಡಲೇ ಸಮಸ್ಯೆಗಳನ್ನು ಆಲಿಸಬೇಕು. ಯಾವುದೇ ದೂರುಗಳ ಬಗ್ಗೆ ತಾತ್ಸರ ಮಾಡಿದರೆ ಸಹಿಸುವುದಿಲ್ಲ. ಮಹಿಳೆಯರು ಧೈರ್ಯವಾಗಿದ್ದರೆ ಒಳ್ಳೆ ಆಡಳಿತ, ಜನಸ್ನೇಹಿ ಪೊಲೀಸ್ ಎನಿಸಿಕೊಳ್ಳಲು ಸಾಧ್ಯ’ ಎಂದು ಹೇಳಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬುಧವಾರ ನಡೆದ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕುರಿತ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದವರು – ಪ್ರಜಾವಾಣಿ ಚಿತ್ರ

‘ಆ್ಯಸಿಡ್ ಮಾರಾಟ ನಿಷೇಧ ಮಾಡಲಾಗುವುದು. ಆ್ಯಸಿಡ್ ದಾಳಿಗೆ ಒಳಗಾದ ಸಂತ್ರಸ್ತರಿಗೆ ನಿವೇಶನ ನೀಡಲಾಗುವುದು’ ಎಂದು ತಿಳಿಸಿದರು.

‘ಸಹಾಯವಾಣಿ ಮೂಲಕ ಬಂದ ದೂರುಗಳನ್ನು ಆಧರಿಸಿ, ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ಹೋಗಲು 20 ನಿಮಿಷ ತೆಗೆದುಕೊಳ್ಳುತ್ತಿದ್ದರು. ಪ್ರಸ್ತುತ 7 ನಿಮಿಷದೊಳಗೆ ಸ್ಥಳದಲ್ಲಿ ಹಾಜರಿರುತ್ತಾರೆ. ಆ ರೀತಿ ಬದಲಾವಣೆ ತರಲಾಗಿದೆ. ಬೆಂಗಳೂರು ನಗರದಲ್ಲಿ 7,500 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪೊಲೀಸರು ನಿರಂತರ ಕಣ್ಗಾವಲು ಇಟ್ಟಿರುತ್ತಾರೆ’ ಎಂದರು.

> **ಮಹಿಳೆಯರು ಮತ್ತು ಮಕ್ಕಳು ತಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದಿದ್ದರೆ, ವಿಧಾನಸೌಧದ ಕಾರ್ಯಾಲಯ ಅಥವಾ ಗೃಹ ಕಚೇರಿಗೆ ಆಗಮಿಸಿ ನನ್ನನ್ನು ಭೇಟಿಯಾಗಬಹುದು**
> **ಜಿ.ಪರಮೇಶ್ವರ,** ಗೃಹ ಸಚಿವ

‘ನಗರದಲ್ಲಿ ಹೊಸದಾಗಿ 6 ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗುತ್ತಿದೆ. ಈಗಿರುವ ಪೊಲೀಸ್ ಸಿಬ್ಬಂದಿಗಳಲ್ಲಿ ಶೇ 8ರಷ್ಟು ಮಹಿಳೆಯರಿದ್ದಾರೆ. ಶೇ 25ರಷ್ಟಾಗಬೇಕು ಎಂಬುದು ಗುರಿ’ ಎಂದು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್, ನಿಮ್ಹಾನ್ಸ್‌ನ ಡೀನ್ ಪ್ರಭಾಚಂದ್ರ, ವಕೀಲೆ ಸುಮಿತ್ರಾ ಆಚಾರ್ಯ ಉಪಸ್ಥಿತರಿದ್ದರು.

80ಕ್ಕೂ ಹೆಚ್ಚು ಬಿಲ್ ಬೋರ್ಡ್ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ಪೂರ್ವ ವಿಭಾಗದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಪಾದಚಾರಿ ಮಾರ್ಗದಲ್ಲಿ ಇಡಲಾಗಿದ್ದ ಸುಮಾರು 80ಕ್ಕಿಂತಲೂ ಹೆಚ್ಚಿನ ಬಿಲ್‌ಬೋರ್ಡ್‌ಗಳನ್ನು ಜಪ್ತಿ ಮಾಡಿಕೊಂಡು, ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಪದೇ ಪದೇ ಸಂಚಾರ ನಿಯಮ ಉಲ್ಲಂಘಿಸಿದ ಅಂಗಡಿಗಳ ಮಾಲೀಕರ ವಿರುದ್ಧ ಕಲಂ 283 ಐಪಿಸಿ ಅಡಿಯಲ್ಲಿ 3 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಕೆ.ಪಿ. ಆ್ಯಕ್ಟ್ ಅಡಿಯಲ್ಲಿ ಒಟ್ಟು 51 ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಟಿ.ಸಿ. ಪಾಳ್ಯ, ಮುಖ್ಯರಸ್ತೆ, ಮಾರತ್ತಹಳ್ಳಿ ಹೊರವರ್ತುಲ ರಸ್ತೆ, ವರ್ತೂರು ಸಿದ್ದಾಪುರ ಮುಖ್ಯರಸ್ತೆ, ಐಟಿಪಿಎಲ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಇಮ್ಮಡಿಹಳ್ಳಿ, ಚನ್ನಸಂದ್ರ, ಕೆಪಿಟಿಬಿ, ಹಗದೂರು, ವೈದೇಹಿ ಮುಖ್ಯರಸ್ತೆಗಳ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಅಂಗಡಿ ಮುಂಗಟ್ಟುಗಳನ್ನು ಇಟ್ಟುಕೊಂಡು ಪಾದಚಾರಿಗಳಿಗೆ ತೊಂದರೆ ನೀಡಲಾಗುತ್ತಿತ್ತು. ವಿಶೇಷ ಕಾರ್ಯಾಚರಣೆ ನಡೆಸಿ ಬಿಲ್‌ಬೋರ್ಡ್ ಹಾಗೂ ಅಂಗಡಿ ಮುಂಗಟ್ಟುಗಳನ್ನು ತೆರವು ಮಾಡಲಾಯಿತು ಎಂದಿದ್ದಾರೆ.

ಬಿಎಂಟಿಸಿ ‘ಈಶ ಫೌಂಡೇಷನ್’ ಪ್ರವಾಸಿ ಪ್ಯಾಕೇಜ್

ಬೆಂಗಳೂರು: ಚಿಕ್ಕಬಳ್ಳಾಪುರ ಮತ್ತು ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಬಿಎಂಟಿಸಿ ‘ಈಶ ಫೌಂಡೇಷನ್’ ಹೆಸರಿನಡಿ ಪ್ರವಾಸಿ ಪ್ಯಾಕೇಜ್ ಅನ್ನು ಮಾರ್ಚ್ 8ರಂದು ಆರಂಭಿಸುತ್ತಿದೆ.

ರಜಾದಿನಗಳು ಮತ್ತು ವಾರಾಂತ್ಯ ದಿನಗಳಲ್ಲಿ ಈ ಪ್ರವಾಸಕ್ಕೆ ಹವಾನಿಯಂತ್ರಿತ ಬಸ್‌ಗಳನ್ನು ನಿಯೋಜಿಸುತ್ತಿದೆ.

ಮಧ್ಯಾಹ್ನ 12ಕ್ಕೆ ಮೆಜೆಸ್ಟಿಕ್ ನಾಡಪ್ರಭು ಕೆಂಪೇಗೌಡ ಬಸ್‌ನಿಲ್ದಾಣದಿಂದ ಬಸ್ ಹೊರಡಲಿದ್ದು, ನಂದೀಶ್ವರ ದೇವಸ್ಥಾನ, ಕಣಿವೆ ಬಸವಣ್ಣ ದೇವಸ್ಥಾನ, ಸರ್ ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ಮತ್ತು ಸಮಾಧಿ, ರಂಗಸ್ಥಳ ರಂಗನಾಥ ಸ್ವಾಮಿ ದೇವಸ್ಥಾನ ಮತ್ತು ಈಶ ಫೌಂಡೇಷನ್‌ಗೆ ಭೇಟಿ ನೀಡಿ ರಾತ್ರಿ 9.30ಕ್ಕೆ ಮತ್ತೆ ಮೆಜೆಸ್ಟಿಕ್ ನಾಡಪ್ರಭು ಕೆಂಪೇಗೌಡ ಬಸ್‌ನಿಲ್ದಾಣಕ್ಕೆ ತಲುಪಲಿದೆ. ಪ್ರಯಾಣ ದರ ಒಬ್ಬರಿಗೆ ₹ 500 ನಿಗದಿ ಮಾಡಲಾಗಿದೆ ಎಂದು ಬಿಎಂಟಿಸಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ / A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಶೇಷಗಿರಿಹಳ್ಳಿ	ರಾಮನಗರ ಜಿಲ್ಲೆ	ಗ್ರಾಮೀಣ	1500
ನೆರಳೂರು	ಆನೇಕಲ್ ತಾಲ್ಲೂಕು, ಬೆಂಗಳೂರು	ಗ್ರಾಮೀಣ	2000

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **05–04–2024 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. “ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ : ಬೆಂಗಳೂರು
ದಿನಾಂಕ : 06–03–2024

ಸಹಿ/–
ಸಹಾಯಕ ಮಹಾ ಪ್ರಬಂಧಕರು



ಸಮಯ ಹೇಗೋ ಕೈಯಿಂದ ಜಾರಿ ಹೋಗುತ್ತದೆ, ಆದರೆ ನಾವು ಸೃಷ್ಟಿಸುವ ಸಂತಸದ ಗಳಿಗೆಗಳು ಸದಾ ಉಳಿಯುತ್ತವೆ. ನಿಮ್ಮ ಮಾತಾಪಿತೃಗಳಿಗೆ ಹೊಸ ಸಾಹಸಗಳ ಅವಿಸ್ಮರಣೀಯ ಗಳಿಗೆಗಳನ್ನು ಗಿಫ್ಟ್ ಮಾಡಿ. ವೀಣಾ ವರ್ಲ್ಡ್‌ನ ಅತ್ಯಂತ ಜನಪ್ರಿಯ, ಸುರಕ್ಷಿತ, ಸುಭದ್ರ ಹಾಗೂ ಸರಿಯಾಗಿ ಪ್ಲ್ಯಾನ್ ಮಾಡಿದ ಭಾರತದ ಮತ್ತು ಜಗತ್ತಿನಾದ್ಯಂತದ ಸೀನಿಯರ್ಸ್ ಸ್ಪೆಶಲ್ ಟ್ಯೂರ್‌ಗಳಿಗೆ ಕಳಿಸಿ. ಅವರ ಸುವರ್ಣ ವಯಸ್ಸು ನಗು, ನಲಿವಿನ ಹೊಸ ಆರಂಭಗಳ ಜೀವನದ ಸಂಭ್ರಮದ ಆಚರಣೆಯಾಗಲಿ. ವಿಶ್ವಾಸವಿಡಿ, ವೀಣಾ ವರ್ಲ್ಡ್‌ನ ಮೇಲ್ವಿಚಾರಕ ಟ್ಯೂರ್ ಮ್ಯಾನೇಜರ್ ಮುಂಬೈನಿಂದ ಹೊರಟು ಮುಂಬೈಗೆ ಮರಳಿ ಬರುವ ವರೆಗೆ, ವಿಮಾನದಲ್ಲಿ ಕೂಡ, ಅವರ ಜೊತೆಯಲ್ಲಿರುತ್ತಾರೆ. ಚಿಂತಿಸಬೇಡಿ, ಅವರು ಒಂಟಿಯಾಗಿ ಬಂದರೂ, ಅದಕ್ಕೆ ಎಕ್ಸ್‌ಟ್ರಾ ಚಾರ್ಜ್ ಇರುವುದಿಲ್ಲ, ಯಾಕೆಂದರೆ ವೀಣಾ ವರ್ಲ್ಡ್ ಅವರಿಗೆ ಒಬ್ಬ ರೂಮ್ ಪಾರ್ಟ್‌ನರ್‌ರ ಗ್ಯಾರಂಟಿ ಕೊಡುತ್ತದೆ. ಆದ್ದರಿಂದ ಅವರನ್ನು ವೀಣಾ ವರ್ಲ್ಡ್‌ನ ಜೊತೆ ಕಳಿಸಿಬಿಡಿ, ಅವರು ಸಂತೋಷದಿಂದ ಸರಿ, ಬ್ಯಾಗ್ ತುಂಬಿಸಿ, ಹೊರಡಿ ಎಂದು ಹೇಳಲಿ!

ಸಂತಸಪಡಿ
ಸೀನಿಯರ್ಸ್ ಸ್ಪೆಶಲ್ ಟ್ಯೂರ್ಸ್‌ನಲ್ಲಿ ಮ್ಯೂಸಿಕಲ್ ನೈಟ್ ಮತ್ತು ಡಾನ್ಸ್, ರ್‍ಯಾಂಪ್ ವಾಕ್ ಕಾರ್ನಿವಲ್, ಹಾಡುವುದು ಮತ್ತು ಕತೆ ಹೇಳುವುದರ ಆನಂದ ಸವಿಯಿರಿ.

ವೀಣಾ ವರ್ಲ್ಡ್‌ನ ಆಲ್-ಇನ್‌ಕ್ಲೂಸಿವ್ ಗ್ರೂಪ್ ಟ್ಯೂರ್‌ಗಳು, ಸೀನಿಯರ್ಸ್ ಸ್ಪೆಶಲ್ಸ್, ವಿಮೆನ್ಸ್ ಸ್ಪೆಶಲ್ಸ್, ಮತ್ತು ಹನೀಮೂನ್ ಸ್ಪೆಶಲ್ಸ್‌ನಿಂದ ಆಯ್ದುಕೊಳ್ಳಿ ಅಥವಾ ಕಸ್ಟಮೈಸ್ಡ್ ಹಾಲಿಡೇಗಳು /ಕಾರ್ಪೊರೇಟ್ ಟ್ಯೂರ್‌ಗಳನ್ನು ಆಯ್ದುಕೊಳ್ಳಿ.

ಯೂರೋಪ್ - 50+ ಟ್ಯೂರ್ ಆಪ್ಷನ್‌ಗಳು
ಯೂರೋಪ್ (13D to 27D) 280000 - 525000
ಯೂರೋಪಿಯನ್ ಪನೋರಮಾ (8D) 200000-210000
ಯೂರೋಪಿಯನ್ ಸ್ಪ್ಲೆಂಡರ್ (10D) 225000-235000
ಯೂರೋಪಿಯನ್ ಹೈಲೈಟ್ಸ್ (12D) 275000-285000
ಬೆಸ್ಟ್ ಆಫ್ ಸ್ಕ್ಯಾಂಡಿನೇವಿಯ (9D) 285000 - 295000
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ ಬ್ರಾಟಿಸ್ಲಾವಾ (8D) 205000 - 215000
ಬೆಸ್ಟ್ ಆಫ್ ಸ್ಪೇನ್ (10D) 225000 - 235000
ಈಜಿಪ್ಟ್ (9D) 175000 - 185000
ಗ್ರೀಸ್ (6D/8D/10D/15D) 200000-395000
ಟರ್ಕಿ (10D) 215000 - 230000
ಇಂಗ್ಲೆಂಡ್, ಸ್ಕಾಟ್ಲಂಡ್, ಐರ್ಲಂಡ್, ವೇಲ್ಸ್, ಲಂಡನ್ (13D) 325000 - 335000

ಆಸ್ಟ್ರೇಲಿಯ ಅಮೆರಿಕ ಆಫ್ರಿಕ
ಆಸ್ಟ್ರೇಲಿಯ (9D/14D) 312000 - 440000
ನ್ಯೂಝಿಲಂಡ್ (10D/14D) 335000-420000
ಅಮೆರಿಕ (13D/15D) 450000 - 565000
USA ಈಸ್ಟ್ ಕೋಸ್ಟ್ (7D) 275000-290000
ಕ್ಯಾಲಿಫೋರ್ನಿಯ ಕಾರ್ನಿವಲ್(9D) 350000 - 360000
ಬೆಸ್ಟ್ ಆಫ್ ಸೌತ್ ಆಫ್ರಿಕ (9D) 210000-220000
ಬೆಸ್ಟ್ ಆಫ್ ಮಾರಿಶಸ್ (7D) 140000-145000
ಕೇನ್ಯಾ (7D) 210000 – 220000
ಬೆಸ್ಟ್ ಆಫ್ ದುಬೈ ಅಬೂ ಧಾಬಿ (7D) 127000-145000
ನೇಪಾಳ (8D) 69000 - 75000
ಭೂತಾನ (9D) 93000 - 98000
ಶ್ರೀ ಲಂಕಾ (5D/7D) 59000 - 90000

ಸೌತ್ ಈಸ್ಟ್ ಮತ್ತು ಫಾರ್ ಈಸ್ಟ್ ಏಷ್ಯಾ
ಸಿಂಗಪುರ್ ಥೈಲ್ಯಾಂಡ್ ಮಲೇಶಿಯ (10D) 160000-166000
ಸಿಂಗಪುರ್ ಮಲೇಶಿಯ + ಕ್ರೂಸ್ (9D) 175000-180000
ವಿಯೆಟ್ನಾಂ ಕ್ಯಾಂಬೋಡಿಯ/ವಿಯೆಟ್ನಾಂ ಬಾಲಿ (10D/11D) 178000 - 185000
ಬೆಸ್ಟ್ ಆಫ್ ವಿಯೆಟ್ನಾಂ (8D) 134000 - 140000
ಬೆಸ್ಟ್ ಆಫ್ ಬಾಲಿ (7D) 129000 - 135000
ಬೆಸ್ಟ್ ಆಫ್ ಸಿಂಗಪುರ್ (4D) 99000 - 105000
ಬ್ಯಾಂಗ್‌ಕಾಕ್ ಪಟ್ಟಾಯ ಫುಕೆಟ್ ಕ್ರ್ಯಾಬಿ (8D) 120000-125000
ಥೈಲ್ಯಾಂಡ್ (4D/6D) 50000 - 80000
ಹಾಂಗ್‌ಕಾಂಗ್ ಮಕಾವೊ ಶೆನ್‌ಝೆನ್ (7D)155000-160000
ಬೆಸ್ಟ್ ಆಫ್ ಜಪಾನ್ (7D) 230000 - 265000
ಜಪಾನ್ ಕೊರಿಯ (9D) 295000 - 315000
ಬೆಸ್ಟ್ ಆಫ್ ಸೌತ್ ಕೊರಿಯ (8D) 235000 - 250000

ಗ್ರೂಪ್ ಟ್ಯೂರ್ಸ್ – ಭಾರತ
ಲೇಹ್ ಲಡಾಖ್ (7D/9D ಕಾರ್ಗಿಲ್) 65000 - 85000
ಕಾಶ್ಮೀರ (6D/8D) 64000 - 80000
ಶಿಮ್ಲಾ ಮನಾಲಿ (6D/8D) 35000 - 60000
ಡಾಲ್‌ಹೌಸಿ ಧರ್ಮಶಾಲಾ ಅಮೃತ್‌ಸರ್ (9D) 60000-65000
ಸಿಕ್ಕಿಂ ಡಾರ್ಜಿಲಿಂಗ್ ಗ್ಯಾಂಗ್‌ಟಕ್ ಲಾಚುಂಗ್ (9D) 60K-80K
ನೈನಿತಾಲ್ ಮುಸ್ಸೌರಿ ಹರಿದ್ವಾರ್ (6D/9D ಕೋರ್ಬೆಟ್) 35K-62K
ಅಸ್ಸಾಂ ಮೇಘಾಲಯ (8D) 82000 - 88000
ವಾರಾಣಸಿ ಅಯೋಧ್ಯಾ ಲಕ್ನೋ (8D) 49K-55K
ರಾಜಾಸ್ತಾನ್ (5D/6D/8D/9D/15D) 30K-85K
ಗುಜರಾತ್ (5D/7D/10D/15D) 30K-99K
ಮಧ್ಯ ಪ್ರದೇಶ (5D/9D/13D/17D) 30000 - 95000
ಕೇರಳ (6D/8D/10D/15D)35K - 99K

Main Hoon Na!
Travel hassle-free with the Veena World Tour Manager at your service on tour

Group tour price includes return airfare, transport, accommodation, all meals: breakfast-lunch-dinner, sightseeing with entrance fees, driver - guide tips, travel insurance*, services of a Tour Manager and VISA fee (except for ‘Free Visa Countries’). USA tours for valid US visa holders only.

veenaworld.com I Call: 1800 22 7979 I Mon-Sat 10 to 7
1st Flr, Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 8879972217
Veena World Sales Partners: Karnataka: Belgaum-College Rd 9980428880 • Belgaum-Goaves Circle 7338685500 • Belgaum-Tilakwadi 9845092772 Dharwad 9036715969 • Hubli 7204411007 • Malleshwaram 9845066469 • Basavanagudi 9900268233 • Vijaynagar 9036610005 • Chikodi 9448627771 Nipani 9880266555 • Udupi 9448372824 • Gulburga 9632655010 • Vijayapur 9980857595 • Tamil Nadu: Coimbatore 9994666522
Tours can also be booked at the Veena World Sales Offices in Maharashtra, New Delhi, Gujarat, Rajasthan Goa, Madhya Pradesh, West Bengal... For office addresses & contact details, visit veenaworld.com

Applications invited for Sales Partners/ Agents across Southern Region. Call : 887 997 9733

VEENA WORLD
Travel. Explore. Celebrate Life.

All group tours are ex-Mumbai. Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of ‘Veena Patil Hospitality Pvt. Ltd.’ No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

ಹುಕ್ಕಾ ನಿಷೇಧ: ಸರ್ಕಾರದ ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕರ ಹಿತದೃಷ್ಟಿ ಹಾಗೂ ಎಲ್ಲರ ಆರೋಗ್ಯದ ದೃಷ್ಟಿಯಿಂದ ರಾಜ್ಯದಲ್ಲಿ ಹುಕ್ಕಾ ಸೇವನೆಯನ್ನು ನಿಷೇಧಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

ಹುಕ್ಕಾ ನಿಷೇಧವನ್ನು ಪ್ರಶ್ನಿಸಿ ಆರ್.ಭರತ್ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆಯನ್ನು ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರವೂ ಮುಂದುವರಿಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿ, 'ಬಾರ್‌ಗಳಲ್ಲಿ ಎಲ್ಲೆಡೆ ಹುಕ್ಕಾ ಸೇವನೆಗೆ ಅವಕಾಶ ನೀಡಲಾಗುತ್ತಿತ್ತು. ಇವುಗಳಿಗೆ ಪ್ರತ್ಯೇಕ ಪ್ರದೇಶವನ್ನು ನಿಗದಿ ಮಾಡಿರಲಿಲ್ಲ. ಹಾಗಾಗಿ, ಇದು ಹುಕ್ಕಾ ಸೇವನೆ ಮಾಡುವವರು ಮಾತ್ರವಲ್ಲದೆ, ಇತರರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿತ್ತು. ಹೀಗಾಗಿ, ಸರ್ಕಾರ ಸಂವಿಧಾನದ 47ನೇ ವಿಧಿಯ ಅಡಿಯಲ್ಲಿ ತನ್ನ ಅಧಿಕಾರ ಚಲಾಯಿಸಿದೆ' ಎಂದು ತಿಳಿಸಿದರು.

'ಸಾರ್ವಜನಿಕರ ಹಿತದೃಷ್ಟಿಯಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲಾ ಬಗೆಯ ಹುಕ್ಕಾ ಮಾರಾಟ, ಸೇವನೆ, ದಾಸ್ತಾನು, ಈ ಕುರಿತ ಜಾಹೀರಾತು ಮತ್ತು ಪ್ರಚಾರವನ್ನು ನಿಷೇಧಿಸಲಾಗಿದೆ. ಹುಕ್ಕಾ ನಿಷೇಧಿಸುವ ಮಸೂದೆಗೆ ಉಭಯ ಸದನಗಳು ಈಗಾಗಲೇ ಅನುಮೋದನೆ ನೀಡಿವೆ. ಸದ್ಯ ಈ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಬೇಕಿದೆ' ಎಂದರು. ವಿಚಾರಣೆ ಗುರುವಾರವೂ (ಮಾರ್ಚ್ 7) ಮುಂದುವರೆಯಲಿದೆ.

'ಎತ್ತಿನಹೊಳೆ ಯೋಜನೆ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ವೃಷಭಾವತಿ ವ್ಯಾಲಿ ನೀರಿನಿಂದ ಕೆರೆ ತುಂಬಿಸಿ ಜನರ ಆರೋಗ್ಯ ಹಾಳು ಮಾಡಬೇಡಿ. ಈಗಾಗಲೇ ಪೈಪ್‌ಲೈನ್ ಅಳವಡಿಸಿರುವ ಎತ್ತಿನಹೊಳೆ ಯೋಜನೆಯನ್ನು ಪೂರ್ಣಗೊಳಿಸಿ, ತಾಲ್ಲೂಕಿನ ಜನರಿಗೆ ನೀರು ಕೊಡಿ' ಎಂದು ಬಿಜೆಪಿಯ ನೂತನ ತಾಲ್ಲೂಕು ಅಧ್ಯಕ್ಷ ಜಗದೀಶ ಚೌಧರಿ ಶಾಸಕರನ್ನು ಒತ್ತಾಯಿಸಿದರು.

ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ ಅವರಿಂದ ನೇಮಕಾತಿ ಪತ್ರ ಸ್ವೀಕರಿಸಿ ಮಾತನಾಡಿದ ಅವರು, 'ಕೆ.ಸಿ. ವ್ಯಾಲಿ ಯೋಜನೆ ಜಾರಿಯಾಗಿರುವ ಕಡೆ ಜನರ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಅಂಥ ನೀರು ನಮ್ಮ ತಾಲ್ಲೂಕಿನ ಕೆರೆಗಳಿಗೆ ಹರಿಸಬೇಡಿ' ಎಂದು ಒತ್ತಾಯಿಸಿದರು.

ಬೈಕ್‌ಥಾನ್ ಇಂದು

ಬೆಂಗಳೂರು: ಕಾಂಗರೂ ಕೇರ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಇದೇ 7ರಂದು ಬೆಳಿಗ್ಗೆ 6.30 ಗಂಟೆಗೆ ವಿಜಯನಗರದಲ್ಲಿ ಬೈಕ್‌ಥಾನ್ ನಡೆಯಲಿದೆ. ಬೈಕ್‌ಥಾನ್ ಚಂದ್ರಾ ಲೇಔಟ್ ಸರ್ಕಲ್‌ನಿಂದ ನಾಗರಭಾವಿ ಸರ್ಕಲ್, ಅಂಬೇಡ್ಕರ್ ಮುಖ್ಯರಸ್ತೆ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಯುನಾನಿ, ಕಂಠೀರವ ಸ್ಟುಡಿಯೊ, ಮಹಾಲಕ್ಷ್ಮಿ ಲೇಔಟ್ ಮಾರ್ಗವಾಗಿ ವೆಸ್ಟ್ ಆಫ್ ಕಾರ್ಡ್ ರಸ್ತೆಗೆ ತಲುಪಲಿದೆ.

ಸೈಬರ್ ಅಪರಾಧ ತನಿಖಾ ಶೃಂಗಸಭೆಯಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಹೇಳಿಕೆ

ಸೈಬರ್ ಭದ್ರತೆ ನಿಯಮ ಶೀಘ್ರ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಶೀಘ್ರವೇ ಸೈಬರ್ ಭದ್ರತೆ ನಿಯಮ ಜಾರಿಗೆ ತರಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ನಗರದಲ್ಲಿ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರವು ಆಯೋಜಿಸಿದ್ದ ಸೈಬರ್ ಅಪರಾಧ ತನಿಖಾ ಶೃಂಗಸಭೆ-2024ರಲ್ಲಿ ಅವರು ಮಾತನಾಡಿದರು.

'ಬೆಂಗಳೂರಿನಲ್ಲಿ ಐ.ಟಿ-ಬಿ.ಟಿ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿವೆ. ಸೈಬರ್ ಭದ್ರತೆ ನಿಯಮ ಜಾರಿಗೆ ತರುವುದರಿಂದ ಹೆಚ್ಚು ಅನುಕೂಲ ಆಗಲಿದೆ. ಸೈಬರ್ ಭದ್ರತೆ ವಿಚಾರದಲ್ಲಿ ಬೇರೆ ರಾಜ್ಯಕ್ಕೆ ಹೋಲಿಸಿದರೆ, ಕರ್ನಾಟಕ ರಾಜ್ಯವು ಒಂದು ಹೆಜ್ಜೆ ಮುಂದಿದೆ' ಎಂದು ಶ್ಲಾಘಿಸಿದರು.

'ದೇಶದಲ್ಲಿ ಡಿಜಿಟಲ್ ಸೇವೆ ಹೆಚ್ಚಾಗಿದ್ದು, ಜನರು ಸೈಬರ್ ಭದ್ರತೆ ಕುರಿತು ತಿಳಿದುಕೊಳ್ಳುವುದು ಅಗತ್ಯ. ವಿವಿಧ ಇಲಾಖೆಗಳು ಜನರಿಗೆ ಸೌಲಭ್ಯ ತಲುಪಿಸಲು ಡಿಜಿಟಲ್ ತಂತ್ರಜ್ಞಾನದ ಮೊರೆ ಹೋಗುತ್ತಿವೆ. ಸೇವಾಸಿಂಧು, ಮೊಬೈಲ್ ಬ್ಯಾಂಕಿಂಗ್, ವರ್ಚುವಲ್ ಕ್ಲಾಸ್‌ಗಳು ಸೇರಿದಂತೆ ವಿವಿಧ ರೀತಿಯ ಡಿಜಿಟಲ್ ವ್ಯವಸ್ಥೆ ಅಳವಡಿಸಿಕೊಳ್ಳುತ್ತಿದ್ದಾರೆ. ತಂತ್ರಜ್ಞಾನದ ಮೊರೆ ಹೋಗುವ ಮೊದಲು ಸೈಬರ್ ಸುರಕ್ಷಿತ, ಭದ್ರತೆ ಬಗ್ಗೆಯೂ ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

'ರಾಜ್ಯದಲ್ಲಿ ಒಟ್ಟು 43 ಸೈಬರ್ ಅಪರಾಧ ಪೊಲೀಸ್ ಠಾಣೆಗಳಿವೆ. ಸೈಬರ್ ವಂಚನೆಗೆ ಒಳಗಾದವರಿಗೆ ಸುರಕ್ಷತೆ ಹಾಗೂ ನ್ಯಾಯ ಕಲ್ಪಿಸುವ ಕೆಲಸ ಮಾಡಲಾಗುತ್ತಿದೆ' ಎಂದು ಭರವಸೆ ನೀಡಿದರು.

'ಸೈಬರ್ ಅಪರಾಧ ಪ್ರಕರಣ ಪತ್ತೆ ಹಚ್ಚಲು ಹಾಗೂ ಪ್ರಕರಣಗಳನ್ನು ತಡೆಯಲು ಅಧಿಕಾರಿ ಮತ್ತು ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ಪೊಲೀಸ್, ನ್ಯಾಯಾಂಗ ಮತ್ತು ಭಾರತೀಯ ರಕ್ಷಣೆ ಪಡೆಗಳ 33 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಈಗಾಗಲೇ ಸಿಐಡಿ ಕಚೇರಿಯಲ್ಲಿ ಆಯೋಜಿಸಿದ್ದ ತರಬೇತಿಯಲ್ಲಿ ಪಾಲ್ಗೊಂಡಿದ್ದರು' ಎಂದರು.

ನವೀಕರಣ: ಸಿಐಡಿ, 'ಇನ್ಫೊಸಿಸ್ ಪ್ರತಿಷ್ಠಾನ ಹಾಗೂ ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾದ ಜೊತೆಗೆ ಒಪ್ಪಂದವನ್ನು ನವೀಕರಿಸಲಾಯಿತು. ಸೈಬರ್ ಅಪರಾಧ ಶೃಂಗಸಭೆ ಉದ್ದೇಶ ಎಂದು ಅಧಿಕಾರಿಗಳು ತಿಳಿಸಿದರು.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಸಿಐಡಿ ಡಿಜಿಪಿ ಎಂ.ಎ.ಸಲೀಂ, ಎಡಿಜಿಪಿ ಪ್ರಣಬ್ ಮೊಹಂತಿ, 'ಇನ್ಫೊಸಿಸ್ ಫೌಂಡೇಶನ್ ಟ್ರಸ್ಟಿ ಸುನೀಲ್ ಕುಮಾರ್ ಧಾರೇಶ್ವರ್, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ 'ಇಂಡಿಯಾ ಸಂಸ್ಥೆಯ ಸಿಇಒ ವಿನಾಯಕ್ ಗೋಡ್ಸೆ ಮುಂತಾದವರು ಉಪಸ್ಥಿತರಿದ್ದರು.

ಸಭೆಯಲ್ಲಿ ಹಲವು ರಾಜ್ಯಗಳ ಪೊಲೀಸ್ ಅಧಿಕಾರಿಗಳು ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಶೃಂಗಸಭೆಯಲ್ಲಿ ಸೈಬರ್ ಅಪರಾಧ ಪತ್ತೆಗೆ ಸಂಬಂಧಿಸಿದ ತಂತ್ರಜ್ಞಾನಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

> ಸೈಬರ್ ಅಪರಾಧ ವಿಭಾಗ ಬಲ ಹೆಚ್ಚಿಸಲು ವಿವಿಧ ತಂತ್ರಜ್ಞಾನ ವಲಯಗಳಲ್ಲಿ ಪರಿಣತಿ ಹೊಂದಿರುವ ಕಂಪನಿಗಳ ನೆರವು ಪಡೆದುಕೊಳ್ಳಲು ಉದ್ದೇಶಿಸಲಾಗಿದೆ.
> **ಜಿ.ಪರಮೇಶ್ವರ,** ಗೃಹ ಸಚಿವ

ನಗರದಲ್ಲಿ ಬುಧವಾರ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರವು ಆಯೋಜಿಸಿದ್ದ ಸೈಬರ್ ಅಪರಾಧ ತನಿಖಾ ಶೃಂಗಸಭೆ–2024 ಕಾರ್ಯಕ್ರಮದಲ್ಲಿ ಸಿಐಡಿ, ಇನ್ಫೊಸಿಸ್ ಪ್ರತಿಷ್ಠಾನ ಹಾಗೂ ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾದ ನಡುವೆ ನವೀಕರಿಸಿದ ಒಪ್ಪಂದ ಕಡತವನ್ನು ಸಚಿವ ಜಿ. ಪರಮೇಶ್ವರ ಹಾಗೂ ಇನ್ಫೊಸಿಸ್ ಫೌಂಡೇಷನ್ ಟ್ರಸ್ಟಿ ಸುನೀಲ್ ಕುಮಾರ್ ಧಾರೇಶ್ವರ್ (ಎಡಗಡೆಯವರು) ಅವರು ಪರಸ್ಪರ ವಿನಿಮಯ ಹಸ್ತಾಂತರ ಮಾಡಿಕೊಂಡರು. ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್‌ಆರ್‌ಉಮಾಶಂಕರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಮತ್ತು ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಸಂಸ್ಥೆಯ ಸಿಇಒ ವಿನಾಯಕ್ ಗೋಡ್ಸೆ ಇದ್ದರು –ಪ್ರಜಾವಾಣಿ ಚಿತ್ರ

ವಿದೇಶಿ ಕಂಪನಿಗಳ ನೆರವು

ಡೀಪ್‌ಫೇಕ್, ಅಕ್ರಮ ಹಣ ವರ್ಗಾವಣೆ, ಆನ್‌ಲೈನ್ ಬ್ಯಾಂಕಿಂಗ್, ಲೋನ್ ಆ್ಯಪ್ ವಂಚನೆ ಸೇರಿದಂತೆ ಇನ್ನಿತರ ಪ್ರಕರಣಗಳು ಹೆಚ್ಚಾಗುತ್ತಿವೆ. ಗಂಭೀರ ಪ್ರಕರಣಗಳಲ್ಲಿ ವಿದೇಶಿ ಕಂಪನಿಗಳ ನೆರವು ಸಿಗದಿದ್ದರೆ ತನಿಖೆ ಕಷ್ಟ. ಕೆಲವು ಪ್ರಕರಣಗಳಲ್ಲಿ ಕಂಪನಿಗಳ ನೆರವು ಪಡೆದುಕೊಳ್ಳಲಾಗುತ್ತಿದೆ. ಎಲ್ಲೋ ಕುಳಿತುಕೊಂಡು ಮತ್ಯಾವುದೊ ಪ್ರದೇಶದ ಮೇಲೆ ಬೆದರಿಕೆ, ವಂಚನೆ ಸೇರಿದಂತೆ ಇನ್ನಿತರ ಸೈಬರ್ ದಾಳಿ ನಡೆಸಲಾಗುತ್ತಿದೆ. ಇದರಿಂದ ಮಾರುಕಟ್ಟೆ, ಹೂಡಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಆಗುತ್ತಿದೆ. ಸೈಬರ್ ಅಪರಾಧ ತಡೆಯಲು ನಮ್ಮ ಪೊಲೀಸರು ಮುಂದಾಗಿದ್ದಾರೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು.

PUBLIC NOTICE

The Public are hereby notified that my client is intending to purchase the herein scheduled property from one Sri. PRAVIN T. CHHEDA @ PRAVIN TOKARSHI CHHEDA, S/o.Sri.T.K.Chheda, of Malleshwaram, Bengaluru, and any other person having any objection therefor, may write to me, the undersigned within 7 days hereof, along with the copies of all the documents being relied upon, failing which, my client will proceed to purchase the scheduled property and any claims thereafter shall not affect the absolute title and possession of my client.

SCHEDULE

ALL THAT PIECE AND PARCEL of the House Property bearing No.15/1, (earlier part of No.15) old No.525/2, situated at 16th Cross Road, 10th Main, Malleshwaram, Bengaluru - 560 055, measuring East to West: 35 feet & North to South: 39 feet, and a total of 1,365 Sq Feet, together with a house building of about 17 Squares, now being referred to by Municipal PID No. 7-34-15/1, Ward No.45 - Malleshwaram, BBMP, being bounded on the;

East by : Property bearing No.525/7,
West by : Property bearing No.15,
North by : 16th Cross Road &
South by : Property bearing No.525,

K. JAYARAM, Advocate and Legal Consultant,
No.512, III Floor, 'PRABHAT', # 8, K.G. Road, Bangalore - 560 009.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. **BMDBMWBWT2024** ದಿನಾಂಕ: **29.02.2024 & BMDBMWHUP2024** ದಿನಾಂಕ: **29.02.2024**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ [illegible]

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಬಂಗಾರಪೇಟೆಯ ರೈಲ್ವೆ ಆಸ್ಪತ್ರೆಯಲ್ಲಿ ... KSPCB / CPCB ... ವರ್ಷಗಳ ಅವಧಿಗೆ (24 ತಿಂಗಳುಗಳು) [illegible] ವಿಲೇವಾರಿ ಮಾಡುವುದು.	ರೂ. 1,34,400/-
2	ಹಿಂದೂಪುರದ ರೈಲ್ವೆ ... APPCB / CPCB ... ವರ್ಷಗಳ ಅವಧಿಗೆ (24 ತಿಂಗಳುಗಳು) ವಾರದ ಆಧಾರದ ಮೇಲೆ ಅಂದಾಜು 23 ಕೆಜಿ/ತಿಂಗಳಿಗೆ ಸಂಗ್ರಹಿಸುವುದು ಮತ್ತು ವಿಲೇವಾರಿ ಮಾಡುವುದು.	ರೂ. 1,07,520/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **01-04-2024, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಮುಖ್ಯ ವೈದ್ಯಕೀಯ ಅಧೀಕ್ಷಕರು / ಬೆಂಗಳೂರು

PUB/724/AAV/PRB/SWR/2023-24

South Western Railway-SWR · SWRRLY · SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. **FOIS_NetConne_DBU_TDV** ದಿನಾಂಕ: **01-03-2024**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ [illegible]

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
[illegible] ಬೆಂಗಳೂರು ವಿಭಾಗದ ದೊಡ್ಡಬಳ್ಳಾಪುರ ಮತ್ತು ತೊಂಡೇಭಾವಿ ನಿಲ್ದಾಣಗಳಲ್ಲಿ ಎಫ್‌ಒಐಎಸ್ ನೆಟ್‌ವರ್ಕ್ ಸಂಪರ್ಕವನ್ನು ಒದಗಿಸುವುದು.	ರೂ. 11,34,824.61

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **26-03-2024, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ದೂರಸಂಪರ್ಕ ಇಂಜಿನಿಯರ್ ಬೆಂಗಳೂರು

PUB/728/AAV/PRB/SWR/2023-24

South Western Railway-SWR · SWRRLY · SWRRLY

ನಿಧನ

ಶ್ರೀ ಸಿ.ಆರ್.ಗೋಪಾಲ್

ಜನನ: 17-10-1954

ಲೇಟ್ ಶ್ರೀ ಕೆ.ರಾಮಯ್ಯ ಮತ್ತು ಲೇಟ್ ಶ್ರೀಮತಿ ಶಾರದಮ್ಮರವರ ಮಗ
ಚಿಕ್ಕಆಡುಗೋಡಿ, ಬೆಂಗಳೂರು

ಇವರು ದಿನಾಂಕ: 06-03-2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿ: 07-03-2024 ರಂದು ಗುರುವಾರ, ಸಂಜೆ 4.00ಕ್ಕೆ ಚಿಕ್ಕಆಡುಗೋಡಿ ರುದ್ರಭೂಮಿಯಲ್ಲಿ ನಡೆಸಲಾಗುವುದು.

ದುಃಖತಪ್ತರು: ಧರ್ಮಪತ್ನಿ, ಮಕ್ಕಳು, ಸಹೋದರರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಕುಟುಂಬವರ್ಗದವರು

ನಗರಸಭೆ, ಚಿಂತಾಮಣಿ

ಟೆಂಡರ್ ಪ್ರಕಟಣೆ

ಇ–ಪ್ರಕ್ಯೂರ್‌ಮೆಂಟ್ ಮೂಲಕ ಕೆಜಿ, ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ:ನಸಚಿ/ತಾಶಾ/ಸಿಆರ್/219/2023–24, ದಿನಾಂಕ: 28.02.2024. ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು, ನಗರಸಭೆ, ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ–ಪ್ರಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ **ಇಂಡೆಂಟ್ ಸಂಖ್ಯೆ: (1) DMA/2023-24/OW/WORKINDENT15980.** ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. **ಸೂಚನೆಗಳು: ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15.03.2024** ರಂದು ಸಮಯ ಸಂಜೆ 17:00 ಗಂಟೆಯವರೆಗೆ, ಇ–ಪ್ರಕ್ಯೂರ್‌ಮೆಂಟ್‌ನಲ್ಲಿ **ಟೆಂಡರ್ ತೆರೆಯುವ ದಿನಾಂಕ: 16.03.2024** ರಂದು ಸಮಯ ಸಂಜೆ: 17.05 ಗಂಟೆಗೆ ತೆರೆಯಲಾಗುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:305/ಕೆಎಸ್‌ಎಂಸಿಎ/2023–24

ವಿಜ್ಞಾನ ನಗರಕ್ಕೆ 25 ಎಕರೆ ಭೂಮಿ ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಭಾರತದ ಮೊದಲ ವಿಜ್ಞಾನ ನಗರ ಸ್ಥಾಪನೆಗೆ ದೇವನಹಳ್ಳಿ ಸಮೀಪದ ಆದಿನಾರಾಯಣ ಹೊಸಹಳ್ಳಿ ಎರಡನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ 25 ಎಕರೆ ಜಮೀನು ಮಂಜೂರು ಮಾಡಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

ಈ ಕುರಿತು ಬುಧವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ದೇಶದಲ್ಲಿ ಮೂರು ವಿಜ್ಞಾನ ನಗರಗಳಿವೆ. ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ರಾಮನ್ ಸಂಶೋಧನಾ ಸಂಸ್ಥೆ ಸೇರಿದಂತೆ ಹಲವು ಅತ್ಯುನ್ನತ ಸಂಸ್ಥೆಗಳು ಬೆಂಗಳೂರಿನಲ್ಲಿವೆ. 400ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಿರುವ ಬೆಂಗಳೂರಿನಲ್ಲಿ ವಿಜ್ಞಾನ ನಗರ ಸ್ಥಾಪಿಸುವಂತೆ ಕೇಂದ್ರ ಸಚಿವ ಕಿಶನ್ ರೆಡ್ಡಿ ಅವರಿಗೆ 2023ರ ಆಗಸ್ಟ್ 3ರಂದು ಮನವಿ ಸಲ್ಲಿಸಲಾಗಿತ್ತು' ಎಂದಿದ್ದಾರೆ.

ವಿಜ್ಞಾನ ನಗರ ಸ್ಥಾಪನೆಗೆ 25 ಎಕರೆ ಜಮೀನು ಒದಗಿಸುವಂತೆ ಕೇಂದ್ರ ಸಚಿವರು ಸೂಚಿಸಿದ್ದರು. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗಿತ್ತು. ಜಮೀನು ಒದಗಿಸುವ ಭರವಸೆಯನ್ನು ಅವರು ನೀಡಿದ್ದರು. ಈಗ ಆದಿನಾರಾಯಣ ಹೊಸಹಳ್ಳಿಯಲ್ಲಿ 25 ಎಕರೆ ಜಮೀನು ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಜಮೀನು ಒದಗಿಸಿರುವ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದು ದಕ್ಷಿಣ ಭಾರತದ ಮೊದಲ ಮತ್ತು ಅತ್ಯುತ್ತಮ ವಿಜ್ಞಾನ ನಗರವಾಗಲಿದೆ ಎಂದಿದ್ದಾರೆ.

ಇ–ಮೇಲ್ ಬೆದರಿಕೆ ಸಿಗದ ಸಹಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇ-ಮೇಲ್' ಮೂಲಕ ಬರುತ್ತಿರುವ ಬಾಂಬ್ ಬೆದರಿಕೆ ಕರೆಗಳ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಲಾಗಿದೆ. ಆದರೆ, ಪ್ರತಿಷ್ಠಿತ ಕಂಪನಿಗಳು ತನಿಖೆಗೆ ಸಹಕಾರ ನೀಡುತ್ತಿಲ್ಲ. ಕಂಪನಿಗಳು ಸಹಕಾರ ನೀಡಿದರೆ ಪ್ರಕರಣ ಭೇದಿಸಬಹುದು ಎಂದು ಸಚಿವ ಆರ್.ಪರಮೇಶ್ವರ ಹೇಳಿದರು.

'ರಾಜಕಾರಣಿಗಳ ಮನೆ ಹಾಗೂ ಶಾಲೆಗಳಿಗೆ ಬೆದರಿಕೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪ್ರೋಟಾನ್ ಇ-ಮೇಲ್ ವಿದೇಶದಲ್ಲಿದ್ದು ಈ ಬಗ್ಗೆ ಮಾಹಿತಿ ಕೇಳಿದ್ದೇವೆ' ಎಂದು ಬುಧವಾರ ಅವರು ತಿಳಿಸಿದರು.

'ದಿ-ರಾಮೇಶ್ವರಂ ಕೆಫೆಯಲ್ಲಿ ನಡೆದಿದ್ದ ಬಾಂಬ್ ಸ್ಫೋಟದ ಬಗ್ಗೆ ಎನ್‌ಐಎ ಸಹ ತನಿಖೆ ನಡೆಸುತ್ತಿದೆ. ಪ್ರಕರಣ ಸಂಬಂಧ ಕೆಲವು ಮಹತ್ವದ ಸುಳಿವು ಲಭಿಸಿವೆ. ಸದ್ಯದಲ್ಲೇ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುತ್ತೇವೆ' ಎಂದು ಹೇಳಿದರು.

ಬಿಎಸ್‌ಪಿ ವಿಭಾಗ ಮಟ್ಟದ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುಜನ ಸಮಾಜ ಪಾರ್ಟಿ(ಬಿಎಸ್‌ಪಿ) ರಾಜ್ಯ ಘಟಕದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ವಿಭಾಗ ಮಟ್ಟದ ನಾಲ್ಕು ಸಮಾವೇಶಗಳನ್ನು ಆಯೋಜಿಸಲಾಗುತ್ತಿದೆ.

'ಸಂವಿಧಾನ ಸಂರಕ್ಷಣೆ ಮತ್ತು ಸಂಪೂರ್ಣ ಜಾರಿಗಾಗಿ ಬಹುಜನರ ನಡಿಗೆ – ಪಾರ್ಲಿಮೆಂಟಿನ ಕಡೆಗೆ' ಘೋಷಣೆಯೊಂದಿಗೆ ಈ ಸಮಾವೇಶಗಳು ನಡೆಯಲಿವೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

ಸಮಾವೇಶದ ಮೂಲಕ ಇಲ್ಲಿವರೆಗೂ ದೇಶವನ್ನಾಳಿದ ಪಕ್ಷಗಳು ಸಂವಿಧಾನವನ್ನು ಹೇಗೆ ದುರ್ಬಲಗೊಳಿಸಿವೆ ಎಂಬುದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸಮಾವೇಶಗಳ ವಿವರ: ಬೆಂಗಳೂರು ವಿಭಾಗದ ಸಮಾವೇಶ, ದೇವನಹಳ್ಳಿಯಲ್ಲಿ ಮಾ.9ರಂದು ನಡೆಯಲಿದೆ. ಮಾ.10ರಂದು ಮೈಸೂರು ವಿಭಾಗದ ಸಮಾವೇಶ, ಸಕಲೇಶಪುರದಲ್ಲಿ, ಬೆಳಗಾವಿ ವಿಭಾಗದ ಸಮಾವೇಶ ಮಾ.11ರಂದು ವಿಜಯಪುರ ನಗರದಲ್ಲಿ ನಡೆಯಲಿದೆ. ಕಲಬುರಗಿ ವಿಭಾಗದ ಸಮಾವೇಶ, ಮಾ.12ರಂದು ಕಲಬುರಗಿಯಲ್ಲಿ ನಡೆಯಲಿದೆ. ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸದಸ್ಯ ರಾಮ್‌ಜಿ ಗೌತಮ್, ಪಕ್ಷದ ಮುಖಂಡರಾದ ನಿತಿನ್ ಸಿಂಗ್, ಎಂ.ಗೋಪಿನಾಥ್ ಮತ್ತು ಎಂ.ಕೃಷ್ಣಮೂರ್ತಿಯವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕ್ರೈಸ್ತರಿಗೆ ಟಿಕೆಟ್: ಕೆಪಿಸಿಸಿ ಕಚೇರಿ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ನ್ನು ಕ್ರೈಸ್ತ ಸಮುದಾಯವರಿಗೆ ನೀಡಬೇಕು ಎಂದು ಆಗ್ರಹಿಸಿ ಆ ಸಮುದಾಯದವರು ಕೆಪಿಸಿಸಿ ಕಚೇರಿಯ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ನಾವು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು. ಪದೇ ಪದೇ ನಮಗೆ ಅನ್ಯಾಯವಾಗುತ್ತಿದೆ. ಅಲ್ಪಸಂಖ್ಯಾತರು ಎಂದು ಮುಸ್ಲಿಮರಿಗೆ ಅವಕಾಶ ಸಿಗುತ್ತಿದೆ. ಕ್ರೈಸ್ತ ಸಮುದಾಯಕ್ಕೆ ಅವಕಾಶಗಳೇ ಸಿಗುತ್ತಿಲ್ಲ. ಮುಸ್ಲಿಮರಿಗೆ ಟಿಕೆಟ್ ಕೊಡಬೇಡಿ ಎಂದು ನಾವು ಹೇಳುವುದಿಲ್ಲ. ರಾಜ್ಯದಲ್ಲಿ ನಮ್ಮ ಜನಸಂಖ್ಯೆಯೂ ಹೆಚ್ಚು ಇದೆ. ಹೀಗಾಗಿ, ನಮಗೆ ಪ್ರಾಧಾನ್ಯತೆ ನೀಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿರುವ ಕರ್ನಾಟಕ ಕ್ರಿಶ್ಚಿಯನ್ ಪಾಲಿಟಿಕಲ್ ಲೀಡರ್ಸ್ ಫೋರಂ (ಕೆಸಿಪಿಎಲ್‌ಎಫ್), 'ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಸುಮಾರು 15 ಲಕ್ಷ ಕ್ರೈಸ್ತರಿದ್ದಾರೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಕ್ಷೇತ್ರದಿಂದ ನಮ್ಮ ಸಮುದಾಯದ ಸಾಧು ಕೋಕಿಲ ಅವರಿಗೆ ಟಿಕೆಟ್ ನೀಡಬೇಕು ಅಥವಾ ಒಬ್ಬರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಬೇಕು' ಎಂದು ಒತ್ತಾಯಿಸಿದೆ.

ಕಾರ್ಯದರ್ಶಿ ಹಾಗೂ ಖಜಾಂಚಿಗಳು

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕೆ.ಜಿ. ರಸ್ತೆ, ಬೆಂಗಳೂರು – 560 002.

ಸಂಖ್ಯೆ: ಎಫ್5/ಶಿ.ಕ.ನಿ/ಎಂ.ಎಂ.ಟಿ.ಸಿ/14/2010–11 ದಿನಾಂಕ: 04–03–2024

ಪತ್ರಿಕಾ ಪ್ರಕಟಣೆ

ಬೆಂಗಳೂರಿನ ವಾಣಿಜ್ಯ ಕೇಂದ್ರ ಸ್ಥಳವಾದ ಕೆಂಪೇಗೌಡ ರಸ್ತೆಯಲ್ಲಿರುವ "ಶಿಕ್ಷಕರ ಸದನ" ಕಟ್ಟಡದ ನೆಲ ಮಹಡಿಯಲ್ಲಿ ವಾಣಿಜ್ಯ ಉದ್ದೇಶಗಳಿಗೆ / ಬ್ಯಾಂಕು / ಕಛೇರಿ ವರ್ಗ್ಯರೆಗಳಿಗೆ ಅನುಕೂಲಕರವಾದ ಸುಸಜ್ಜಿತ ಕಟ್ಟಡದ 4088 ಚದರಅಡಿಗಳು (04 Rooms Including Common Usage Area) ಬಾಡಿಗೆಗೆ ಲಭ್ಯವಿದೆ. ಆಸಕ್ತರು ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಈ ಕಛೇರಿಯನ್ನು ಸಂಪರ್ಕಿಸಲು ದೂರವಾಣಿ ಸಂಖ್ಯೆ : 080 22483434, 9739087648 ಹಾಗೂ ಇ-ಮೇಲ್ ವಿಳಾಸ: kstbf6@gmail.com ಆಗಿರುತ್ತದೆ.

ಸಹಿ/– ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು
ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕೆ.ಜಿ. ರಸ್ತೆ, ಬೆಂಗಳೂರು – 560 002.

ವಾಸಸಂಇ/ಸಿಪಿ/ಎಎಎ/4114/2023–24

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01
ದೂರವಾಣಿ: 080–22133370, e-Mail: eepwdbngdn@yahoo.com

ಸಂಖ್ಯೆ: 31/2023–24 ದಿನಾಂಕ: 05.03.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ.01 ದಕ್ಷಿಣ ಉಪವಿಭಾಗ** ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ **(ರೂ. 45.25 ಲಕ್ಷಗಳು)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ **ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ (https://kppp.karnataka.gov.in/#/portal/portal-home) ಸೂಚಿಸಲಾಗಿದೆ.**

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಕೆ.ಪಿ.ಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ: 05.03.2024 ರಿಂದ. (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 12.03.2024 ಸಂಜೆ 4.00 ಗಂಟೆಯವರೆಗೆ. (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 13.03.2024 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. **ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.**

ಸಹಿ/– ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/4094/ಕೆಎಸ್‌ಎಂಸಿಎ/2023–24

ನಗರಸಭಾ ಕಾರ್ಯಾಲಯ ರಾಮನಗರ

ರಾಮನಗರ ಜಿಲ್ಲೆ – 562 159.
ದೂ.: 080–27271286. ಇಮೇಲ್: ka.ramanagara.cmc@gmail.com
ವೆಬ್‌ಸೈಟ್: www.ramanagaracity.mrc.gov.in

ಸಂಖ್ಯೆ : ನ.ಸ.ರಾ./ಆ.ಶಾ./ಇ.ಪ್ರ.ಟೆಂ./ಸಿ.ಆರ್/05/2023–24 ದಿನಾಂಕ : 05–03–2024

ಟೆಂಡರ್ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ 2023–24 ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ರಾಮನಗರ ನಗರಸಭೆಗೆ 03 ಸಂಖ್ಯೆಯ ಡಿ.ಇ.ಓ.ಗಳು, 01 ಸಂಖ್ಯೆಯ ಸೀನಿಯರ್ ಪ್ರೋಗ್ರಾಮರ್ ಹಾಗೂ 01 ಸಂಖ್ಯೆಯ ಅಕೌಂಟ್ ಕನ್ಸ್‌ಲ್ಟೆಂಟ್‌ಗಳನ್ನು ಸರಬರಾಜು ಮಾಡುವ ಸಂಬಂಧ ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಮಾನವ ಸಂಪನ್ಮೂಲ ಸರಬರಾಜುದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : 12–03–2024 ರ ಸಂಜೆ 5.30 ರೊಳಗಾಗಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ (Technical Qualification Criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು ಹಾಗೂ ಕಛೇರಿಯ ಅಧಿಕೃತ ವೆಬ್‌ಸೈಟ್ : www.ramanagaracity.mrc.gov.in ನಲ್ಲಿ ಸಹ ಪಡೆಯಬಹುದು.

ಸಹಿ/– ಅಧ್ಯಕ್ಷರು, ನಗರಸಭೆ, ರಾಮನಗರ.
ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ.

ಡಿಐಪಿಆರ್/ರಾಮನಗರ/567/ಮಣಿಪಾಲ್/2023–24

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to notify the general public that, my client has intended to purchase the Schedule Property. Which is more fully described in the schedule below and hereinafter referred to as the "Schedule Property" from the owner, Sri. S Kumar Residing at No. 10, Bilagumba Village, Kasaba Hobli, Ramanagara District, Karnataka-562159.

Any persons including an individual, a Hindu undivided Family, a company, any government authority, Banks, Financial Institution(s), non-Banking financial Institutions(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Scheduled Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien attachment, development rights, right of way, lispendens, reservation, agreement, FSI consumption, development rights, or any liability or commitments or otherwise or demand of any nature whatsoever are hereby requested to inform the same in writing, supported with the documents, to the undersigned address within a period of 21 (twenty one) days from the date of the publications of this notice, failing which, the claim or claims, if any, of such person or persons shall be considered to have been waived and/or abandoned.

SCHEDULE PROPERTY

All that piece and parcel of the portion of building built in Bangalore Development Authority site no 2, 4th block, Banasankari 3rd phase, 3rd stage, 100 feet road Kathriguppe, Bangalore. Coming within Bruhath Bangalore Mahanagara Palike ward no 163, Kathriguppe, 100 feet road, Property PID no 54-84-2. Total Built up area 418.52 square meters built-up area in Measurement and boundaries as under (east to west 15.2 meters and north to south 27.8+27.4/2, Boundaries: East by: site no 1, West by site no : 3, north by site no : 19, south by 100 feet ring road.

Sd/- (Mohankumar H V, Advocate.)
Subhas Nagar, 5th Cross Mandya Phone no : 9844585308
Date: 7.3.2024

ಟೆಂಡರ್

ಮಣಿಪಾಲ್ ಸೆಂಟರ್‌ನಲ್ಲಿ ವಾಹನ ನಿಲುಗಡೆ ಶುಲ್ಕ ವಸೂಲಿ ಮಾಡಲು ಗುತ್ತಿಗೆದಾರರಿಂದ ಮೊಹರು ಮಾಡಿದ ಟೆಂಡರುಗಳನ್ನು ಕರೆಯಲಾಗಿದೆ. ಗುತ್ತಿಗೆಯ ಅವಧಿ ಒಂದು ವರ್ಷ. ಟೆಂಡರ್ ಫಾರಂನ್ನು ಈ ಕೆಳಕಂಡ ವಿಳಾಸದಲ್ಲಿ ದಿನಾಂಕ : 12–03–2024 ರ ಒಳಗೆ ರೂ. 1,000/– ಪಾವತಿ ಮಾಡಿ ಪಡೆಯಬಹುದು. ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 18–03–2024.

ವಿಳಾಸ:
ಮಣಿಪಾಲ್ ಸೆಂಟರ್ ಓನರ್ಸ್ ಅಸೋಸಿಯೇಷನ್
ಎಸ್–723, ಮಣಿಪಾಲ್ ಸೆಂಟರ್, 47, ಡಿಕೆನ್ಸನ್ ರಸ್ತೆ, ಬೆಂಗಳೂರು – 560 042.
ದೂರವಾಣಿ : 080 – 4114 3021.

JOB OPPORTUNITIES

Accounts & Finance

WANTED ACCOUNTANT preferably BCom graduate, knowledge of Excel, Tally, Bank Reconciliation must with 3- 4 years experience. Contact: 8217870228

Marketing & Sales

TELECALLERS (FEMALE) BUSINESS DEVELOPMENT EXECUTIVES (M/F) Wanted with English Communication Computer Knowledge, Basaveswarnagar Office: 9845411113

Factory

REQUIRED ITI/ FITTER/ MACHINE OPERATOR/ HELPER Mysore Road, Byatarayanapura, Bangalore- 5600026. Contact: 26744597/551. Mobile: 76248-34251

General

IMMEDIATE REQUIREMENT
FABRICATOR of 2.5 Dia Pipe at Pune/ Maharashtra. Phone: 9008826378/ 8519993159. pvrplblr@gmail.com

PERSONAL

Change of Name

CHANGE OF NAME
I, **SUMAN CHAWAN S** Residing at No. 1/3, 2nd Floor, 20th Main, 1st Cross, Near Govt School, Marenahalli, Vijayanagar, Bengaluru-560040, have changed my name to **SUMAN DEEPAK** vide affidavit dated 04.03.2024 before Notary H.G. Venkataramu, Bengaluru. Henceforth I shall be known as **SUMAN DEEPAK** only.

CHANGE OF NAME
I, **JAGADHA.P, M/o JC441647W,** SUB, (Hony Lt) Bashkaran. J, Residing at No.20, North Tank Block, Cormandel Post, KGF-563118, Karnataka, declare that my name in my son's service record is mentioned as **SAGADHA. P** in future to be called as **JAGADHA.P** affidavit dated 23/02/2024, before notary N. Srinivasa, Robertsonpet, KGF.

I, E.SWETHA, R/a#02, 3rd A Main Road 5th Cross, Balaji Layout, Vidyaranyapura, Bengaluru-560097. I, have changed my name to GENNAVEE IREEN JOSEPH, Vide affidavit, dated:05/08/2005 Sworn before Notary: B.K.R. Krishnamurthy, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Lost

DOCUMENT LOST
I, **Tanveesh Kumar Dang** have lost my Original Share Certificates of ASM Technologies Ltd, (Advanced Synergic Microsystems Ltd)

Sl.	Certificate No	Distinctive Nos
1)	14024-100	(1392301-1392400)
2)	14025-100	(1392401-1392500)
3)	14026-100	(1392501-1392600)
4)	14027-100	(1392601-1392700)
5)	14028-100	(1392701-1392800)

If any one finders Please
Contact: 8130437002

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats, Converted&, Agriculture Lands
Call:7204995189

REAL ESTATE SELLING

Commerical

General

HOT COMMERCIAL PROPERTIES FOR SALE
Commercial Site for Sale 65 X 40. North East Corner Near Jnana Bharathi Circle, Outer Ring Road. Rs. 18,000/- Neg. Suitable PG / Bar / Hotel / Hospital / Surrounding by 8 Colleges.
FOR SALE / RENT
I have 10,000 to 3,00,000 Sqft available in Hoskote, Whitefield, Peenya, Electronic City, Jigani, Bellery Road, Jakur, Near KIADB Aerospace Park, Narsapura / Malur. Suitable for Warehouse / Godown / Factory.
CONTACT: MR. SEVENRAJ
98450 20007
98457 17777
sevenraj@gmail.com

Sites

Kempegowda Layout

COMMERCIAL SITE
Sale,KEMPEGOWDA LAYOUT 8th_Block, 'D'_Sector, 55X100,W/F BDA,NOC,NNA, Conversion land,Leagal Documents,₹5250/-sqft. Contact:9686469799

DH Classifieds More value, more impact · ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

ಪ್ರವಾಸೋದ್ಯಮ ಸಚಿವಾಲಯ
ಭಾರತ ಸರ್ಕಾರ

ಪ್ರವಾಸೋದ್ಯಮದ ಮೂಲಕ ಪರಿವರ್ತನೆ, ಮೋದಿ ಸರ್ಕಾರದ ಗ್ಯಾರಂಟಿ

ರೂ. 1,400 ಕೋಟಿಗೂ ಅಧಿಕ ಪ್ರವಾಸೋದ್ಯಮ ಯೋಜನೆಗಳ ಉಡುಗೊರೆ

6 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ
9 ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ

21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ
43 ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಶುಭಾರಂಭ

ಯೋಜನೆಗಳ ಲಾಭಗಳು

- ಭಕ್ತಾದಿಗಳ ಅಧ್ಯಾತ್ಮಿಕ ಪ್ರವಾಸೋದ್ಯಮ ಅನುಭವದಲ್ಲಿ ಹೆಚ್ಚಳ
- ಭಕ್ತಾದಿಗಳು ಮತ್ತು ಪ್ರವಾಸಿಗರ ಸುರಕ್ಷತೆ ಮತ್ತು ಭದ್ರತೆಯನ್ನು ಬಲಪಡಿಸುವುದು
- ಪ್ರವಾಸಿ ಮಾರ್ಗದರ್ಶಿಗಳಿಗೆ, ಸ್ಮರಣಿಕೆ ಮಳಿಗೆಗಳ ಮಾಲೀಕರಿಗೆ, ಕರಕುಶಲ ವಸ್ತುಗಳ ಕಲಾವಿದರಿಗೆ, ಟ್ಯಾಕ್ಸಿ ಚಾಲಕರಿಗೆ ಮತ್ತು ಇನ್ನಿತರ ಸ್ಥಳೀಯ ವ್ಯಾಪಾರ ವಹಿವಾಟುಗಳಿಗೆ ಉದ್ಯೋಗ ಮತ್ತು ಉದ್ಯಮಶೀಲತೆಯ ಅವಕಾಶ ಸೃಷ್ಟಿಸುವುದು
- ಪ್ರವಾಸಿ ತಾಣಗಳಲ್ಲಿ ಸ್ಥಳೀಯ ಸಮುದಾಯಗಳ ಬದುಕಿನ ಸರಳತೆಯನ್ನು ಹೆಚ್ಚಿಸುವುದು
- ಸ್ಥಳೀಯ ಯುವಜನತೆಯ ಕೌಶಲ್ಯ ಅಭಿವೃದ್ಧಿ
- ಸ್ಥಳೀಯ ಸಂಸ್ಕೃತಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ

ಭಾರತೀಯ ಡಯಾಸ್ಪೊರಾಗಳನ್ನು ಭಾರತದ ಅಸಾಮಾನ್ಯ ರಾಯಭಾರಿಗಳನ್ನಾಗಿ ರೂಪಿಸಲು **"ಚಲೊ ಇಂಡಿಯಾ" ಎಂಬ ಜಾಗತಿಕ ಡಯಾಸ್ಪೊರಾ ಅಭಿಯಾನಕ್ಕೆ ಚಾಲನೆ**

ಭಾರತದಲ್ಲಿನ ಅತ್ಯಂತ ಆಕರ್ಷಣೀಯ ಪ್ರವಾಸೋದ್ಯಮ ತಾಣಗಳನ್ನು ಗುರುತಿಸುವ ಪ್ರವಾಸಿಗರ ಅಭಿಪ್ರಾಯ ರೂಪಿಸಬಲ್ಲ ಒಂದು ಉಪಕ್ರಮ – **"ದೇಖೊ ಅಪ್ನಾ ದೇಶ ಪೀಪಲ್ಸ್ ಚಾಯ್ಸ್ 2024" ಶುಭಾರಂಭ**

ಸವಾಲು ಆಧಾರಿತ ತಾಣಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಆಯ್ಕೆಗೊಂಡಿರುವ **42 ಪ್ರವಾಸಿ ತಾಣಗಳ ಅನಾವರಣ**

ಇವರಿಂದ

ಶ್ರೀ ನರೇಂದ್ರ ಮೋದಿ

ಪ್ರಧಾನಮಂತ್ರಿ

ಶ್ರೀನಗರ | 07 ಮಾರ್ಚ್ 2024, ಮಧ್ಯಾಹ್ನ 12ಕ್ಕೆ

ಶ್ರೀನಗರದಲ್ಲಿನ ಹಜರತ್‌ಬಲ್ ಪುಣ್ಯಕ್ಷೇತ್ರದ ದೀಪಾಲಂಕಾರ

ಮೇಘಾಲಯದ ಮಾಕೊನೊ ಕೆಫೆಟೇರಿಯಾ

ತೆಲಂಗಾಣದ ಜೋಗುಳಾಂಬಾ ದೇವಿ ತೀರ್ಥಕ್ಷೇತ್ರದಲ್ಲಿನ ಭಕ್ತಾದಿಗಳ ಸೌಲಭ್ಯ ಕೇಂದ್ರ

ಗಾಂಧಿ ಥೀಮ್ ಪಾರ್ಕ್, ಚಂದ್ರಾಹಿಯಾ, ಬಿಹಾರ್

ಘಟ್ಟದ ಪುನರಾಭಿವೃದ್ಧಿ, ಅಮರಕಾಂತ್, ಮಧ್ಯಪ್ರದೇಶ

ಭಕ್ತಾದಿಗಳ ವಿಶ್ರಾಂತಿ ತಾಣ, ಬಾಲಾಜಿ, ರಾಜಸ್ಥಾನ

ರಸ್ತೆಬದಿ ಸೌಲಭ್ಯಗಳು, ಜಲೆಬಿಯಾ, ಬಿಹಾರ್

cbc 42101/13/0013/2324

ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿ DD NEWS

ಬೆಂಗಳೂರಿನಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣ • ಆರೋಪಿ ಫೋಟೊ ಬಿಡುಗಡೆ ಮಾಡಿದ ಎನ್‌ಐಎ

ಶಂಕಿತನ ಸುಳಿವು ನೀಡಿದರೆ ₹10 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 'ದಿ ರಾಮೇಶ್ವರಂ ಕೆಫೆ'ಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಆರಂಭಿಸಿರುವ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಶಂಕಿತ ಆರೋಪಿ ಫೋಟೊವನ್ನು ಬಿಡುಗಡೆ ಮಾಡಿ, ಸುಳಿವು ನೀಡಿದವರಿಗೆ ₹10 ಲಕ್ಷ ಬಹುಮಾನ ಘೋಷಿಸಿದೆ.

ರಸ್ತೆ, ಬಸ್ ನಿಲ್ದಾಣ, ಕೆಫೆಯಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದ ದೃಶ್ಯಾವಳಿ ಆಧಾರದಲ್ಲಿ ಆರೋಪಿಯ ಫೋಟೊ ಬಿಡುಗಡೆ ಮಾಡಲಾಗಿದೆ. ಆರೋಪಿಯು ಹ್ಯಾಟ್ ಹಾಗೂ ಕನ್ನಡಕ ಧರಿಸಿದ್ದು, ಮುಖ ಗುರುತಿಸಲು ಸಾಧ್ಯವಾಗುವಂತಹ ಫೋಟೊ ಬಿಡುಗಡೆ ಮಾಡಲಾಗಿದೆ.

ಮುಖ್ಯಾಂಶಗಳು

- ಮಾಹಿತಿದಾರರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು
- ಸುಳಿವು ಸಿಗದಿರಲೆಂದು ಪದೇ ಪದೇ ಬಸ್ ಬದಲಿಸಿದ್ದ ಶಂಕಿತ
- ಶಂಕಿತನ ಪತ್ತೆಗೆ 8 ತಂಡಗಳ ಕಾರ್ಯಾಚರಣೆ

ಸಾರ್ವಜನಿಕ ಪ್ರಕಟಣೆ ಹೊರಡಿಸಿರುವ ಎನ್‌ಐಎ, ಮಾಹಿತಿ ನೀಡಿದವರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು ಎಂದು ತಿಳಿಸಿದೆ.

ಶಂಕಿತನ ಸುಳಿವು ಲಭಿಸಿದ ಕೂಡಲೇ 080 29510900, 8904241100 ಹಾಗೂ ಇ-ಮೇಲ್ ವಿಳಾಸ info.blr.nia@gov.inಗೆ ಮಾಹಿತಿ ನೀಡಬಹುದು ಅಥವಾ ವಿಳಾಸ: ಎಸ್‌ಪಿ, ರಾಷ್ಟ್ರೀಯ ತನಿಖಾ ದಳ, 3ನೇ ಮಹಡಿ, ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್‌ಚೇಂಜ್, 80 ಅಡಿ ರಸ್ತೆ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು 08 –ಇಲ್ಲಿಗೆ ಕಳುಹಿಸಬಹುದು ಎಂದು ಅಧಿಕಾರಿಗಳು ಕೋರಿದ್ದಾರೆ.

ಎನ್‌ಐಎ, ಸಿಸಿಬಿ ಹಾಗೂ ಸ್ಥಳೀಯ ಪೊಲೀಸರಿಂದ ಪ್ರತ್ಯೇಕವಾಗಿ ತನಿಖೆ ನಡೆಯುತ್ತಿದೆ. ತನಿಖಾ ತಂಡಕ್ಕೆ ಆರೋಪಿ ಕುರಿತು ಕೆಲವು ಮಹತ್ವದ ಸುಳಿವುಗಳು ದೊರೆತಿವೆ ಎಂದು ಮೂಲಗಳು ತಿಳಿಸಿವೆ.

ಪದೇ ಪದೇ ಬಸ್ ಬದಲಾವಣೆ: ಕೆಫೆಯಲ್ಲಿ ಬ್ಯಾಗ್ ಇಟ್ಟ ಬಳಿಕ ಶಂಕಿತ ಎರಡು ಕಿ.ಮೀ. ದೂರದವರೆಗೆ ನಡೆದು ಬಳಿಕ ಬಸ್ ಏರಿದ್ದಾನೆ. ಪದೇ ಪದೇ ಬಸ್ ಬದಲಾವಣೆ ಮಾಡಿರುವುದು ಸಿ.ಸಿ. ಟಿ.ವಿ. ಕ್ಯಾಮೆರಾದ ದೃಶ್ಯಾವಳಿಯಿಂದ ಗೊತ್ತಾಗಿದೆ. ಸುಳಿವು ಸಿಗದಿರಲೆಂದು ಆರೋಪಿ ಈ ರೀತಿ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಎಂಟು ತಂಡಗಳಿಂದ ಕಾರ್ಯಾಚರಣೆ: ಶಂಕಿತನ ಪತ್ತೆಗೆ ಒಟ್ಟು ಎಂಟು ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಾವಳಿ, ಮೊಬೈಲ್ ನೆಟ್‌ವರ್ಕ್ ಶೋಧನೆ, ಆರೋಪಿ ತೆರಳಿರುವ ಮಾರ್ಗದ ಪತ್ತೆಗಾಗಿ ಪ್ರತ್ಯೇಕ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಇದುವರೆಗೂ ಸಿಸಿಬಿ ನಡೆಸಿದ ತನಿಖೆಯ ವಿವರವನ್ನು ಎನ್‌ಐಎ ಅಧಿಕಾರಿಗಳು ಪಡೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಕೆಫೆ ಆರಂಭ ಸಾಧ್ಯತೆ?: ಕುಂದಲಹಳ್ಳಿ ಸಮೀಪದ ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರಂದು ಮಧ್ಯಾಹ್ನ 12.55ಕ್ಕೆ ಕಚ್ಚಾ ಬಾಂಬ್ ಸ್ಫೋಟಗೊಂಡಿತ್ತು. ಘಟನೆಯಲ್ಲಿ ಮಹಿಳೆ ಸೇರಿದಂತೆ 9 ಮಂದಿ ಗಾಯಗೊಂಡಿದ್ದರು. ಸ್ಫೋಟ ನಡೆದ ಬಳಿಕ ಕೆಫೆ ಬಂದ್ ಆಗಿತ್ತು. ಸ್ಥಳೀಯ ಪೊಲೀಸರು ಹಾಗೂ ಎನ್‌ಐಎ ಅಧಿಕಾರಿಗಳು ಸ್ಥಳ ಮಹಜರು ಕಾರ್ಯ ಪೂರ್ಣಗೊಳಿಸಿದ್ದು, ಕೆಫೆ ಪುನರಾರಂಭಕ್ಕೆ ಅನುಮತಿ ನೀಡಲಾಗಿದೆ. ಬುಧವಾರದಿಂದಲೇ ಸ್ವಚ್ಛತಾ ಕಾರ್ಯ ಆರಂಭವಾಗಿದೆ. ಶುಕ್ರವಾರದಿಂದ ಕೆಫೆ ಆರಂಭಗೊಳ್ಳುವ ಸಾಧ್ಯತೆಯಿದೆ.

ಸುದ್ದಿ 2 ನಿಮಿಷ

ಮಂತ್ರಾಲಯದಲ್ಲಿ 11ರಿಂದ 16ರವರೆಗೆ ಗುರು ವೈಭವೋತ್ಸವ

ರಾಯಚೂರು: ಶ್ರೀರಾಘವೇಂದ್ರ ಗುರುಸಾರ್ವಭೌಮರ 403ನೇ ಪಟ್ಟಾಭಿಷೇಕ ಮಹೋತ್ಸವ ಹಾಗೂ 429 ವರ್ಧಂತಿ ಉತ್ಸವದ ಅಂಗವಾಗಿ ಮಾರ್ಚ್ 11ರಿಂದ 16ರವರೆಗೆ ಮಂತ್ರಾಲಯ ಮಠದಲ್ಲಿ ರಾಘವೇಂದ್ರ ಗುರು ವೈಭವೋತ್ಸವ ಕಾರ್ಯಕ್ರಮ ನಡೆಯಲಿದೆ.

ಶ್ರೀಸುಬುಧೇಂದ್ರ ತೀರ್ಥರ ಸಾನ್ನಿಧ್ಯದಲ್ಲಿ ಜ್ಞಾನಯಜ್ಞ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಮಾ.12ರಂದು ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ರಾಯರ ಪಾದುಕೆಗಳ ಪಟ್ಟಾಭಿಷೇಕ, ಮಾ.16ರಂದು ವರ್ಧಂತಿ ಮಹೋತ್ಸವ ನಡೆಯಲಿದೆ. ಬೆಳಿಗ್ಗೆ ತಿರುಪತಿಯ ಶ್ರೀನಿವಾಸನ ಪ್ರಸಾದ ರೂಪವಾಗಿ ಶೇಷವಸ್ತ್ರ ಸಮರ್ಪಣೆ ಮಾಡಲಿದ್ದಾರೆ. ಚೆನ್ನೈನ ಶ್ರೀ ರಾಘವೇಂದ್ರ ಸ್ವಾಮಿಗಳ ನಾದಾಹಾರ ಸೇವಾ ಸಮಿತಿಯ ಕಲಾವಿದರು ಗಾಯನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಉತ್ಸವದ ನಿಮಿತ್ತ ಸಾಧಕರಿಗೆ ಕೊಡಲಾಗುವ ಶ್ರೀರಾಘವೇಂದ್ರ ಅನುಗ್ರಹ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್, ವಕೀಲರಾದ ಎಸ್. ಕೆ.ಪುರೋಹಿತ, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ನ್ಯಾಯಮೂರ್ತಿಗಳು, ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಯಶವಂತಪುರ- ವಿಜಯಪುರ ರೈಲು ಸಂಚಾರ ಅವಧಿ ವಿಸ್ತರಣೆ

ಬೆಂಗಳೂರು: ಯಶವಂತಪುರ ಮತ್ತು ವಿಜಯಪುರ ನಡುವಿನ ವಿಶೇಷ ರೈಲುಗಳ ಸಂಚಾರದ ಅವಧಿಯನ್ನು ಮೂರು ತಿಂಗಳು ವಿಸ್ತರಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಯಶವಂತಪುರ– ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು ಮಾರ್ಚ್ 30 ರವರೆಗೆ ಓಡಿಸಲು ಈ ಹಿಂದೆ ಸೂಚನೆ ನೀಡಲಾಗಿತ್ತು. ಇದೀಗ ಜೂನ್ 30ರವರೆಗೆ ವಿಸ್ತರಿಸಲಾಗಿದೆ. ವಿಜಯಪುರ– ಯಶವಂತಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚಾರದ ಅವಧಿ ಏಪ್ರಿಲ್ 1ರ ವರೆಗೆ ಇತ್ತು, ಅದನ್ನು ಜುಲೈ 1ರ ವರೆಗೆ ವಿಸ್ತರಿಸಲಾಗಿದೆ. ವೇಳಾಪಟ್ಟಿ, ನಿಲುಗಡೆ ಮತ್ತು ಬೋಗಿಗಳ ಸಂಯೋಜನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಗೌರವ ಡಾಕ್ಟರೇಟ್

ಗದುಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ನಾಲ್ಕನೇ ಘಟಿಕೋತ್ಸವದಲ್ಲಿ, ರಾಜ್ಯದ ಐದನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಕುಲಸಚಿವ ಪ್ರೊ. ಸುರೇಶ ವಿ. ನಾಡಗೌಡರ, ಸಚಿವ ಪ್ರಿಯಾಂಕ್ ಖರ್ಗೆ, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಮಾಜಿ ಜಂಟಿ ಕಾರ್ಯದರ್ಶಿ ಡಾ. ಟಿ.ಆರ್.ರಘುನಂದನ್, ಕುಲಪತಿ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ ಪಾಲ್ಗೊಂಡಿದ್ದರು.

ಶಿರಸಿ: ಗೌರಿ ತೋಡಿದ ಬಾವಿಯಲ್ಲಿ ಚಿಮ್ಮಿದ ನೀರು

ಪ್ರಜಾವಾಣಿ ವಾರ್ತೆ

ಶಿರಸಿ: ಶಿರಸಿ ಹೊರವಲಯದ ಗಣೇಶನಗರ ಅಂಗನವಾಡಿ ಕೇಂದ್ರ 6ರ ಬಳಿ ಇಲ್ಲಿನ 57 ವರ್ಷದ ಗೌರಿ ನಾಯ್ಕ ಒಬ್ಬಂಟಿಯಾಗಿ ತೋಡುತ್ತಿದ್ದ ಬಾವಿಯಲ್ಲಿ ಬುಧವಾರ ನೀರು ಚಿಮ್ಮಿದೆ.

ಜನವರಿ 30ರಿಂದ ನಿರಂತರವಾಗಿ ಗೌರಿ ನಾಯ್ಕ ಅವರು ಒಂಟಿಯಾಗಿ ಬಾವಿ ತೋಡಿದರು. ಈವರೆಗೆ 45 ಅಡಿ ಆಳ ತೋಡಿರುವ ಅವರು ಇನ್ನೂ 5 ಅಡಿ ಆಳ ತೋಡುವರು. ಆರೋಗ್ಯದಲ್ಲಿ ಏರುಪೇರಾದ ಕಾರಣ ಕೊನೆಯ ಮೂರು ದಿನ ಬಾವಿಯಿಂದ ಮಣ್ಣು ಎತ್ತಲು ಇಬ್ಬರು ಕೂಲಿಗಳ ನೆರವು ಪಡೆದರು.

ಅಂಗನವಾಡಿ ಮಕ್ಕಳಿಗೆ ನೀರಿನ ಸಮಸ್ಯೆ ಆಗದಿರಲಿ ಎಂದು ಸ್ವತಃ ಗೌರಿ ನಾಯ್ಕ ಬಾವಿ ತೋಡುವ ಕಾರ್ಯ ಕೈಗೊಂಡರು. 'ಬಾವಿ ತೋಡಲು ಅನುಮತಿಯಿಲ್ಲ' ಎಂದು ಅಧಿಕಾರಿಗಳು ಆಕ್ಷೇಪಿಸಿದರು. ಎಲ್ಲಾ ಸವಾಲುಗಳ ಮಧ್ಯೆ ಅವರು ಬಾವಿ ತೋಡಿದರು. ಗೌರಿಯವರು ಏಕಾಂಗಿಯಾಗಿ ತೋಡಿದ 3ನೇ ಬಾವಿ ಇದು.

ಶಿರಸಿಯ ಗಣೇಶನಗರದ ಅಂಗನವಾಡಿ ಬಳಿ ತಾವು ತೋಡಿದ ಬಾವಿಗೆ ಗೌರಿ ನಾಯ್ಕ(ಬಲ ಬದಿಯಲ್ಲಿರುವವರು) ಬುಧವಾರ ಪೂಜೆ ಸಲ್ಲಿಸಿದರು

ತ್ಯಾಜ್ಯ ನೀರು ಮರುಬಳಕೆ: ವಾರದೊಳಗೆ ನಿಯಮ

ಒಂದನೇ ಪುಟದಿಂದ...

'ಬಿಬಿಎಂಪಿ ವ್ಯಾಪ್ತಿಯಿಂದ ಹೊರಗೆ ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗುತ್ತಿದ್ದು, ಅಲ್ಲಿ ನೀರಿನ ಬೇಡಿಕೆ ಹೆಚ್ಚುತ್ತಿದೆ. ಬಿಬಿಎಂಪಿ ಅಧಿಕಾರಿಗಳ ಜತೆ ಚರ್ಚೆ ನಡೆಸಿ 20 ವಸತಿ ಘಟಕಗಳಿರುವ ಅಪಾರ್ಟ್‌ಮೆಂಟ್‌ಗಳಿಗೆ ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಈ ದಿಸೆಯಲ್ಲಿ ಶೀಘ್ರದಲ್ಲೇ ಸುತ್ತೋಲೆ ಹೊರಡಿಸಲಾಗುವುದು' ಎಂದು ಅವರು ತಿಳಿಸಿದರು.

'ಸೂಕ್ತ ರೀತಿಯಲ್ಲಿ ನೀರು ಸಂಸ್ಕರಿಸಿದರೆ ಬೆಂಗಳೂರು ನಗರದಲ್ಲಿ ನಿತ್ಯ 250ರಿಂದ 300 ಎಂಎಲ್‌ಡಿ ನೀರು ಮರುಬಳಕೆಗೆ ಲಭಿಸಲಿದೆ. ಸಂಸ್ಕರಿಸಿದ ನೀರಿನ ಮರುಬಳಕೆಯ ನಿಯಮಗಳು ಜಾರಿಯಲ್ಲಿ ಇದ್ದರೂ ಸರಿಯಾಗಿ ಅನುಷ್ಠಾನಗೊಂಡಿಲ್ಲ. ಆದರೆ, ಹೀಗೆ ಸಂಸ್ಕರಿಸಿದ ನೀರನ್ನು ಯಾವುದೇ ಕಾರಣಕ್ಕೂ ಕುಡಿಯಲು, ಔಷಧ ಮತ್ತು ಆಹಾರ ತಯಾರಿಕೆಗೆ ಬಳಸದಂತೆ ನಿರ್ಬಂಧ ವಿಧಿಸಲಾಗುವುದು. ಮಾರಾಟ ಮಾಡಲಾಗುವ ಮರುಬಳಕೆ ನೀರಿನ ಶುದ್ಧತೆಯ ಹೊಣೆಯು ಅಪಾರ್ಟ್‌ಮೆಂಟ್ ಸಂಘಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಜಲಮಂಡಳಿ ಮತ್ತಿತರ ಪೂರಕ ಸಂಸ್ಥೆಗಳಿಗೂ ಇರುತ್ತದೆ. ಈ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದಾರೆ' ಎಂದರು.

ಪಿಎಸ್‌ಐ ನೇಮಕ: ಮೇ 8ಕ್ಕೆ ಲಿಖಿತ ಪರೀಕ್ಷೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ 402 ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇರ ನೇಮಕಾತಿಗೆ ಮೇ 8ರಂದು ಲಿಖಿತ ಪರೀಕ್ಷೆ ನಡೆಸಲಿದೆ. ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ ಮಾತ್ರ ಲಿಖಿತ ಪರೀಕ್ಷೆಗೆ ಅವಕಾಶ ನೀಡಲಾಗುವುದು ಎಂದು ಕೆಇಎ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಹೋರಿ ಇರಿತ: ವಿದ್ಯಾರ್ಥಿ ಸಾವು

ಹಂಸಬಾವಿ (ಹಾವೇರಿ ಜಿಲ್ಲೆ): ಗ್ರಾಮದಲ್ಲಿ ಸೋಮವಾರ ನಡೆದ ರಾಜ್ಯಮಟ್ಟದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಗಾಯಗೊಂಡಿದ್ದ ಬ್ಯಾಡಗಿ ತಾಲ್ಲೂಕಿನ ಮತ್ತೂರ ಗ್ರಾಮದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಪ್ರಶಾಂತ ರಾಜನಹಳ್ಳಿ (16) ಬುಧವಾರ ಮೃತಪಟ್ಟರು.

ಸ್ಪರ್ಧೆ ನೋಡಲು ಬಂದಿದ್ದ ಪ್ರಶಾಂತಗೆ ಹೋರಿ ತಿವಿದು ಗಂಭೀರ ಸ್ವರೂಪದ ಗಾಯವಾಗಿದ್ದ ಪರಿಣಾಮ. ಅವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಎನ್‌ಐಎ: ಮೊಬೈಲ್ ವಶಕ್ಕೆ

ಕಾರವಾರ: ಉಗ್ರವಾದಿ ಸಂಘಟನೆ ಜತೆ ನಂಟು ಹೊಂದಿದ ಶಂಕೆ ಮೇಲೆ ವ್ಯಕ್ತಿಯೊಬ್ಬನ ವಿಚಾರಣೆಗೆ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಆರು ಸದಸ್ಯರ ತಂಡವು ಅಂಕೋಲಾದ ವಿವಿಧೆಡೆ ಪರಿಶೀಲನೆ ನಡೆಸಿತು.

'ಪಟ್ಟಣದ ಗುಡಿಗಾರಗಲ್ಲಿ ಬಳಿಯಿರುವ ರಕ್ತಮೂತ್ರ ಪ್ರಯೋಗಾಲಯ ನಡೆಸುವ 51 ವರ್ಷದ ವ್ಯಕ್ತಿಯನ್ನು ತಂಡವು ವಿಚಾರಣೆ ನಡೆಸಿದೆ. ಆತನಿಂದ ಮೊಬೈಲ್‌ಫೋನ್ ವಶಕ್ಕೆ ಪಡೆದಿದೆ' ಎಂದು ಪೊಲೀಸ್ ಇಲಾಖೆ ಮೂಲಗಳು ತಿಳಿಸಿವೆ.

ಪರಪ್ಪನ ಅಗ್ರಹಾರದಲ್ಲಿನ ಕೆಲ ಆರೋಪಿಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡಿದ ಸಂಬಂಧ ಪ್ರಕರಣದ ತನಿಖೆ ಎನ್‌ಐಎ ನಡೆಸಿದೆ.ಎನ್ನಲಾಗಿದೆ.

ಹಾಲು ಖರೀದಿ ದರ ಹೆಚ್ಚಳಕ್ಕೆ ಚಿಂತನೆ

ಬೆಟ್ಟದಪುರ (ಮೈಸೂರು ಜಿಲ್ಲೆ): 'ಹಾಲಿನ ಖರೀದಿ ದರ ಹೆಚ್ಚಿಸುವ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ' ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಸಮೀಪದ ವಡ್ಡರಹಳ್ಳಿ ಹಾಲು ಉತ್ಪಾದಕ ಸಹಕಾರ ಸಂಘದ ನೂತನ ಕಟ್ಟಡ ಹಾಗೂ ಬಿಎಂಸಿ ಕೇಂದ್ರವನ್ನು ಬುಧವಾರ ಉದ್ಘಾಟಿಸಿ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪ್ರತಿ ಲೀಟರ್ ಹಾಲಿಗೆ ₹3 ಹೆಚ್ಚಳ ಮಾಡಲಾಗಿದೆ. ಹೈನುಗಾರಿಕೆ ದಿನೇ ದಿನೇ ಹೆಚ್ಚುತ್ತಿದ್ದು, ಹಾಲಿಗೆ ನ್ಯಾಯಯುತ ಬೆಲೆ ಸಿಗಬೇಕೆಂಬುದು ಸರ್ಕಾರದ ಉದ್ದೇಶ' ಎಂದರು.

ಕೆಪಿಎಸ್‌ಸಿ ಸದಸ್ಯರಾಗಿ ಕಾವಲ್ಲಮ್ಮ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿ ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಇತಿಹಾಸ ವಿಭಾಗದ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರದ ಸಂಯೋಜಕಿಯೂ, ಪ್ರಾಧ್ಯಾಪಕಿಯೂ ಆಗಿರುವ ಆರ್. ಕಾವಲ್ಲಮ್ಮ ಅವರನ್ನು ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ.

ತುಮಕೂರು ಜಿಲ್ಲೆ ಮಧುಗಿರಿಯವರಾದ ಕಾವಲ್ಲಮ್ಮ ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ, ಎಂ.ಫಿಲ್ ಮತ್ತು ಪಿಎಚ್.ಡಿ ಪಡೆದಿದ್ದಾರೆ. ಅವರನ್ನು ಅಧಿಕಾರಿ ವಿಭಾಗದಲ್ಲಿ ಖಾಲಿ ಇರುವ ಸದಸ್ಯ ಸ್ಥಾನಕ್ಕೆ ನೇಮಿಸಲಾಗಿದೆ.

ಕೆಪಿಎಸ್‌ಸಿಗೆ ಅಧ್ಯಕ್ಷರು ಮತ್ತು 15 ಸದಸ್ಯರ ನೇಮಕಕ್ಕೆ ಅವಕಾಶವಿದೆ. ಸದ್ಯ ಅಧ್ಯಕ್ಷರು ಮತ್ತು 10 ಸದಸ್ಯರಿದ್ದಾರೆ. ಕಾವಲ್ಲಮ್ಮ ಅವರ ನೇಮಕದ ನಂತರವೂ ನಾಲ್ಕು ಸದಸ್ಯ ಸ್ಥಾನಗಳು ಖಾಲಿ ಇವೆ.

ವಿದ್ಯುತ್ ಉತ್ಪಾದನೆ ಸ್ಥಗಿತ

ಶಕ್ತಿನಗರ: ತಾಂತ್ರಿಕ ಸಮಸ್ಯೆಯಿಂದಾಗಿ ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದ (ವೈಟಿಪಿಎಸ್) 2ನೇ ವಿದ್ಯುತ್ ಘಟಕದ ಉತ್ಪಾದನೆ ಬುಧವಾರ ಸ್ಥಗಿತಗೊಂಡಿದೆ. ವೈಟಿಪಿಎಸ್‌ನ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ದುರಸ್ತಿ ಕಾರ್ಯಕ್ಕೆ ಮುಂದಾಗುವಂತೆ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಯರಮರಸ್ ಸೂಪರ್ ಕ್ರಿಟಿಕಲ್ ಕೇಂದ್ರ 1,600 ಮೆಗಾ ವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ದುರಸ್ತಿ ಕಾರ್ಯ ಆರಂಭವಾಗಿದ್ದು, ಮಾರ್ಚ್ 7ರಂದು ಮತ್ತೆ ವಿದ್ಯುತ್ ಘಟಕದ ಉತ್ಪಾದನೆ ಆರಂಭವಾಗಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

₹440 ಮುಖಬೆಲೆಯ ಮಾತ್ರೆ ₹4 ಸಾವಿರಕ್ಕೆ ಮಾರಾಟ?

ಒಂದನೇ ಪುಟದಿಂದ...

'2023 ಜನವರಿಯಿಂದ ಡಿ.12ರವರೆಗೆ ಜಿಲ್ಲೆಯ 12 ಸಗಟು ಔಷಧ ಮಾರಾಟ ಮಳಿಗೆಗಳಲ್ಲಿ 6,626 ಎಂಟಿಪಿ (ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ) ಕಿಟ್ ಮಾರಾಟವಾಗಿವೆ. ಈ ಕಿಟ್‌ನಲ್ಲಿ ಮಿಫೆಪ್ರಿಸ್ಟಾನ್, ಮಿಸೋಪ್ರೊಸ್ಟ್ ಮಾತ್ರೆಗಳಿದ್ದು, ಅವುಗಳ ಮುಖಬೆಲೆ ₹440. ಆದರೆ ಕೆಲ ವೈದ್ಯರು, ಔಷಧಿ ಅಂಗಡಿಗಳ ಮಾಲೀಕರು ನೇರವಾಗಿ ₹4 ಸಾವಿರದವರೆಗೂ ಮಾರಾಟ ಮಾಡಿದ್ದಾರೆ' ಎಂಬುದು ಆರೋಗ್ಯ ಇಲಾಖೆಯ ತನಿಖೆಯಿಂದ ಪತ್ತೆಯಾಗಿದೆ.

'ತುರ್ತು ಸಂದರ್ಭದಲ್ಲಿ ತಾಯಿ ಹಾಗೂ ಮಗುವಿನ ಜೀವ ಉಳಿಸಲು ಬಳಸುವ ಎಂಟಿಪಿ ಕಿಟ್‌ಗಳನ್ನು ಹೆಣ್ಣುಭ್ರೂಣಹತ್ಯೆಗೆ ಬಳಸಲಾಗಿದೆ. ವೈದ್ಯರ ಸಲಹಾ ಚೀಟಿ ಇಲ್ಲದೆಯೇ ಅಕ್ರಮವಾಗಿ ಮಾರಾಟವಾಗಿರುವುದು ಹೆಣ್ಣುಭ್ರೂಣ ಹತ್ಯೆ ಜಿಲ್ಲೆಯಲ್ಲಿ ತೀವ್ರಗೊಳ್ಳಲು ಕಾರಣ' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

> **ಹೆಣ್ಣುಭ್ರೂಣ ಹತ್ಯೆ ಆರೋಪದ ತನಿಖೆ ನಡೆಸಲಾಗುತ್ತಿದೆ. ಸಗಟು ಔಷಧಿ ಮಾರಾಟಗಾರರು, ಚಿಲ್ಲರೆ ಮಾರಾಟಗಾರರ ಚಟುವಟಿಕೆ ಮೇಲೆ ನಿಗಾ ಇರಿಸಲಾಗಿದೆ**
>
> **ಡಾ.ಕೆ.ಮೋಹನ್**
> ಜಿಲ್ಲಾ ಆರೋಗ್ಯಾಧಿಕಾರಿ

ಸಹಾಯಕ ಔಷಧ ನಿಯಂತ್ರಕರು ನೀಡಿದ ಮಾಹಿತಿ ಅನುಸಾರ, ಜಿಲ್ಲೆಯಲ್ಲಿ ಸಣ್ಣಪುಟ್ಟ ಔಷಧಿ ಅಂಗಡಿಗಳಲ್ಲೂ ಅನಧಿಕೃತವಾಗಿ ಎಂಟಿಪಿ ಕಿಟ್ ಮಾರಾಟವಾಗಿವೆ.

ಜಿಲ್ಲೆಯಲ್ಲಿ 30 ಸಗಟು ಔಷಧ ಮಾರಾಟ ಮಳಿಗೆಗಳಿದ್ದು, 12 ಮಾರಾಟಗಾರರಷ್ಟೇ ಕಿಟ್ ಮಾರಾಟದ ಮಾಹಿತಿ ನೀಡಿದ್ದಾರೆ. ಉಳಿದ 18 ಮಾರಾಟಗಾರರಿಗೆ ಮಾಹಿತಿ ನೀಡುವಂತೆ ಆರೋಗ್ಯ ಇಲಾಖೆ ನೋಟಿಸ್ ನೀಡಿದೆ. '15 ಸಾವಿರಕ್ಕೂ ಹೆಚ್ಚು ಕಿಟ್ ಮಾರಾಟವಾಗಿರುವ ಸಾಧ್ಯತೆ ಇದೆ. ಅವರೂ ಮಾಹಿತಿ ಕೊಟ್ಟರೆ ನಿಖರ ಪ್ರಮಾಣ ಗೊತ್ತಾಗಲಿದೆ' ಎಂದು ಮೂಲಗಳು ತಿಳಿಸಿವೆ.

'ಮಾತ್ರೆಗಳನ್ನು ಇಷ್ಟೇ ಬೆಲೆಗೆ ಮಾರಾಟ ಮಾಡಲಾಗಿದೆ ಎಂಬ ನಿಖರ ಮಾಹಿತಿ ಇಲ್ಲ. ₹4 ಸಾವಿರದವರೆಗೂ ಮಾರಾಟವಾಗಿರುವ ಮಾಹಿತಿ ಸಿಕ್ಕಿದೆ. ಅದಕ್ಕಿಂತ ಹೆಚ್ಚು ಬೆಲೆಗೂ ಮಾರಾಟವಾಗಿರುವ ಸಾಧ್ಯತೆ ಇದೆ. ನರ್ಸಿಂಗ್ ಹೋಮ್‌ಗೆ ಹೊಂದಿಕೊಂಡಂತಿರುವ ಔಷಧಿ ಅಂಗಡಿಗಳಲ್ಲಿ, ಒಂದೇ ಹೆಸರಿನ ವೈದ್ಯರಿಗೆ ಹಲವು ಕಿಟ್ ಮಾರಾಟ ಮಾಡಲಾಗಿದೆ. ಅದಕ್ಕೆ ಉನ್ನತ ಮಟ್ಟದ ತನಿಖೆಯ ಅವಶ್ಯಕತೆ ಇದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಕ್ರಮಕ್ಕೆ ಶಿಫಾರಸು: 'ಎಂಟಿಪಿ ಕಿಟ್ ಮಾರಾಟ ಮಾಡಿರುವ ಸಗಟು, ಚಿಲ್ಲರೆ ಔಷಧಿ ಅಂಗಡಿಗಳು ಪ್ರತಿ ಕಿಟ್‌ಗೂ ವೈದ್ಯರ ಸಲಹಾ ಚೀಟಿ ಹಾಗೂ ಮಾರಾಟದ ಬಿಲ್ ಹಾಜರುಪಡಿಸಬೇಕು. ವಿಫಲರಾದರೆ ಹೆಣ್ಣುಭ್ರೂಣಹತ್ಯೆ ಪ್ರಕರಣಗಳಿಗೆ ಹೊಣೆಗಾರರನ್ನಾಗಿಸಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು' ಎಂದು ಅಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಶಿಫಾರಸು ಮಾಡಿದ್ದಾರೆ.

ಕಸಾಪ ಕಾರ್ಯದರ್ಶಿಯಿಂದ ಬಾಲಕಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮ್ಮ ಸ್ಕೂಟರ್‌ಗೆ ಅಡ್ಡ ಬಂದ ಬಾಲಕಿಯ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಎಂ.ಬಿ. ರಮೇಶ್ ಬುಧವಾರ ಹಲ್ಲೆ ಮಾಡಿದ್ದಾರೆ.

ಇಲ್ಲಿನ ಸುಭಾಷ್ ನಗರದ ಮೂರನೇ ತಿರುವಿನಲ್ಲಿ ಘಟನೆ ನಡೆದಿದ್ದು, ಹಲ್ಲೆ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಬಾಲಕಿಯು ಏಟನ್ನು ತಪ್ಪಿಸಿಕೊಳ್ಳಲು ಗೋಳಾಡುತ್ತಾ, 'ಕಾಲಿಗೆ ಬೀಳುತ್ತೇನೆ ಅಂಕಲ್, ಬಿಟ್ಟುಬಿಡಿ' ಎಂದು ಗೋಗರೆಯುವ ದೃಶ್ಯ ವಿಡಿಯೋದಲ್ಲಿದೆ. ರಮೇಶ್ ಅವರ ನಡೆಗೆ ಆಕ್ರೋಶ ವ್ಯಕ್ತವಾಗಿದೆ. ರಮೇಶ್ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಬೋರ್ಡ್ ಪರೀಕ್ಷೆ ರದ್ದು: ಹೈಕೋರ್ಟ್

ಒಂದನೇ ಪುಟದಿಂದ...

'ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಹೊಂದಿದ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕಾದಲ್ಲಿ ಯಾವುದೇ ಆಕ್ಷೇಪ ಇರಬಾರದು. ಅಧಿಸೂಚನೆಗೆ ಮುನ್ನ ಅಹವಾಲುಗಳನ್ನು ಆಲಿಸಿರಬೇಕು ಮತ್ತು ಕಡ್ಡಾಯವಾಗಿ ನಿಗದಿಪಡಿಸಿರುವ ಕಾರ್ಯವಿಧಾನದ ಮೂಲಕವೇ ಜಾರಿಗೆ ತರಬೇಕಾಗುತ್ತದೆ. ಹೀಗಾಗಿ, ಸರ್ಕಾರದ ಅಧಿಸೂಚನೆ ದೋಷಪೂರಿತವಾಗಿದೆ' ಎಂದು ನ್ಯಾಯಪೀಠ ಹೇಳಿದೆ.

ಅರ್ಜಿದಾರರ ವಾದ ಪುರಸ್ಕೃತ: 'ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಪರೀಕ್ಷೆಗೆ ಸಂಬಂಧಿಸಿದ ಕಲಂ 22ರ ಪ್ರಕಾರ, ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕಾದರೆ, ಕಾಯ್ದೆಯ ಅನ್ವಯ ಮೊದಲು ನಿಯಮಗಳನ್ನು ರೂಪಿಸಬೇಕು. ಅದು ಶಾಸಕಾಂಗದಲ್ಲಿ ಅನುಮೋದನೆಗೊಂಡ ಬಳಿಕವಷ್ಟೇ ಅಂತಿಮಗೊಳಿಸಿ ಜಾರಿಗೆ ತರಬೇಕು. ಆದರೆ, ಈ ಪ್ರಕರಣದಲ್ಲಿ ಸರ್ಕಾರ ಅಂತಹ ವಿಧಾನವನ್ನು ಪಾಲಿಸಿಲ್ಲ' ಎಂಬ ಅರ್ಜಿದಾರರ ವಾದವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ.

'ಶಾಲಾ ಪರೀಕ್ಷೆಗಳನ್ನು ಅಧಿಸೂಚನೆಯ ರೂಪದಲ್ಲಿ ಅನುಷ್ಠಾನಗೊಳಿಸುವುದು ತರವಲ್ಲ. ಇದು ನಿಯಮಗಳನ್ನು ಅನುಸರಿಸಿ ಕಾಯ್ದೆ ಪ್ರಕಾರ ನಡೆಸಬೇಕಾದ ಕಾನೂನುಬದ್ಧ ಪ್ರಕ್ರಿಯೆ. ಈ ವಿಚಾರದಲ್ಲಿ ಸರ್ಕಾರ ವಿವೇಚನಾಧಿಕಾರವನ್ನು ಬಳಸುವುದಕ್ಕೂ ಆಗದು. ಇಲ್ಲಿ ಸರ್ಕಾರ ಎಡವಿದೆ. ಕಡ್ಡಾಯ ನಿಯಮಗಳನ್ನು ಪಾಲನೆ ಮಾಡಿಲ್ಲ' ಎಂಬ ಅರ್ಜಿದಾರರ ಆಕ್ಷೇಪವನ್ನು ಪುರಸ್ಕರಿಸಿದೆ.

ಸರ್ಕಾರದ ವಾದ: 'ಉದ್ದೇಶಿತ ಬೋರ್ಡ್ ಪರೀಕ್ಷೆ ಅಥವಾ ಮೌಲ್ಯಮಾಪನವು ಪೂರ್ವಸಿದ್ಧತಾ ಸ್ವರೂಪದ್ದಾಗಿದ್ದು, 10 ಮತ್ತು 12ನೇ ತರಗತಿಗೆ ಎದುರಾಗುವ ಬೋರ್ಡ್ ಪರೀಕ್ಷೆಗೆ ಮಕ್ಕಳನ್ನು ಸನ್ನದ್ಧಗೊಳಿಸುವ ಉದ್ದೇಶ ಹೊಂದಿದೆ. ಶಿಕ್ಷಣದ ಗುಣಮಟ್ಟದಲ್ಲಿ ಏಕರೂಪತೆ ತರುವ ಉದ್ದೇಶವೂ ಇದರಲ್ಲಿ ಅಡಕವಾಗಿದೆ. ಕಲಿಕಾ ಚೇತರಿಕೆ ಕೂಡಾ ಪಠ್ಯಕ್ರಮದ ಭಾಗವೇ ಆಗಿದೆ' ಎಂದು ಸರ್ಕಾರ ವಿವರಿಸಿತ್ತು.

'ಸಾಮಾನ್ಯ ಪಠ್ಯಕ್ರಮದಿಂದಲೇ ಕಲಿಕಾ ಚೇತರಿಕೆ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಮಕ್ಕಳ ಬುದ್ಧಿಮತ್ತೆಯನ್ನು ಸಕಾರಾತ್ಮಕವಾಗಿ ವೃದ್ಧಿಸುವ ದಿಸೆಯಲ್ಲಿಯೇ ಇದನ್ನು ರೂಪಿಸಲಾಗಿದೆ. ಪ್ರಶ್ನೆಪತ್ರಿಕೆಯಲ್ಲಿ ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳಿಲ್ಲ. ಹಾಗಾಗಿ, ಬೋರ್ಡ್ ಪರೀಕ್ಷೆಗೆ ಕಲಿಕಾ ಚೇತರಿಕೆ ಪಠ್ಯಕ್ರಮದಿಂದ ಪ್ರಶ್ನೆಗಳನ್ನು ಪಡೆದುಕೊಂಡಿರುವುದು ಸರಿಯಿದೆ. ಅದರಂತೆ ಪರೀಕ್ಷೆ ನಡೆಸಲು ಅವಕಾಶ ಕಲ್ಪಿಸಬೇಕು' ಎಂದು ಕೋರಿತ್ತು.

'ಆರ್‌ಟಿಇ ಕಾಯ್ದೆಯ ಕಲಂ 16ರಡಿ 5ರಿಂದ 8ನೇ ತರಗತಿವರೆಗೆ ಸಾಮಾನ್ಯ ವಾರ್ಷಿಕ ಪರೀಕ್ಷೆಯನ್ನು ಮಾತ್ರವೇ ನಡೆಸಬೇಕು ಎನ್ನುವುದು ಅರ್ಜಿದಾರರ ವಾದ. ಆದರೆ, ಅದು ಬೋರ್ಡ್ ಪರೀಕ್ಷೆಯನ್ನು ನಿರ್ಬಂಧಿಸುತ್ತದೆ ಎಂದು ಅರ್ಥವಲ್ಲ. ಕರ್ನಾಟಕ ಶಿಕ್ಷಣ ಕಾಯ್ದೆಯ ಕಲಂ 22ರಡಿ ನಿಯಮಗಳನ್ನು ರೂಪಿಸುವುದು ಕಡ್ಡಾಯವಲ್ಲ. ಯಾವ ಸಂದರ್ಭದಲ್ಲಿ ನಿಯಮಗಳನ್ನು ರೂಪಿಸಬೇಕು ಎಂಬ ವಿವೇಚನಾಧಿಕಾರವನ್ನು ಸರ್ಕಾರ ಹೊಂದಿದೆ' ಎಂಬ ಸರ್ಕಾರದ ವಾದವನ್ನು ನ್ಯಾಯಪೀಠ ತಳ್ಳಿಹಾಕಿದೆ.

ಅರ್ಜಿದಾರರ ಪರ ಕೆ.ವಿ.ಧನಂಜಯ, ಎಸ್.ಸುದರ್ಶನ, ಅನಿರುದ್ಧ ವಿ.ಕುಲಕರ್ಣಿ ಹಾಗೂ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಂ ಹುಯಿಲಗೋಳ ಅವರು ವಾದ ಮಂಡಿಸಿದ್ದರು.

ಅಣೆಕಟ್ಟು ಸುರಕ್ಷತೆ: ಐಐಎಸ್‌ಸಿ ಜೊತೆ ಒಪ್ಪಂದ

ನವದೆಹಲಿ (ಪಿಟಿಐ): ಅಣೆಕಟ್ಟುಗಳ ಸುರಕ್ಷತೆಗೆ ಕೆಲಸ ಮಾಡುವ ಕೇಂದ್ರ ಆರಂಭಿಸಲು ('ಅಣೆಕಟ್ಟುಗಳ ಉತ್ಕೃಷ್ಟತೆಗಾಗಿನ ಅಂತರರಾಷ್ಟ್ರೀಯ ಕೇಂದ್ರ - ಐಸಿಇಡಿ) ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.

ಒಪ್ಪಂದಕ್ಕೆ ಸೋಮವಾರ ಸಹಿ ಹಾಕಲಾಗಿದೆ ಎಂದು ಜಲ ಶಕ್ತಿ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಒಪ್ಪಂದವು ಹತ್ತು ವರ್ಷಗಳ ಅವಧಿಗೆ ಜಾರಿಯಲ್ಲಿ ಇರುತ್ತದೆ. ರಾಷ್ಟ್ರ ಮಟ್ಟದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಣೆಕಟ್ಟುಗಳ ರಕ್ಷಣೆಯ ವಿಚಾರದಲ್ಲಿ ಎದುರಾಗುವ ಸವಾಲುಗಳಿಗೆ ಐಸಿಇಡಿ ಕೇಂದ್ರವು ಪರಿಹಾರ ಹುಡುಕಲು ನೆರವಾಗಲಿದೆ ಎಂದು ಸಚಿವಾಲಯವು ಹೇಳಿದೆ.

ಅಣೆಕಟ್ಟುಗಳ ಸುರಕ್ಷತೆಗೆ ಅಗತ್ಯವಿರುವ ಹತ್ತು ಹಲವು ಚಟುವಟಿಕೆಗಳನ್ನು ಐಸಿಇಡಿ ಕೇಂದ್ರವು ಕೈಗೆತ್ತಿಕೊಳ್ಳಲಿದೆ. ಅಣೆಕಟ್ಟುಗಳ ರಕ್ಷಣೆಯ ವಿಚಾರದಲ್ಲಿ ಮುಂದೆ ಪ್ರವರ್ಧಮಾನಕ್ಕೆ ಬರಬಹುದಾದ ವಲಯಗಳನ್ನು ಐಸಿಇಡಿ ವ್ಯಾಪ್ತಿಗೆ ಸೇರಿಸುವ ಆಯ್ಕೆಯನ್ನು ಸಚಿವಾಲಯವು ಮುಕ್ತವಾಗಿ ಇರಿಸಿಕೊಂಡಿದೆ.

ಕೇಂದ್ರದ ಸ್ಥಾಪನೆಗೆ ಜಲ ಶಕ್ತಿ ಸಚಿವಾಲಯವು ₹118.05 ಕೋಟಿ ಅನುದಾನ ಒದಗಿಸಿದೆ. ಕೇಂದ್ರದ ಚಟುವಟಿಕೆಗಳಲ್ಲಿ ಐಐಎಸ್‌ಸಿ ಸಂಸ್ಥೆಯು ಪ್ರಮುಖ ಪಾತ್ರವನ್ನು ನಿಭಾಯಿಸಲಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂ./ಸ.ಇಂ/ಲೋ.ಇ/ಹಾ.ವಿ/ಹಾಸನ/ಇಂ-2/2023-24 ದಿನಾಂಕ:04.03.2024
ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ
ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 23/2023-24 ದಿನಾಂಕ: 21.02.2024 ರಲ್ಲಿ ಕರೆಯಲಾಗಿದ್ದ ಕ್ರಮ ಸಂಖ್ಯೆ 01 ರ ಕಾಮಗಾರಿಗೆ ಬಿಡ್ಡನ್ನು ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ: 13.03.2024 -16.00 ರಂತೆ, ಟೆಂಡರ್‌ನ ನಿಗದಿತ ನಮೂನೆಗಳನ್ನು http://Kppp.karnataka.gov.in/#/portal/portal-home ರಲ್ಲಿ ಡೌನ್‌ಲೋಡ್ ಮಾಡಿ ಅದನ್ನು ದಾಖಲಾತಿಗಳೊಂದಿಗೆ ಹಾಗೂ ನಿಗದಿತ ಇಎಂಡಿಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸ/ಹಾಸನ/891/ಕೆಎಸ್‌ಎಂಸಿಎ/905/2023-24

ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 32, ಡಾ. ಬಾಬು ಜಗಜೀವನ ರಾಂ ಲಿಡ್‌ಕರ್ ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು-560 052.
ದೂರವಾಣಿ ಸಂಖ್ಯೆ: 080-22288895/22288897 ಇ-ಮೇಲ್: lidkar2018@gmail.com
ಟೆಂಡರ್ ಸಂಖ್ಯೆ: ಲಿಡ್‌ಕರ್/ಆಡಳಿತ/ಲೇಖನ ಸಾಮಾಗ್ರಿ/ಸಿಆರ್-36/2023-24 ದಿನಾಂಕ.07.03.2024
ಅಲ್ಪಾವಧಿ -ಟೆಂಡರ್ ಪ್ರಕಟಣೆ
ನಿಗಮದ ಕೇಂದ್ರ ಕಛೇರಿಗೆ ಲೇಖನ ಸಾಮಾಗ್ರಿಗಳನ್ನು Competent Authority ಯಿಂದ ನೊಂದಾಯಿಸಲ್ಪಟ್ಟ ಸರಬರಾಜುದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ. 22.03.2024 ಮಧ್ಯಾಹ್ನ 2.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ದಿನಾಂಕ. 25.03.2024 ಸಂಜೆ 4.00 ಗಂಟೆಗೆ ತೆರೆಯಲಾಗುವುದು ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ಕರೆಯಲಾಗಿದ್ದು, ಅವಶ್ಯಕವಿರುವ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ಮೂಲಕ ಪಡೆಯಬಹುದು ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿದಾರರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು
(ವಾಣಿಜ್ಯ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
DIPR/CP/4070/Zen/2023-24

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5ನೇ ಮಹಡಿ, ಪ್ಲಾಟ್ ನಂ: 1243, ಕೆಎಸ್‌ಐಐಡಿಸಿ ಕಟ್ಟಡ, ಐ.ಟಿ. ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-10.
Ph : 080 22342163, 22372738 e-mail: karnregs.ombudsman@gmail.com
ಸಂಖ್ಯೆ:ಗ್ರಾಅಆ:135:ಉಖಾಯೋ:2024 ದಿನಾಂಕ: 06.03.2024
ಪತ್ರಿಕಾ ಪ್ರಕಟಣೆ
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂಬಂಧದಲ್ಲಿ ಸ್ವೀಕೃತವಾಗುವ ದೂರುಗಳ ವಿಲೇವಾರಿ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ಈ ಕೆಳಕಂಡ ಜಿಲ್ಲೆಗಳಲ್ಲಿ ರಿಕ್ತವಾಗಿರುವ ಒಂಬುಡ್ಸ್‌ಪರ್ಸನ್‌ರವರ ಹುದ್ದೆಗಳನ್ನು ಆಯ್ಕೆ ಮೂಲಕ ತುಂಬಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಒಂಬುಡ್ಸ್‌ಪರ್ಸನ್ ಹುದ್ದೆ ಖಾಲಿಯಿರುವ ಜಿಲ್ಲೆಗಳ ಬಾಗಲಕೋಟೆ, ಬಳ್ಳಾರಿ, ಚಿಕ್ಕಬಳ್ಳಾಪುರ, ಧಾರವಾಡ, ಹಾವೇರಿ, ರಾಮನಗರ, ರಾಯಚೂರು ಮತ್ತು ವಿಜಯನಗರ
ಜಿಲ್ಲಾ ಮಟ್ಟದಲ್ಲಿ ಒಂಬುಡ್ಸ್‌ಪರ್ಸನ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್ www.rdpr.karnataka.gov.in ನಲ್ಲಿ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ (download) ಮಾಡಿಕೊಂಡು, ತಮ್ಮ ವೃತ್ತಿ ಅನುಭವ, ಕನಿಷ್ಠ 10 ವರ್ಷಗಳ ಕಾರ್ಯನಿರ್ವಹಣೆ ಸೇವಾನುಭವದ ವಿವರಗಳನ್ನೊಳಗೊಂಡ ದಾಖಲೆ ಹಾಗೂ ಇತರೆ ಪೂರಕ ದಾಖಲಾತಿಗಳೊಂದಿಗೆ ಅರ್ಜಿಯನ್ನು ದಿನಾಂಕ:05.04.2024 ರೊಳಗೆ ತಲುಪುವಂತೆ ಮುದ್ದಾಂ/ಅಂಚೆ ಮೂಲಕ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 5ನೇ ಮಹಡಿ, ಪ್ಲಾಟ್ ನಂ.1243, ಐ.ಟಿ. ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560010. ಇವರಿಗೆ ಸಲ್ಲಿಸುವುದು. ನಿಗದಿಪಡಿಸಿದ ದಿನಾಂಕದ ನಂತರ ತಡವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-22342163 ಅನ್ನು ಸಂಪರ್ಕಿಸಬಹುದಾಗಿದೆ)
ಸಹಿ/-
ಮುಖ್ಯ ಕಾರ್ಯಾಚರಣೆ ಅಧಿಕಾರಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ
DIPR/CP/4134/ZEN/2023-24

ಕರ್ನಾಟಕ ಸರಕಾರ
ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಗದಗ ಜಿಲ್ಲಾ ಆಡಳಿತ ಭವನ ರೂಮ್ ನಂ. 107, ಗದಗ-582101 ದೂರವಾಣಿ : 08372-231828 ಇ-ಮೇಲ್ : dswogadag@gmail.com
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2024ನೇ ಸಾಲಿನಿಂದ ಎರಡು ವರ್ಷಗಳವರೆಗೆ ಗದಗ ಜಿಲ್ಲಾ ವ್ಯಾಪ್ತಿಯ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಸತಿ ಶಾಲೆ, ಅಲ್ಪಮ ಶಾಲೆ, ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಧಾನ್ಯ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಹಾಗೂ ವಿವಿಧ ಕಾಯ್ದೆಗಳ ಕಾನೂನಿನಡಿಯಲ್ಲಿ ನೊಂದಣಿ ಮಾಡಿಕೊಂಡಿರುವ ವ್ಯಕ್ತಿ/ಸಂಸ್ಥೆ/ ಏಜೆನ್ಸಿಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಇ-ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ. ಟೆಂಡರ್ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ತಾಲೂಕು	ಟೆಂಡರ್ ಸಂಖ್ಯೆ	ಟೆಂಡರ್‌ಗೆ ನಿಗದಿಪಡಿಸಿದ ವಾರ್ಷಿಕ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಗಳಲ್ಲಿ (ಎರಡು ವರ್ಷದ ಅವಧಿಯ ಅಂದಾಜು ಮೊತ್ತಕ್ಕೆ)
01	ಗದಗ	SWD/2023-24/IND0223	574.84	1500000
02	ಮುಂಡರಗಿ	SWD/2023-24/IND0224	278.13	835000
03	ರೋಣ	SWD/2023-24/IND0225	165.20	496000
04	ಶಿರಹಟ್ಟಿ	SWD/2023-24/IND0226	167.58	500000
05	ನರಗುಂದ	SWD/2023-24/IND0227	49.73	200000

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು Website: https://kppp.karnataka.gov.in/ ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 04-04-2024ರ ಸಂಜೆ 5.00 ಗಂಟೆವರೆಗೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 9480843033 ಸಂಪರ್ಕಿಸಲು ಕೋರಿದೆ.
ಸಹಿ/- (ಪ್ರಶಾಂತ ಎಂ. ವರಗಪ್ಪನವರ) ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/620/2023-24

ಪುರಸಭಾ ಕಾರ್ಯಾಲಯ, ತಿ.ನರಸೀಪುರ ಮೈಸೂರು ಜಿಲ್ಲೆ.
Email : tpnarasipura@ymail.com itstaff_ulb_tnarasipura@yahoo.com
Phone: 08227-261232
Website: www.tnarasipuratown.gov.in Fax : 08227-261232
ನಂ/ಪುಸ:ತಿನಪುರ/ಕಿಅ/ಟೆಂಡರ್/SBM-1&15ನೇ ಹಣಕಾಸು/2023-24 ದಿನಾಂಕ: 06.03.2024
ಟೆಂಡರ್ ಪ್ರಕಟಣೆ
ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್-1ರ ಯೋಜನೆ ಹಾಗೂ 15ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-1, KW-2 & KW-3 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರರು ಕಾಮಗಾರಿಗಳನ್ನು ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜ್‌ನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. 1) ಕ್ರ. ಸಂ 01 ರಿಂದ 06 ರವರೆಗಿನ ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿ: 15.03.2024 ಸಂಜೆ 5.00 ಗಂಟೆವರೆಗೆ ಕ್ರ ಸಂ 07ರ ಕಾಮಗಾರಿಗೆ ಟೆಂಡರ್ ಸಲ್ಲಿಸಲು ದಿ: 21.03.2024 ಸಂಜೆ 5.00 ಗಂಟೆವರೆಗೆ. 2) ಕ್ರ. ಸಂ 01 ರಿಂದ 06ರ ವರೆಗಿನ ಕಾಮಗಾರಿಗಳ ಟೆಂಡರ್ ತೆರೆಯುವ ದಿ: 16.03.2024 ಸಂಜೆ 5.15 ಗಂಟೆಗೆ ಮತ್ತು ಕ್ರ ಸಂ 07ರ ಕಾಮಗಾರಿ ಟೆಂಡರ್ ತೆರೆಯುವ ದಿ: 22.03.2024 ಸಂಜೆ 5.15ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ	ವಿವರ	ಕಾಮಗಾರಿ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂಗಳಲ್ಲಿ)
1.	DMA/2023-24/OW/WORK_INDENT17044	93.61	187250
2.	DMA/2023-24/OW/WORK_INDENT17043	88.66	177350
3.	DMA/2023-24/OW/WORK_INDENT17042	98.50	197000
4.	DMA/2023-24/OW/WORK_INDENT17041 (SC)	1.21	1550
5.	DMA/2023-24/OW/WORK_INDENT17040 (SC)	46.27	46300
6.	DMA/2023-24/OW/WORK_INDENT17039 (ST)	40.52	40520
7.	DMA/2023-24/OW/WORK_INDENT15577	5.00	187250

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು http://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. 2) GST will be added to the contract Amount
ಸಹಿ/- ಆಡಳಿತಾಧಿಕಾರಿಗಳು, ಪುರಸಭೆ ತಿ.ನರಸೀಪುರ ಸಹಿ/- ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ
DIPR/DDMYS/KSMCA/1264/2023-24

(ಕರ್ನಾಟಕ ಸರ್ಕಾರ)
ಪ್ರವಾಸೋದ್ಯಮ ಇಲಾಖೆ
ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ
ಪ್ರವಾಸೋದ್ಯಮ ನಿರ್ದೇಶಕರ ಕಛೇರಿ,
ನಂ.3, 4ನೇ ಮಹಡಿ, ಎಂಬಸ್ಸೀ ಐಕಾನ್ ಕಟ್ಟಡ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು 560001.
ಇ-ಮೇಲ್ : director@karnatakatourism.org ದೂರವಾಣಿ : 080-223527828 ಫ್ಯಾಕ್ಸ್: 080-22352626
ಸಂ. ಪ್ರಇ/ಆಡಳಿತ-1/51/2023-24 ದಿನಾಂಕ : 06.03.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರ ಪರವಾಗಿ ಪ್ರವಾಸೋದ್ಯಮ ಇಲಾಖೆಗೆ ಬಾಹ್ಯ ಮೂಲದಿಂದ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಆಯ್ಕೆ ಮಾಡಲು ಸೂಕ್ತ ಮಾನವ ಸಂಪನ್ಮೂಲ ಏಜೆನ್ಸಿಯನ್ನು ಆಯ್ಕೆ ಮಾಡಲು ಇ-ಸಂಗ್ರಹಣಾ ವೇದಿಕೆಯಲ್ಲಿ ಟೆಂಡರ್ ಪ್ರಕಟಿಸಿದ್ದು, ಸದರಿ ಟೆಂಡರ್‌ಗಳಿಗೆ ಸಂಬಂಧಿಸಿದ ವೇಳಾ ಪಟ್ಟಿ ಟೆಂಡರ್ ಸಂಗ್ರಹಣೆ ವೇದಿಕೆಯಲ್ಲಿ ಲಭ್ಯವಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.
ಕಾಮಗಾರಿಯ ಹೆಸರು : ಪ್ರವಾಸೋದ್ಯಮ ಇಲಾಖೆಗೆ ಬಾಹ್ಯ ಮೂಲದಿಂದ ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಆಯ್ಕೆ ಮಾಡಲು ಸೂಕ್ತ ಮಾನವ ಸಂಪನ್ಮೂಲ ಏಜೆನ್ಸಿಯನ್ನು ಆಯ್ಕೆ ಮಾಡುವ ಬಗ್ಗೆ., ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ : DOT/RFP/MANPOWER/01/2023-24 ದಿನಾಂಕ: 05.03.2024, ಟೆಂಡರ್ ವೇಳಾಪಟ್ಟಿ : ಬಿಡ್ ಅನ್ನು ಸಲ್ಲಿಸಲು ಅಂತಿಮ ದಿನಾಂಕ:13.03.2024 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ:14.03.2024 17.00 ಗಂಟೆಯವರೆಗೆ.
ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement platform) https://www/eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು, ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://www/eproc.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.
ಟಿಪ್ಪಣಿ :
1.ಈ ಕೆಳಗೆ ಸಹಿ ಮಾಡಿದವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ಸಂಪೂರ್ಣ ರದ್ದುಗೊಳಿಸುವ/ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2.ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗುವುದು.
ಸಹಿ/-
ನಿರ್ದೇಶಕರ ಪರವಾಗಿ
ಪ್ರವಾಸೋದ್ಯಮ ಇಲಾಖೆ ಬೆಂಗಳೂರು
DIPR/CP/4127/Zenkar/2023-24

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 069.
ದೂರವಾಣಿ: +91-80-22977666/276/433/216/217 ಟೆಲಿ-ಫ್ಯಾಕ್ಸ್:080-26534477
ಇ-ಮೇಲ್: pstodirectorsjicr@gmail.com/pe.sjicrblr@gmail.com
ಸಂಖ್ಯೆ: ಎಸ್‌ಜೆಐಸಿಆರ್/ಟಿಎಸ್/62/2023-24 ದಿನಾಂಕ:06.03.2024
ಇ-ಹರಾಜು ಪ್ರಕಟಣೆ
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ವಿಷಯಗಳಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ ಲಕೋಟೆ ಪದ್ಧತಿಯನ್ವಯ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಹರಾಜು ಸಂಖ್ಯೆ ಮತ್ತು ದಿನಾಂಕ	ಹರಾಜು ವಿವರ
1	ಎಸ್‌ಜೆಐಸಿಆರ್/2023-24/ಹರಾಜು 2 ದಿನಾಂಕ:06.03.2024	ಒಂದು ವರ್ಷದ ಅವಧಿಗೆ ಎಸ್‌ಜೆಐಸಿಆರ್‌ನ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಇ-ಹರಾಜು
2	ಎಸ್‌ಜೆಐಸಿಆರ್/2023-24/ಹರಾಜು 3 ದಿನಾಂಕ:06.03.2024	
3	ಎಸ್‌ಜೆಐಸಿಆರ್/2023-24/ಹರಾಜು 4 ದಿನಾಂಕ:06.03.2024	

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ದಿನಾಂಕ: 06.03.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಪೋರ್ಟಲ್ ಮೂಲಕ ಇ-ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯನ್ನು ವ್ಯಕ್ತಪಡಿಸಲು ಕೊನೆಯ ದಿನಾಂಕ : 11.03.2024 ರ ಸಂಜೆ 3.00 ಗಂಟೆಯವರೆಗೆ.
1. ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 11.03.2024 ರ ಸಂಜೆ 3.00 ಗಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12.03.2024 ರ ಸಂಜೆ 4:00 ಗಂಟೆಗೆ.
3. ಇ.ಎಂ.ಡಿ. : ರೂ. 50,000/-
4. ಲೈವ್ ಬಿಡ್ಡಿಂಗ್ (ಇ-ಹರಾಜು): ದಿನಾಂಕ: 13.03.2024 ರಂದು ಬೆಳಗ್ಗೆ 10:00 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು ಸಂಜೆ 04:00 ಗಂಟೆಗೆ ಮುಕ್ತಾಯವಾಗುತ್ತದೆ.
5. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ: www.jayadevacardiology.com
6. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ / ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.
ಸಹಿ/-
ಮುಖ್ಯ ಆಡಳಿತಾಧಿಕಾರಿಗಳು.

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು-560 009.
ಸಂಖ್ಯೆ: ಕಗೃಮಂ/ಕಾ.ಪಾ.ಅ(ಹಂಚಿಕೆ)/ಬೇ.ಸ.ಪ್ರ/2023-24 ದಿನಾಂಕ: 05-03-2024
ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಗೃಹ ಮಂಡಳ, ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕು ಮತ್ತು ಹೋಬಳ, ತಾವರಗೆರೆ ಗ್ರಾಮದ ಸರ್ವೆ ನಂ. 106/5, 106/7, 106/10 ಮತ್ತು ಇತರೆ ಸರ್ವೆ ನಂಬರ್‌ಗಳ ಜಮೀನುಗಳಲ್ಲಿ ಕರ್ನಾಟಕ ಗೃಹ ಮಂಡಳ ವತಿಯಿಂದ ಸುಮಾರು 286 ಎಕರೆ 28 ಗುಂಟೆ ಜಮೀನಿನಲ್ಲಿ 50:50/60:40 ರ ಅನುಪಾತದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ವಸತಿ ಯೋಜನೆಯಲ್ಲಿ ವಿವಿಧ ವರ್ಗದ ನಿವೇಶನ ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು ನೋಂದಣಿ ಶುಲ್ಕ ಮತ್ತು ಅರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
ದಿನಾಂಕ: 11-03-2024 ರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10-04-2024 ಆಗಿರುತ್ತದೆ.
ಸೂಚನೆ: ಸದರಿ ನಿವೇಶನದ ಬೆಲೆಯು ತಾತ್ಕಾಲಿಕವಾಗಿದ್ದು, ಅಂತಿಮ ಬೆಲೆಗೆ ಒಳಪಟ್ಟಿರುತ್ತದೆ.

ಕ್ರ. ಸಂ	ವರ್ಗ	ನಿವೇಶನದ ಅಳತೆ (ಚ.ಮೀ)	ನಿವೇಶನದ ತಾತ್ಕಾಲಿಕ ಅಂದಾಜು ಬೆಲೆ ಪ್ರತಿ ಚದರ ಅಡಿಗಗೆ	ನೊಂದಣಿ ಶುಲ್ಕ(ರೂ)	ಆರಂಭಿಕ ಠೇವಣಿ(ರೂ)
1	EW	6 x 9	315/-	300/	10,000/
	LIG	9 x 12	630/-	500/	20,000/
	MIG	9 x 15		1000/	30,000/
	HIG I	12 x 18		1500/	50,000/
	HIG II	15 x 24		1500/-	75,000/-

ಅರ್ಜಿ ನೋಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಅಧಿಕಾರಿ ವರ್ಗದವರನ್ನು ಸಂಪರ್ಕಿಸಬಹುದು.
ಕಾರ್ಯಪಾಲಕ ಅಭಿಯಂತರರು, ಸಮನ್ವಯ ಕಛೇರಿ, ಕಗೃಮಂ, ಕಲಬುರಗಿ, ಇವರನ್ನು ಮೊಬೈಲ್ ಸಂಖ್ಯೆ: 9483521444, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಕಲಬುರಗಿ ಇವರನ್ನು ಮೊಬೈಲ್ ಸಂಖ್ಯೆ: 9448378699 ರಲ್ಲಿ ಸಂಪರ್ಕಿಸಬಹುದು, ಸಹಾಯಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಕಲಬುರಗಿ ಇವರನ್ನು ಮೊಬೈಲ್ ಸಂಖ್ಯೆ: 9886446026 ಅಥವಾ ಹಂಚಿಕೆ ಶಾಖೆಯ ಕಂದಾಯ ಅಧಿಕಾರಿ ಮತ್ತು ಸಹಾಯಕ ಕಂದಾಯ ಅಧಿಕಾರಿಗಳನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-22273511 ext. 335/309.
ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/RO4104/AAPL/2023-24

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
ಇ-ಮೇಲ್: dir-mines@karnataka.gov.in
ಸಂ: ಡಿಎಂಜಿ-17012/4/2024/2023-24 ದಿನಾಂಕ: 06.03.2024
ಸಿ.ನಂ: 1307359
ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
ದೇವದುರ್ಗ ಬ್ಲಾಕ್‌ಗೆ (ಚಿನ್ನ, ತಾಮ್ರ ಮತ್ತು ಲಿಥಿಯಂ) ಅನ್ವೇಷಣಾ ಪರವಾನಿಗೆಗಾಗಿ (ಇಎಲ್) ನೀಡಲು ಬಿಡ್‌ಗಳ ಆಹ್ವಾನ
ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯಿದೆ 1957 ರ ಸೆಕ್ಷನ್ 10 B A ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು ಖನಿಜ (ಹರಾಜು) ನಿಯಮಗಳು 2015 ಮತ್ತು ಅದರಡಿಯಾದ ತಿದ್ದುಪಡಿಗಳಿಗೆ ಅನುಗುಣವಾಗಿ, ಕರ್ನಾಟಕ ಸರ್ಕಾರವು ಹರಾಜಿನ ಮೂಲಕ ಅನ್ವೇಷಣಾ ಪರವಾನಿಗೆಯನ್ನು ನೀಡಲು ಹರಾಜು ನಡೆಸುತ್ತಿದೆ ಮತ್ತು ಈ ಮೂಲಕ ಎಲೆಕ್ಟ್ರಾನಿಕ್ ಹರಾಜಿಗೆ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.
ಹರಾಜಿನ ಮೂಲಕ ಸಂಯೋಜಿತ ಅನ್ವೇಷಣಾ ಪರವಾನಿಗೆಗಾಗಿ ಬ್ಲಾಕ್‌ಗಳ ಪಟ್ಟಿ:

S. No.	Name of the block	District	Mineral	Concession Area (in Sq. Km)	Tender fee
1.	Devadurga Block	Raichur & Yadgir District	Gold, Copper & Lithium	850	INR 2,00,000/- + 18% GST

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು. ಆಸಕ್ತ ಬಿಡ್ಡರುಗಳು ಎಂ ಎಸ್ ಟಿ ಸಿ ನಿಯಮಿತದ ವೆಬ್ ಸೈಟ್ ಗೆ ಭೇಟಿ ನೀಡಬಹುದು.
ಸಹಿ/-
ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ
DIPR/CP/4092/Zenkar/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ-ಪೂರ್ವ),
ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ (ಪಿಯುಬಿ),
21ನೇ ಮಹಡಿ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560001.
ಸಂಖ್ಯೆ: ಕಾಅ/ಯೋ-ಪೂ/ಟೆಂಡರ್-06/2023-24 ದಿನಾಂಕ: 06-03-2024
ಟೆಂಡರ್ ರದ್ದುಪಡಿಸುವಿಕೆ
ತಾಂತ್ರಿಕ ಸಮಸ್ಯೆಯಿಂದಾಗಿ ಈ ಕೆಳಕಂಡ ಸಹಿದಾರರ ಕಛೇರಿಯ ಇ-ಪೋರ್ಟಲ್‌ನಲ್ಲಿ ಟೆಂಡರ್ ಅನ್ನು ಪ್ರಕಟಿಸಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ದಿನಾಂಕ: 04-03-2024 ರಂದು ಹೊರಡಿಸಲಾದ ಟೆಂಡರ್ ಅಧಿಸೂಚನೆ ಸಂಖ್ಯೆ: ಕಾಅ/ಯೋ-ಪೂ/ಟೆಂಡರ್/06/2023-24 ಅನ್ನು ರದ್ದುಪಡಿಸಲಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ), ಬಿಬಿಎಂಪಿ.

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
CIN-U85300KA2021SGC143291
5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು-560001 Ph. No.: 080-22865522
Email ID: mdveerashaivalingayathagok2021@gmail.com
ಸಂ: ಕವಿಲಿಂಅನಿನಿ/ಸಿ-4/ಸಿಆರ್-20/2023-24 ದಿನಾಂಕ: 06.03.2024
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ), 5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560001, ಕಛೇರಿ ಕಾರ್ಯಕ್ಕಾಗಿ ಹೊರ ಸಂಪನ್ಮೂಲ ಏಜೆನ್ಸಿಯಿಂದ 2024-25ನೇ ಸಾಲಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಬಾಹ್ಯಮೂಲದಿಂದ ಪಡೆಯಲು ಇ-ಟೆಂಡರ್ ಮೂಲಕ ನಿಯಮಾನುಸಾರ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತಿವುಳ್ಳ ಏಜೆನ್ಸಿಯವರು ದಿನಾಂಕ: 11.03.2024 ಸಂಜೆ 5.28 ಗಂಟೆಯೊಳಗೆ https://kppp.karnataka.gov.in Tender No. KVLDCL/2023-24/SE0001/CALL-2 ಮೂಲಕ ಇ-ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ), 5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001, ದೂರವಾಣಿ: 080-22865522ನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ವೀರಶೈವ ಲಿಂಗಾಯತ
ಅಭಿವೃದ್ಧಿ ನಿಗಮ (ನಿ) ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4132/ಆಕಾರ್/2023-24

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಾರ್ಕಳ
ಕುಂಟಲ್ಪಾಡಿ ರಸ್ತೆ, ಕಾರ್ಕಳ-574 104
ಸಂಖ್ಯೆ: ಕೃಉಮಾಸ(ಕಾ)/1216/2022-23 ದಿನಾಂಕ: 01/03/2024
ಇ-ಟೆಂಡರ್ ಪ್ರಕಟಣೆ
ಕಾರ್ಕಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ 2022-23ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ 13 ಸಂಖ್ಯೆ ಗೋದಾಮುಗಳ (18 ಎಂ.ಟಿ ಸಾಮರ್ಥ್ಯದ) ದುರಸ್ತಿ ಕಾಮಗಾರಿ (ಐಟಂವಾರು ಟೆಂಡರ್) ಕುರಿತು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಮತ್ತು ಮಾರ್ಗಸೂಚಿ ಅನುಸಾರ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಇ-ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿತ ಹಾಗೂ Standard Tender Documents ಕೆ.ಡಬ್ಲು-2, ಕ್ಲಾಸ್-3 ನಲ್ಲಿ ಅರ್ಹವಿರುವ ಸಿವಿಲ್ ಗುತ್ತಿಗೆದಾರರಿಂದ https://kppp.karnataka.gov.in ನಲ್ಲಿ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಮೊತ್ತ: ರೂ. 25.45 ಲಕ್ಷಗಳು (18% ಜಿ.ಎಸ್.ಟಿ ಒಳಗೊಂಡಂತೆ). ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 18/03/2024 ಸಂಜೆ 4.00 ಗಂಟೆವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: 20/03/2024 ಸಂಜೆ 4.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ವೆಬ್ ಸೈಟ್‌ನಲ್ಲಿ ಹಾಗೂ ಈ ಕಛೇರಿಯಿಂದ ಪಡೆಯಬಹುದಾಗಿದೆ. ಯಾವುದೇ ಲಿಖಿತ ಕಾರಣವನ್ನು ಕೊಡದೆ ಟೆಂಡರ್‌ನ್ನು ತಿರಸ್ಕರಿಸುವ ಅಥವಾ ಪುರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/-, ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಾರ್ಕಳ ಸಹಿ/-, ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಾರ್ಕಳ

ಆಯುಷ್ ಇಲಾಖೆ
ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,
ಡಾ॥ ಸಿದ್ಧಯ್ಯ ಪುರಾಣಿಕ ರಸ್ತೆ, ಬಸವೇಶ್ವರನಗರ, ಬೆಂಗಳೂರು - 560079.
ದೂರವಾಣಿ: 080-23359413, ಇ-ಮೇಲ್: ghmchprincipal@gmail.com
ಸಂಖ್ಯೆ:ಸಹೋವೈಮ&ಆ/59/ಸರಬ/2023-24(2ನೇ ಕರೆ) ದಿನಾಂಕ: 28-02-2024
ಇ-ಟೆಂಡರ್ ಅಧಿಸೂಚನೆ - (2ನೇ ಕರೆ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಪ್ರಾಚಾರ್ಯರು, ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಡಾ॥ ಸಿದ್ಧಯ್ಯ ಪುರಾಣಿಕ ರಸ್ತೆ, ಬಸವೇಶ್ವರನಗರ, ಬೆಂಗಳೂರು ಇವರು ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ಹೋಮಿಯೋಪತಿ ಔಷಧಿಗಳನ್ನು ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.
ವೇಳಾಪಟ್ಟಿ: 1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆ ಲಭ್ಯವಿರುವ ದಿನಾಂಕ: 28-02-2024 ರಿಂದ. 2) ಇ-ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 14-03-2024 ರಂದು ಸಂಜೆ 5.30 ಗಂಟೆವರೆಗೆ. 3) ಮಾದರಿಗಳನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ: 15-03-2024 ರಂದು ಸಂಜೆ 5.30 ಗಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು (ಆನ್‌ಲೈನ್) ತೆರೆಯುವ ದಿನಾಂಕ: 16-03-2024 ರಂದು ಬೆಳಿಗ್ಗೆ 11.30 ಗಂಟೆಗೆ. 5) ವಾರ್ಷಿಕ ಟೆಂಡರ್ ಅಂದಾಜು ಮೌಲ್ಯ: ರೂ. 15.00 ಲಕ್ಷಗಳು. 6) ಟೆಂಡರ್ ತೆರೆಯುವ ಸ್ಥಳ: ಪ್ರಾಚಾರ್ಯರ ಕಛೇರಿ, ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಡಾ॥ ಸಿದ್ಧಯ್ಯ ಪುರಾಣಿಕ ರಸ್ತೆ, ಬಸವೇಶ್ವರನಗರ, ಬೆಂಗಳೂರು - 560079.
ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ನಿರೀಕ್ಷಿತ ಬಿಡ್‌ದಾರರು ವೆಬ್‌ಸೈಟ್: https://kppp.karnataka.gov.in ನ್ನು ವೀಕ್ಷಿಸಿ ಅರ್ಹ ಬಿಡ್‌ದಾರರು ಆನ್‌ಲೈನ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಬಹುದಾಗಿದೆ.
ಸಹಿ/- ಪ್ರಾಚಾರ್ಯರು,
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಆಸ್ಪತ್ರೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/4123/ಅಡ್ವಟೋರ್/2023-24

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ,
ವಸಂತನಗರ, ಬೆಂಗಳೂರು-560052.
ಸಂಖ್ಯೆ: ಅಸಂನಿ/ಅ/ವಶಾ/ಶೂ/ಸಿಆರ್-05/2024-25 ದಿನಾಂಕ: 06.03.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
2024-25ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ಎಲ್ಲಾ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಎರಡು ಜೊತೆ ಶೂ(ಒಂದು ಜೊತೆ ಕಪ್ಪು ಬಣ್ಣದ ಮತ್ತು ಒಂದು ಜೊತೆ ಬಿಳಿ ಬಣ್ಣದ)ಗಳನ್ನು ಸರಬರಾಜುದಾರರಿಂದ ಪೂರೈಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	07.03.2024.
2.	ಟೆಂಡರ್ ಮೊತ್ತ:	ರೂ.506.27 ಲಕ್ಷಗಳು.
3.	ಇಎಂಡಿ ಮೊತ್ತ	ರೂ. 7,59,410/-
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	13.03.2024 ಬೆಳಿಗ್ಗೆ 11:30 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	08.04.2024 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	10.04.2024 ಬೆಳಿಗ್ಗೆ 11:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	12.04.2024 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು-560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080-22535902/ 080-22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/-
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/4124/2023-24

ನಾಲ್ಕು ತಿಂಗಳು ನಡೆಯಲಿದೆ ಪರೀಕ್ಷೆ • ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಪ್ರಯೋಗ

ಚಾಲಕ ರಹಿತ ರೈಲು ಸಂಚಾರಕ್ಕೆ 37 ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ 'ಚಾಲಕ ರಹಿತ ತಂತ್ರಜ್ಞಾನ'ದ ರೈಲು ಸಂಚಾರಕ್ಕಾಗಿ ಇನ್ನು ನಾಲ್ಕು ತಿಂಗಳಲ್ಲಿ 37 ಮಾದರಿಯ ಪರೀಕ್ಷೆಗಳು ನಡೆಯಲಿವೆ.

ಹೆಬ್ಬಗೋಡಿಯಲ್ಲಿರುವ ಮೆಟ್ರೊ ಡಿಪೊದಲ್ಲಿ 'ಚಾಲಕ ರಹಿತ ತಂತ್ರಜ್ಞಾನ'ದ ರೈಲಿನ ಬಗ್ಗೆ ಬುಧವಾರ ಮಾಧ್ಯಮದವರಿಗೆ ಬಿಎಂಆರ್‌ಸಿಎಲ್ ರೋಲಿಂಗ್ ಸ್ಟಾಕ್ ಮ್ಯಾನೇಜರ್ ಜಿತೇಂದ್ರ ಝಾ ವಿವರ ನೀಡಿದರು.

ಹೊಸ ರೋಲಿಂಗ್ ಸ್ಟಾಕ್(ಬೋಗಿಗಳು) ಆಗಿರುವುದರಿಂದ ಬಹು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ. ಸ್ಟ್ಯಾಟಿಕ್ ಮತ್ತು ಎಲೆಕ್ಟ್ರಿಕಲ್ ಸರ್ಕಿಟ್ ಪರೀಕ್ಷೆಗಾಗಿ ಬೋಗಿಗಳನ್ನು ಜೋಡಿಸಲಾಗಿದೆ. ಮುಂದೆ ಪರೀಕ್ಷಾ ಟ್ರ್ಯಾಕ್‌ಗೆ ಇಳಿಸಿ ಮುಖ್ಯ ಪರೀಕ್ಷೆ ಮಾಡಲಾಗುತ್ತದೆ. ಆನಂತರ 37 ಮಾದರಿಯ ಪರೀಕ್ಷೆಗಳು ನಾಲ್ಕು ತಿಂಗಳು ನಡೆಯಲಿವೆ. ಆನಂತರ 45 ದಿನಗಳು ಸಿಗ್ನಲಿಂಗ್, ದೂರಸಂಪರ್ಕ, ವಿದ್ಯುತ್ ಸರಬರಾಜು ವ್ಯವಸ್ಥೆಗಳೊಂದಿಗೆ ಸಿಸ್ಟಂ ಏಕೀಕರಣ ನಡೆಯಲಿದೆ ಎಂದು ಮಾಹಿತಿ ನೀಡಿದರು.

ರಿಸರ್ಚ್ ಡಿಸೈನ್ಸ್ ಆ್ಯಂಡ್ ಸ್ಟ್ಯಾಂಡರ್ಡ್ ಆರ್ಗನೈಸೇಷನ್ (ಆರ್‌ಡಿಎಸ್‌ಒ) ಮೂಲಕ ಆಸಿಲೇಶನ್ ಟ್ರಯಲ್ಸ್ ಆ್ಯಂಡ್ ಕಮಿಷನರ್ ಆಫ್ ಮೆಟ್ರೊ ರೈಲ್ ಸೇಫ್ಟಿ (ಸಿಎಂಆರ್‌ಸಿ) ಸುರಕ್ಷತಾ ಪರೀಕ್ಷೆಗಳನ್ನು ನಡೆಸಲಿದೆ. ವಾಣಿಜ್ಯ ಸೇವೆ ಆರಂಭಿಸಬೇಕಿದ್ದರೆ ಈ ಸಂಸ್ಥೆಗಳು ನೀಡಿದ ವರದಿಯ ಆಧಾರದಲ್ಲಿ ರೈಲ್ವೆ ಮಂಡಳಿಯಿಂದ ಅನುಮೋದನೆಯನ್ನು ಪಡೆಯಬೇಕಾಗುತ್ತದೆ ಎಂದು ತಿಳಿಸಿದರು.

ಹೆಬ್ಬಗೋಡಿಯಲ್ಲಿ ಮೆಟ್ರೊ ಡಿಪೊದಲ್ಲಿ 'ಚಾಲಕ ರಹಿತ ತಂತ್ರಜ್ಞಾನ'ದ ರೈಲು 'ಚಾಲಕ ರಹಿತ ತಂತ್ರಜ್ಞಾನ'ದ ರೈಲು ಬಗ್ಗೆ ಬಿಎಂಆರ್‌ಸಿಎಲ್ ಎಂಜಿನಿಯರ್ ಮಾಹಿತಿ ನೀಡಿದರು –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಚೀನಾದ ಸಿಆರ್‌ಆರ್‌ಸಿ ತಯಾರಿಸಿರುವ ಮೂಲ ಮಾದರಿಯ ಆರು ಬೋಗಿ ಮೆಟ್ರೊ ರೈಲು ಇದಾಗಿದ್ದು, ಮೂಲ ಮಾದರಿಯ ಎರಡನೇ ರೈಲು ಸದ್ಯದಲ್ಲಿಯೇ ಚೀನಾದಿಂದ ಬರಲಿದೆ. ಉಳಿದ 34 ರೈಲು ಸೆಟ್‌ಗಳನ್ನು (ಒಂದು ಸೆಟ್ = ಆರು ಬೋಗಿ) ಪಶ್ಚಿಮ ಬಂಗಾಳದ ಟಿಟಾಗಢ್ ರೈಲ್ವೆ ಸಿಸ್ಟಮ್ಸ್ ಲಿಮಿಟೆಡ್‌ನಲ್ಲಿ ತಯಾರಾಗುತ್ತಿವೆ. ಮೂರು ಸೆಟ್ ರೈಲುಗಳು ಬಂದ ಮೇಲಷ್ಟೇ ಪರೀಕ್ಷೆಗಳು ನಡೆಯಲಿವೆ. 7 ಸೆಟ್ ರೈಲುಗಳು ಬಂದ ಬಳಿಕ ಸಂಚಾರ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ಸಂವಹನ ಆಧಾರಿತ ರೈಲು ನಿಯಂತ್ರಣ (ಸಿಬಿಟಿಸಿ) ಮಾದರಿಯಲ್ಲಿ ಚಾಲಕ ರಹಿತ ತಂತ್ರಜ್ಞಾನದ ರೈಲು ಸಂಚರಿಸಲಿದೆ. ಆದರೂ ಆರಂಭದಲ್ಲಿ ಲೊಕೊ ಮಾದರಿಯ ರೈಲುಗಳ ಪೈಲೆಟ್‌ಗಳನ್ನು (ಚಾಲಕರನ್ನು) ನಿಯೋಜಿಸಲಾಗುವುದು. ಯಾವುದೇ ಸಮಸ್ಯೆ ಉಂಟಾಗದಿರುವುದು ಖಾತ್ರಿಯಾದ ಮೇಲೆ ಲೊಕೊ ಪೈಲೆಟ್‌ಗಳಿಲ್ಲದೇ ಕಾರ್ಯಾಚರಣೆ ನಡೆಸಲಾಗುವುದು ಎಂದು ವಿವರಣೆ ನೀಡಿದರು.

ರೈಲಿನ ವಿಶೇಷತೆಗಳು

- ರೈಲಿನ ಮುಂಭಾಗವನ್ನು ಲಾಲಾಬಾಗ್ ಗಾಜಿನ ಮನೆಯ ಕಮಾನು ಹಾಗೂ ಗಂಡಭೇರುಂಡದ ಕೆಳ ಭಾಗದ ರೆಕ್ಕೆ ಮಾದರಿಯಲ್ಲಿ ವಿನ್ಯಾಸ ಗೊಳಿಸಲಾಗಿದೆ.
- ಗ್ಯಾಂಗ್‌ವೇ (ಎರಡು ಬೋಗಿಗಳ ಸೇರುವ ಸ್ಥಳ) ವಿನ್ಯಾಸವನ್ನು ಡ್ರಮ್ ಮಾದರಿಯಲ್ಲಿ ಮಾಡಲಾಗಿದೆ. ಇದರಿಂದ ರೈಲು ತಿರುವುಗಳಲ್ಲಿ ಅತ್ಯಂತ ಸುಲಭವಾಗಿ ಸಂಚರಿಸುವುದಕ್ಕೆ ಸಾಧ್ಯವಾಗಿದೆ.
- ಟ್ರ್ಯಾಕ್ ಮಾನಿಟರಿಂಗ್ ವ್ಯವಸ್ಥೆ ಅಳವಡಿಸಲಾಗಿದ್ದು, ಟ್ರ್ಯಾಕ್‌ನಲ್ಲಿ ಎಲ್ಲವೂ ರೆಕಾರ್ಡ್ ಆಗಲಿದೆ. ಏನಾದರೂ ವ್ಯತ್ಯಯ ಉಂಟಾದರೆ ಕಾರ್ಯಾಚರಣೆ ನಿಯಂತ್ರಣ ಕೇಂದ್ರಕ್ಕೆ (ಒಸಿಸಿ) ಸಂದೇಶ ರವಾನೆಯಾಗಲಿದೆ ಈ ವ್ಯವಸ್ಥೆ ಹೊಂದಿದ ಭಾರತ ಮೊದಲ ರೈಲು ಇದು.
- ಬೆಂಕಿ ಅಥವಾ ಹೊಗೆ ಕಾಣಿಸಿಕೊಂಡರೆ ತಕ್ಷಣ ಒಸಿಸಿಗೆ ಸಂದೇಶ ರವಾನೆಯಾಗುವುದರಿಂದ ಮುಂದಿನ ನಿಲ್ದಾಣದಲ್ಲಿ ರೈಲು ನಿಲ್ಲಿಸಲಾಗುತ್ತದೆ.
- ಎಲ್‌ಸಿಡಿ ಪರದೆಯ ಮೂಲಕ ನಿಲ್ದಾಣಗಳ ಮಾರ್ಗಸೂಚಿ ನೀಡಲಾಗಿದೆ. ಜಾಹೀರಾತಿಗೆ ವಿಶೇಷ ಎಲ್‌ಇಡಿ ಪರದೆ ನೀಡಲಾಗಿದೆ. ಮ್ಯಾನುವಲ್ ಜಾಹೀರಾತಿಗೂ ವ್ಯವಸ್ಥೆ ಕಲ್ಪಿಸಲಾಗಿದೆ.
- ಸುರಕ್ಷತೆ ದೃಷ್ಟಿಯಿಂದ ಮುಂಭಾಗದಲ್ಲಿ ಮತ್ತು ರೈಲಿನ ಅಕ್ಕಪಕ್ಕದಲ್ಲಿ ಕ್ಯಾಮೆರಾ ಅಳವಡಿಸಲಾಗಿದೆ.
- ಎಮರ್ಜೆನ್ಸಿ ಎಗ್ರೆಸ್ ಡಿವೈಸ್ (ಇಇಡಿ) ಹ್ಯಾಂಡಲ್ ನವೀಕರಿಸಲಾಗಿದೆ. ತುರ್ತು ಸಂದರ್ಭದಲ್ಲಿ ಪ್ರಯಾಣಿಕ ಇದನ್ನು ಎಳೆದರೆ, ಸಂದೇಶ ಒಸಿಸಿಯಲ್ಲಿನ ರೈಲು ನಿರ್ವಾಹಕರಿಗೆ ರವಾನೆಯಾಗುತ್ತದೆ. ಸಿಸಿಟಿವಿ ಕ್ಯಾಮೆರಾದಲ್ಲಿ ಪರಿಸ್ಥಿತಿಯನ್ನು ಅವಲೋಕಿಸಿ ಬಾಗಿಲು ತೆರೆಯಲಾಗುತ್ತದೆ.

ಡಿಸೆಂಬರ್ ಒಳಗೆ ಸಂಚಾರ ಆರಂಭ

ಆರ್.ವಿ. ರಸ್ತೆ–ಬೊಮ್ಮಸಂದ್ರ ನಡುವೆ ನಿರ್ಮಾಣ ಹಂತದಲ್ಲಿರುವ ಹಳದಿ ಮೆಟ್ರೊ ಮಾರ್ಗದಲ್ಲಿ ರೈಲು ಸಂಚಾರ ಈ ವರ್ಷದ ಡಿಸೆಂಬರ್ ಅಂತ್ಯದ ಒಳಗೆ ಆರಂಭಗೊಳ್ಳಲಿದೆ.

18.82 ಕಿ.ಮೀ. ಹೊಂದಿರುವ ಈ ಮಾರ್ಗದಲ್ಲಿ ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರ್ ರಸ್ತೆ, ಇನ್‌ಫೋಸಿಸ್ ಫೌಂಡೇಷನ್ (ಕೋಣಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬಿರಿಟೆನ ಅಗ್ರಹಾರ, ಹೊಸರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್‌ವಿ. ರಸ್ತೆ ಸೇರಿ ಒಟ್ಟು 16 ನಿಲ್ದಾಣಗಳಿವೆ. ಆರ್.ವಿ. ರಸ್ತೆಯಲ್ಲಿ ಹಸಿರು ಮಾರ್ಗವನ್ನು ಮತ್ತು ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಗುಲಾಬಿ ಮಾರ್ಗವನ್ನು ಹಳದಿ ಮಾರ್ಗವು ಸಂಪರ್ಕಿಸಲಿದೆ.

ಬಿಎಂಆರ್‌ಸಿಎಲ್ ಉಪ ಕಾರ್ಯನಿರ್ವಾಹಕ ಎಂಜಿನಿಯರ್ ಉಮೇಶ್, ಸಾರ್ವಜನಿಕ ಸಂಪರ್ಕಾಧಿಕಾರಿ ರಮಾನಂದ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ವಕೀಲರ ಪರಿಷತ್‌ಗೆ ಹೈಕೋರ್ಟ್ ತುರ್ತು ನೋಟಿಸ್ ಜಾರಿ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಪದಾಧಿಕಾರಿಗಳ ಅವಧಿ ವಿಸ್ತರಣೆ ಆಕ್ಷೇಪಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಭಾರತೀಯ ವಕೀಲರ ಪರಿಷತ್ ಹಾಗೂ ರಾಜ್ಯ ವಕೀಲರ ಪರಿಷತ್‌ಗೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ರಹಮತ್ ಉಲ್ಲಾ ಕೊತ್ವಾಲ್ ಅವರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಆಕ್ಷೇಪ ಏನು?: 'ರಾಜ್ಯ ವಕೀಲರ ಪರಿಷತ್ತಿನ ಪದಾಧಿಕಾರಿಗಳ ಅವಧಿಯನ್ನು 2 ವರ್ಷಗಳಿಗೆ ವಿಸ್ತರಿಸಿ 2023 ರ ಜೂನ್ 23ರಂದು ಅಧಿಸೂಚನೆ ಹೊರಡಿಸಲಾಗಿದೆ. ಅವಧಿ ವಿಸ್ತರಿಸಿರುವ ಭಾರತೀಯ ವಕೀಲರ ಪರಿಷತ್‌ನ ಈ ಕ್ರಮ ಏಕಪಕ್ಷೀಯವಾಗಿದೆ. ಅಂತೆಯೇ, ಇದು ವಕೀಲರ ಕಾಯ್ದೆ-1961ರ ಕಲಂ 8 ಹಾಗೂ ಸುಪ್ರೀಂ ಕೋರ್ಟ್‌ನ ಹಲವು ಪೂರ್ವನಿರ್ದೇಶನಗಳ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂಬುದು ಅರ್ಜಿದಾರರ ಆಕ್ಷೇಪ.

ಕೋರಿಕೆ: 'ರಾಜ್ಯ ವಕೀಲರ ಪರಿಷತ್ತಿನ ಪದಾಧಿಕಾರಿಗಳ ಅವಧಿಯನ್ನು ವಿಸ್ತರಿಸಿ ಭಾರತೀಯ ವಕೀಲರ ಪರಿಷತ್ 2023ರ ಜೂನ್ 23ರಂದು ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು. 2023-28ನೇ ಅವಧಿಗೆ ರಾಜ್ಯ ವಕೀಲರ ಪರಿಷತ್ತಿನ ಪದಾಧಿಕಾರಿಗಳ ಚುನಾವಣೆ ನಡೆಸುವಂತೆ ಭಾರತೀಯ ವಕೀಲರ ಪರಿಷತ್‌ಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಫೆಬ್ರವರಿ ತಿಂಗಳಲ್ಲಿ ಪ್ರಯಾಣಿಕರಿಂದ 20 ಕೆ.ಜಿ ಚಿನ್ನ ವಶ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವೈಮಾನಿಕ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ಫೆಬ್ರುವರಿ 28 ರಂದು ಇಬ್ಬರು ಪ್ರಯಾಣಿಕರಿಂದ ₹2.63 ಕೋಟಿ ಮೌಲ್ಯದ 4.249 ಕೆ.ಜಿ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಸಿಂಗಾಪುರದಿಂದ ಬಂದ ಪ್ರಯಾಣಿಕನ ಬಳಿ 2.75 ಕೆ.ಜಿ ಚಿನ್ನ, ದುಬೈನಿಂದ ಬಂದ ಪ್ರಯಾಣಿಕ ಜೇಬಿನಲ್ಲಿದ್ದ 1.50 ಕೆ.ಜಿ. ಗಟ್ಟಿ ಚಿನ್ನ ವಶಪಡಿಸಿಕೊಂಡಿದ್ದಾರೆ. ಇಬ್ಬರನ್ನೂ ಬಂಧಿಸಲಾಗಿದೆ.

ಫೆಬ್ರವರಿಯಲ್ಲಿ ಒಟ್ಟು ನಾಲ್ಕು ಪ್ರಕರಣಗಳಲ್ಲಿ 20 ಕೆ.ಜಿ ಚಿನ್ನ ಜಪ್ತಿ ಮಾಡಿದ್ದು, ಅದರ ಅಂದಾಜು ಮೌಲ್ಯ ₹12.44 ಕೋಟಿ ಎಂದು ಮೂಲಗಳು ತಿಳಿಸಿವೆ.

ಗುಣಪಾಲಗೆ 'ಮಹಾಕವಿ ರತ್ನಾಕರವರ್ಣಿ' ಪ್ರಶಸ್ತಿ



ಬೆಂಗಳೂರು: ದಕ್ಷಿಣ ಕನ್ನಡ ಜೈನ ಮೈತ್ರಿಕೂಟ ನೀಡುವ 'ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ'ಗೆ ಜೈನ ಸಾಹಿತಿ, ನಿವೃತ್ತ ಪ್ರಾಚಾರ್ಯ ಕೆ. ಗುಣಪಾಲ ಕಡಂಬ ಮೂಡುಬಿದಿರೆ ಅವರನ್ನು ಆಯ್ಕೆಮಾಡಲಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಇದೇ 10ರಂದು ಬಸವನಗುಡಿಯ ಧರ್ಮಸ್ಥಳ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯುವ ಮೈತ್ರಿಕೂಟದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮೈತ್ರಿಕೂಟದ ಅಧ್ಯಕ್ಷ ಸುರೇಂದ್ರ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ತೊಟ್ಟಿಯಲ್ಲಿ ಬಿದ್ದಿದ್ದ ಮಗು ರಕ್ಷಿಸಿದ ಪಿಎಸ್‌ಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬ್ಯಾಡರಹಳ್ಳಿಯ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ ನೀರಿನ ತೊಟ್ಟಿಗೆ ಬಿದ್ದು ಅಪಾಯದಲ್ಲಿ ಸಿಲುಕಿದ್ದ 2 ವರ್ಷ 6 ತಿಂಗಳ ಮಗುವೊಂದನ್ನು ಪೊಲೀಸ್ ಅಧಿಕಾರಿ ರಕ್ಷಿಸಿದ್ದಾರೆ.

ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆ ಪಿಎಸ್‌ಐ ಎ.ಆರ್. ನಾಗರಾಜ ಅವರು ಮಗುವನ್ನು ರಕ್ಷಿಸಿದ್ದು ಅವರ ಕೆಲಸಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ನಾಗರಾಜ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ.

'ಬುಧವಾರ ಮಧ್ಯಾಹ್ನ 3.30ರ ಸುಮಾರಿಗೆ ನಾಗರಾಜ ಅವರು ಕರ್ತವ್ಯಕ್ಕೆ ಅದೇ ಮಾರ್ಗವಾಗಿ ತೆರಳುತ್ತಿದ್ದರು. ಆ ಸಮಯದಲ್ಲಿ ಮಗುವೊಂದು ನೀರಿನ ತೊಟ್ಟಿಗೆ ಬಿದ್ದು ಅಪಾಯದಲ್ಲಿತ್ತು. ಸ್ಥಳದಲ್ಲಿದ್ದವರು ಮಗುವನ್ನು ಕಾಪಾಡುವಂತೆ ಮನವಿ ಮಾಡುತ್ತಿದ್ದರು. ಸ್ಥಳೀಯರ ಎಲ್ಲ ಪ್ರಯತ್ನಗಳು ವಿಫಲವಾಗಿ, ಮಗು ನೀರು ಕುಡಿಯುತ್ತಿತ್ತು. ಜನರ ಕೂಗಾಟ ಕೇಳಿಸಿಕೊಂಡ ಪಿಎಸ್‌ಐ, ತಮ್ಮ ವಾಹನ ನಿಲುಗಡೆ ಮಾಡಿ 10 ಅಡಿ ಆಳದ ಸಂಪ್‌ಗೆ ಇಳಿದು ಮಗುವನ್ನು ರಕ್ಷಿಸಿದರು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

'ಮಗುವಿನ ರಕ್ಷಣೆ ಮಾಡುವುದು ಸ್ವಲ್ಪ ತಡವಾಗಿದ್ದರೂ ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿ ಇತ್ತು' ಎಂದು ಸ್ಥಳೀಯರು ತಿಳಿಸಿದರು. ಮಗು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಪಾಯದಿಂದ ಪಾರಾಗಿದೆ.

ರಕ್ಷಣಾ ಕಾರ್ಯ ನಡೆಸಿದ ಪಿಎಸ್‌ಐ ಎ.ಆರ್‌.ನಾಗರಾಜ

ಮಾಧ್ಯಮ ನಿರ್ಬಂಧಕಾಜ್ಞೆ ತೆರವು

ಬೆಂಗಳೂರು: ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಅವರು ತಮ್ಮ ವಿರುದ್ಧ ಪತ್ರಿಕಾಗೋಷ್ಠಿ ನಡೆಸದಂತೆ ಸಂಸದ ಪ್ರತಾಪ ಸಿಂಹ ಅವರು ತಂದಿದ್ದ ಮಾಧ್ಯಮ ನಿರ್ಬಂಧಕಾಜ್ಞೆಯನ್ನು ನ್ಯಾಯಾಲಯ ತೆರವುಗೊಳಿಸಿದೆ.

ಮೈಸೂರಿನ ಸಂಸದ ಪ್ರತಾಪ್ ಸಿಂಹ ಬೆಂಗಳೂರಿನ 9ನೇ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

'ಪ್ರತಾಪ ಸಿಂಹ ಅವರು ಬೆಂಗಳೂರಿನ ವಿಳಾಸ ನೀಡಿ ಮಾಧ್ಯಮ ನಿರ್ಬಂಧಕಾಜ್ಞೆ ತಂದಿದ್ದರು' ಎಂದು ವಕೀಲರು ಹೇಳಿದರು. ಲಕ್ಷ್ಮಣ್ ಅವರ ಪರವಾಗಿ ವಕೀಲರಾದ ಎಸ್.ಎ.ಅಹಮದ್, ಸೂರ್ಯ ಮುಕುಂದರಾಜ್ ಹಾಗೂ ಸಂಜಯ್ ಯಾದವ್ ವಾದ ಮಂಡಿಸಿದ್ದರು.

'ರಿಸ್ಕ್–V' ತಂತ್ರಜ್ಞಾನದ ಅರಿವು ಅಗತ್ಯ

ಭವಿಷ್ಯದ ಡಿಜಿಟಲ್ ಕರ್ನಾಟಕ: ಕಾರ್ಯಾಗಾರದಲ್ಲಿ ಬರ್ನಾರ್ಡ್ ಕ್ವೆಂಡ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ 'ರಿಸ್ಕ್–V' ತಂತ್ರಜ್ಞಾನದ ಅರಿವು ಅಗತ್ಯ ಎಂದು ಥೇಲ್ಸ್ ಗ್ರೂಪ್ ಮುಖ್ಯ ತಾಂತ್ರಿಕ ಅಧಿಕಾರಿ ಬರ್ನಾರ್ಡ್ ಕ್ವೆಂಡ್ಟ್ ಹೇಳಿದರು.

ರಿಸ್ಕ್–V (ರೆಡ್ಯೂಸ್ ಇನ್‌ಸ್ಟ್ರಕ್ಷನ್ ಸೆಟ್ ಕಂಪ್ಯೂಟರ್–5) ತಂತ್ರಜ್ಞಾನ ಮತ್ತು ಕಮ್ಯುನಿಟಿ ಆಫ್ ಪ್ರಾಕ್ಟೀಸ್ (ಸಿಒಪಿಐ) ಸಂಬಂಧಿಸಿದಂತೆ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕ್ಯಾಂಪಸ್‌ನಲ್ಲಿ ನಡೆದ 'ಭವಿಷ್ಯದ ಡಿಜಿಟಲ್ ಕರ್ನಾಟಕ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ತಾಂತ್ರಿಕ ಜ್ಞಾನ, ಸಾಫ್ಟ್‌ವೇರ್ ತಂತ್ರಜ್ಞಾನ ಮತ್ತು ಸೃಜನಶೀಲ ಪ್ರತಿಭೆಗಳು ಸಮ್ಮಿಳಿತವಾಗಿವೆ. ನಾವೀನ್ಯ ತಂತ್ರಜ್ಞಾನದ ಕ್ರಾಂತಿಗೆ ಭಾರತವು ಆಧಾರಸ್ತಂಭವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹೀಂದ್ರಾ ಮತ್ತು ಮಹೀಂದ್ರಾ ಉಪಾಧ್ಯಕ್ಷ ಡಾ. ಶಂಕರ್ ವೇಣುಗೋಪಾಲ್ ಮಾತನಾಡಿ, 'ರಿಸ್ಕ್–V' ತಂತ್ರಜ್ಞಾನ ಮೇಲ್ನೋಟಕ್ಕೆ ವಾಹನ ಕ್ಷೇತ್ರಕ್ಕೆ ಸಂಬಂಧ ಪಡುವುದಿಲ್ಲ ಎಂದು ತೋರಿದರೂ ಈ ತಂತ್ರಜ್ಞಾನವು ವಾಹನಗಳ ವಿನ್ಯಾಸ ಆಟೊಮೊಟಿವ್ ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಬಳಕೆಯಾಗಲಿದೆ' ಎಂದು ತಿಳಿಸಿದರು.

ವಿಎಲ್‌ಎಸ್‌ಐ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಸತ್ಯ ಗುಪ್ತಾ, ಕೇಂಬ್ರಿಡ್ಜ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ (ಸಿಜಿಐ) ಅಧ್ಯಕ್ಷ ಡಿ.ಕೆ. ಮೋಹನ್, ಸಿಜಿಐ ಸಿಇಒ ನಿತಿನ್ ಮೋಹನ್, ಸಿಐಟಿ ಪ್ರಾಂಶುಪಾಲರಾದ ಇಂದುಮತಿ ಮತ್ತು ಸಿಸಿಐಆರ್, ಸಿಐಟಿ ನಿರ್ದೇಶಕ ಡಾ.ಸಿರಿಲ್ ಪ್ರಸನ್ನ ರಾಜ್ ಭಾಗವಹಿಸಿದ್ದರು.

ರಿಸ್ಕ್–V(ರೆಡ್ಯೂಸ್ ಇನ್‌ಸ್ಟ್ರಕ್ಷನ್ ಸೆಟ್ ಕಂಪ್ಯೂಟರ್5) ತಂತ್ರಜ್ಞಾನ ಮತ್ತು ಕಮ್ಯುನಿಟಿ ಆಫ್ ಪ್ರಾಕ್ಟೀಸ್ (ಸಿಒಪಿಐ) ಸಂಬಂಧಿಸಿದಂತೆ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕ್ಯಾಂಪಸ್‌ನಲ್ಲಿ ನಡೆದ 'ಭವಿಷ್ಯದ ಡಿಜಿಟಲ್ ಕರ್ನಾಟಕ' ಕಾರ್ಯಾಗಾರದಲ್ಲಿ ಎಡಿಎ ವಿಜ್ಞಾನಿ ಪರಮೇಶ್, ವಿಎಲ್‌ಎಸ್‌ಐ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಸತ್ಯ ಗುಪ್ತಾ, ಥೇಲ್ಸ್ ಗ್ರೂಪ್ ಮುಖ್ಯ ತಾಂತ್ರಿಕ ಅಧಿಕಾರಿ ಬರ್ನಾರ್ಡ್ ಕ್ವೆಂಡ್ಟ್, ಕೇಂಬ್ರಿಡ್ಜ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ (ಸಿಜಿಐ) ಅಧ್ಯಕ್ಷ ಡಿ.ಕೆ. ಮೋಹನ್, ಆರ್‌ಐಎಸ್‌ಸಿ V ರಿಸರ್ಚ್ ಹೆಡ್ ಸುಭ್ರಾ ಕಾಂತಿ ದಾಸ್, ಮಹೀಂದ್ರಾ ಮತ್ತು ಮಹೀಂದ್ರಾ ಉಪಾಧ್ಯಕ್ಷ ಶಂಕರ್ ವೇಣುಗೋಪಾಲ್, ಸಿಜಿಐ ಸಿಇಒ ನಿತಿನ್ ಮೋಹನ್, ಸಿಐಟಿ ಪ್ರಾಂಶುಪಾಲೆ ಇಂದುಮತಿ ಭಾಗವಹಿಸಿದ್ದರು

'ಗುಟ್ಕಾದಲ್ಲಿನ ಫ್ಲೋರೈಡ್‌ನಿಂದ ಬಾಯಿ ಕ್ಯಾನ್ಸರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಟ್ಕಾ ಮತ್ತು ಪಾನ್ ಮಸಾಲಾಗಳಲ್ಲಿ ಫ್ಲೋರೈಡ್ ಅಂಶವು ಅಪಾಯಕಾರಿ ಪ್ರಮಾಣದಲ್ಲಿ ಇರುವುದರಿಂದ ಇದನ್ನು ಸೇವಿಸುವವರ ಬಾಯಿಯ ಕೆಳ ಲೋಳ್ಪೊರೆಯಲ್ಲಿ ನಾರುಗಟ್ಟುವಿಕೆಗೆ (ಬಾಯಿ ಬಿಗಿತ) ಕಾರಣವಾಗುತ್ತಿದೆ. ಅಡಿಕೆ ಕಾರಣವಲ್ಲ ಎಂದು ಎಚ್‌ಸಿಜಿ ಆಸ್ಪತ್ರೆ ಅಧ್ಯಯನ ತಿಳಿಸಿದೆ.

ಗುಟ್ಕಾ ಜಗಿಯುವ ದುರಭ್ಯಾಸದಿಂದ ಉಂಟಾಗುವ ಕ್ಯಾನ್ಸರ್ ಪೂರ್ವಸ್ಥಿತಿಯಾದ ಬಾಯಿಯ ಕೆಳ ಲೋಳ್ಪೊರೆ ನಾರುಗಟ್ಟುವಿಕೆಗೆ (ಓರಲ್ ಸಬ್ ಮ್ಯೂಕಸ್ ಫೈಬ್ರೋಸಿಸ್) ಫ್ಲೋರೈಡ್ ಅಂಶವೇ ಮುಖ್ಯ ಕಾರಣ. ಇದು ಕ್ರಮೇಣ ಕ್ಯಾನ್ಸರ್ ಆಗಿ ಬದಲಾಗುತ್ತದೆ ಎಂದು ವೈದ್ಯರ ತಂಡ ನಡೆಸಿರುವ ಅಧ್ಯಯನ ತಿಳಿಸಿದೆ ಎಂದು ಎಚ್‌ಜಿಸಿ ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ವೈದ್ಯಕೀಯ ನಿಯತಕಾಲಿಕೆಗಳಾದ ಓರಲ್ ಪೆಥಾಲಜಿ ಮತ್ತು ಮೆಡಿಸಿನ್ ಜರ್ನಲ್, ಬ್ರಿಟಿಷ್ ಜರ್ನಲ್ ಆಫ್ ಓರಲ್ ಮತ್ತು ಮ್ಯಾಕ್ಸಿಲೋಫೇಶಿಯಲ್ ಸರ್ಜರಿ ಮತ್ತು ಮೆಡಿಕಲ್ ಹೈಪಾಥಿಸಿಸ್ ಗಳಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ. ಗುಟ್ಕಾ ಮತ್ತು ಪಾನ್ ಮಸಾಲಾ ಉತ್ಪನ್ನಗಳಲ್ಲಿ ಹೆಚ್ಚಿನ ಮಟ್ಟದ ಫ್ಲೋರೈಡ್ ಇರುವುದರಿಂದ ಬಾಯಿಯಲ್ಲಿ ಜಗಿಯುವಾಗ ಬಾಯಿಯ ಲೋಳ್ಪೊರೆಯಲ್ಲಿ ಅಧಿಕ ಪ್ರಮಾಣದಲ್ಲಿ ಸ್ರವಿಸಲ್ಪಟ್ಟು, ಅಲ್ಲೇ ಸಂಗ್ರಹಗೊಳ್ಳುತ್ತದೆ. ಬಾಯಿಯ ಲೋಳ್ಪೊರೆ ಮತ್ತು ಇತರ ಅಂಗಾಂಶಗಳಿಗೂ ಧಕ್ಕೆ ಉಂಟು ಮಾಡಿ ನಾರುಗಟ್ಟುವಿಕೆಗೆ ಕಾರಣವಾಗುತ್ತದೆ ಎಂದು ಅಧ್ಯಯನ ಹೇಳಿದೆ.

ಈ ಮೊದಲು ಅಡಿಕೆಯಲ್ಲಿರುವ ತಾಮ್ರದ ಅಂಶವೇ ಬಾಯಿಯ ಲೋಳ್ಪೊರೆ ನಾರುಗಟ್ಟುವಿಕೆಗೆ ಕಾರಣ ಎಂದು ನಂಬಲಾಗಿತ್ತು. ಆದರೆ ಎಚ್‌ಜಿಸಿ ನಡೆಸಿರುವ ಅಧ್ಯಯನ ಭಿನ್ನ ವಾಸ್ತವವನ್ನೇ ತೆರೆದಿದೆ. ಗುಟ್ಕಾ–ಪಾನ್ ಮಸಾಲಾ ಜಗಿಯುವವರಲ್ಲಿ ಕಂಡು ಬರುವ ದುಷ್ಪರಿಣಾಮದ ತೀವ್ರತೆ ಕೇವಲ ಅಡಿಕೆ ಜಗಿಯುವವರಿಗಿಂತ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಡಾ.ಗುರುರಾಜ್ ಅರಕೇರಿ, ಡಾ.ವಿಶಾಲ್‌ರಾವ್ ಮತ್ತು ಡಾ.ಶೇಖರ್ ಪಾಟೀಲ ನೇತೃತ್ವದಲ್ಲಿ ಈ ಅಧ್ಯಯನ ನಡೆದಿದೆ.

ಪಾಕ್ ಪರ ಘೋಷಣೆ: ಇಬ್ಬರಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಆವರಣದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ ಪ್ರಕರಣ ಸಂಬಂಧ ಬಂಧಿತ ಆರೋಪಿಗಳ ಪೊಲೀಸ್ ಕಸ್ಟಡಿ ಅಂತ್ಯವಾಗಿದ್ದು, ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಒಬ್ಬ ಆರೋಪಿಯನ್ನು ಹೆಚ್ಚಿನ ವಿಚಾರಣೆಗಾಗಿ ಮಾರ್ಚ್ 7ರ ವರೆಗೆ ಮತ್ತೆ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ.

ಮೂವರು ಆರೋಪಿಗಳನ್ನು ಬುಧವಾರ 39ನೇ ಎಸಿಎಂಎಂ ನ್ಯಾಯಾಲಯಕ್ಕೆ ವಿಧಾನಸೌಧ ಠಾಣೆ ಪೊಲೀಸರು ಹಾಜರು ಪಡಿಸಿದರು. ಬಂಧಿತ ಮೂವರ ಪೈಕಿ ಆರ್‌.ಟಿ.ನಗರದ ಮುನಾವರ್, ನವದೆಹಲಿಯ ಮಹಮ್ಮದ್ ಇಲ್ತಾಜ್‌ಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಬ್ಯಾಡಗಿ ತಾಲ್ಲೂಕಿನ ಮೊಹಮ್ಮದ್ ಶಫಿ ನಾಶಿಪುಡಿಯನ್ನು ಕಸ್ಟಡಿಗೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ವಿಧಾನಸೌಧದಲ್ಲಿ ಫೆ.27ರಂದು ಸೈಯದ್ ನಾಸಿರ್ ಹುಸೇನ್ ಅವರ ಗೆಲುವಿನ ಸಂಭ್ರಮಾಚರಣೆ ವೇಳೆ ಸಾಕಷ್ಟು ಮಂದಿ ಹಾಜರಿದ್ದರು. ಇವರ ಮಧ್ಯೆಯೇ ಮೂವರು 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದ್ದರು ಎಂಬ ಆರೋಪ ಮೇರೆಗೆ ಬಂಧಿಸಲಾಗಿತ್ತು. ವಿಚಾರಣೆ ವೇಳೆ ಆರೋಪಿಗಳ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಸಂಭ್ರಮಾಚರಣೆ ವೇಳೆ ಘೋಷಣೆ ಕೂಗಿದ ವಿಡಿಯೊವನ್ನು ತೋರಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆ ರದ್ದುಗೊಳಿಸಲು ರಾಜ್ಯಪಾಲರಿಗೆ ಮನವಿ

ಬೆಂಗಳೂರು: ಕರ್ನಾಟಕ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ(ತಿದ್ದುಪಡಿ) ಮಸೂದೆ–2024 ಅನ್ನು ರದ್ದುಗೊಳಿಸಬೇಕು ಎಂದು ಕರ್ನಾಟಕ ದೇವಸ್ಥಾನಗಳ ಮಹಾಸಂಘವು ರಾಜ್ಯಪಾಲರಿಗೆ ಮನವಿ ಮಾಡಿದೆ.

'ಈ ತಿದ್ದುಪಡಿಯಲ್ಲಿ ಹಲವಾರು ದೋಷಗಳಿದ್ದು, ದೇವಸ್ಥಾನಗಳ ಪರಂಪರೆಯ ರಕ್ಷಣೆಯ ದೃಷ್ಟಿಯಿಂದ ಅಪಾಯಕಾರಿಯಾಗಿವೆ. ಜಿಲ್ಲೆ ಮತ್ತು ರಾಜ್ಯ ಮಟ್ಟದ ಉನ್ನತ ಸಮಿತಿಗಳನ್ನು ರಚನೆ ಮಾಡಲಾಗುತ್ತದೆ. ಅದರಲ್ಲಿ ಸ್ಥಳೀಯ ಶಾಸಕರು, ಸಂಸದರು ಸೇರಿ ವಿವಿಧ ಇಲಾಖೆಗಳ ಕಾರ್ಯದರ್ಶಿಗಳನ್ನು ಸಮಿತಿ ಸದಸ್ಯರನ್ನಾಗಿ ಮಾಡಲಾಗಿದೆ. ಇದರಲ್ಲಿ ಹಿಂದೂಗಳಲ್ಲದವರು ಇರುವ ಸಾಧ್ಯತೆ ಇದೆ' ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಸಾಮಾನ್ಯ ಸಂಗ್ರಹಣ ನಿಧಿಯನ್ನು ಇತರ ಯಾವುದೇ ಧಾರ್ಮಿಕ ಸಂಸ್ಥೆಗಳಿಗೆ ನೀಡುವ ಬಗ್ಗೆ ಉಲ್ಲೇಖಿಸಲಾಗಿದೆ. ಇದು ಮುಂದಿನ ದಿನಗಳಲ್ಲಿ ಅನ್ಯಮತೀಯರಿಗು ಸಹ ಅನ್ವಯ ಮಾಡಲಾಗುವ ಸಾಧ್ಯತೆಗಳಿವೆ. ಅಧಿಕ ಆದಾಯ ಇರುವ ದೇವಸ್ಥಾನಗಳಿಂದ ಶೇ 10 ಮತ್ತು ಶೇ 5ರಷ್ಟನ್ನು ಸಾಮಾನ್ಯ ಸಂಗ್ರಹಣ ನಿಧಿಗೆ ವರ್ಗಾಯಿಸುವುದು ದೇವಸ್ಥಾನಗಳನ್ನು ದೋಚುವ ಕಾರ್ಯವಾಗಲಿದೆ. ಸಂಯೋಜಿತ ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿಯ ರಚನೆ ಸಂದರ್ಭದಲ್ಲಿಯೂ ಹಿಂದೂಗಳಲ್ಲದವರನ್ನು ನೇಮಕ ಮಾಡುವ ಬಗ್ಗೆ ಉಲ್ಲೇಖ ಮಾಡಲಾಗಿದೆ. ಇದು ಅಪಾಯಕಾರಿ' ಎಂದು ಮನವಿಯಲ್ಲಿ ವಿವರಿಸಲಾಗಿದೆ.

ನೆಲಮಂಗಲ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಹಿಂದೂ ಜನಜಾಗೃತಿ ಸಮಿತಿಯ ಬೆಂಗಳೂರು ಜಿಲ್ಲಾ ಸಮನ್ವಯಕಾರ ಶರತ್ ಕುಮಾರ್, ವಿವಿಧ ದೇವಸ್ಥಾನಗಳ ಟ್ರಸ್ಟಿಗಳು ಭಾಗವಹಿಸಿದ್ದರು.

ಹಡಗಿನ ಮೇಲೆ ಡ್ರೋನ್ ದಾಳಿ ನೆರವಿಗೆ ಧಾವಿಸಿದ ನೌಕಾಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಡ್ರೋನ್ ದಾಳಿಗೆ ಈಡಾಗಿದ್ದ ಲೈಬೀರಿಯಾದ ಹಡಗಿನಲ್ಲಿ ಇದ್ದ 13 ಮಂದಿ ಭಾರತೀಯರು ಸುರಕ್ಷಿತರಾಗಿದ್ದಾರೆ ಎಂದು ಭಾರತೀಯ ನೌಕಾಪಡೆ ಹೇಳಿದೆ. ಈ ಹಡಗಿನ ಮೇಲೆ ಮಾರ್ಚ್ 4ರಂದು ಏಡನ್ ಕೊಲ್ಲಿಯಲ್ಲಿ ಡ್ರೋನ್ ದಾಳಿ ನಡೆದಿತ್ತು.

ಭಾರತೀಯ ನೌಕಾಪಡೆಯು ಈ ಹಡಗಿನ ನೆರವಿಗೆ ಐಎನ್‌ಎಸ್ ಕೋಲ್ಕತ್ತ ನೌಕೆಯನ್ನು ರವಾನಿಸಿತ್ತು. ಹಡಗಿನ ಮಾಸ್ಟರ್ ಕೋರಿಕೆಯ ಅನ್ವಯ ಅದನ್ನು ದಾಳಿ ನಡೆದ ಸ್ಥಳದಿಂದ ಜಿಬೌತಿ ದೇಶದ ಜಲಪ್ರದೇಶಕ್ಕೆ ಸುರಕ್ಷಿತವಾಗಿ ಸೇರಿಸಲಾಯಿತು ಎಂದು ನೌಕಾಪಡೆ ಹೇಳಿದೆ.

ಭಾರತೀಯ ಸೇನೆಯ 12 ಮಂದಿ ಸಿಬ್ಬಂದಿ ಈ ಹಡಗನ್ನು ಮಂಗಳವಾರ ಪ್ರವೇಶಿಸಿದ್ದರು. ಅವರಲ್ಲಿ ಅಗ್ನಿಶಾಮಕ ತಜ್ಞರು ಕೂಡ ಇದ್ದರು. ಅವರು ದಾಳಿಯ ಸಂದರ್ಭದಲ್ಲಿ ಉಂಟಾಗಿದ್ದ ಬೆಂಕಿಯನ್ನು ನಂದಿಸುವಲ್ಲಿ ನೆರವಾದರು ಎಂದು ಹೇಳಿದೆ. ಈಗ ಹಡಗು ತನ್ನ ಮುಂದಿನ ಬಂದರಿನತ್ತ ಸಾಗಿದೆ ಎಂದು ಹೇಳಿದೆ.

ಕೆಂಪು ಸಮುದ್ರ ಪ್ರದೇಶದಲ್ಲಿ ಹುಥಿ ಬಂಡುಕೋರರು ಸರಕು ಸಾಗಣೆ ಹಡಗುಗಳ ಮೇಲೆ ಈಚಿನ ದಿನಗಳಲ್ಲಿ ದಾಳಿ ನಡೆಸುತ್ತಿದ್ದಾರೆ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಳವಳಕ್ಕೆ ಕಾರಣವಾಗಿದೆ. ಈಚಿನ ವಾರಗಳಲ್ಲಿ ಭಾರತೀಯ ನೌಕಾಪಡೆಯು ದಾಳಿಗೆ ಗುರಿಯಾದ ಹಲವು ಹಡಗುಗಳಿಗೆ ನೆರವಿನ ಹಸ್ತ ಚಾಚಿದೆ.

'ನಿಷ್ಪಕ್ಷಪಾತ ಚುನಾವಣೆ ಮತ್ತು ಮಾಧ್ಯಮ' ವಿಚಾರ ಸಂಕಿರಣ

'ನಾಯಕತ್ವ ಗುಣವುಳ್ಳ ವ್ಯಕ್ತಿ ಆಯ್ಕೆ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣಾ ವೇಳೆ ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗದೇ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ನಾಯಕತ್ವ ಗುಣ ಹೊಂದಿರುವ ಅಭ್ಯರ್ಥಿಯನ್ನೇ ಆಯ್ಕೆ ಮಾಡಬೇಕು' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸಲಹೆ ನೀಡಿದರು.

ನಗರದಲ್ಲಿ ಮಂಗಳವಾರ ಬೆಂಗಳೂರು ವಿಶ್ವವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ರಾಜ್ಯಶಾಸ್ತ್ರ, ಇತಿಹಾಸ ವಿಭಾಗ ಹಾಗೂ ಕರ್ನಾಟಕ ಸ್ಟೇಟ್ ಡಿಜಿಟಲ್ ಮೀಡಿಯಾ ಅಸೋಸಿಯೇಷನ್ ವತಿಯಿಂದ ನಡೆದ 'ನಿಷ್ಪಕ್ಷಪಾತ ಚುನಾವಣೆ ಮತ್ತು ಮಾಧ್ಯಮ' ವಿಷಯ ಕುರಿತು ನಡೆದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಮತದಾನದ ಮಹತ್ವ ಇನ್ನೂ ಅರಿವಿಗೆ ಬಂದಿಲ್ಲ. ಮಾಧ್ಯಮಗಳು ಮತದಾನದ ಮಹತ್ವವನ್ನು ಜನರಿಗೆ ಅರ್ಥೈಸುವ ಕೆಲಸವನ್ನು ಮಾಡಬೇಕು' ಎಂದು ಕರೆ ನೀಡಿದರು.

'ಮಾಧ್ಯಮಗಳಲ್ಲಿ ಕೆಲವು ಬದಲಾವಣೆ ಆಗಬೇಕಿದೆ. ರಾಜ್ಯದ ಟಿಆರ್‌ಪಿ ಹೆಚ್ಚಿಸುವ ಕೆಲಸವನ್ನು ಮಾಡಬೇಕೇ ಹೊರತು ತಮ್ಮ ಚಾನೆಲ್‌ನ ಟಿಆರ್‌ಪಿ ಹೆಚ್ಚಿಸುವುದು ಮಾತ್ರ ಆಗಬಾರದು' ಎಂದು ಹೇಳಿದರು.

ನಗರ ವಿ.ವಿಯ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಮಾತನಾಡಿ, 'ಪ್ರತಿಯೊಬ್ಬರೂ ಚುನಾವಣೆಯಲ್ಲಿ ಭಾಗವಹಿಸಬೇಕು. ಹೊಸ ಕಾನೂನು ಜಾರಿಯಾಗಿರುವ ಮುಖ್ಯ ಉದ್ದೇಶವೇ ನಿಷ್ಪಕ್ಷಪಾತ ಚುನಾವಣೆ ನಡೆಯಬೇಕೆ ಎಂಬುದಾಗಿದೆ. ಮಾಧ್ಯಮಗಳಿಗೆ ಅತಿದೊಡ್ಡ ಜವಾಬ್ದಾರಿ ಇದೆ' ಎಂದರು.

ಉಪ ಚುನಾವಣಾಧಿಕಾರಿ ಪ್ರಾಣೇಶ್ ಮಾತನಾಡಿ, 'ಯುವಕರು ತಮ್ಮ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳಲು ಜನವರಿ, ಏಪ್ರಿಲ್, ಆಗಸ್ಟ್, ಜೂನ್... ಹೀಗೆ ನಾಲ್ಕು ಬಾರಿ ನೋಂದಣಿಗೆ ಅವಕಾಶ ಇರುತ್ತದೆ' ಎಂದು ಹೇಳಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ವಿಜಯಕರ್ನಾಟಕ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಕರ್ತರಾದ ರುದ್ರಪ್ಪ, ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಸೇರಿದಂತೆ ಹಲವರು ವಿವಿಧ ಗೋಷ್ಠಿಗಳಲ್ಲಿ ಮಾತನಾಡಿದರು.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ 'ನಿಷ್ಪಕ್ಷಪಾತ ಚುನಾವಣೆ ಮತ್ತು ಮಾಧ್ಯಮ' ವಿಚಾರ ಸಂಕಿರಣದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ವಿದ್ಯಾರ್ಥಿಗಳ ಫೋಟೊ ತೆಗೆದರು. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಎನ್‌.ನರಸಿಂಹಮೂರ್ತಿ, ಸುಪ್ರೀಂ ಕೋರ್ಟ್ ವಕೀಲ ಬ್ರಿಜೇಶ್ ಕಾಳಪ್ಪ ಉಪಸ್ಥಿತರಿದ್ದರು. – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾಧಕ ಮಹಿಳೆಯರಿಗೆ 'ಸೇವಾರತ್ನ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಪ್ರಶಸ್ತಿ ಪ್ರದಾನ: ಲಕ್ಷ್ಮಿ ಹೆಬ್ಬಾಳ್ಕರ್, ಡಿ. ರೂಪಾ ಮೌದ್ಗಿಲ್, ಕೆ. ರತ್ನಪ್ರಭಾ, ಪ್ರಶಸ್ತಿ ಪುರಸ್ಕೃತರು: ವಿದ್ಯಾಶ್ರೀ, ಮಮತ, ಪ್ರತಿಭಾ ರಾಮನ್, ಶಿಲ್ಪಾಶ್ರೀ, ವಿದ್ಯಾ, ನೀತಿ ವೇಣುಗೌಡ, ಪುಣ್ಯವತಿ, ಅಶ್ವಿನಿ, ವಿದ್ಯಾರಶ್ಮಿ, ಅಶ್ವಿನಿ ದೇವಾಡಿಗ, ಜೆ.ಎಸ್. ಅನುರಾಧಾ, ಆಯೋಜನೆ: ಕರ್ನಾಟಕ ಮೀಡಿಯಾ ಜರ್ನಲಿಸ್ಟ್ಸ್ ಯೂನಿಯನ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಪವಾಡ ರಹಸ್ಯ ಬಯಲು ಕಾರ್ಯಕ್ರಮ: 'ವೈಜ್ಞಾನಿಕ ಮನೋಭಾವ–ಪ್ರಾತ್ಯಕ್ಷಿಕೆ': ನರೇಂದ್ರ ನಾಯಕ್, ಅಧ್ಯಕ್ಷತೆ: ದೊಮಿನಿಕ್, ಪ್ರಸ್ತಾವಿಕ ನುಡಿ: ಎಚ್. ಆರ್. ಸ್ವಾಮಿ, ಆಯೋಜನೆ ಮತ್ತು ಸ್ಥಳ: ಎಚ್.ಎನ್. ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಸಂಗೀತ ಕಛೇರಿ: ಉದ್ಘಾಟನೆ: ಕೆ.ಎಂ. ಹರಿ ಕೃಷ್ಣನ್, ಗಾಯನ: ಲಾವಣ್ಯ ಕೃಷ್ಣಮೂರ್ತಿ, ಪಿಟೀಲು: ಶೃತಿ ಸಿ.ವಿ., ಮೃದಂಗ: ರಂಜನಿ ವೆಂಕಟೇಶ್, ಘಟ: ಸುಕನ್ಯ ರಾಮಗೋಪಾಲ್, ಮೋರ್ಸಿಂಗ್: ಭಾಗ್ಯಲಕ್ಷ್ಮಿ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಇಎಸ್‌ವಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಮನಸ್ಸಿಗೆ ಮುದ–ನಗೆಯ ಹದ ನಗೋಣ ಬಾರಾ' ಕುರಿತು ಉಪನ್ಯಾಸ ಮಂಡನೆ: ಬೇಲೂರು ರಾಮಮೂರ್ತಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸರ ಪದಗಳ ರಸಧಾರೆ: ಗಾಯನ: ಅನುರಾಧ ಅರ್ಪಣಿಗಿ ಗಲಗಲಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಯೋಗೇಶ್ ಕುಮಾರ್, ಸ್ನೇಹಾ ನಾರಾಯಣ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮೇಲ್ಭಾಗ ವಾಣಿಜ್ಯ ಚಟುವಟಿಕೆ: ಸಂಪನ್ಮೂಲ ಕ್ರೋಢೀಕರಣಕ್ಕೆ ಪಿಪಿಪಿ ಮಾದರಿಯಲ್ಲಿ ಕೆಪಿಟಿಸಿಎಲ್ ಯೋಜನೆ

ನೆಲದಡಿ ಉಪಕೇಂದ್ರ: 22 ಕಡೆ ಪ್ರಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಪೂರೈಕೆ ಮತ್ತು ಉಪ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಸಾಮರ್ಥ್ಯ ವೃದ್ಧಿಗೆ ಅಗತ್ಯವಿರುವ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಯೋಜನೆಯೊಂದನ್ನು ರೂಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಮುಂದಾಗಿದೆ.

ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ (ಪಿಪಿಪಿ)ದಲ್ಲಿ ತನ್ನ ವಿದ್ಯುತ್ ಉಪಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಕೆಪಿಟಿಸಿಎಲ್ ಚಿಂತಿಸಿದೆ. ಎಐಎಸ್ (ಏರ್ ಇನ್ಸುಲೇಟ್ ಸಬ್‌ಸ್ಟೇಷನ್) ಉಪಕೇಂದ್ರಗಳನ್ನು ಜಿಐಎಸ್ (ಗ್ಯಾಸ್ ಇನ್ಸುಲೇಟ್ ಸಬ್‌ಸ್ಟೇಷನ್)ಗಳಾಗಿ ಪರಿವರ್ತಿಸಲು ಕೆಪಿಟಿಸಿಎಲ್ ಚಿಂತನೆ ನಡೆಸಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇಂಧನ ಸಚಿವ ಕೆ.ಜೆ. ಜಾರ್ಜ್, ‘ಎಐಎಸ್‌ನಿಂದ ಜಿಐಎಸ್‌ಗೆ ಪರಿವರ್ತನೆ ಮಾಡುವುದರಿಂದ ಉಪಕೇಂದ್ರದ ಸೇವಾ ಕೇಂದ್ರಗಳು (ಸರ್ವಿಸ್ ಸ್ಟೇಷನ್) ಸಂಪೂರ್ಣವಾಗಿ ನೆಲದಡಿಯಲ್ಲಿರಲಿದ್ದು, ಅದರ ಮೇಲೆ ಸಾಕಷ್ಟು ಜಾಗ ಲಭ್ಯವಾಗಲಿದೆ. ಅಲ್ಲಿ ಪಿಪಿಪಿ ಮಾದರಿಯಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸುವ

ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸೌರಶಕ್ತಿ ಮೇಳದ ಕುರಿತು ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿದರು. ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಕೆಆರ್‌ಇಡಿಎಲ್ ಅಧ್ಯಕ್ಷ ಟಿ.ಡಿ. ರಾಜೇಗೌಡ, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಪಾಲ್ಗೊಂಡಿದ್ದರು.

ಚಿಂತನೆಯಿದೆ. ಪ್ರಾಯೋಗಿಕವಾಗಿ ನಗರದ ಆನಂದರಾವ್ ವೃತ್ತದಲ್ಲಿರುವ ಉಪಕೇಂದ್ರದಲ್ಲಿ ಇದನ್ನು ಪರಿಚಯಿಸುವ ಆಲೋಚನೆ ಇದೆ’ ಎಂದು ಹೇಳಿದರು.

‘ಈ ಚಿಂತನೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಮುಖ್ಯಮಂತ್ರಿ ಅವರ ಗಮನಕ್ಕೆ ತಂದು, ಸಚಿವ ಸಂಪುಟದ ಮುಂದಿಟ್ಟು, ಅನುಮೋದನೆ ದೊರೆತರೆ ಯೋಜನೆ ಕಾರ್ಯಗತ ಮಾಡಲಾಗುವುದು’ ಎಂದು ಹೇಳಿದರು.

‘ಅಭಿವೃದ್ಧಿ ಪಡಿಸುವ ಉಪಕೇಂದ್ರದ ಜಾಗದ ಮಾಲೀಕತ್ವ ಕೆಪಿಟಿಸಿಎಲ್ ಬಳಿಯೇ ಇರಲಿದೆ. ಹೂಡಿಕೆಗೆ ಮುಂದೆ ಬರುವವರೇ ಎಐಎಸ್‌ನಿಂದ ಜಿಐಎಸ್ ಪರಿವರ್ತಿಸಿ, ಅದರ ಮೇಲಿನ ಜಾಗವನ್ನು ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸಬಹುದು. ಇದನ್ನು ಸುಮಾರು 35 ವರ್ಷಗಳ ಕಾಲ ಗುತ್ತಿಗೆ ನೀಡಲಾಗುವುದು’ ಎಂದು ವಿವರಿಸಿದರು.

‘ನಗರದಲ್ಲೇ 171 ಉಪಕೇಂದ್ರಗಳಿದ್ದು, ಆಯ್ದ 22 ಕಡೆಗಳಲ್ಲಿ ಈ ಪ್ರಯೋಗ ಮಾಡುವ ಬಗ್ಗೆ ಚಿಂತನೆಯಿದೆ. ಇದರಿಂದ 30ರಿಂದ 40 ಎಕರೆ ಎಕರೆ ಜಾಗ ಲಭ್ಯವಾಗಬಹುದು. ಇದು ಯಶಸ್ವಿಯಾದರೆ ರಾಜ್ಯದ ಬೇರೆ ಕಡೆಗಳಲ್ಲೂ ಇದೇ ಮಾದರಿಯನ್ನು ಜಾರಿಗೆ ತರಲಾಗುವುದು’ ಎಂದು ಹೇಳಿದರು.

‘ಉಪ ಕೇಂದ್ರಗಳ ಮೇಲ್ದರ್ಜೆಗೆ ಮತ್ತು ವಿಸ್ತರಣೆಗಾಗಿ ದೊಡ್ಡಮಟ್ಟದ ಹೂಡಿಕೆ ಮಾಡಬೇಕಾಗುತ್ತದೆ. ಇದರಿಂದ ಗ್ರಾಹಕರಿಗೆ ಹೊರೆ ಬೀಳಲಿದೆ. ಅದನ್ನು ತಪ್ಪಿಸಲು ಇದು ಉತ್ತಮ ಮಾರ್ಗವಾಗಿದೆ. ವಸತಿ ಸಂಕೀರ್ಣಗಳಿಗೆ ಇಲ್ಲಿ ಅವಕಾಶ ನೀಡುವುದಿಲ್ಲ. ಮಾಲ್‌ಗಳು ಸೇರಿದಂತೆ ವಾಣಿಜ್ಯ ಸಂಕೀರ್ಣಗಳಂತಹ ಚಟುವಟಿಕೆಗಳಿಗೆ ಮಾತ್ರ ಅವಕಾಶ ಇರಲಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

9ರಂದು ‘ರೈತ ಸೌರಶಕ್ತಿ ಮೇಳ’

ಬೆಂಗಳೂರು: ನೀರಾವರಿ ಆಧಾರಿತ ಕೃಷಿಯಲ್ಲಿ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆ ಕಡಿಮೆ ಮಾಡಿ, ಸೌರಶಕ್ತಿಯ ಬಳಕೆಯನ್ನು ಹೆಚ್ಚಿಸಿ, ರೈತರು ಸ್ವಾವಲಂಬಿಗಳನ್ನಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇದೇ 9 ರಂದು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ (ಜಿಕೆವಿಕೆ) ಆವರಣದಲ್ಲಿ 'ರೈತ ಸೌರಶಕ್ತಿ ಮೇಳ' ಆಯೋಜಿಸುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ‘ಕರ್ಟನ್‌ರೈಸರ್ ಕಾರ್ಯಕ್ರಮ’ದಲ್ಲಿ ಸೌರಶಕ್ತಿ ಮೇಳದ ಕುರಿತು ವಿವರ ನೀಡಿದ ಅವರು, 'ರೈತರ ಅಗತ್ಯಕ್ಕೆ ಅನುಗುಣವಾಗಿ ವಿದ್ಯುತ್ ಪೂರೈಸಲು ಸೌರ ಪಂಪ್‌ಸೆಟ್ ಅಳವಡಿಕೆಯೇ ಪರಿಹಾರ. ಈ ಹಿನ್ನೆಲೆಯಲ್ಲಿ ರೈತರಿಗೆ ಸೌರ ಪಂಪ್‌ಸೆಟ್ ಕುರಿತು ಹೆಚ್ಚಿನ ಮಾಹಿತಿ ನೀಡಲು ಮೇಳವನ್ನು ಆಯೋಜಿಸಲಾಗುತ್ತಿದೆ’ ಎಂದು ಅವರು ವಿವರಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ 9ರಂದು ಸಂಜೆ 4 ಗಂಟೆಗೆಮೇಳ ಉದ್ಘಾಟಿಸಲಿದ್ದಾರೆ. ಜೊತೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ ‘ಕುಸುಮ್ ಸಿ’ ಯೋಜನೆ ಹಾಗೂ ರಾಜ್ಯದ 13 ಜಿಲ್ಲೆಗಳಲ್ಲಿರುವ ವಿವಿಧ ವೋಲ್ಟೇಜ್‌ಗಳ ಹೊಸ ಸಬ್‌ಸ್ಟೇಷನ್‌ಗಳಿಗೂ ಚಾಲನೆ ನೀಡಲಿದ್ದಾರೆ‘ ಎಂದರು.

'ಮೇಳದಲ್ಲಿ ನವೀನ ಮಾದರಿಯ ಸೌರ ಪಂಪ್‌ಸೆಟ್‌ಗಳ ಪ್ರಾತ್ಯಕ್ಷಿಕೆ ಇರುತ್ತದೆ. ರೈತರಿಗಾಗಿ ಸಂವಾದ ಕಾರ್ಯಕ್ರಮವೂ ಇರುತ್ತದೆ. ಸೌರ ಪಂಪ್ ಸೆಟ್‌ಗಳ ಉತ್ಪಾದಕರು, ಮಾರಾಟಗಾರರು, ಬ್ಯಾಂಕ್ ಅಧಿಕಾರಿಗಳು, ಕೃಷಿ ಹಾಗೂ ಇಂಧನ ಇಲಾಖೆಯ ಅಧಿಕಾರಿಗಳು ಸಂವಾದದಲ್ಲಿ ಪಾಲ್ಗೊಂಡು ರೈತರಿಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬಿಳಗಿ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ ರುದ್ರಪ್ಪಯ್ಯ ಉಪಸ್ಥಿತರಿದ್ದರು.

ಮೇಳದಲ್ಲಿ ಏನೇನು?

- ವಿವಿಧ ಸೌರ ವಿದ್ಯುತ್ ಉತ್ಪನ್ನಗಳು
- ಸೌರ ಪಂಪ್‌ಸೆಟ್‌ಗಳ ಕಾರ್ಯನಿರ್ವಹಣೆ ಪ್ರಾತ್ಯಕ್ಷಿಕೆ
- ಸ್ಥಳದಲ್ಲೇ ಸೋಲಾರ್ ಪಂಪ್‌ಸೆಟ್ ಅಳವಡಿಸಿಕೊಳ್ಳುವವರಿಗೆ ಆನ್‌ಲೈನ್ ಪೋರ್ಟಲ್
- ‘ಸೌರ ಮಿತ್ರ’ ಆ್ಯಪ್ ಬಿಡುಗಡೆ (ಆ್ಯಪ್ ಮೂಲಕವೂ ರೈತರು ಅರ್ಜಿ ಸಲ್ಲಿಸಬಹುದು)

ಭೂ ಮಾರ್ಗದರ್ಶಿ ಮೌಲ್ಯ ಕಡಿತ: ಪರಿಹಾರದಲ್ಲೂ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪೆರಿಫೆರಲ್ ರಿಂಗ್ ರೋಡ್ (ಪಿಆರ್‌ಆರ್) ಯೋಜನೆಗೆ ಭೂ ಸ್ವಾಧೀನಕ್ಕೆ ಒಪ್ಪಿರುವ ರೈತರಿಗೆ ಪರಿಷ್ಕೃತ ಪರಿಹಾರ ನೀತಿಯನ್ನು ರಾಜ್ಯ ಸರ್ಕಾರ ಅಂತಿಮಗೊಳಿಸಿದೆ. ಭೂಮಿಯ ಮಾರ್ಗದರ್ಶಿ ಮೌಲ್ಯವನ್ನು ಅರ್ಧದಷ್ಟು ಕಡಿತಗೊಳಿಸಿದೆ.

ಇದು ನಗರದ ಹೊರವಲಯದಲ್ಲಿ ಭೂ ಖರೀದಿಯ ಭರಾಟೆಯನ್ನು ಹೆಚ್ಚಿಸಲಿದೆ. ಭೂಮಿ ಕಳೆದುಕೊಂಡವರಿಗೆ ನೀಡಲಾದ ಪರಿಹಾರದಲ್ಲಿ ದೊಡ್ಡಮಟ್ಟದ ಕಡಿತ ಉಂಟಾಗಲಿದೆ.

ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ಹೊರಡಿಸಿರುವ ಈ ಅಧಿಸೂಚನೆಯು ಬೆಂಗಳೂರಿನ ಪೂರ್ವ, ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿ ಹರಡಿಕೊಂಡಿರುವ 73-ಕಿಮೀ ಪಿಆರ್‌ಆರ್‌ಗೆ ಹೊಂದಿಕೊಂಡಿರುವ ಆಸ್ತಿಗಳ ಮಾರ್ಗದರ್ಶನ ಮೌಲ್ಯವನ್ನು ಕಡಿಮೆ ಮಾಡಿದೆ.

ಬೆಂಗಳೂರು ಬಿಸಿನೆಸ್ ಕಾರಿಡಾರ್ (ಬಿಬಿಸಿ) ಎಂದೂ ಕರೆಯಲಾಗಿರುವ ಪಿಆರ್‌ಆರ್ ಯೋಜನೆಯಡಿ ಭೂ ಸ್ವಾಧೀನಕ್ಕೆ ಸೂಚಿಸಲಾದ 2,560 ಎಕರೆ ಭೂಮಿಗೆ ಐದು ತಿಂಗಳ ಹಿಂದೆ ನಿಗದಿಪಡಿಸಿದ್ದ ಮೌಲ್ಯ ಈಗ ಕಡಿಮೆಯಾಗಲಿದೆ.

ಮಾರ್ಗದರ್ಶಿ ಮೌಲ್ಯದ ನಾಲ್ಕು ಪಟ್ಟು (ಪೆರಿಫೆರಲ್ ಪ್ರದೇಶಗಳಲ್ಲಿ) ಪರಿಹಾರವನ್ನು ಭೂ ಮಾಲೀಕರಿಗೆ ನೀಡಬೇಕಿತ್ತು. ಇದೀಗ ಮೌಲ್ಯ ಕಡಿಮೆಗೊಳಿಸಿರುವುದರಿಂದ ಭೂಮಾಲೀಕರಿಗೆ ಒಂದು ಎಕರೆ ಕೃಷಿ ಭೂಮಿಗೆ ಕನಿಷ್ಠ ₹1 ಕೋಟಿ ಕಡಿಮೆಯಾಗಬಹುದು ಎಂದು ಅಂದಾಜಿಸಲಾಗಿದೆ.

’ಪಿಆರ್‌ಆರ್‌ಗೆ ಹೊಂದಿಕೊಂಡಿರುವ ಭೂಮಿಯ ಮಾರ್ಗದರ್ಶಿ ಮೌಲ್ಯವನ್ನು 2023ರ ಸೆಪ್ಟೆಂಬರ್‌ನಲ್ಲಿ ಪರಿಷ್ಕರಿಸಲಾಗಿತ್ತು. ಆದರೆ, ಯೋಜನೆ ಇನ್ನೂ ಆರಂಭವಾಗದ ಕಾರಣ ಹಳೆಯ ದರವನ್ನೇ ಉಳಿಸಿಕೊಂಡಿದ್ದೇವೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖರೀದಿ ಭರಾಟೆ: ಭೂಮಿಯ ಮಾರ್ಗದರ್ಶಿ ಮೌಲ್ಯ ಕಡಿಮೆಗೊಂಡರೆ ಭೂಮಿ ಖರೀದಿಯ ಭರಾಟೆ ಹೆಚ್ಚಾಗಲಿದೆ. ರೈತರಿಗೆ ನಷ್ಟವನ್ನು ಉಂಟು ಮಾಡಲಿದೆ. ಇದು ರೈತರ ಹಿತಾಸಕ್ತಿಗೆ ಮಾರಕವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅರ್ಜಿ ಸ್ವೀಕಾರಕ್ಕೆ ನಕಾರ: ಎಇಇ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಪರ್ಕದ ಆರ್.ಆರ್. ಸಂಖ್ಯೆಗಳನ್ನು ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಯ ಹೆಸರಿಗೆ ವರ್ಗಾಯಿಸಲು ಕೋರಿರುವ ಅರ್ಜಿ ಸ್ವೀಕರಿಸಲು ನಿರಾಕರಿಸಿದ ಬೆಸ್ಕಾಂ ಆರನೇ ಪೂರ್ವ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಶಂಕರಪ್ಪ ಕೆ.ಎಂ. ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಹೋಟೆಲ್ ಲೀಲಾ ವೆಂಚರ್ ಲಿಮಿಟೆಡ್ ಹೆಸರಿನಲ್ಲಿದ್ದ ಎರಡು ಆರ್. ಆರ್. ಸಂಖ್ಯೆಗಳನ್ನು ಶ್ಲಾಷ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್ ಕಂಪನಿ ಹೆಸರಿಗೆ ವರ್ಗಾವಣೆ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಲು ಶ್ಲಾಷ್ ಕಂಪನಿಯ ಪ್ರತಿನಿಧಿಗಳು 2023ರ ಡಿಸೆಂಬರ್ 9ರಿಂದ 2024ರ ಮಾರ್ಚ್ 1ರವರೆಗೆ ಏಳು ಬಾರಿ ಬೆಸ್ಕಾಂ ಎಇಇ ಕಚೇರಿಗೆ ಭೇಟಿ ನೀಡಿದ್ದರು. ಆದರೆ, ಅವರ ಕೋರಿಕೆಯನ್ನು ತಿರಸ್ಕರಿಸಿದ್ದ ಶಂಕರಪ್ಪ, ಅರ್ಜಿ ಸ್ವೀಕರಿಸದಂತೆ ಸಿಬ್ಬಂದಿಗೆ ಸೂಚನೆ ನೀಡಿದ್ದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಅವರಿಗೆ ಶ್ಲಾಷ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್ ಕಂಪನಿ ಮಂಗಳವಾರ ದೂರು ನೀಡಿತ್ತು. ಪ್ರಕರಣದ ಕುರಿತು ಬೆಸ್ಕಾಂ ಕೇಂದ್ರ ಕಚೇರಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು.

‘ದೂರುದಾರರ ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಿದ ಎಇಇ, ಅರ್ಜಿ ತಿರಸ್ಕರಿಸಿರುವ ಬಗ್ಗೆಯೂ ಹಿಂಬರಹ ನೀಡಿರಲಿಲ್ಲ. ಗ್ರಾಹಕರು ಪದೇ ಪದೇ ಕಚೇರಿಗೆ ಅಲೆದಾಡುವಂತೆ ಮಾಡಿದ್ದರು. ಗ್ರಾಹಕರ ಅರ್ಜಿ ಸ್ವೀಕರಿಸದಂತೆ ಟಪಾಲು ಶಾಖೆ ಸಿಬ್ಬಂದಿಗೆ ಆದೇಶ ನೀಡಿರುವುದು ಕಂಡುಬಂದಿದೆ’ ಎಂದು ಶಂಕರಪ್ಪ ಅವರನ್ನು ಅಮಾನತು ಮಾಡಿ ಬುಧವಾರ ಹೊರಡಿಸಿರುವ ಆದೇಶದಲ್ಲಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

‘ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಗಿದಾರರ ವಿದ್ಯುತ್ ಸರಬರಾಜು ಷರತ್ತುಗಳ ಸೆಕ್ಷನ್ 6 ರ ಪ್ರಕಾರ, ಗ್ರಾಹಕರ ಹೆಸರು ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ, ಆ ಅರ್ಜಿಯನ್ನು ಮತ್ತು ಅದರೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಪ್ರಕರಣದಲ್ಲಿ ನಿಯಮ ಪಾಲಿಸದೇ ಗ್ರಾಹಕರಿಗೆ ತೊಂದರೆ ನೀಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿರುತ್ತದೆ’ ಎಂದು ಹೇಳಿದ್ದಾರೆ.

ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸದೇ, ತೊಂದರೆ ನೀಡುವ ಮೂಲಕ ಕರ್ತವ್ಯಲೋಪ ಎಸಗಿರುವ ಆರೋಪದಡಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಶಂಕರಪ್ಪ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಮುಖ್ಯಮಂತ್ರಿ ಜೊತೆಗೆ ಚರ್ಚಿಸಿ ಮುಂದಿನ ತೀರ್ಮಾನ: ಎಫ್‌ಕೆಸಿಸಿಐ

ಬಿಬಿಎಂಪಿ ಹೊಸ ತೆರಿಗೆ ನೀತಿ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನದ ಮಾರ್ಗಸೂಚಿ ದರ ಹಾಗೂ ಕಟ್ಟಡ ನಿರ್ಮಾಣ ವೆಚ್ಚದ ಮೇಲೆ ಆಸ್ತಿ ತೆರಿಗೆ ನಿಗದಿಪಡಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರಕಟಿಸಿರುವ ಕರಡು ನೀತಿಯು ಅವೈಜ್ಞಾನಿಕವಾಗಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಆಕ್ಷೇಪ ವ್ಯಕ್ತಪಡಿಸಿದೆ.

‘ಹೊಸ ನೀತಿ ಜಾರಿಯಾದರೆ ನಿವೇಶನ, ಕಟ್ಟಡ, ವಾಣಿಜ್ಯ ಕಟ್ಟಡಗಳ ಮಾಲೀಕರು ಚಾಲ್ತಿಯಲ್ಲಿರುವ ತೆರಿಗೆಗಿಂತ ಐದು ಪಟ್ಟು ಹೆಚ್ಚು ಪಾವತಿಸಬೇಕಾಗುತ್ತದೆ. ಇದರಿಂದ ಸಣ್ಣ ವ್ಯಾಪಾರಿಗಳ ಬದುಕು ಬೀದಿಗೆ ಬೀಳಲಿದೆ. ಕೂಡಲೇ, ಈ ತೆರಿಗೆ ನೀತಿಯನ್ನು ಹಿಂಪಡೆದು ಹಳೆಯ ಪದ್ಧತಿಯನ್ನೇ ಮುಂದುವರಿಸಬೇಕು’ ಎಂದು ಎಫ್‌ಕೆಸಿಸಿಐ ಹಿರಿಯ ಉಪಾಧ್ಯಕ್ಷ ಎಂ.ಜಿ. ಬಾಲಕೃಷ್ಣ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಫೆಬ್ರುವರಿ 20ರಂದು ಕರಡು ಅಧಿಸೂಚನೆ ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು 15 ದಿನಗಳ ಗಡುವು ನೀಡಲಾಗಿತ್ತು. ಇದನ್ನು 45 ದಿನಗಳಿಗೆ ವಿಸ್ತರಿಸಲು ಕೋರಿದ್ದೆವು. ಇದಕ್ಕೆ ಬಿಬಿಎಂಪಿ ಸಮ್ಮತಿಸಿಲ್ಲ. ಸದ್ಯ ಅಲ್ಲಿ ಜನಪ್ರತಿನಿಧಿಗಳ ಆಡಳಿತವಿಲ್ಲ. ಹಾಗಾಗಿ, ಮುಖ್ಯ ಆಯುಕ್ತರು ಕೈಗೊಂಡಿರುವ ತೀರ್ಮಾನಕ್ಕೆ ಮಾನ್ಯತೆಯಿಲ್ಲ’ ಎಂದರು.

ಈ ಹಿಂದೆಯೂ ಅವೈಜ್ಞಾನಿಕವಾಗಿ ತೆರಿಗೆ ನಿಗದಿಪಡಿಸಲಾಗಿತ್ತು. ಆ ವೇಳೆ ಸರ್ಕಾರದ ಜೊತೆಗೆ ಚರ್ಚಿಸಿದ್ದರಿಂದ ಹಿಂಪಡೆಯಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮಸ್ಯೆ ಬಗ್ಗೆ ವಿವರಿಸುತ್ತೇವೆ. ಸರ್ಕಾರವು ನಮ್ಮ ಮನವಿಗೆ ಸ್ಪಂದಿಸುವ ವಿಶ್ವಾಸವಿದೆ. ಅಲ್ಲಿಯೂ ನ್ಯಾಯ ಸಿಗದಿದ್ದರೆ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯ ಎಂದು ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಯಶಸ್ವಿಯಾಗಿದೆ. ಹಾಗಾಗಿ, ಇದನ್ನೇ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 20 ಸಾವಿರ ಚದರ ಅಡಿ ಶೆಡ್ ಹೊಂದಿರುವ ಉದ್ಯಮಿಗಳು ಹಾಲಿ ತೆರಿಗೆ ಪದ್ಧತಿಯಡಿ ವಾರ್ಷಿಕ ₹60 ಸಾವಿರ ತೆರಿಗೆ ಪಾವತಿಸುತ್ತಿದ್ದಾರೆ. ಹೊಸ ತೆರಿಗೆ ನೀತಿ ಜಾರಿಯಾದರೆ ₹2 ಲಕ್ಷ ಪಾವತಿಸಬೇಕಾಗುತ್ತದೆ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 55ರಷ್ಟು ಆಸ್ತಿದಾರರು ತೆರಿಗೆ ಪಾವತಿಸುತ್ತಿಲ್ಲ. ಆದಾಯ ಕಡಿಮೆಯಾಗಿದೆ. ಹಾಗಾಗಿ, ಪ್ರಾಮಾಣಿಕವಾಗಿ ತೆರಿಗೆ ಪಾವತಿಸುವವರ ಮೇಲೆ ಹೊಸ ನೀತಿ ಹೇರಲು ಮುಂದಾಗಿದೆ ಎಂದು ದೂರಿದರು.

ಎಫ್‌ಕೆಸಿಸಿಐ ಪದಾಧಿಕಾರಿಗಳಾದ ಎನ್.ಎಸ್. ಶ್ರೀನಿವಾಸಮೂರ್ತಿ, ಸಾಯಿರಾಂ ಪ್ರಸಾದ್ ಹಾಜರಿದ್ದರು.

‘ಟ್ಯಾಂಕರ್ ನೀರು ₹4 ಸಾವಿರಕ್ಕೇರಿದೆ’

ಬೆಂಗಳೂರಿನಲ್ಲಿರುವ ಕೈಗಾರಿಕಾ ಪ್ರದೇಶಗಳಲ್ಲೂ ನೀರಿನ ಅಭಾವ ತಲೆದೋರಿದೆ. ಪೀಣ್ಯ ಸೇರಿದಂತೆ ವಿವಿಧೆಡೆ ಅತಿಹೆಚ್ಚು ನೀರು ಬೇಡುವ ಕೈಗಾರಿಕೆಗಳು ತೊಂದರೆಗೆ ಸಿಲುಕಿವೆ ಎಂದು ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಆರ್. ಶಿವಕುಮಾರ್ ಹೇಳಿದರು.

ಒಂದು ವಾರದಿಂದ ಸಮಸ್ಯೆ ಉಲ್ಬಣಿಸಿದೆ. ವಾರದ ಹಿಂದೆ ಒಂದು ನೀರಿನ ಟ್ಯಾಂಕರ್ ಬೆಲೆ ₹2 ಸಾವಿರ ಇತ್ತು. ಈಗ ₹4 ಸಾವಿರಕ್ಕೆ ಮುಟ್ಟಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸಮಸ್ಯೆ ಮತ್ತಷ್ಟು ಉಲ್ಬಣಿಸುವ ಸಾಧ್ಯತೆಯಿದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೂ ಎಫ್‌ಕೆಸಿಸಿಐನಿಂದ ಮನವಿ ಸಲ್ಲಿಸಲಾಗಿದೆ. ಅಗತ್ಯವಿರುವೆಡೆ ಕೊಳವೆಬಾವಿ ಕೊರೆಯಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿತ್ತು. ಆದರೆ, ಇನ್ನೂ ಕೊರೆಸಿಲ್ಲ ಎಂದರು.



ನೀರಿನ ಅಭಾವ ಮುಂದುವರಿದರೆ ಕೈಗಾರಿಕೆಗಳ ವೆಚ್ಚವು ಶೇ 5ರಿಂದ 10ರಷ್ಟು ಹೆಚ್ಚಲಿದೆ ಎಂದರು.

966 ಟ್ಯಾಂಕರ್‌ಗಳ ನೋಂದಣಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬೇಸಿಗೆಯಲ್ಲಿ ನೀರು ಪೂರೈಕೆಗೆ ಸಂಬಂಧಿಸಿದಂತೆ 966 ಟ್ಯಾಂಕರ್‌ಗಳನ್ನು ಅದರ ಮಾಲೀಕರು ಸ್ವಯಂ ನೋಂದಣಿ ಮಾಡಿಕೊಂಡಿದ್ದಾರೆ.

ಟ್ಯಾಂಕರ್ ನೀರಿಗೆ ವಿಪರೀತ ಶುಲ್ಕ ವಿಧಿಸುತ್ತಿರುವ ಬಗ್ಗೆ ದೂರುಗಳು ಬಂದಾಗ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿತ್ತು. ಅಲ್ಲದೇ ಬಳಕೆ ಮಾಡದೇ ಇರುವ ಟ್ಯಾಂಕರ್‌ಗಳನ್ನು ನೀರು ಪೂರೈಸಲು ನೀಡಿದರೆ ಬಾಡಿಗೆ ನೀಡಲಾಗುವುದು ಎಂದು ತಿಳಿಸಲಾಗಿತ್ತು.

ಮಾಲೀಕರು 966 ಟ್ಯಾಂಕರ್‌ಗಳಲ್ಲಿ 315 ಟ್ಯಾಂಕರ್‌ಗಳನ್ನು ಬಾಡಿಗೆ ನೀಡಲು ಒಪ್ಪಿದ್ದು, ಇವು ಒಟ್ಟು 23.38 ಲಕ್ಷ ಲೀಟರ್ ಸಾಮರ್ಥ್ಯವನ್ನು ಹೊಂದಿವೆ. 651 ಟ್ಯಾಂಕರ್‌ಗಳನ್ನು ಬಾಡಿಗೆ ನೀಡಲು ಒಪ್ಪಿಗೆ ನೀಡಿಲ್ಲ.

ತಂಡ ರಚನೆಗೆ ಸೂಚನೆ

ಬೆಂಗಳೂರು: ಲೋಕಸಭಾ ಚುನಾವಣೆ ಘೋಷಣೆಯಾದ ಕೂಡಲೇ ಪೋಸ್ಟರ್, ಬ್ಯಾನರ್‌ಗಳನ್ನು ತೆರವುಗೊಳಿಸಲು ಈಗಲೇ ತಂಡ ರಚಿಸಿ ತಯಾರಾಗಿರಬೇಕು ಎಂದು ಮುಖ್ಯ ಚುನಾವಣಾಧಿಕಾರಿಯವರು ಎಲ್ಲ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಚುನಾವಣೆ ಘೋಷಣೆಯಾದ 24 ಗಂಟೆ, 48 ಗಂಟೆ, 72 ಗಂಟೆಗಳಲ್ಲಿ ಸರ್ಕಾರಿ, ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಇರುವ ಅನಧಿಕೃತ ಗೋಡೆ ಬರಹ, ಭಿತ್ತಿ ಪತ್ರ, ಬ್ಯಾನರ್‌ಗಳನ್ನು ತೆರವು ಮಾಡಬೇಕಾಗುತ್ತದೆ. ಈ ಸಂಬಂಧ ಮಾಹಿತಿ ಸಂಗ್ರಹಿಸಲು ತಂಡಗಳನ್ನು ಮುಂಗಡವಾಗಿ ರಚಿಸಿಕೊಳ್ಳಬೇಕು. ಚುನಾವಣೆ ಘೋಷಣೆಯಾದ ತಕ್ಷಣ ಮಾಹಿತಿಯನ್ನು ಚುನಾವಣಾಧಿಕಾರಿ ಕಚೇರಿಗೆ ನೀಡಬೇಕು ಎಂದು ಪತ್ರದಲ್ಲಿ ಸೂಚನೆ ನೀಡಿದ್ದಾರೆ.

‘ವನ್ಯಜೀವಿ ಆನುವಂಶಿಕ ಪ್ರಯೋಗಾಲಯ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು:ಮಾನವ– ವನ್ಯಜೀವಿ ಸಂಘರ್ಷದ ಹಿನ್ನೆಲೆಯಲ್ಲಿ ಮನುಷ್ಯರನ್ನು ಕೊಲ್ಲುವ ಪ್ರಾಣಿಗಳನ್ನು ನಿಖರವಾಗಿ ಪತ್ತೆ ಮಾಡಿ, ಅವುಗಳನ್ನು ಹಿಡಿಯುವ ಉದ್ದೇಶಕ್ಕಾಗಿ ಆನುವಂಶಿಕ ಪ್ರಯೋಗಾಲಯವೊಂದನ್ನು ರಾಜ್ಯದಲ್ಲಿ ಸ್ಥಾಪಿಸಬೇಕು ಎಂದು ವನ್ಯಜೀವಿ ವಿಜ್ಞಾನಿ ಸಂಜಯ್ ಗುಬ್ಬಿ ಅವರು ಅರಣ್ಯ ಸಚಿವ ಈಶ್ವರ್ ಖಂಡ್ರೆಯವರಿಗೆ ಪತ್ರ ಬರೆದಿದ್ದಾರೆ.

ಸಾಕಷ್ಟು ಬಾರಿ ತಪ್ಪು ತಿಳಿವಳಿಕೆಯಿಂದ ಬೇರೆ ಪ್ರಾಣಿಗಳನ್ನು ಹಿಡಿಯುವ ಅಥವಾ ಕೊಲ್ಲುವ ಸಾಧ್ಯತೆಗಳಿರುತ್ತವೆ. ಆನುವಂಶಿಕ ಪ್ರಯೋಗಾಲಯದಿಂದ ದಾಳಿ ಮಾಡಿದ ಪ್ರಾಣಿಯನ್ನು ನಿಖರವಾಗಿ ಪತ್ತೆ ಮಾಡಲು ಸಾಧ್ಯವಿದೆ. ಕ್ಯಾಮೆರಾ ಟ್ರ್ಯಾಪ್ ಚಿತ್ರಗಳೊಂದಿಗೆ ಪ್ರಾಣಿಗಳ ಕೂದಲು, ಎಂಜಲು, ಹಿಕ್ಕೆಯನ್ನು ಸಂಗ್ರಹಿಸಿ, ಸಾವಿಗೆ ಅಥವಾ ಗಾಯಪಡಿಸಿದ ಪ್ರಾಣಿಯನ್ನು ನಿಖರವಾಗಿ ಪತ್ತೆ ಮಾಡಬಹುದು ಎಂದು ಹೇಳಿದ್ದಾರೆ.

ಈಗ ಸಂಗ್ರಹಿಸುತ್ತಿರುವ ಆನುವಂಶಿಕ ಮಾದರಿಗಳನ್ನು (ಸ್ಯಾಂಪಲ್) ಡೆಹರಾಡೂನ್ ಅಥವಾ ಹೈದರಾಬಾದಿನಲ್ಲಿರುವ ಪ್ರಯೋಗಾಲಯಗಳಿಗೆ ಕಳಿಸಲಾಗುತ್ತಿದೆ. ಅಲ್ಲಿಂದ ಮಾದರಿಗಳ ಫಲಿತಾಂಶ ಬರಲು ಹಲವು ವಾರಗಳೇ ಬೇಕಾಗುತ್ತವೆ. ಅಷ್ಟರಲ್ಲಿ ಸಂಘರ್ಷ ಹೆಚ್ಚಾಗಿರುತ್ತದೆ ಅಥವಾ ಪ್ರಾಣಿಯನ್ನು ಆಗಲೇ ಹಿಡಿಯಲಾಗುತ್ತದೆ ಎಂದು ತಿಳಿಸಿದ್ದಾರೆ.

ಹುಲಿ, ಚಿರತೆಯಂತಹ ದೊಡ್ಡ ಮಾಂಸಾಹಾರಿ ಪ್ರಾಣಿಗಳಿಂದ ಇತ್ತೀಚೆಗೆ ಸಾವಿಗೀಡಾಗುತ್ತಿರುವವರು ಮತ್ತು ಗಾಯಗೊಳ್ಳುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ. ಇಂತಹ ಸಂದರ್ಭಗಳಲ್ಲಿ ಸಾವಿಗೆ ಅಥವಾ ಗಾಯಕ್ಕೆ ಕಾರಣವಾದ ಪ್ರಾಣಿಯನ್ನು ಹಿಡಿದು ಪುನರ್‌ವಸತಿ ಕೇಂದ್ರಗಳಿಗೆ ಕೊಂಡೊಯ್ಯಲಾಗುತ್ತಿದೆ. ಕೆಲವೊಮ್ಮೆ ಪ್ರಾಣಿಗಳನ್ನು ಸೆರೆ ಹಿಡಿದರೂ ಮಾನವ ಸಾವು ಕಡಿಮೆ ಆಗುವುದಿಲ್ಲ. ಹೀಗಾಗಿ ಯಾವ ಪ್ರಾಣಿ ದಾಳಿ ನಡೆಸುತ್ತಿದೆ ಎಂಬುದನ್ನು ನಿಖರವಾಗಿ ಕಂಡುಕೊಳ್ಳುವುದು ಅಗತ್ಯ ಎಂದು ವಿವರಿಸಿದ್ದಾರೆ.

ಆನುವಂಶಿಕ ಪ್ರಯೋಗಾಲಯವನ್ನು ಅರಣ್ಯ ಇಲಾಖೆ ಅಡಿ ಬೆಂಗಳೂರು ಅಥವಾ ಮೈಸೂರಿನಲ್ಲಿ ಸ್ಥಾಪಿಸಬೇಕು. ಕರ್ನಾಟಕದಲ್ಲಿರುವ ವನ್ಯಜೀವಿಗಳ ಆನುವಂಶಿಕ ಪರೀಕ್ಷೆ ಮಾಡುವ ವೈಜ್ಞಾನಿಕ ಸಂಸ್ಥೆಗಳ ಜತೆ ಒಡಂಬಡಿಕೆ ಮಾಡಿಕೊಂಡು ತ್ವರಿತವಾಗಿ ಪರೀಕ್ಷೆಗಳ ಫಲಿತಾಂಶ ಪಡೆದು ವನ್ಯಜೀವಿಗಳಿಗೆ ಹೋಲಿಸಿ ವೈಜ್ಞಾನಿಕ ಉತ್ತರ ಕಂಡುಕೊಳ್ಳಬಹುದು ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ಸಚಿವ ಈಶ್ವರ್ ಖಂಡ್ರೆ ಅವರಿಗೆ ಸಂಜಯ್ ಗುಬ್ಬಿ ಪತ್ರ
- ‘ದಾಳಿ ಮಾಡಿದ ಪ್ರಾಣಿ ಪತ್ತೆಗೆ ಪ್ರಯೋಗಾಲಯ ಸಹಕಾರಿ’

ಸ್ಫೋಟ: ಶಂಕಿತನಿಗೆ ತುಮಕೂರಿನಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರಿನ ‘ದಿ ರಾಮೇಶ್ವರಂ ಕೆಫೆ’ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಆರೋಪಿಗಾಗಿ ನಗರದಲ್ಲಿ ಬುಧವಾರ ರಾತ್ರಿ ಪೊಲೀಸರು ಶೋಧ ನಡೆಸಿದರು.

ಬೆಂಗಳೂರಿನಿಂದ ಬಂದಿದ್ದ ಪೊಲೀಸರಿಗೆ ಜಿಲ್ಲೆಯ ಪೊಲೀಸರು ಸಾಥ್ ನೀಡಿದರು. ತುಮಕೂರು ರೈಲು ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಮಹಾನಗರ ಪಾಲಿಕೆ ಆವರಣ, ಮಂಡಿಪೇಟೆ ಸೇರಿದಂತೆ ನಗರದ ವಿವಿಧೆಡೆಗಳಲ್ಲಿ ಪರಿಶೀಲನೆ ನಡೆಸಿದರು. 28 ವಾಹನಗಳಲ್ಲಿ ತೆರಳಿರುವ ಪೊಲೀಸರು ವಿವಿಧೆಡೆ ಶೋಧ ನಡೆಸಿದರು.

ಬಾಂಬ್ ಸ್ಫೋಟದ ಶಂಕಿತ ಆರೋಪಿ ತುಮಕೂರಿನಲ್ಲಿ ಓಡಾಡಿದ ಶಂಕೆ ವ್ಯಕ್ತವಾಗಿದೆ. ಪೊಲೀಸರು ಸಿ.ಸಿ ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದರು.

ಎಫ್‌ಎಸ್‌ಎಲ್ ವರದಿ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ ಪ್ರಕರಣದ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಯನ್ನು ರಾಜ್ಯ ಸರ್ಕಾರ ಬಹಿರಂಗಪಡಿಸಬೇಕು’ ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಆಗ್ರಹಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಘೋಷಣೆ ಕೂಗಿದವರು ಯಾರೋ ಚೇಲಾಗಳು ಇರಬಹುದು ಅಂದುಕೊಂಡಿದ್ದೆವು. ಆದರೆ, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಹಲವು ನಾಯಕರನ್ನು ಆರೋಪಿಗಳು ತಬ್ಬಿಕೊಂಡು ನಡೆಯುತ್ತಿರುವ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಆರೋಪಿಗಳಿಗೂ ಕಾಂಗ್ರೆಸ್ ನಾಯಕರಿಗೂ ಅಪ್ಪುಗೆಯ ನಂಟು ಇದೆ ಎಂಬುದು ಈಗ ಗೊತ್ತಾಗಿದೆ’ ಎಂದರು.

‘ಈ ಪ್ರಕರಣದಲ್ಲಿ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಅವರಿಗೆ ಕಾಂಗ್ರೆಸ್ ನಾಯಕರ ಜತೆ ಅಪ್ಪುಗೆ ನಂಟು ಇರುವ ಕಾರಣಕ್ಕಾಗಿಯೇ ಎಫ್‌ಎಸ್‌ಎಲ್ ವರದಿಯನ್ನು ಬಿಡುಗಡೆ ಮಾಡಿಲ್ಲ ಎಂಬ ಅನುಮಾನ ಇದೆ. ತಕ್ಷಣವೇ ವರದಿಯನ್ನು ಬಹಿರಂಗಪಡಿಸಬೇಕು’ ಎಂದು ಒತ್ತಾಯಿಸಿದರು.

‘ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆಯನ್ನೇ ಕೂಗಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾದಿಸಿದ್ದರು. ಈಗ ವರದಿ ಸರ್ಕಾರದ ಬಳಿ ಇದ್ದರೂ ಬಹಿರಂಗಪಡಿಸಲು ಯಾವ ಅಡ್ಡಿ ಇದೆ’ ಎಂದು ಕೇಳಿದರು.

ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದ ಘಟನೆ ಕುರಿತು ರಾಜ್ಯದ ಒಬ್ಬೊಬ್ಬ ಸಚಿವರು ಒಂದೊಂದು ರೀತಿ ಮಾತನಾಡುತ್ತಿದ್ದಾರೆ. ಕೆಲವರು ಬಾಂಬ್ ಇರಿಸಿದ ವ್ಯಕ್ತಿಯ ಜತೆ ಬಿಜೆಪಿಗೆ ನಂಟು ಇದೆ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಘಟನೆಗಳು ನಡೆದಾಗ ಬಿಜೆಪಿಯನ್ನು ಟೀಕಿಸುವುದು ಕಾಂಗ್ರೆಸ್‌ನವರಿಗೆ ಇರುವ ಹಳೆಯ ರೋಗ ಎಂದು ದೂರಿದರು.

ನೇಮಕಾತಿ ಪತ್ರಕ್ಕಾಗಿ ಧರಣಿ ಸತ್ಯಾಗ್ರಹ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಎಲ್ಲರಿಗೂ ಸರ್ಕಾರ ನೇಮಕಾತಿ ಆದೇಶ ನೀಡಬೇಕು. ಸ್ಥಳ ನಿಯೋಜನೆ ಮಾಡಬೇಕು ಎಂದು ಒತ್ತಾಯಿಸಿ ಅಭ್ಯರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಸಹಾಯಕ ಪ್ರಾಧ್ಯಾಪಕರ 26 ವಿಷಯಗಳ 1,242 ಹುದ್ದೆಗಳಿಗೆ 2021 ರಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಳೆದ ವರ್ಷ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿತ್ತು. ಈ ಆಯ್ಕೆ ಪಟ್ಟಿಯಲ್ಲಿ ಒಟ್ಟು 1,208 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ವಿಶೇಷ ರಾಜ್ಯಪತ್ರದಲ್ಲೂ ಪ್ರಕಟಿಸಲಾಗಿದೆ. ಆದರೆ, ಇದುವರೆಗೂ ನೇಮಕಾತಿ ಆದೇಶ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಸದಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಗಾಗಿ ಉನ್ನತ ಶಿಕ್ಷಣ ಇಲಾಖೆ ಫೆ.26 ರಂದು ಹೊರಡಿಸಿದ ಅಧಿಕೃತ ಜ್ಞಾಪನಾ ಪತ್ರವನ್ನು ಒಂದೇ ದಿನದಲ್ಲಿ ಹಿಂಪಡೆದಿದೆ. ಪ್ರತ್ಯೇಕ ವೇಳಾಪಟ್ಟಿ ಪ್ರಕಟಿಸಲು ಸೂಚಿಸಿದೆ. ಇಲಾಖೆಯ ಅಧಿಕೃತ ಜ್ಞಾಪನ ಪತ್ರವನ್ನು ಹಿಂಪಡೆಯಲು ಕಾರಣವೇನು ಎಂದು ಪ್ರಶ್ನಿಸಿದರು.

2024ರ ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಗೂ ಮೊದಲೇ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮತ್ತೆ ವಿಳಂಬವಾಗುತ್ತದೆ. ಯಾವುದೇ ವಿವಾದ ಇಲ್ಲದ 908 ಅಭ್ಯರ್ಥಿಗಳಿಗೆ ತಕ್ಷಣ ಆದೇಶ ಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಶಿವರಾತ್ರಿ: ಆವಲಗುರ್ಕಿ ಈಶಾ ಯೋಗ ಕೇಂದ್ರದಲ್ಲಿ ನೇರ ಪ್ರಸಾರ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಮಿಳುನಾಡಿನ ಕೊಯಮತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ಮಹಾಶಿವರಾತ್ರಿ ಅಂಗವಾಗಿ ಮಾ.8ರ ಸಂಜೆ 6ರಿಂದ 9ರ ಬೆಳಗಿನ ಜಾವದವರೆಗೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ಅಲ್ಲಿ ನಡೆಯುವ ಕಾರ್ಯಕ್ರಮಗಳನ್ನು ತಾಲ್ಲೂಕಿನ ಆವಲಗುರ್ಕಿಯ ಈಶಾ ಯೋಗ ಕೇಂದ್ರದಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ.

ಈಶಾ ಯೋಗ ಕೇಂದ್ರದಲ್ಲಿರುವ ಗೋಶಾಲೆಯಲ್ಲಿ ಅಲಂಕೃತ ಎತ್ತುಗಳನ್ನೂ ನೋಡಬಹುದು.

ಕೊಯಮತ್ತೂರಿನ ಈಶಾ ಕೇಂದ್ರದಲ್ಲಿ ನಡೆಯುವ ಶಿವರಾತ್ರಿ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಭಾಗವಹಿಸುವರು. ಕಲಾವಿದರಾದ ಶಂಕರ್ ಮಹದೇವನ್, ಗುರುದಾಸ್ ಮಾನ್, ಪವನ್‌ದೀಪ್ ರಾಜನ್, ರತಿಜಿತ್ ಭಟ್ಟಾಚಾರ್ಯ, ಮಹಾಲಿಂಗಂ ಮತ್ತಿತರ ಗಾಯಕರು ಹಾಗೂ ಸೌಂಡ್ಸ್ ಆಫ್ ಈಶಾ ಮತ್ತು ಈಶಾ ಸಂಸ್ಕೃತಿಯಿಂದ ಆಕರ್ಷಕ ಪ್ರದರ್ಶನಗಳು ನಡೆಯಲಿವೆ ಎಂದು ಈಶಾ ಯೋಗ ಕೇಂದ್ರ ತಿಳಿಸಿದೆ.

‘ಎಚ್‌ಡಿಕೆ ಸ್ಪರ್ಧೆಗೆ ಹೆಚ್ಚಿದ ಒತ್ತಡ’

ಕೋಲಾರ: ಮಂಡ್ಯ, ತುಮಕೂರು ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಎಚ್.ಡಿ. ಕುಮಾರಸ್ವಾಮಿ ಸ್ಪರ್ಧೆಗೆ ಕಾರ್ಯಕರ್ತರು ಮತ್ತು ಮುಖಂಡರಿಂದ ಭಾರಿ ಒತ್ತಾಯ ಬರುತ್ತಿದೆ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಂಡ್ಯ, ಕೋಲಾರ, ಹಾಸನ, ತುಮಕೂರು ಸೇರಿದಂತೆ ಹಳೆ ಮೈಸೂರು ಪ್ರಾಂತ್ಯದಲ್ಲಿ ಜೆಡಿಎಸ್ ಅತಿ ಹೆಚ್ಚು ಮತ ಪಡೆದಿದೆ. ಹೀಗಾಗಿ, ಪಕ್ಷದ ವರಿಷ್ಠರು ಈ ಕ್ಷೇತ್ರ ಬಿಟ್ಟು ಕೊಡುವಂತೆ ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿಸಿದರು.

ಭಾರತೀಯ ಭಾಷಾ ಸಮ್ಮೇಳನದಲ್ಲಿ ಮಹೇಶ ಜೋಶಿ

‘ಅಳಿವಿನಂಚಿನಲ್ಲಿವೆ 2,845 ಭಾಷೆಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದಲ್ಲಿ 7,000ಕ್ಕೂ ಹೆಚ್ಚು ಭಾಷೆಗಳು ಬಳಕೆಯಲ್ಲಿವೆ. ನಿತ್ಯದ ಬದುಕಿನಲ್ಲಿ ಮಾತನಾಡುವವರ ಸಂಖ್ಯೆ ಇಳಿಮುಖವಾದ ಕಾರಣ 2,845 ಭಾಷೆಗಳು ನಶಿಸುತ್ತಿವೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ನೃಪತುಂಗ ವಿಶ್ವವಿದ್ಯಾಲಯ ಹಾಗೂ ಭಾರತೀಯ ಶಿಕ್ಷಣ ಮಂಡಲ ಬುಧವಾರ ಹಮ್ಮಿಕೊಂಡಿದ್ದ ಭಾರತೀಯ ಭಾಷಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

3,116 ಭಾಷೆಗಳಿಗೆ ಲಿಪಿಯೇ ಇಲ್ಲ. ಭಾರತದಲ್ಲಿ 445 ಪ್ರಮುಖ, 1,600 ಉಪ ಭಾಷೆಗಳಿದ್ದರೂ ಹಲವು ಭಾಷೆಗಳು ಕಣ್ಮರೆಯಾಗುತ್ತಿವೆ. ಪ್ರತಿಯೊಂದು ಭಾಷೆಯ ಜನರೂ ಮಾತೃಭಾಷಾ ಪ್ರೀತಿ ಬೆಳೆಸಿಕೊಂಡರೆ ಆಯಾ ಭಾಷೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬಹುದು. ಬಹುಕಾಲದವರೆಗೆ ಉಳಿಸಬಹುದು ಎಂದರು.

ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ ಭಾರತೀಯ ಭಾಷಾ ಸಮ್ಮೇಳನದಲ್ಲಿ ಆಂಟೋನಿಯೋ ಪುನೀತಾ, ಸತೀಶ್ ವಾಸು ಕೈಲಾಸ್, ಮಹೇಶ ಜೋಶಿ, ಶ್ರೀನಿವಾಸ ಎಸ್. ಬಳ್ಳಿ ಭಾಗವಹಿಸಿದರು —ಪ್ರಜಾವಾಣಿ ಚಿತ್ರ

ಕರ್ನಾಟಕದಲ್ಲಿ ಕನ್ನಡವನ್ನು ಶೇ 94ರಷ್ಟು ಜನರು ಬಳಸುತ್ತಿದ್ದಾರೆ. ಕನ್ನಡ ಭಾಷಾ ಸಾಹಿತ್ಯ, ಸಂಸ್ಕೃತಿ, ಜಾನಪದ ಸೇರಿದಂತೆ ವಿವಿಧ ಪ್ರಕಾರಗಳು ಭಾಷಾ ಶ್ರೀಮಂತಿಕೆಗೆ ಮೆರಗು ನೀಡಿವೆ ಎಂದು ಬಣ್ಣಿಸಿದರು.

ಪ್ರಾಸ್ತಾವಿಕ ಮಾತನ್ನಾಡಿದ ಭಾರತೀಯ ಶಿಕ್ಷಣ ಮಂಡಲದ ಕರ್ನಾಟಕ ಪ್ರಾಂತ ಸಂಚಾಲಕ ವೀರಣ್ಣ ಕಮ್ಮಾರ್, ‘ಭಾರತೀಯ ಭಾಷೆಗಳನ್ನು ಉತ್ತೇಜಿಸಲು ಹಲವು ಪ್ರಯತ್ನಗಳು ನಡೆದಿವೆ. ಯುವಜನರು ಹಾಗೂ ಜನಸಾಮಾನ್ಯರಲ್ಲಿ ಭಾರತೀಯ ಭಾಷೆಗಳನ್ನು ಮಹತ್ವದ ಸಾಧನಗಳನ್ನಾಗಿ ಮಾಡಲು ಆಧುನಿಕ ತಂತ್ರಜ್ಞಾನ, ಉದ್ಯೋಗದ ಜತೆ ಬೆಸೆಯಲಾಗುತ್ತಿದೆ. ಇದರಿಂದ ಆಯಾ ಭಾಷೆಯ ವಿದ್ಯಾರ್ಥಿಗಳು ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗುತ್ತದೆ’ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿ ಭಾರತೀಯ ಭಾಷಾ ಮಾಧ್ಯಮದ ಶಿಕ್ಷಣಕ್ಕೆ ಒತ್ತು ನೀಡಿದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಪ್ರಗತಿಯಲ್ಲಿ ಭಾಷೆಗಳು ಮಹತ್ವದ ಪಾತ್ರ ವಹಿಸಿವೆ. ಭವಿಷ್ಯದಲ್ಲಿ ಅಭಿವೃದ್ಧಿ ಹೊಂದಿದ ಭಾರತದ ಗುರಿ ಸಾಧಿಸಲು ಬುನಾದಿಯಾಗಿವೆ ಎಂದು ಹೇಳಿದರು.

ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಎಸ್. ಬಳ್ಳಿ, ಕುಲಸಚಿವೆ ಕೆ.ಆರ್.ಕವಿತಾ, ಜ್ಯೋತಿರ್ಗಮಯ ಸಂಸ್ಥೆಯ ಸ್ಥಾಪಕಿ ಆಂಟೋನಿಯೋ ಪುನೀತಾ, ಭಾರತೀಯ ಭಾಷಾ ಸಮ್ಮೇಳನದ ಸಂಚಾಲಕ ವಿ.ರಾಮಚಂದ್ರ, ಭಾರತೀಯ ಶಿಕ್ಷಣ ಮಂಡಲದ ಅಧ್ಯಕ್ಷ ಸತೀಶ್ ವಾಸು ಕೈಲಾಸ್ ಉಪಸ್ಥಿತರಿದ್ದರು.

ಮುಂಬೈ ರೇಸ್

ಬೇಬಿ ಬಝೂಕ ಗೆಲ್ಲುವ ನಿರೀಕ್ಷೆ

ರಾಜ್ ಪಿಪ್ಲಾ ಟ್ರೋಫಿ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬೇಬಿ ಬಝೂಕ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚಾಟ್ 1, ಆಲ್ಫಾ ಡೊಮಿನೊ 2, ಮಿದಾಸ್ ಟಚ್ 5
2ನೇ ರೇಸ್: ರೈಸ್ ದಿ ಸ್ಟೇಕ್ಸ್ 3, ಸ್ಯಾಂಟಿಸಿಮೊ 2, ರೀಡಬಲ್ 1
3ನೇ ರೇಸ್: ಬೇಬಿ ಬಝೂಕ 4, ಸೆಲ್ಲಿನಿ 2, ಅಮೆಜೊನಿಯ 3
4ನೇ ರೇಸ್: ಎಲ್ವೆನಾರ್ 2, ವೈಕಿಕಿ 4, ಮಿಸ್ಟಿ 6
5ನೇ ರೇಸ್: ಫಿಯರಿ ರೆಡ್ 4, ಎನ್‌ಲೈಟೆನ್ಡ್ 1, ಕ್ವೀನ್ಸ್ ಪ್ರೈಡ್ 2
6ನೇ ರೇಸ್: ನೀಲಿನ 4, ಡ್ಯಾಗರ್ಸ್ ಸ್ಟ್ರೈಕ್ 3, ಹೈ ಸ್ಪಿರಿಟ್ 7
7ನೇ ರೇಸ್: ರಿಕೊಷೆಟ್ 4, ಗುಡ್ ಡೀಡ್ಸ್ 2, ನೊಬಿಲಿಟಿ 3

ಉತ್ತಮ ಬೆಟ್: ರೈಸ್ ದಿ ಸ್ಟೇಕ್ಸ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ನಿಧನ ವಾರ್ತೆ

ಕೃಷ್ಣಪ್ಪ

ಬೆಂಗಳೂರು: ನಗರದ ಜಯನಗರದ ‘ಪ್ರಜಾವಾಣಿ’ ಪತ್ರಿಕೆಯ ಏಜೆಂಟ್ ಶ್ರೀನಿವಾಸಲು ಅವರ ತಂದೆ ಕೃಷ್ಣಪ್ಪ (88) ಅವರು ವಯೋಸಹಜ ಅನಾರೋಗ್ಯದಿಂದಾಗಿ ಬುಧವಾರ ಸಂಜೆ ನಿಧನರಾದರು.

ಮೃತರಿಗೆ ಪತ್ನಿ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ.

ಹೊಸೂರು ತಾಲ್ಲೂಕಿನ ದಾಸನಪುರ ಗ್ರಾಮದಲ್ಲಿ ಗುರುವಾರ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ದ್ವೀಪರಾಷ್ಟ್ರ ಮಾಲ್ಡೀವ್ಸ್ ರಾಜಕೀಯ ಆಯಾಮ ಪರಿಣಾಮಗಳು

ಮಾಲ್ಡೀವ್ಸ್ ಎಂಬ ಪುಟ್ಟ ದ್ವೀಪ ಪ್ರವಾಸಿಗಳ ಮೆಚ್ಚಿನ ತಾಣಗಳಲ್ಲೊಂದು. ಈಗ ಮಾಲ್ಡೀವ್ಸ್ ರಾಜಕೀಯ ಚಿಂತಕರ ಚಿತ್ತಕೆಡಿಸಿರುವುದು ಯಾಕೆ. ಇಲ್ಲಿದೆ ಸಮಗ್ರ ಮಾಹಿತಿ.

ಯು.ಟಿ.ಆಯಿಷಾ ಫರ್ಜಾನ

ದೇಶದ ಭೌಗೋಳಿಕ ಮತ್ತು ರಾಜಕೀಯ ತಲ್ಲಣಗಳು ಪ್ರಪಂಚದ ಬೃಹತ್ ಶಕ್ತಿಗಳಾದ ಮತ್ತು ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧದ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬುದನ್ನು ಅರಿಯೋಣ.

ಹಿಂದೂ ಮಹಾಸಾಗರದಲ್ಲಿ ಇರುವ ಮಾಲ್ಡೀವ್ಸ್ ಎಂಬ ದ್ವೀಪಸಮೂಹ ರಾಷ್ಟ್ರವು ಜಾಗತಿಕ ಶಕ್ತಿ ಭಾರತ ಮತ್ತು ಚೀನಾ ನಡುವಿನ ಸ್ಪರ್ಧೆಗೆ ಕಾರಣವಾಗಿದೆ.

ಇತ್ತೀಚಿನ ರಾಜಕೀಯ ಬೆಳವಣಿಗೆಗಳು ಅಂದರೆ ಮುಖ್ಯವಾಗಿ ಭಾರತ ಪರವಾಗಿದ್ದ ಮಾಲ್ಡೀವಿಯನ್ ಡೆಮಾಕ್ರಟಿಕ್ ಪಾರ್ಟಿ (ಎಂಡಿಪಿ)ಯಿಂದ, ಚೀನಾ ಪರವಾಗಿರುವ ಪ್ರೋಗ್ರೆಸಿವ್ ಪಾರ್ಟಿ ಆಫ್ ಮಾಲ್ಡೀವ್ಸ್ (ಪಿಪಿಎಂ) ಎಂಬ ರಾಜಕೀಯ ಪಕ್ಷದ ಕಡೆಗೆ ಈ ಪುಟ್ಟ ದೇಶದ ರಾಜಕೀಯವು ಪಲ್ಲಟಗೊಂಡಿರುವುದು ಭಾರತದಲ್ಲಿ ಚರ್ಚೆಗೆ ಕಾರಣವಾಗಿದೆ. ಇದಕ್ಕೆ ಸಂಬಂಧಿಸಿದ ಕಾರಣಗಳು ಈ ಕೆಳಗಿನಂತಿವೆ.

ರಾಜಕೀಯ ವಿಭಜನೆ, ಜಾಗತಿಕ ಪ್ರಭಾವ: ಮಾಲ್ಡೀವ್ಸ್‌ನ ಆಂತರಿಕ ರಾಜಕಾರಣದಲ್ಲಿ ಭಾರತಪರ ಮತ್ತು ಚೀನಾಪರ ಪಕ್ಷಗಳು ಎಂಬ ಸ್ಪಷ್ಟ ವಿಭಜನೆಯನ್ನು ಕಾಣಬಹುದು. ನವೆಂಬರ್ 2023ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಪಿಪಿಎಂನ ಮೊಹಮ್ಮದ್ ಮುಯಿಝು ಅವರ ಜಯವು ಚೀನಾಕ್ಕೆ ಹೆಚ್ಚು ಬೆಂಬಲ ನೀಡುವ ಸರ್ಕಾರಕ್ಕೆ ಅಲ್ಲಿನ ಜನರ ಬೆಂಬಲ ನೀಡಿದ್ದನ್ನು ಸೂಚಿಸುತ್ತದೆ. ಈ ಮೂಲಕ ರಾಜಕೀಯ ನಾಯಕತ್ವದ ಬದಲಾವಣೆಯು ಈ ದೇಶದಲ್ಲಿ ವಿದೇಶಾಂಗ ನೀತಿಯ ಬಗ್ಗೆ ಜನರ ಧೋರಣೆಯಲ್ಲಾಗಿರುವ ಪಲ್ಲಟವನ್ನೂ ಸೂಚಿಸುತ್ತದೆ.

ಚೀನಾದ ಪ್ರಭಾವ ಮತ್ತು ಆರ್ಥಿಕ ಚಟುವಟಿಕೆಗಳು: ಮಾಲ್ಡೀವ್ಸ್‌ನಲ್ಲಿ ಚೀನಾದ ಪ್ರಭಾವವು ಹೆಚ್ಚುತ್ತಲೇ ಬಂದಿದೆ. ಇದನ್ನು ಮೂಲ ಸೌಕರ್ಯ ಯೋಜನೆಗಳೂ ಸೇರಿ ಆರ್ಥಿಕ ಚಟುವಟಿಕೆಗಳಲ್ಲಿ ಕಾಣಬಹುದು. ಚೀನಾದ ಮಹತ್ವಾಕಾಂಕ್ಷೆಯ 'ಸಿಲ್ಕ್ ರೋಡ್' ಎಂಬ ವಿವಿಧೋದ್ದೇಶ ಯೋಜನೆಯಲ್ಲಿಯೂ ಮಾಲ್ಡೀವ್ಸ್ ಪಾಲುದಾರ ದೇಶವಾಗಿ ಸೇರಿದೆ. ಚೀನಾವು ಇಲ್ಲಿ ಅನುಸರಿಸುತ್ತಿರುವ 'ಸಮತೆಗಾಗಿ ಸಾಲ' ಧೋರಣೆಯು ಆತಂಕಕ್ಕೆ ಕಾರಣವಾಗಿದ್ದು, ಇದಕ್ಕೆ ಉದಾಹರಣೆಯಾಗಿ ಶ್ರೀಲಂಕಾದ ಹಂಬನ್‌ಟೋಟ ಬಂದರು ಯೋಜನೆಯನ್ನು ನೋಡಬಹುದು. ಚೀನಾ ಮಾಲ್ಡೀವ್ಸ್‌ನಲ್ಲಿ ಮಾಡಹೊರಟಿರುವ ಆರ್ಥಿಕ ಚಟುವಟಿಕೆಗಳಲ್ಲಿ ಮೂಲಸೌಕರ್ಯಗಳಲ್ಲಿ ಹೂಡಿಕೆಯೂ ಸೇರಿದ್ದು, ಇವು ದೀರ್ಘಕಾಲೀನ ಪ್ರಭಾವಗಳನ್ನು ಬೀರಬಹುದು.

• ನೆಲಕಚ್ಚಿದ ಶ್ರೀಸಾಮಾನ್ಯನ ಮೇಲೆ ಚಪ್ಪಡಿ

ಬೆಂಗಳೂರು, ಮಾರ್ಚ್ 6– ಬೆಲೆ ಏರಿಕೆ ಮತ್ತು ಕೇಂದ್ರದ ಕರಭಾರದಿಂದ ನೆಲಕಚ್ಚಿದ ಶ್ರೀಸಾಮಾನ್ಯನ ಮೇಲೆ ಚಪ್ಪಡಿ ಎಳೆಯುವ ಕರಾಳ ಕ್ರಮ ಬೆಲೆ ಏರಿಕೆಗೆ ಮತ್ತಷ್ಟು ಪೂರಕ. ಕೊಟ್ಟ ಭರವಸೆಗಳನ್ನೆಲ್ಲಾ ಗಾಳಿಗೆ ತೂರಿದ ವ್ಯವಸ್ಥೆಯ ಸ್ಪಷ್ಟ ಚಿತ್ರ. ರಾಜ್ಯದ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಅತ್ಯಧಿಕ ತೆರಿಗೆ (19 ಕೋಟಿ ರೂಪಾಯಿ) ಹೊರೆಯನ್ನೊಳಗೊಂಡ ಕರ್ನಾಟಕದ ಆಯವ್ಯಯದ ಬಗ್ಗೆ ಇಂದು ವಿಧಾನಸಭೆಯ ವಿರೋಧ ಪಕ್ಷದವರು ವ್ಯಕ್ತ ಮಾಡಿದ ಸಾಮಾನ್ಯ ಪ್ರತಿಕ್ರಿಯೆ ಇದು.

ನಾಡಿಗೆ ನೀರಿನ ದಾಹ, ರಾಜಕಾರಣಕ್ಕೆ ಅಧಿಕಾರದ ಬಗೆಗಿನ ಮೋಹ
ಎಲ್ಲವೂ ಚುನಾವಣೆಗಾಗಿ, ಚಲಾವಣೆಗಾಗಿ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಇಡೀ ನಾಡು ಬಿರುಬೇಸಿಗೆಯ ಝಳಕ್ಕೆ ಸಿಲುಕಿ ಬೆವರಿಳಿಸುತ್ತಿದೆ. ಎಲ್ಲೆಡೆ ಕೊಳವೆಬಾವಿಗಳ ನೀರು ಪಾತಾಳ ಕಂಡಿದೆ. ಅಣೆಕಟ್ಟುಗಳು, ಕೆರೆಕಟ್ಟೆಗಳು ಬರಿದಾಗಿವೆ. ಈ ವಿಕೋಪಕ್ಕೆ ಮಲೆನಾಡು, ಬಯಲುಸೀಮೆ, ಕರಾವಳಿ ಎಂಬ ಭೇದಭಾವವಿಲ್ಲ; ನಗರ-ಗ್ರಾಮ ಎಂಬ ತರತಮವೂ ಇಲ್ಲ. ನೀರು-ನೆಲ ನಂಬಿದ ರೈತರ ಗೋಳು ಹೇಳತೀರದು. ಜಮೀನುಗಳ ಬಾಯಾರಿಕೆ ಬದಿಗಿರಲಿ, ಜನ ಹಾಗೂ ಜಾನುವಾರುಗಳ ದಾಹ ತೀರಿಸಲಾದರೂ ನೀರಿನ ಲಭ್ಯತೆ ಎಲ್ಲಿದೆ? ಎಷ್ಟಿದೆ?

ದಿನಂಪ್ರತಿ ನೀರು ಸುರಿಸಬೇಕಾದ ಕೊಳಾಯಿಗಳು ವಾರಕ್ಕೊಮ್ಮೆ ಬಾಯಿ ಬಿಡುತ್ತಿವೆ. ಕೆಲವೆಡೆ ಎರಡು ವಾರ ಕಳೆದರೂ ನೀರಿನ ಸುಳಿವೇ ಇರುವುದಿಲ್ಲ. ಪರ್ಯಾಯವಾಗಿ ನೆರವಿಗೆ ಬರಬೇಕಾದ ಟ್ಯಾಂಕರ್ ನೀರಿನ ದರ ದುಪ್ಪಟ್ಟಾಗಿದೆ. ತುರ್ತಿಗೆ ಸಿಗುವುದೂ ಕಷ್ಟ.

ಮಾರ್ಚ್ ತಿಂಗಳಲ್ಲಿಯೇ ಆವರಿಸಿರುವ ಈ ಪರಿಯ ಜಲಕ್ಷಾಮದ ಗಂಭೀರ ಸ್ಥಿತಿ ಯಾರ ಅರಿವಿಗೂ ನಿಲುಕದಿರುವುದು ಆತಂಕಕಾರಿ ಸಂಗತಿ. ಮುಂಬಾಗಿಲಿಗೆ ಬಂದು ನಿಂತಿರುವ ಭಯಾನಕ ಬರಗಾಲದ ದಿನಗಳನ್ನು ಎದುರಿಸಲು ಕೂಡಲೇ ಮುಂಜಾಗ್ರತೆ ವಹಿಸದಿದ್ದರೆ ಪರಿಸ್ಥಿತಿ ಅಯೋಮಯ ಘಟ್ಟ ತಲುಪುವುದರಲ್ಲಿ ಅನುಮಾನವೇ ಇಲ್ಲ. ನಾಡಿನ ಜನರ ದೈನಂದಿನ ಬದುಕು ಹೀಗೆ ಹೈರಾಣಾಗಿ ಕುಸಿಯುತ್ತಿರುವಾಗ, ರಾಜಕಾರಣ ಸಂಪೂರ್ಣ ಚುನಾವಣಾ 'ಮೋಡ್'ನಲ್ಲಿ ಕುಣಿಯುತ್ತಿದೆ. ಚುನಾವಣೆಯ ಲೆಕ್ಕಾಚಾರ, ಅಭ್ಯರ್ಥಿಗಳ ಆಯ್ಕೆ, ಪಕ್ಷಾಂತರ, ಪರಸ್ಪರ ಕೆಸರೆರಚಾಟ, ಹೊಂದಾಣಿಕೆಯ ಮೇಲಾಟ ಮತ್ತು ಅನುದಾನದ ಚೌಕಾಸಿಯಲ್ಲಿ ಮುಳುಗಿಹೋಗಿದೆ. ಆ ಪಕ್ಷವನ್ನೋ ಈ ಪಕ್ಷವನ್ನೋ ವಹಿಸಿಕೊಂಡು ದಿನಂಪ್ರತಿ ತಮ್ಮ ಪ್ರತಿಭೆಯನ್ನೆಲ್ಲಾ ಪೋಲು ಮಾಡುತ್ತಾ ಅಥವಾ ನಗದು ಮಾಡಿಕೊಳ್ಳುತ್ತಾ ರಾಜಕೀಯ ವಕ್ತಾರಿಕೆಯಲ್ಲಿ ನಿರತರಾಗಿದ್ದಾರೆ ನಮ್ಮ ಕೆಲವು ಸಾಹಿತಿಗಳು, ಪತ್ರಕರ್ತರು ಮತ್ತು ಚಿಂತಕರು.

ಚುನಾವಣೆ ಗೆಲ್ಲಲು, ಗೆದ್ದ ನಂತರ ಮೆಲ್ಲಲು ಎಲ್ಲದಕ್ಕೂ ತಯಾರಾದಂತೆ ತೋರುವ ಸಮಕಾಲೀನ ರಾಜಕಾರಣ ಯಾವುದಕ್ಕೂ ಹೇಸುವಂತೆ ಕಾಣುವುದಿಲ್ಲ. ಅಧಿಕಾರ ರಾಜಕಾರಣದಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರ ನಾಲಗೆಗೆ ದಿನಕ್ಕೊಂದು ರುಚಿಕಟ್ಟಾದ ವಿವಾದ ಬೇಕು, ಅದರ ಸವಿಯನ್ನು ಅಗಿದು ಮುಗಿಸುವುದರೊಳಗೆ ಮತ್ತೊಂದು ಆಹಾರ ಸಿದ್ಧವಾಗಿರಬೇಕು, ಅಷ್ಟೇ. ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣ ಸಾಮಾನ್ಯವಾದುದಲ್ಲ. ಪೊಲೀಸ್ ಇಲಾಖೆಯ ಅತ್ಯಂತ ದಕ್ಷ ತಂಡದಿಂದ ಘಟನೆಯ ಬುಡಮೂಲ ತನಿಖೆ ನಡೆದು ದುಷ್ಕರ್ಮಿಗಳಿಗೆ ಶಿಕ್ಷೆ ಆಗಬೇಕಾದುದು ಸಹಜ ಕಾನೂನು ಪ್ರಕ್ರಿಯೆ. ಆದರೆ ಅದು ಆಗುವುದಕ್ಕೆ ರಾಜಕಾರಣ ಸುಲಭವಾಗಿ ಬಿಡುವುದಿಲ್ಲ.

ಘಟನೆ ನಡೆದ ದಿನವೇ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಕಾಂಗ್ರೆಸ್ ನೇತೃತ್ವದ ಸರ್ಕಾರದ ಓಲೈಕೆ ರಾಜಕಾರಣದಿಂದಲೇ ಬಾಂಬ್ ಸ್ಫೋಟ ನಡೆದಿದೆ' ಎಂದು ಖಚಿತ ದನಿಯಲ್ಲಿ ಘೋಷಿಸುತ್ತಾರೆ. 'ಸ್ಫೋಟ ಪ್ರಕರಣದ ಹಿಂದೆ ದೊಡ್ಡ ಷಡ್ಯಂತ್ರ ಅಡಗಿದೆ. ರಾಜ್ಯ ಸರ್ಕಾರ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು' ಎಂದು ಒತ್ತಾಯಿಸುತ್ತಾರೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಇವರಿಬ್ಬರೂ ಈ ಹಿಂದೆ ಗೃಹ ಸಚಿವರಾಗಿ ಕಾರ್ಯ ನಿಭಾಯಿಸಿದವರು ಎಂಬುದು ಗಮನಾರ್ಹ.

ಕೃಷಿ ಸಚಿವ ಚಲುವರಾಯಸ್ವಾಮಿ ಅವರು, 'ಈ ಹಿಂದೆ ನಡೆದ ಹಲವು ಘಟನೆಗಳಲ್ಲಿ ಬಿಜೆಪಿಯವರ ಕೈವಾಡ ಇದೆ. ರಾಮೇಶ್ವರಂ ಕೆಫೆ ಬ್ಲಾಸ್ಟ್ ಪ್ರಕರಣದಲ್ಲಿ ಬಿಜೆಪಿಯವರ ಕೈವಾಡ ಇದೆ ಅಂತ ಹೇಳುವುದಿಲ್ಲ' ಎಂದು ಜಾಣತನದಿಂದ ಹೇಳುವ ಮೂಲಕ ಅನುಮಾನ ಹುಟ್ಟಿಸುತ್ತಾರೆ. ಇಂಥ ತೀರ್ಪುರೂಪದ ಪೂರ್ವಭಾವಿ ಹೇಳಿಕೆಗಳು ತನಿಖೆ ನಡೆಸುವ ಅಧಿಕಾರಿಗಳ ಮೇಲೆ ಬೀರಬಹುದಾದ ಪರಿಣಾಮದ ಬಗ್ಗೆ ಯೋಚಿಸುವ ವಿವೇಕ ರಾಜಕಾರಣಕ್ಕೆ ಇರಬೇಕಲ್ಲವೇ?

ಇನ್ನು, ರಾಜ್ಯಸಭೆಗೆ ಚುನಾಯಿತರಾದ ಸೈಯದ್ ನಾಸಿರ್ ಹುಸೇನ್ ಸಂಭ್ರಮಾಚರಣೆ ಸಂದರ್ಭದಲ್ಲಿ ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ಪ್ರಕರಣವನ್ನು ಈ ರಾಜಕಾರಣ ಬಳಸಿಕೊಳ್ಳುತ್ತಿರುವ ರೀತಿ ನೋಡಿದರೆ, ಚುನಾವಣಾ ಲಾಭಕೋರತನಕ್ಕೆ ಅಪಥ್ಯ ಎಂಬುದು ಯಾವುದೂ ಇಲ್ಲವೇನೋ ಅನ್ನಿಸುತ್ತದೆ. ಈ ವಿವಾದ ಹುಟ್ಟಿಕೊಂಡ ತಕ್ಷಣ ಮಾಧ್ಯಮಗಳಲ್ಲಿ ತೂರಾಡತೊಡಗಿದ ಆರೋಪ, ಪ್ರತ್ಯಾರೋಪ, ಸಮರ್ಥನೆಗಳು ಪ್ರಕರಣವನ್ನು ಎಷ್ಟು ಸಾಧ್ಯವೋ ಅಷ್ಟು ಗಲಿಬಿಲಿಗೊಳಿಸಲು ಶಕ್ತವಾದವು. ನಾಯಕಮಣಿಗಳ ಹೇಳಿಕೆಗಳು ಒಂದು ಬಗೆಯಾದರೆ, ಪಕ್ಷಗಳ ಹಿಂಬಾಲಕರು, ಬೆಂಬಲಿಗರು, ಮಾಧ್ಯಮ ನಿರ್ವಾಹಕರು ಜೋಡಿಸಿದ ಆಯಾಮಗಳು ಪ್ರಕರಣವನ್ನು ಎಲ್ಲೆಲ್ಲಿಗೋ ಎಳೆದೊಯ್ದವು. ಒಂದು ಹಂತದಲ್ಲಂತೂ ಸರ್ಕಾರವೇ ಬೆರಗಾಗುವಂತೆ ಖಾಸಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯೊಂದು ಬಿಡುಗಡೆಯಾಗಿ ಅಲ್ಲೋಲಕಲ್ಲೋಲ ಉಂಟುಮಾಡಿತು. ಈ ಸಂದರ್ಭದಲ್ಲಿ, ಸರ್ಕಾರ ನಡೆಸುವವರಿಗಿಂತ ಸರ್ಕಾರದ ಬಾಹ್ಯ ಸಮರ್ಥಕರ ಪಡೆ ಅತಿ ಹೆಚ್ಚು ಆಕ್ರಮಣಶೀಲವಾಗಿ ವರ್ತಿಸಿದ್ದು ವಿಶೇಷವಾಗಿತ್ತು.

ಅಂತಿಮವಾಗಿ ಅಧಿಕೃತ ಎಫ್‌ಎಸ್‌ಎಲ್ ವರದಿ ದೊರಕಿದ ನಂತರ ಸನ್ನಿವೇಶ ತಿರುವುಮುರುವು! ಸರ್ಕಾರದ ಸಮರ್ಥಕರ ಗಂಟಲು ಕಟ್ಟಿದಂತಾಗಿ ವಿರೋಧಿಗಳು ಆರ್ಭಟಿಸತೊಡಗಿದ್ದಾರೆ. ಇಲಾಖೆಯ ಅಧಿಕೃತ ವರದಿ ಅನ್ವಯ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದರೂ ಬಿಜೆಪಿಯ ದನಿ ತಗ್ಗಿಲ್ಲ. 'ರಾಜ್ಯಸಭೆಗೆ ಆಯ್ಕೆಯಾಗಿರುವ ನಾಸಿರ್ ಹುಸೇನ್ ಅವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಬೇಕು, ಈ ಪ್ರಕರಣ ಇತ್ಯರ್ಥ ಆಗುವವರೆಗೂ ಅವರು ರಾಜ್ಯಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಬಾರದು' ಎಂಬುದು ಬಿಜೆಪಿಯ ಒತ್ತಾಯ. ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ತಾನೇನೂ ಕಡಿಮೆಯಿಲ್ಲ ಎಂಬಂತೆ, 2022ರಲ್ಲಿ ಮಂಡ್ಯದಲ್ಲಿ ನಡೆದಿದ್ದ ಇಂಥದ್ದೇ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಪ್ರಕರಣದಲ್ಲಿ ಬಿಜೆಪಿಯ ಒಬ್ಬ ಕಾರ್ಯಕರ್ತನನ್ನು ಬಂಧನಕ್ಕೆ ಒಳಪಡಿಸಿದೆ.

ಅಷ್ಟಕ್ಕೂ ಈ ರೀತಿಯ ಘೋಷಣೆ ಕೂಗಿದವರನ್ನು ದೇಶದ್ರೋಹಿ ಎಂದು ಆರೋಪಿಸಿ ಕ್ರಮ ಕೈಗೊಳ್ಳುವ ಬಗೆಗೂ ವಿಭಿನ್ನ ಕಾನೂನಾತ್ಮಕ ವ್ಯಾಖ್ಯಾನಗಳಿವೆ. ಆದರೆ, ಇಲ್ಲಿ ಕಾನೂನಿನ ವ್ಯಾಖ್ಯಾನಗಳಿಗಿಂತಲೂ ಹೆಚ್ಚಾಗಿ ಸಾರ್ವಜನಿಕರ ವರ್ತನೆಗಳನ್ನು ಪ್ರಭಾವಿಸುವುದು ಭಾವನಾತ್ಮಕ ಸಂಗತಿಗಳೇ ಆಗಿರುತ್ತವೆ. ಅದಕ್ಕೆ ಒಂದು ಸಾಮಾಜಿಕ ಆಯಾಮವೂ ಇದೆ, ಐತಿಹಾಸಿಕ ಹಿನ್ನೆಲೆಯೂ ಇದೆ. ಇದು, ವಸ್ತುಸ್ಥಿತಿಯಲ್ಲಿ, ರಾಜಕಾರಣದ ಪರಿಭಾಷೆಯಲ್ಲಿ ಹೊರನೋಟಕ್ಕೆ ಕಂಡಷ್ಟು ಸರಳವಾಗಿಲ್ಲ. ಒಳಗೆ ಇಳಿದಷ್ಟೂ ಹಲವು ಆಯಾಮಗಳ ಸಂಕೀರ್ಣ ರೂಪದಲ್ಲಿ ಪ್ರತ್ಯಕ್ಷವಾಗುತ್ತದೆ.

ಕಾನೂನಿನ ವ್ಯಾಪ್ತಿಯಲ್ಲಿ, ರಾಜಕಾರಣದ ಪ್ರಾಂಗಣದಲ್ಲಿ ಈ ಪ್ರಕರಣ ಯಾವುದೇ ತೀರ್ಪು ಅಥವಾ ತಿರುವು ಪಡೆದುಕೊಳ್ಳಲಿ. ನಾಡಿನ ಸಂವೇದನಾಶೀಲ ಜೀವಗಳು ಪರಿಶೀಲಿಸಲೇಬೇಕಾದ ಬಹುಮುಖ್ಯ ಅಂಶವೊಂದು ಈ ಪ್ರಕರಣದಲ್ಲಿದೆ. ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ವಿಧಾನಸೌಧದಂತಹ ಕೇಂದ್ರಸ್ಥಾನದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗುವುದು ಸಾಮಾನ್ಯ ವಿಷಯವಲ್ಲ. ಆ ಗುಂಪಿನ ವ್ಯಕ್ತಿಗಳಿಗೆ ಅಂತಹ ಧೈರ್ಯವನ್ನೋ ಅಸಹನೆಯನ್ನೋ ಅವಿವೇಕವನ್ನೋ ಅಫೀಮನ್ನೋ ತುಂಬಿದ್ದು ಯಾರು, ಹೇಗೆ ಮತ್ತು ಯಾವಾಗ ಎಂಬ ಪ್ರಶ್ನೆಗಳು ಪುಟಿದೇಳುವುದು ಸಹಜ. ಇಂತಹ ಮನಃಸ್ಥಿತಿಯ ಹಿಂದಿನ ಕಾರಣಗಳನ್ನು ಗಂಭೀರ ಅವಲೋಕನಕ್ಕೆ ಒಳಪಡಿಸಲು ಮುಕ್ತ ವಾತಾವರಣ ಮತ್ತು ಪ್ರಾಮಾಣಿಕತೆ ಜೊತೆಗೆ ಗಟ್ಟಿ ಎದೆಗುಂಡಿಗೆಯೂ ಬೇಕು!

ಚುರುಮುರಿ

ಗಂಡಭೇರುಂಡ ಲಾಕೆಟ್!

• ತುರುವೇಕೆರೆ ಪ್ರಸಾದ್

'ಕ್ಷೇತ್ರದ ಜನ ಕಂಡ್ ಇಡಿಯಾಕೆ ನಮ್ ಶಾಸಕ್ರಿಗೆಲ್ಲಾ ಗಂಡಭೇರುಂಡ ಲಾಕೆಟ್ ಕೊಟ್ಟಿದ್ದು ಒಳ್ಳೇದಾಯ್ತಲ್ವಾ?' ಮಾತು ತೆಗೆದ ಗುದ್ಲಿಂಗ.

'ನಿನ್ ತಲೆ, ಕ್ಷೇತ್ರದ ಜನ ಕಂಡ್ ಇಡಿಯಾಕ್ ಅಲ್ಲಲೇ, ವಿಧಾನಸೌಧದಾಗೆ ಕಂಡ್ ಹಿಡಿಯಕ್ಕೆ ಕೊಟ್ಟಿರಾದು?' ತಿದ್ದಿದ ಮಾಲಿಂಗ.

'ಕೊಡಾದ್ ಕೊಟ್ಟವ್ರೆ ಗಿಳಿನೋ, ಶಾಂತಿ ಹಕ್ಕಿ ಪಾರಿವಾಳನೋ, ನವಿಲು, ಗರುಡ ಇಂಗೆ ಬೇರೆ ಯಾವ್ದಾರ ಪಕ್ಷಿ ಲಾಕೆಟ್ ಕೊಡಕಾಯ್ತಿತ್ತಿಲ್ವಾ?'

'ಅಂಗಲ್ಲಲೇ, ಗಂಡಭೇರುಂಡ ಅಂದ್ರೆ ತುಂಬಾ ಶಕ್ತಿಶಾಲಿ, ಪ್ರಭುತ್ವದ ಸಂಕೇತ ಕಣಲೇ!' ಎಂದ ಕಲ್ಲೇಶಿ.

'ನಂಗೇನೋ ಈ ಎರಡು ತಲೆ ಪಕ್ಷಿನ ಲಾಕೆಟ್ನಾಗೆ ಹಾಕಿದ್ದು ಸರಿ ಕಾಣ್ತಿಲ್ಲ ಕಣಲೇ' ಆಕ್ಷೇಪ ಎತ್ತಿದ ಚಿಕ್ಕೀರ.

'ನೋಡಪ್ಪಾ, ನಮ್ ರಾಜಕೀಯ ನಾಯಕ್ರುದು ಶಾನೆ ದ್ವಂದ್ವ ಇರ್ತದೆ. ಈಗ ನೋಡು, ಉದಾಹರಣೆಗೆ, ಎಲೆಕ್ಷನ್ಗೆ ಮುಂಚೆ ಈ ಕ್ಷೇತ್ರದಲ್ ನಿಂತ್ಕಳ್ಲಾ ಆ ಕ್ಷೇತ್ರದಲ್ಲಿ ನಿಂತ್ಕಳ್ಲಾ ಅನ್ನೋ ದ್ವಂದ್ವ ಇರ್ತದೆ'.

'ಊಂ ಕಣ್ಲಾ, ಆಮ್ಯಾಕೆ ವಿರೋಧ ಪಕ್ಷದಾಗೆ ಇರೋದು, ಆಡಳಿತ ಪಕ್ಷಕ್ಕೆ ಜೈ ಅನ್ನೋದು ನಡೀತನೇ ಇರ್ತದೆ. ಅವ್ರು ಎಲ್ ಅದಾರೆ ಅಂತ ಅವರಿಗೂ ಗೊತ್ತಿರಕಿಲ್ಲ, ವೋಟ್ ಹಾಕಿದ್ ಜನಕ್ಕೂ ಗೊತ್ತಿರಕಿಲ್ಲ'.

ಹೌದೇಳು, ಈ ಪರಿಷತ್ತು, ರಾಜ್ಯಸಭೆ ಅಂತ ವೋಟು ಒತ್ತುವಾಗೆಲ್ಲಾ ಭೂತಸಾಕ್ಷಿನಾ ಇಲ್ಲ ಆತ್ಮಸಾಕ್ಷಿನಾ ಅನ್ನೋ ದ್ವಂದ್ವ ಇವರಿಗೆ ಕಾಡ್ತದೆ'.

'ಆಮ್ಯಾಕೆ ಜನಸೇವೆಗೆ ಬರೀ ಜನಪ್ರತಿನಿಧಿ ಆದ್ರೆ ಸಾಕಾಗಕಿಲ್ಲ ಅಂತ ಮಂಡಳಿ, ನಿಗಮ ಅಂತ ಎಲ್ಲೆಲ್ಲಕ್ಕೆ ಕಾಲು ಆಕ್ಕಂಡಿರ್ತಾರೆ. ಅದಕ್ಕೇ ಗಂಡಭೇರುಂಡ ಲಾಕೆಟ್ ಕೊಟ್ಟಿರಾದೇ ಸೈ' ಎಂದ ಗುದ್ಲಿಂಗ.

'ಲೇಯ್, ಅದ್ರಾಗೆ ಚಿನ್ನ ಐತಂತೆ ಕಣ್ರಲಾ! ನಮ್ ಬ್ರಿಟನ್ ಪ್ರಧಾನಿ ಹೆಂಗಸ್ರು ಗಂಡಭೇರುಂಡ ಪೆಂಡೆಂಟ್ ಮಾಡಿಸ್ಕಂಡವ್ರಂತೆ. ನಮ್ ನಾಯಕರ ಹೆಂಡ್ತೀರೂ ನಮಗೂ ಚಿನ್ನದ ಗಂಡಭೇರುಂಡ ಮಾಡುಸ್ಕೊಡಿ ಅನ್ನಕಿಲ್ವಾ?'

'ನ್ಯಾಯ ಬಿಡು, ಮಾಡುಸ್ಕೊಡ್ಲೇಬೇಕು, ಇಲ್ಲ ಅಂದ್ರೆ ಸಾಹೇಬ್ರುನ್ನ ವಿಧಾನಸೌಧಕ್ ಬಿಟ್ರೂ ಮನೆ ಒಳಕ್ಕೆ ಬಿಡಂಗಿಲ್ಲ' ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು!

ಸಂಗತ

ಮೇಲ್ಮಟ್ಟದಲ್ಲೇ ಇರಲಿ ಮೇಲ್ಮನೆ

ಮೇಲ್ಮನೆಗಳಾದ ವಿಧಾನಪರಿಷತ್ ಹಾಗೂ ರಾಜ್ಯಸಭೆಯಲ್ಲಿ ಬುದ್ಧಿಜೀವಿಗಳು ಮತ್ತು ಪ್ರಜ್ಞಾವಂತರ ಬದಲು ರಾಜಕೀಯ ಪಕ್ಷಗಳ ಬೆಂಬಲಿಗರೇ ಕಣ್ಣಿಗೆ ಗೋಚರಿಸುತ್ತಾರೆ

• ರಾಜಕುಮಾರ ಕುಲಕರ್ಣಿ

ವಿಧಾನಪರಿಷತ್ತಿಗೆ ವಿವಿಧ ಕ್ಷೇತ್ರಗಳ ಪರಿಣತರು, ಬುದ್ಧಿಜೀವಿಗಳು ಮತ್ತು ಪ್ರಜ್ಞಾವಂತರನ್ನು ಆಯ್ಕೆ ಮಾಡುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದ ಎರಡು ಪತ್ರಗಳು (ವಾ.ವಾ., ಮಾರ್ಚ್ 1, 5) ಪ್ರಕಟವಾದವು. ತಮ್ಮ ನಡೆ- ನುಡಿಯಿಂದ ಸಾರ್ವಜನಿಕರ ಮನ ಗೆಲ್ಲಬೇಕು ಎಂಬುದಕ್ಕಿಂತ ಪಕ್ಷದ ವರಿಷ್ಠರನ್ನು ಮೆಚ್ಚಿಸಬೇಕೆಂಬ ಧೋರಣೆ ರಾಜಕಾರಣಿಗಳಲ್ಲಿ ಮೇಲುಗೈ ಸಾಧಿಸಿದೆ. ಆದಕಾರಣ, ಪ್ರಜ್ಞಾವಂತರ ಸದನವೆಂಬ ಹಿರಿಮೆಗೆ ಪಾತ್ರವಾದ ಮೇಲ್ಮನೆಯಲ್ಲಿ ಕೂಗಾಟ, ಕಿರುಚಾಟ, ನಿಂದನೆ, ತೊಡೆ ತಟ್ಟುವಂತಹ ಬೀದಿರಾಜಕಾರಣದ ವರ್ತನೆ ಪದೇಪದೇ ಪುನರಾವರ್ತನೆಯಾಗುತ್ತಿದೆ.

ಸದ್ದನ್ನೇ ತುಂಬ ನೆಚ್ಚಿಕೊಂಡ ರಾಜಕಾರಣಕ್ಕೆ ಮೌನದ ಪರಿಚಯವಿಲ್ಲ ಎಂದ ಯಶವಂತ ಚಿತ್ತಾಲರ ಮಾತು ಸತ್ಯಕ್ಕೆ ಹತ್ತಿರವಾಗಿದೆ.

ಮೇಲ್ಮನೆಗಳೆಂದು ಹಿರಿಮೆ ಗಳಿಸಿರುವ ರಾಜ್ಯಸಭೆ ಮತ್ತು ವಿಧಾನಪರಿಷತ್ತಿಗೆ ಕಲಾವಿದರು, ಸಾಹಿತಿಗಳು ಮತ್ತು ಚಿಂತಕರನ್ನು ಸದಸ್ಯರನ್ನಾಗಿ ಆಯ್ಕೆ ಮಾಡುವ ಪರಿಪಾಟ ಈ ಹಿಂದೆ ಚಾಲ್ತಿಯಲ್ಲಿ ಇತ್ತು. ಸರ್ಕಾರದ ನೀತಿ–ನಿಲುವುಗಳನ್ನು ನಿಕಷಕ್ಕೆ ಒಡ್ಡುವ ಹಾಗೂ ಸಮಾಜದ ಓರೆಕೋರೆಗಳನ್ನು ಎತ್ತಿ ತೋರಿಸುವ ಮಹತ್ವದ ಜವಾಬ್ದಾರಿ ಮೇಲ್ಮನೆಗೆ ಆಯ್ಕೆಯಾದ ಸದಸ್ಯರ ಮೇಲಿದೆ. ಸದ್ಯದ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಸದನದಲ್ಲಿ ತಮ್ಮ ಪಕ್ಷದ ನಡೆಯನ್ನು ಸಮರ್ಥಿಸಿಕೊಳ್ಳಲು ಕೂಗಾಡುವವರು, ಕಿರುಚಾಡುವವರು ಮತ್ತು ತೊಡೆ ತಟ್ಟುವವರನ್ನು ಮೇಲ್ಮನೆಗೆ ಆಯ್ಕೆ ಮಾಡುತ್ತಿವೆ.

ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾಗಿಯೂ ವಿಧಾನಪರಿಷತ್ತಿನಲ್ಲಿ ಸರ್ಕಾರದ ಅನೇಕ ಧೋರಣೆಗಳನ್ನು ಟೀಕಿಸುತ್ತಿದ್ದುದನ್ನು ರಾಜ್ಯಪಾಲರು ಆಕ್ಷೇಪಿಸಿದಾಗ, 'ನಾನು ನ್ಯಾಯನಿಷ್ಠುರಿ, ದಾಕ್ಷಿಣ್ಯ ಪರನಲ್ಲ' ಎನ್ನುವುದು ಅಂಬೇಡ್ಕರ್ ಅವರ ಪ್ರತಿಕ್ರಿಯೆಯಾಗಿತ್ತು. ಆದರೆ ಇಂದಿನ ರಾಜಕಾರಣದಲ್ಲಿ ವೈಯಕ್ತಿಕ ಹಿತಾಸಕ್ತಿ ಮುನ್ನೆಲೆಗೆ ಬಂದು ಸಮಾಜದ ಹಿತಾಸಕ್ತಿ ಹಿನ್ನೆಲೆಗೆ ಸರಿದಿದೆ. ಜೊತೆಗೆ ರಾಜಕೀಯ ಪಕ್ಷಗಳು ತಮ್ಮನ್ನು ಪ್ರಶ್ನಿಸುವುದನ್ನು ಮತ್ತು ವಿರೋಧಿಸುವುದನ್ನು ಸಹಿಸಲಾರವು. ಹೊಗಳಿಕೆ, ಮುಖಸ್ತುತಿ ಮತ್ತು ಓಲೈಕೆಯನ್ನು ಅವು ಇಚ್ಛಿಸುತ್ತಿವೆ.

ಭಾರತದ ರಾಜಕಾರಣದಲ್ಲಿನ ಮಹತ್ವದ ಪ್ರಕರಣವೊಂದು ಹೀಗಿದೆ: 1958ರಲ್ಲಿ ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದ ಅವಧಿಯಲ್ಲಿ ವಿಶ್ವಸಂಸ್ಥೆಯ ಮಹಾ ಅಧಿವೇಶನಕ್ಕೆ ತೆರಳುತ್ತಿದ್ದ ಭಾರತದ ನಿಯೋಗದಲ್ಲಿ ಅಟಲ್ ಬಿಹಾರಿ ವಾಜಪೇಯಿ ಸದಸ್ಯರಾಗಿದ್ದರು. ಆ ಸಂದರ್ಭ ವಾಜಪೇಯಿ ಅವರನ್ನು ವಿಶ್ವ ನಾಯಕರಿಗೆ ಪರಿಚಯಿಸುವಂತೆ ಅಮೆರಿಕದಲ್ಲಿ ಭಾರತದ ಕಾಯಂ ನಿಯೋಗದ ಅಧಿಕಾರಿಯೊಬ್ಬರಿಗೆ ನೆಹರೂ ಸೂಚಿಸಿದ್ದರು. ತಮ್ಮ ಕಟು ಟೀಕಾಕಾರರಾದ ವಾಜಪೇಯಿ ಅವರನ್ನು ವಿದೇಶಿ ಗಣ್ಯರಿಗೆ ಪರಿಚಯಿಸುವ ಸಂದರ್ಭಗಳಲ್ಲೆಲ್ಲ 'ಈ ತರುಣ ಮುಂದೊಂದು ದಿನ ಭಾರತದ ಪ್ರಧಾನಿಯಾಗುವುದು ಖಚಿತ' ಎಂದು ನೆಹರೂ ಹೇಳುತ್ತಿದ್ದ ಮಾತು ಇಂದಿಗೂ ಜನಮಾನಸದಲ್ಲಿ ಚಲಾವಣೆಯಲ್ಲಿದೆ. ಇಂಥದ್ದೊಂದು ನಡೆ ಇಂದು ಯಾವ ಪಕ್ಷದಲ್ಲೂ ಗೋಚರಿಸುತ್ತಿಲ್ಲ.

ಆಡಳಿತ ನಡೆಸುವ ಪಕ್ಷ ಬದಲಾದಾಗ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರು ಕೂಡ ಬದಲಾಗುವುದು ಒಂದು ಸಂಪ್ರದಾಯದಂತಾಗಿದೆ. ನಾಟಕ, ಸಿನಿಮಾ, ಸಾಹಿತ್ಯದಂಥ ಸಾಂಸ್ಕೃತಿಕ ಅಕಾಡೆಮಿಗಳಿಗೆ ಪ್ರಜ್ಞಾವಂತರ ಬದಲು ರಾಜಕೀಯ ಪಕ್ಷನಿಷ್ಠರನ್ನೇ ಹೆಚ್ಚಾಗಿ ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ನೇಮಕ ಮಾಡಲಾಗುತ್ತಿದೆ. ಈ ಹಿಂದೆ ಸಾಂಸ್ಕೃತಿಕ ಕ್ಷೇತ್ರಗಳ ಸಾಧಕರು ಅಕಾಡೆಮಿಗಳ ಅಧ್ಯಕ್ಷ ಅಥವಾ ಸದಸ್ಯರಾಗಿ ನಿಯುಕ್ತಿಗೊಂಡ ಕ್ಷಣದಿಂದಲೇ ಆಳುವ ಪಕ್ಷದಿಂದ ಅಂತರವನ್ನು ಕಾಯ್ದುಕೊಂಡು, ಸಂದರ್ಭ ಎದುರಾದಾಗಲೆಲ್ಲ ಪ್ರಭುತ್ವದ ಜನವಿರೋಧಿ ನಡೆಯನ್ನು ಖಂಡಿಸಿದ ಬಹಳಷ್ಟು ಉದಾಹರಣೆಗಳಿವೆ. ಈಗ ಕಲಾವಿದರು ಮತ್ತು ಸಾಹಿತಿಗಳು ಫುಲ್‌ಟೈಮ್ ರಾಜಕಾರಣಿಗಳಾಗಿ ಅಕಾಡೆಮಿಗಳ ಮಹತ್ವದ ಸ್ಥಾನಗಳನ್ನು ಅಲಂಕರಿಸುತ್ತಿರುವಾಗ, ಅವರಿಂದ ಸಮಾಜಹಿತದ ನಡೆಯನ್ನು ನಿರೀಕ್ಷಿಸುವುದು ಶುದ್ಧ ಮೂರ್ಖತನವಾಗುತ್ತದೆ.

ರಾಜಕಾರಣವು ವಿಶ್ವವಿದ್ಯಾಲಯಗಳ ಬೌದ್ಧಿಕ ವಲಯವನ್ನು ಕೂಡ ಮಲಿನಗೊಳಿಸಿದೆ. ಮುಕ್ತ ವಾತಾವರಣ, ಬೌದ್ಧಿಕ ಅನ್ವೇಷಣೆ, ಸಂಶೋಧನೆ, ಚರ್ಚೆ, ಸಂವಾದಗಳಿಗೆ ಅವಕಾಶ ಕಲ್ಪಿಸಿಕೊಡುವ ವಿಶ್ವವಿದ್ಯಾಲಯಗಳು ಒಂದು ಕಾಲದಲ್ಲಿ ಅತ್ಯುತ್ತಮ ರಾಜಕಾರಣಿಗಳನ್ನು ಸೃಷ್ಟಿಸಿವೆ. ವಿಶ್ವವಿದ್ಯಾಲಯಗಳ ಮಹತ್ವವನ್ನರಿತು ಆಯಾ ಅವಧಿಯ ಸರ್ಕಾರಗಳು ತಮ್ಮ ಪಕ್ಷಗಳ ಧೋರಣೆಯನ್ನು ಈ ಉನ್ನತ ಶಿಕ್ಷಣ ಕೇಂದ್ರಗಳ ಮೇಲೆ ಬಲವಂತವಾಗಿ ಹೇರುತ್ತಿವೆ.

ವಿಶ್ವವಿದ್ಯಾಲಯಗಳು, ಮೇಲ್ಮನೆಗಳು ಹಾಗೂ ಅಕಾಡೆಮಿಗಳು ತಮ್ಮ ಮೊದಲಿನ ಘನತೆ ಮತ್ತು ನೈತಿಕತೆಯನ್ನು ಉಳಿಸಿಕೊಂಡಿವೆಯೇ ಎನ್ನುವ ಪ್ರಶ್ನೆ ಎದುರಾಗುವುದು ಸಹಜ. ರಾಜಕೀಯ ಪಕ್ಷಗಳ ಮುಖವಾಣಿಯಾಗುವ ಮತ್ತು ಪ್ರಭುತ್ವದ ನಡೆಯನ್ನು ಎತ್ತಿ ಹಿಡಿಯುವ ಧಾವಂತದಲ್ಲಿರುವ ಬೌದ್ಧಿಕ ಮತ್ತು ಸಾಂಸ್ಕೃತಿಕ ವಲಯಗಳು ಸಮಾಜದ ಹಿತವನ್ನು ಕಡೆಗಣಿಸುವ ಸರ್ಕಾರ ಹಾಗೂ ಪಕ್ಷಗಳ ನಡೆಯನ್ನು ಪ್ರತಿಭಟಿಸುವ ಕಾವನ್ನು ಕಳೆದುಕೊಂಡಿವೆ. ಪ್ರಭುತ್ವ ಮತ್ತು ಪ್ರತಿಭಟನಕಾರರ ಚಹರೆ ಒಂದೇ ಆದಾಗ ಅಲ್ಲಿ ಪ್ರತಿಭಟನೆ ಮೂಲೆಗುಂಪಾಗುತ್ತದೆ. ಗೆದ್ದ ಪ್ರಭುತ್ವವು ಬಹುತ್ವದ ಚಹರೆಯನ್ನು ಅಳಿಸುತ್ತಾ ತನ್ನ ಚಹರೆಯನ್ನು ವಿಸ್ತರಿಸಿ ಬೆಳೆಯತೊಡಗುತ್ತದೆ.

ವಾಚಕರ ವಾಣಿ

ಕಾಡಿಗೆ ಬೆಂಕಿ: ಗಂಭೀರವಾಗಿ ಪರಿಗಣಿಸಿ

ನಾಡಿನಲ್ಲಿರುವ ಅಲ್ಪ ಪ್ರಮಾಣದ ಕಾಡಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚುತ್ತಿರುವುದು ಆತಂಕಕಾರಿಯಾದುದು. ನಾಡಿನ ಪ್ರಾಕೃತಿಕ ಸಂಪತ್ತಾದ ಬಿಳಿಗಿರಿರಂಗನ ಬೆಟ್ಟದ ಕಾಡಿಗೆ ಬೆಂಕಿ ಬಿದ್ದಿದೆ. ಇದೇ ರೀತಿ ರಾಜ್ಯದ ಪೂರ್ವದಲ್ಲಿನ ಘಟ್ಟ ಪ್ರದೇಶಗಳು, ಸಂರಕ್ಷಿತ ಹಾಗೂ ಇತರ ಅರಣ್ಯಗಳಿಗೂ ಬೆಂಕಿ ಬಿದ್ದಿದೆ. ಇದರಿಂದ ಗಿಡ ಮರಗಳು ಸುಟ್ಟು ಬೂದಿಯಾಗುವುದಲ್ಲದೆ ಕಾಡಿನಲ್ಲಿ ವಾಸಿಸುವ ಲಕ್ಷಾಂತರ ಜೀವರಾಶಿಗಳು ಅವಸಾನವನ್ನು ಹೊಂದುತ್ತವೆ. ಬೆಂಕಿಯಿಂದ ನಾಶವಾದ ಕಾಡು ಮತ್ತೆ ಬೆಳೆಯಲು ನೂರಾರು ವರ್ಷಗಳು ಬೇಕಾಗುತ್ತದೆ. ಪ್ರಾಕೃತಿಕ ಸಮತೋಲನದಲ್ಲಿ ಮಾನವನ ಉಳಿವಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಮುಂಗಾರಿನಲ್ಲಿ ಸ್ವತಃ ನಾನು ಬೀಜದುಂಡೆ ಮೂಲಕ ಕಾಡನ್ನು ಬೆಳೆಸಲು ಶ್ರಮಿಸುವ ಅದರಂಗಿ ಕಾಡು ಸಹ ಬೆಂಕಿಗೆ ದಹಿಸಿದೆ. ಕಾಡಂಚಿನ ಗ್ರಾಮಗಳ ಕೆಲವರ ಕಿಡಿಗೇಡಿತನದ ಜೊತೆಗೆ ಅರಣ್ಯ ಇಲಾಖೆ ಸಿಬ್ಬಂದಿಯ ನಿರ್ಲಕ್ಷ್ಯವೂ ಇದಕ್ಕೆ ಕಾರಣವಾಗಿದೆ. ಇಲಾಖೆಯು ಕಾಡಿಗೆ ಬೆಂಕಿ ಬೀಳುತ್ತಿರುವ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಶೀಘ್ರ ಅತ್ತ ಗಮನಹರಿಸಬೇಕು. ಬೆಂಕಿಯನ್ನು ತಡೆಗಟ್ಟುವ ಕ್ರಮಗಳಾದ ಬೆಂಕಿಯ ಗೆರೆ ಹಾಕುವುದು, ಕಂದಕ ನಿರ್ಮಾಣ, ಒಂದು ಕಡೆಯಿಂದ ಮತ್ತೊಂದು ಪ್ರದೇಶಕ್ಕೆ ಹರಡದಂತೆ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಅರಣ್ಯ ಸಿಬ್ಬಂದಿಯ ಗಸ್ತನ್ನು ಹೆಚ್ಚು ಮಾಡಲಿ. ಕಾಡಿಗೆ ಅತಿಕ್ರಮ ಪ್ರವೇಶ ಮತ್ತು ಮಳೆಗಾಲ ಬರುವವರೆಗೆ ಪ್ರವಾಸಿಗರ ಪ್ರವೇಶವನ್ನು ಕೂಡ ನಿಷೇಧಿಸಲಿ. ಭದ್ರತೆ ಹೆಚ್ಚಿಸಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಿ.

ರುದ್ರೇಶ್ ಅದರಂಗಿ, ಬೆಂಗಳೂರು

ಇಂಥ ಕುಕೃತ್ಯಗಳಿಗೆ ಕೊನೆ ಇಲ್ಲವೇ?

ವಿಶ್ವ ಪರ್ಯಟನೆ ಕೈಗೊಂಡಿದ್ದ ಸ್ಪೇನ್ ಮಹಿಳೆಯೊಬ್ಬರು ಜಾರ್ಖಂಡ್ ಬಳಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿದ್ದಾರೆ. ಅದೂ ಪ್ರಿಯಕರ ಜೊತೆಯಲ್ಲಿದ್ದೂ. ಒಂಟಿ ಮಹಿಳೆಯರಿಗೆ ಭಾರತ ಎಷ್ಟು ಸುರಕ್ಷಿತ? ಮೇರಾ ಭಾರತ್ ಮಹಾನ್ ಎನ್ನುತ್ತೇವೆ, ಸಾವಿರಾರು ವರ್ಷಗಳ ಸಂಸ್ಕೃತಿ ನಮ್ಮದು ಎನ್ನುತ್ತೇವೆ. ಆದರೆ ಇಂತಹ ಪ್ರಕರಣಗಳಿಂದ ವಿಶ್ವದಲ್ಲಿ ಭಾರತದ ಮಾನ ಏನಾಗುತ್ತದೆ? ನೈತಿಕತೆ ಇಲ್ಲದ, ನಶೆಯಲ್ಲಿರುವ ಜನ ಸರಿಹೋಗದ ವಿನಾ ಇಂಥ ಪ್ರಕರಣಗಳು ನಡೆಯುತ್ತಲೇ ಇರುತ್ತವೆ.

ಗುರು ಜಗಳೂರು, ಹರಿಹರ

ರೋಗಗ್ರಸ್ತ ಜಿಲ್ಲಾಸ್ಪತ್ರೆಗೆ ಚಿಕಿತ್ಸೆ ಕೊಡುವವರಾರು?

ಕೋಲಾರವು ಆರೋಗ್ಯ ಕ್ಷೇತ್ರದಲ್ಲೂ ಅತಿ ನಿರ್ಲಕ್ಷಿತ ಜಿಲ್ಲೆಯಾಗಿರುವುದು ಜಿಲ್ಲೆಯ ಜನರಲ್ಲಿ ಆತಂಕ ಹುಟ್ಟಿಸಿದೆ. ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯ ಸಾವು, ಅದಕ್ಕೆ ಸಂಬಂಧಿಸಿದ ಆರೋಪ ಮತ್ತು ಸ್ಪಷ್ಟನೆಗಳು ಏನೇ ಇರಲಿ, ಆಸ್ಪತ್ರೆಯು ಅವ್ಯವಸ್ಥೆಯ ಆಗರ ಆಗಿರುವುದನ್ನು ಮಾತ್ರ ಯಾರೂ ಅಲ್ಲಗಳೆಯಲಾರರು. ಇಂತಹ ಸ್ಥಿತಿ ಇರುವುದರಿಂದ ಜಿಲ್ಲೆಯ ಜನ ಅನಾರೋಗ್ಯಕ್ಕಿಂತ ಹೆಚ್ಚಾಗಿ ಆಸ್ಪತ್ರೆಯ ಸೇವೆ ಬಗ್ಗೆ ಭಯ ಬೀಳುವಂತಾಗಿದೆ. ಕೂಲಿ ಮಾಡಿ, ಸೊಪ್ಪುಸದೆ ಮಾರಿ ಜೀವನ ಸಾಗಿಸುತ್ತಿರುವವರು ಅನಾರೋಗ್ಯಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲಾಗದೆ ಜಿಲ್ಲಾಸ್ಪತ್ರೆಗೆ ಬರುತ್ತಾರೆ. ಆದರೆ ಇಲ್ಲಿ ನರಳುತ್ತಿರುವ ರೋಗಿಗಳಿಗೆ ಕೂರಲೂ ಸರಿಯಾದ ವ್ಯವಸ್ಥೆ ಇಲ್ಲ. ನಿಲ್ಲಿಸಿಯೇ ರಕ್ತಪರೀಕ್ಷೆ ಮಾಡುವ ಅಮಾನವೀಯ ದೃಶ್ಯ ಸಾಮಾನ್ಯ.

ಆಸ್ಪತ್ರೆಗೆ ಸಮೀಪದಲ್ಲೇ ಹತ್ತಾರು ಹಾಸ್ಟೆಲ್‌ಗಳಿವೆ. ಆದರೂ ಹೆಚ್ಚಿನ ವಿದ್ಯಾರ್ಥಿಗಳು ಆರೋಗ್ಯ ಸಮಸ್ಯೆ ಆದಾಗ ಈ ಆಸ್ಪತ್ರೆಗೆ ಹೋಗುವುದಿಲ್ಲ. ವಿದ್ಯಾರ್ಥಿನಿಯರು ಮುಟ್ಟಿನ ಸಮಸ್ಯೆ ಬಗ್ಗೆ ಹೇಳಿದರೆ, ಕೆಲವು ಸಿಬ್ಬಂದಿ ಅಸ್ಪೃಶ್ಯರಂತೆ ಕಾಣುತ್ತಾರೆ. ವಿದ್ಯಾರ್ಥಿನಿಯರಿಗೇ ಮುಜುಗರವಾಗುವಂತೆ, ಲಿಂಗ ಸೂಕ್ಷ್ಮತೆ ಇಲ್ಲದವರಂತೆ ವರ್ತಿಸುತ್ತಾರೆ. ಆರೋಗ್ಯವು ಮೂಲಭೂತ ಹಕ್ಕಾಗಿರುವುದರಿಂದ ಇಡೀ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರವೇ ನೇರವಾಗಿ ಕ್ರಮ ಕೈಗೊಳ್ಳಬೇಕು. ಎಲ್ಲಾ ಸಿಬ್ಬಂದಿಗೆ ಲಿಂಗ ಸಂವೇದನೆ ಕುರಿತು ಕಡ್ಡಾಯವಾಗಿ ತರಬೇತಿ ನೀಡಬೇಕು. ಅಗತ್ಯ ಸೌಲಭ್ಯಗಳನ್ನು ತುರ್ತಾಗಿ ಒದಗಿಸಬೇಕು. ತಾಯಿ, ಮಗು ಹಾಗೂ ರೋಗಿಗಳಿಗೆ ಭದ್ರತೆ, ಉತ್ತಮ ಸೇವೆ ಒದಗಿಸಬೇಕು.

ಅಂಕಿತ, ಗಂಗೋತ್ರಿ, ಭೂಮಿಕಾ, ಕೋಲಾರ

ಪ್ರಾಮಾಣಿಕತೆ ಮೆರೆದ ಪೋರ

ಸಮಾಜದಲ್ಲಿ ಪ್ರಾಮಾಣಿಕತೆ ಉಳಿದುಕೊಂಡಿರುವುದರ ಮಹತ್ವವನ್ನು ವಿವರಿಸಿರುವ ಡಾ. ಕೆ.ಎಸ್.ಪವಿತ್ರ ಅವರ ಲೇಖನವನ್ನು, ಇತ್ತೀಚೆಗೆ ನನಗಾದ ಅನುಭವವೊಂದು ಅನುಮೋದಿಸುವಂತಿದೆ. ಒಂದು ದಿನ ದ್ರಾಕ್ಷಿ ಹಣ್ಣು ಕೊಂಡ ನನಗೆ, ಮನೆಗೆ ಬರುವಷ್ಟರಲ್ಲಿ ಹಣ್ಣಿದ್ದ ಆ ಚೀಲವನ್ನು ಎಲ್ಲಿ ಬಿಟ್ಟೆ ಎಂಬುದೇ ನೆನಪಾಗಲಿಲ್ಲ. ಚೀಲ ಹೊಸತಾದ್ದರಿಂದ ಮಡದಿಗೆ ಅಸಮಾಧಾನವಾಗಿತ್ತು. ಮರುದಿನ ಮತ್ತೆ ದ್ರಾಕ್ಷಿ ಖರೀದಿಗೆ ತೆರಳಿದೆವು. ಅಂಗಡಿಯಲ್ಲಿ ನಾವು ಯಾವಾಗಲೂ ಹಣ್ಣು ಕೊಳ್ಳುತ್ತಿದ್ದ ಅಜ್ಜ ಇರಲಿಲ್ಲ. ಆತನಿಂದ ಕೊಳ್ಳುವಾಗ ನಾವು ಹಣ್ಣನ್ನು ಆರಿಸಬೇಕಾಗಿರಲಿಲ್ಲ, ಆತನೇ ಸೂಕ್ತವಾದುದನ್ನು ಕೊಡುತ್ತಿದ್ದ. ಆದರೆ, ಈ ಬಾರಿ ಅಲ್ಲಿ ಒಬ್ಬ ಬಾಲಕನಿದ್ದ. ಆತನೂ ಅಜ್ಜ ಕೊಡುವ ಹಾಗೆಯೇ ಸರಿಯಾದ ಹಣ್ಣನ್ನೇ ಆರಿಸಿಕೊಟ್ಟ. ಅದೇವೇಳೆ, ಅವನ ಅಂಗಡಿಯ ಮೂಲೆಯಲ್ಲಿ ಕಂಡ ಚೀಲದ ಬಗ್ಗೆ ವಿಚಾರಿಸಿದಾಗ, ಯಾರೋ ಬಿಟ್ಟುಹೋಗಿದ್ದು, ಅವರು ಬಂದು ಕೇಳಿದರೆ ಕೊಡಬೇಕೆಂದು ಕೂಡಿರುವುದಾಗಿ ಹೇಳಿದ. 'ನೀವು ಉಪಯೋಗಿಸಿಕೊಳ್ಳಬಹುದಿತ್ತು' ಎಂದಳು ನನ್ನ ಮಡದಿ. 'ಛೇ ಛೇ ನಾವು ನಮ್ಮದಲ್ಲದ ವಸ್ತುಗಳನ್ನು ಮುಟ್ಟುವುದಿಲ್ಲ' ಎಂದ ಹತ್ತು ವರ್ಷದ ಆ ಪೋರ! ಬಳಿಕ ಅದು ನಮ್ಮದೇ ಚೀಲ ಎಂದು ಮನವರಿಕೆ ಮಾಡಿಕೊಟ್ಟ ಬಳಿಕ ಅದನ್ನು ನಮಗೆ ಕೊಟ್ಟ. ಇದಲ್ಲವೇ ಪ್ರಾಮಾಣಿಕತೆ? ಆತ ಶಾಲೆಗೆ ಹೋಗುತ್ತಾನೋ ಮದರಸಾಕ್ಕೆ ಹೋಗುತ್ತಾನೋ ಗೊತ್ತಿಲ್ಲ. ದೇವರು ಅವನಿಗೆ ಆಯುರಾರೋಗ್ಯ ನೀಡಿ, ಈ ವಯಸ್ಸಿನಲ್ಲಿ ಇರುವ ಸದ್ಬುದ್ಧಿ ಸದಾ ಇರುವಂತೆ ರಕ್ಷಿಸಲಿ ಎಂದು ಬೇಡಿಕೊಂಡೆ.

ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏರುತ್ತಿದೆಯೇ ಉದ್ಯೋಗಾವಕಾಶ?

ಇಲ್ಲ ಎನ್ನುತ್ತಿದೆ ಪಿಎಫ್ ಅಂಕಿಅಂಶ



• ಜಯಸಿಂಹ ಆರ್.

ದೇಶದಲ್ಲಿ ನಿರುದ್ಯೋಗ ಕಡಿಮೆಯಾಗಿದೆ, ಉದ್ಯೋಗ ಸೃಷ್ಟಿ ಉತ್ತಮವಾಗಿದೆ ಎಂದು ಕೇಂದ್ರ ಸರ್ಕಾರವು ಪದೇ-ಪದೇ ಹೇಳಿದೆ. ಆದರೆ ದೇಶದಲ್ಲಿ ಹೊಸ ಉದ್ಯೋಗ ಸೃಷ್ಟಿಯ ವಾತಾವರಣ ಮೊದಲಿನಂತೆ ಇಲ್ಲ. ಮೊದಲಿನಂತೆ ಈಗ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ ಎನ್ನುತ್ತವೆ ಕಾರ್ಮಿಕರ ಭವಿಷ್ಯ ನಿಧಿಗೆ (ಪಿಎಫ್) ಸಂಬಂಧಿಸಿದ ದತ್ತಾಂಶಗಳು. ಉದ್ಯೋಗ ಸೃಷ್ಟಿ ಇರಲಿ, ಉದ್ಯೋಗ ನಷ್ಟದ ಪ್ರಮಾಣ ಏರಿಕೆಯಾಗುತ್ತಿದೆ ಎಂದು ಹೇಳುತ್ತಿವೆ ಕಾರ್ಮಿಕರ ಭವಿಷ್ಯ ನಿಧಿ ಕಚೇರಿ (ಇಪಿಎಫ್ಒ) ವಾರ್ಷಿಕ ವರದಿಗಳಲ್ಲಿನ ದತ್ತಾಂಶಗಳು.

ದೇಶದಲ್ಲಿ ಸಂಘಟಿತ ವಲಯದ ಉದ್ಯೋಗಗಳ ಸ್ಥಿತಿಗತಿಯಲ್ಲಿ ಆಗುವ ಬದಲಾವಣೆ ಪಿಎಫ್ ದತ್ತಾಂಶಗಳಲ್ಲಿ ಬಿಂಬಿತವಾಗುತ್ತದೆ. ಉದ್ಯೋಗಗಳ ಸಂಖ್ಯೆ ಏರಿಕೆಯಾದರೆ, ಪ್ರತಿ ತಿಂಗಳೂ ಚಂದಾ ಪಾವತಿಯಾಗುವ ಪಿಎಫ್ ಖಾತೆಗಳ ಸಂಖ್ಯೆ ಏರಿಕೆಯಾಗುತ್ತದೆ. ಅದು ಆರ್ಥಿಕ ಪ್ರಗತಿಯನ್ನು ತೋರಿಸುತ್ತದೆ. ಒಂದು ವೇಳೆ ಉದ್ಯೋಗಗಳ ಸಂಖ್ಯೆ ಇಳಿಕೆಯಾದರೆ, ಪ್ರತಿ ತಿಂಗಳೂ ಚಂದಾ ಪಾವತಿಯಾಗುವ ಪಿಎಫ್ ಖಾತೆಗಳ ಸಂಖ್ಯೆ ಇಳಿಕೆಯಾಗುತ್ತದೆ. ಈಚಿನ ಆರು ಆರ್ಥಿಕ ವರ್ಷಗಳಲ್ಲಿ ಸಕ್ರಿಯ ಖಾತೆಗಳ ಪ್ರಮಾಣ ಇಳಿಕೆಯಾಗುತ್ತಲೇ ಇದೆ. ಇದು ದೇಶದ ಆರ್ಥಿಕತೆ ಕುಂಟುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಇದಲ್ಲದೆ ಪ್ರತಿ ವರ್ಷ ಹೊಸದಾಗಿ ತೆರೆಯಲಾಗುತ್ತಿದ್ದ ಪಿಎಫ್ ಖಾತೆಗಳ ಸಂಖ್ಯೆಯಲ್ಲೂ ಇಳಿಕೆಯಾಗುತ್ತಿದೆ. ಹೊಸ ಖಾತೆಗಳ ಸಂಖ್ಯೆ ಇಳಿಕೆಯಾಗುತ್ತಿದೆ ಎಂಬುದು, ಹೊಸ ಉದ್ಯೋಗಗಳ ಸೃಷ್ಟಿ ಇಳಿಕೆಯಾಗುತ್ತಿದೆ ಎಂಬುದರ ಸೂಚಕವೂ ಹೌದು. ಇನ್ನೊಂದೆಡೆ ಚಂದಾ ಪಾವತಿ ನಿಲ್ಲುತ್ತಿರುವ ಪಿಎಫ್ ಖಾತೆಗಳ ಸಂಖ್ಯೆಯೂ ಪ್ರತಿ ವರ್ಷ ಏರಿಕೆಯಾಗುತ್ತಿದೆ. ಈ ಎಲ್ಲಾ ಅಂಶಗಳು ದೇಶದಲ್ಲಿ ಉದ್ಯೋಗಾವಕಾಶ ಕ್ಷೀಣಿಸುತ್ತಿದೆ ಮತ್ತು ಹೊಸ ಉದ್ಯೋಗಗಳ ಸೃಷ್ಟಿಯೂ ಇಳಿಕೆಯ ಹಾದಿಯಲ್ಲಿದೆ ಎಂಬುದನ್ನು ಹೇಳುತ್ತವೆ.

ಪಿಎಫ್ ಖಾತೆ ದೇಶದ ಸಂಘಟಿತ ವಲಯದ ಉದ್ಯೋಗಗಳ ಸ್ಥಿತಿಯ ಕತೆಯನ್ನಷ್ಟೇ ಹೇಳುತ್ತದೆ. ಅಸಂಘಟಿತ ವಲಯದಲ್ಲಿನ ಉದ್ಯೋಗಗಳು, ಸಣ್ಣ ಮಟ್ಟದ ಸ್ವಯಂ ಉದ್ಯೋಗಗಳ ಸ್ಥಿತಿಗತಿಯನ್ನು ಹೇಳುವುದಿಲ್ಲ.



ದೇಶದಲ್ಲಿ ಈಗ 30 ಕೋಟಿಗೂ ಹೆಚ್ಚು ಪಿಎಫ್ ಖಾತೆಗಳು ಇವೆ ಎಂದು ಅಂದಾಜಿಸಬಹುದು. ಏಕೆಂದರೆ 2022-23ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ 29.88 ಕೋಟಿ ಪಿಎಫ್ ಖಾತೆಗಳಲ್ಲಿ ಹಣವಿತ್ತು. ಆನಂತರದ ಅವಧಿಯಲ್ಲಿ ಹೊಸ ಖಾತೆಗಳು ಆರಂಭವಾಗಿರುವ ಕಾರಣ, ಹಣವಿರುವ ಖಾತೆಗಳ ಸಂಖ್ಯೆ 30 ಕೋಟಿ ದಾಟಿರಬಹುದು ಎಂದು ಅಂದಾಜಿಸಬಹುದು. ಈ ಬಗ್ಗೆ ಸರ್ಕಾರದ ಅಧಿಕೃತ ದತ್ತಾಂಶ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಹಣವಿರುವ ಪಿಎಫ್ ಖಾತೆಗಳೆಲ್ಲ ಸಕ್ರಿಯ ಖಾತೆಗಳಲ್ಲ. ವರ್ಷದಲ್ಲಿ ಒಮ್ಮೆಯಾದರೂ ಚಂದಾ ಪಾವತಿಯಾಗಿರುವ ಖಾತೆಯನ್ನಷ್ಟೇ ಸಕ್ರಿಯ ಖಾತೆ ಎಂದು ಪರಿಗಣಿಸಲಾಗುತ್ತದೆ. ಹೀಗೆ ಪ್ರತಿ ಆರ್ಥಿಕ ವರ್ಷದಲ್ಲಿ ವರ್ಷಕ್ಕೆ ಒಮ್ಮೆಯಾದರೂ ಚಂದಾ ಪಾವತಿಯಾದ ಖಾತೆಗಳ ಸರಾಸರಿ ಸಂಖ್ಯೆಯನ್ನು ಇಪಿಎಫ್ಒ ಲೆಕ್ಕಹಾಕುತ್ತದೆ. ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪ್ರತಿ ವರ್ಷದ ಆರ್ಥಿಕ ವರದಿಯೊಂದಿಗೆ ಬಿಡುಗಡೆ ಮಾಡುತ್ತದೆ. ಹೀಗೆ ಪ್ರತಿ ವರ್ಷ ಹಣವಿದ್ದ ಪಿಎಫ್ ಖಾತೆಗಳ ಸಂಖ್ಯೆಗೆ ಹೋಲಿಸಿದರೆ, ಚಂದಾ ಪಾವತಿಯಾಗುತ್ತಿರುವ ಖಾತೆಗಳ ಸಂಖ್ಯೆ ತೀರಾ ಕಡಿಮೆ ಇರುತ್ತದೆ. ಆದರೆ ಈಚಿನ ವರ್ಷಗಳಲ್ಲಿ ಅಂತಹ ಸಕ್ರಿಯ ಖಾತೆಗಳ ಪ್ರಮಾಣವೂ ಇಳಿಕೆ ಆಗುತ್ತಲೇ ಇದೆ. 2019-20ಕ್ಕೂ ಮುನ್ನ ಒಟ್ಟು ಖಾತೆಗಳಲ್ಲಿ ಸಕ್ರಿಯ ಖಾತೆಗಳ ಸರಾಸರಿ ಪ್ರಮಾಣ ಶೇ 20ಕ್ಕಿಂತಲೂ ಹೆಚ್ಚೇ ಇತ್ತು. ಆದರೆ 2019-20ರ ನಂತರ ಪ್ರತಿ ವರ್ಷವೂ ಈ ಪ್ರಮಾಣ ಇಳಿಕೆಯಾಗುತ್ತಲೇ ಬಂದಿದೆ. 2022-23ರಲ್ಲಿ ಈ ಪ್ರಮಾಣ ಸ್ವಲ್ಪ ಏರಿಕೆಯಾಗಿದೆಯಾದರೂ, ಈ ಹಿಂದಿನ ಮಟ್ಟವನ್ನು ತಲುಪಲು ಸಾಧ್ಯವಾಗಿಲ್ಲ.

2017-18ರಲ್ಲಿ ಇಂತಹ ಸಕ್ರಿಯ ಖಾತೆಗಳ ಪ್ರಮಾಣ ಶೇ 21.39ರಷ್ಟಿತ್ತು. ಇದು ಈ ಹಿಂದಿನ ಏಳು ಆರ್ಥಿಕ ವರ್ಷಗಳಲ್ಲೇ ಗರಿಷ್ಠ ಮಟ್ಟವಾಗಿತ್ತು. 2021-22ರಲ್ಲಿ ಇದು ಏಳು ವರ್ಷಗಳಲ್ಲೇ ಕನಿಷ್ಠಮಟ್ಟಕ್ಕೆ, ಅಂದರೆ ಶೇ 16.69ಕ್ಕೆ ಇಳಿಕೆಯಾಗಿತ್ತು. 2022-23ರಲ್ಲಿ ಶೇ 17.77ಕ್ಕೆ ಏರಿಕೆಯಾಗಿದೆ. ಆದರೆ 2017-18ಕ್ಕಿಂತ ಅದು ಕಡಿಮೆಯೇ ಇದೆ. ಹೀಗಾಗಿ ಈ ವರ್ಷಗಳಲ್ಲಿ ಈ ಮೊದಲಿನಂತೆ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ.

7.57 ಕೋಟಿ
ದೇಶದಲ್ಲಿ ಈಗ ಸಕ್ರಿಯವಾಗಿರುವ ಮತ್ತು ಚಂದಾ ಪಾವತಿಯಾಗುತ್ತಿರುವ ಪಿಎಫ್ ಖಾತೆಗಳ ಸಂಖ್ಯೆ

ಹೊಸ ಖಾತೆಗಳ ಸಂಖ್ಯೆ ಇಳಿಕೆ

ಪ್ರತಿ ವರ್ಷ ಹೊಸದಾಗಿ ಪಿಎಫ್ ಚಂದಾದಾರರಾಗುವ ಅಥವಾ ಪಿಎಫ್ ಖಾತೆ ತೆರೆಯುವವರ ಸಂಖ್ಯೆ ಇಳಿಕೆ ಆಗುತ್ತಲೇ ಇದೆ. 2017-18ನೇ ಆರ್ಥಿಕ ವರ್ಷದ ಸೆಪ್ಟೆಂಬರ್‌ಗಿಂತ ಮೊದಲು ಇಂತಹ ಮಾಹಿತಿಯನ್ನು ಇಪಿಎಫ್ಒ ವರ್ಗೀಕರಿಸುತ್ತಿರಲೂ ಇಲ್ಲ, ಬಹಿರಂಗಪಡಿಸುತ್ತಿರಲೂ ಇಲ್ಲ. 2017ರ ಸೆಪ್ಟೆಂಬರ್‌ನಿಂದ ಈ ಪದ್ಧತಿಯನ್ನು ಜಾರಿಗೆ ತಂದಿದೆ. ಈ ಪ್ರಕಾರ, ಈ ಹಿಂದಿನ ಆರು ಆರ್ಥಿಕ ವರ್ಷಗಳಲ್ಲಿ ಅತಿಹೆಚ್ಚು ಜನರು ಹೊಸದಾಗಿ ಪಿಎಫ್ ಖಾತೆ ತೆರೆದದ್ದು 2018-19ರಲ್ಲಿ. ಆ ಆರ್ಥಿಕ ವರ್ಷದಲ್ಲಿ ಒಟ್ಟು 1.39 ಕೋಟಿ ಹೊಸ ಪಿಎಫ್ ಖಾತೆಗಳು ಆರಂಭವಾಗಿದ್ದವು. 2018-19ನೇ ಸಾಲಿನ ನಂತರವೇ ದೇಶದಲ್ಲಿನ ಆರ್ಥಿಕ ಪ್ರಗತಿ ಕುಂಠಿತವಾಗಿತ್ತು. ಆನಂತರದ ಎಲ್ಲಾ ಆರ್ಥಿಕ ವರ್ಷಗಳಲ್ಲಿ ಹೊಸದಾಗಿ ತೆರೆಯಲಾದ ಪಿಎಫ್ ಖಾತೆಗಳ ಸಂಖ್ಯೆ ಇಳಿಕೆಯೇ ಆಗಿದೆ. ಕೋವಿಡ್ ಅವಧಿಯಲ್ಲಿ ಈ ಸಂಖ್ಯೆ ಕನಿಷ್ಠ ಮಟ್ಟಕ್ಕೆ ಇಳಿದಿತ್ತು. 2020-21ರಲ್ಲಿ ಹೊಸದಾಗಿ 85 ಲಕ್ಷ ಪಿಎಫ್ ಖಾತೆಗಳನ್ನಷ್ಟೇ ತೆರೆಯಲಾಗಿದೆ. 2022-23ರಲ್ಲಿ ಆರ್ಥಿಕ ಚಟುವಟಿಕೆಗಳು ಸುಧಾರಿಸಿದ ಕಾರಣ ಹೊಸ ಪಿಎಫ್ ಖಾತೆಗಳ ಸಂಖ್ಯೆಯಲ್ಲಿ ಏರಿಕೆಯಾಗಿತ್ತು. ಆದರೂ ಅದು 2018-19ನೇ ಸಾಲಿನಲ್ಲಿದ್ದ ಮಟ್ಟವನ್ನು ಮುಟ್ಟಲಿಲ್ಲ.

2023-24ನೇ ಆರ್ಥಿಕ ವರ್ಷದ ಡಿಸೆಂಬರ್ ಅಂತ್ಯದವರೆಗೆ (ಒಂಬತ್ತು ತಿಂಗಳಲ್ಲಿ) 74.4 ಲಕ್ಷ ಹೊಸ ಖಾತೆಗಳಷ್ಟೇ ಆರಂಭವಾಗಿವೆ. ಉಳಿದ ಮೂರು ತಿಂಗಳಲ್ಲಿ ಎಷ್ಟು ಖಾತೆಗಳು ಆರಂಭವಾಗಿವೆ ಮತ್ತು ಆರಂಭವಾಗಲಿವೆ ಎಂಬ ಮಾಹಿತಿ ಇನ್ನೂ ಬಿಡುಗಡೆಯಾಗಿಲ್ಲ. ದೇಶದಲ್ಲಿ ಉದ್ಯೋಗ ಸೃಷ್ಟಿಯು 2018-19ನೇ ಆರ್ಥಿಕ ವರ್ಷದ ಮಟ್ಟಕ್ಕೆ ಮರಳಿಲ್ಲ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.



ಆಧಾರ: ಇಪಿಎಫ್ಒ ವಾರ್ಷಿಕ ವರದಿಗಳು, ಇಪಿಎಫ್ಒ ಮಾಸಿಕ ಪೇರೋಲ್ ವರದಿಗಳು

ಪಿಎಫ್ ಖಾತೆ ಸ್ಥಗಿತಗೊಳಿಸಿದವರ ಸಂಖ್ಯೆ ಭಾರಿ ಏರಿಕೆ



ಹಿಂದಿನ ಆರು ಆರ್ಥಿಕ ವರ್ಷಗಳಲ್ಲಿ ಪ್ರತಿ ವರ್ಷ 1 ಕೋಟಿಗೂ ಹೆಚ್ಚು ಮಂದಿ ಪಿಎಫ್ ಖಾತೆಗಳನ್ನು ಸ್ಥಗಿತಗೊಳಿಸಿದ್ದಾರೆ ಅಥವಾ ತಮ್ಮ ಖಾತೆಗೆ ಚಂದಾ ಪಾವತಿಯನ್ನು ನಿಲ್ಲಿಸಿದ್ದಾರೆ. 2018ರ ಏಪ್ರಿಲ್ 1ರಿಂದ 2023ರ ಡಿಸೆಂಬರ್ 31ರವರೆಗೆ ಈ ರೀತಿ ಒಟ್ಟು 6.81 ಕೋಟಿ ಚಂದಾದಾರರು ಕಾರ್ಮಿಕರ ಭವಿಷ್ಯ ನಿಧಿ ಯೋಜನೆ ವ್ಯಾಪ್ತಿಯಿಂದ ಹೊರಗೆ ಉಳಿದಿದ್ದಾರೆ. ಈ ಕಾರ್ಮಿಕರ ಉದ್ಯೋಗ ನಷ್ಟವಾಗಿರಬೇಕು ಅಥವಾ ಅವರೇ ಕೆಲಸ ಬಿಟ್ಟಿರಬೇಕು. ಅಥವಾ ಅವರು ಬೇರೆ ಹೊಸ ಪಿಎಫ್ ಖಾತೆಯನ್ನು ಆರಂಭಿಸಿದ್ದಾರೆಯೇ ಎಂಬ ಮಾಹಿತಿ ಇಪಿಎಫ್ಒ ಬಳಿ ಇಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಹೀಗೆ ಪಾವತಿ ಸ್ಥಗಿತವಾದ ಖಾತೆಗಳ ಸಂಖ್ಯೆ ಈಚಿನ ವರ್ಷಗಳಲ್ಲಿ ಏರಿಕೆಯಾಗುತ್ತಲೇ ಇದೆ. ಈಚಿನ ಆರು ಆರ್ಥಿಕ ವರ್ಷಗಳಲ್ಲಿ 2022-23ರಲ್ಲೇ ಅತ್ಯಂತ ಗರಿಷ್ಠ ಪ್ರಮಾಣದ ಖಾತೆಗಳಿಗೆ ಚಂದಾ ಪಾವತಿ ಸ್ಥಗಿತವಾಗಿದೆ. 2023-24ನೇ ಸಾಲಿನ ಮೊದಲ ಮೂರು ತ್ರೈಮಾಸಿಕದಲ್ಲೇ 1 ಕೋಟಿಗೂ ಹೆಚ್ಚು ಖಾತೆಗಳಿಗೆ ಪಾವತಿ ಸ್ಥಗಿತವಾಗಿದೆ. ಒಟ್ಟಾರೆಯಾಗಿ ಈ ದತ್ತಾಂಶಗಳು ಉದ್ಯೋಗಾವಕಾಶ ಕಡಿಮೆಯಾಗುತ್ತಿದೆ ಮತ್ತು ಉದ್ಯೋಗನಷ್ಟ ಏರಿಕೆಯಾಗುತ್ತಿದೆ ಎಂಬುದನ್ನು ಸೂಚಿಸುತ್ತವೆ.

‘ಪರವಶ’ನಾದ ರವಿಚಂದ್ರನ್

ರವಿಚಂದ್ರನ್

ಕ್ರೇಜಿಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಪರವಶ’ ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸುಧೀಂದ್ರ ನಾಡಿಗರ್ ನಿರ್ದೇಶನದ ಚಿತ್ರಕ್ಕೆ ಅವ್ಯಕ್ತ ಸಿನಿಮಾಸ್ ಲಾಂಛನದಲ್ಲಿ ಹರೀಶ್ ಗೌಡ ಬಂಡವಾಳ ಹೂಡಿದ್ದಾರೆ.

‘ಹೊಸತಂಡದ ಜೊತೆಗೆ ಕೆಲಸ ಮಾಡಿರುವುದು ಖುಷಿಯಾಗಿದೆ. ನಾನು ಈತನಕ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೀನಿ. ನನ್ನ ಭಾಗದ ಚಿತ್ರೀಕರಣ ಮುಕ್ತಾಯವಾಗಿದೆ. ಈ ಸಿನಿಮಾದಲ್ಲಿ ನನಗೆ ‘ಘೋಸ್ಟ್ ಡಾಕ್ಟರ್’ ಪಾತ್ರ ಕೊಟ್ಟಿದ್ದಾರೆ. ನಿರ್ದೇಶಕ ಸುಧೀಂದ್ರ ನಾಡಿಗರ್ ಅವರ ನಿರ್ದೇಶನದ ಶೈಲಿ ಭಿನ್ನವಾಗಿದೆ. ನಿರ್ಮಾಪಕರಿಗೆ ಹಾಗೂ ಇಡೀ ತಂಡಕ್ಕೆ ಒಳ್ಳೆಯದಾಗಲಿ’ ಎಂದರು ಕ್ರೇಜಿಸ್ಟಾರ್ ರವಿಚಂದ್ರನ್.’ ಎಂದರು ರವಿಚಂದ್ರನ್.

‘ಚಿತ್ರೀಕರಣ ಮುಕ್ತಾಯದ ಹಂತದಲ್ಲಿದೆ. ಮಂಗಳೂರು, ಉಡುಪಿ, ಮಣಿಪಾಲ ಹಾಗೂ ಕುಂದಾಪುರದಲ್ಲಿ ಚಿತ್ರೀಕರಣ ಆಗಿದೆ. ಥ್ರಿಲ್ಲರ್, ಕೌಟುಂಬಿಕ ಹಾಗೂ ಪ್ರೇಮ ಕಥಾಹಂದರವುಳ್ಳ ಚಿತ್ರವಿದು’ ಎಂದು ಮಾಹಿತಿ ನೀಡಿದರು ನಿರ್ದೇಶಕರು.

ರಘು ಭಟ್, ಸೋನಾಲ್ ಮೊಂತೆರೊ, ಪವಿತ್ರಾ ಲೋಕೇಶ್, ರಾಜೇಶ್ ನಟರಂಗ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಆನಂದ್ ಮೀನಾಕ್ಷಿ ಛಾಯಾಚಿತ್ರಗ್ರಹಣವಿದೆ. ಈ ಚಿತ್ರದ ಹಾಡುಗಳನ್ನು ಪ್ರಮೋದ್ ಮರವಂತೆ ರಚಿಸಿದ್ದು, ಸಂಭಾಷಣೆಯನ್ನು ರಘು ನಿಡವಳ್ಳಿ ಬರೆದಿದ್ದಾರೆ.

ನಾಲ್ಕು ಭಾಷೆಗಳಿಗೆ ‘ಸರಳ ಪ್ರೇಮಕಥೆ’

ಸುನಿ, ವಿನಯ್ ರಾಜ್‌ಕುಮಾರ್, ನಿರ್ಮಾಪಕ ಮೈಸೂರು ರಮೇಶ್

ಸಿಂಪಲ್ ಸುನಿ ನಿರ್ದೇಶನದ, ವಿನಯ್ ರಾಜ್‌ಕುಮಾರ್ ನಟನೆಯ ‘ಒಂದು ಸರಳ ಪ್ರೇಮಕಥೆ’ ಚಿತ್ರಮಂದಿರಗಳಲ್ಲಿ 25 ದಿನ ಪೂರೈಸಿದ್ದು, ಶೀಘ್ರದಲ್ಲೇ ಒಟಿಟಿಯಲ್ಲಿ ಬಿಡುಗಡೆ ಆಗಲಿದೆ.

ಫೆ. 8ರಂದು ತೆರೆಕಂಡಿದ್ದ ಈ ಸಿನಿಮಾದಲ್ಲಿ ವಿನಯ್‌ಗೆ ಜೋಡಿಯಾಗಿ ಸ್ವತಿಷ್ಠ ಹಾಗೂ ಮಲ್ಲಿಕಾ ಸಿಂಗ್ ನಟಿಸಿದ್ದರು. ಇತ್ತೀಚೆಗೆ ನಡೆದ ಚಿತ್ರದ 25ನೇ ದಿನದ ಸಂಭ್ರಮಾಚರಣೆಯಲ್ಲಿ ಇತರೆ ಭಾಷೆಗಳಿಗೂ ಸಿನಿಮಾ ಡಬ್ ಆಗಿರುವುದರ ಕುರಿತು ಸಿಂಪಲ್ ಸುನಿ ಮಾಹಿತಿ ನೀಡಿದರು.

‘ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ ಸಿನಿಮಾದ ಯಶಸ್ಸನ್ನು 75 ದಿನಕ್ಕೆ ಆಚರಿಸಿದ್ದೆವು. ಇಂದು ಈ ಸಕ್ಸಸ್ ಎನ್ನುವುದರ ಅರ್ಥ ಬದಲಾಗಿದೆ. ಎಷ್ಟು ಜನ ಸಿನಿಮಾವನ್ನು ನೋಡಿದ್ದಾರೆ ಎನ್ನುವುದರ ಮೇಲೆ ಸಿನಿಮಾದ ಯಶಸ್ಸು ನಿಗದಿಯಾಗುತ್ತದೆ. ‘ಒಂದು ಸರಳ ಪ್ರೇಮಕಥೆ’ಯಿಂದ ರಿಟರ್ನ್ಸ್ ಬಂದಿದೆ. ಇದು ಖುಷಿಯ ವಿಚಾರ. ನಾಲ್ಕು ಭಾಷೆಗಳಿಗೆ ಡಬ್ ಆಗಿದೆ. ಆಯಾ ಭಾಷೆಯಲ್ಲಿ ಆಯಾ ಶೀರ್ಷಿಕೆಯಡಿಯೇ ಈ ಸಿನಿಮಾ ಒಟಿಟಿಯಲ್ಲಿ ನೇರವಾಗಿ ಬಿಡುಗಡೆ ಆಗಲಿದೆ’ ಎಂದು ಸುನಿ ಹೇಳಿದರು.

‘ಈ ಸಿನಿಮಾಗೆ ಜನರಿಂದ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಸಿನಿಮಾ 25 ದಿನವನ್ನು ಪೂರೈಸಿರುವುದು ಖುಷಿ ನೀಡಿದೆ. ಇದೊಂದು ಸಂಪೂರ್ಣ ಕೌಟುಂಬಿಕ ಮನರಂಜನಾ ಚಿತ್ರ. ಜನರು ನನ್ನನ್ನು, ನಿರ್ದೇಶನವನ್ನು, ಚಿತ್ರದ ಹಾಡುಗಳು ಹಾಗೂ ತಂತ್ರಜ್ಞರ ಕೆಲಸವನ್ನು ಮೆಚ್ಚಿದ್ದಾರೆ’ ಎಂದರು ವಿನಯ್ ರಾಜ್‌ಕುಮಾರ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

❌ **ಪೊಲೀಸ್** ಸಿಬ್ಬಂದಿಯೊಬ್ಬರು ನಡುರಸ್ತೆಯಲ್ಲಿ ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆ ವಿಡಿಯೊ ಜತೆಗೆ, ‘ನೋಡಿ ಟಿಎಂಸಿ ನಾಯಕ ಶಹಜಹಾನ್ ಶೇಖ್ ವಿರುದ್ಧ ದೂರು ನೀಡಿದ ಕಾರಣಕ್ಕೆ ಸಂದೇಶ್‌ಖಾಲಿ ಪೊಲೀಸರು ಆ ಮಹಿಳೆಯ ಮೇಲೆ ಹಲ್ಲೆ ನಡೆಸುತ್ತಿದ್ದಾರೆ’ ಎಂಬ ಸಂದೇಶ ಹಂಚಿಕೊಳ್ಳಲಾಗುತ್ತಿದೆ. ಜತೆಗೆ ಹಲವರು, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಆಡಳಿತ ನಡೆಸುತ್ತಿರುವ ವೈಖರಿ ಇದು. ಅಲ್ಲಿ ಅನ್ಯಾಯದ ವಿರುದ್ಧ ದನಿ ಎತ್ತಿದವರಿಗೆ ನೆಲೆಯೇ ಇಲ್ಲ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಇದು ತಿರುಚಲಾದ ಮಾಹಿತಿ.

✅ **ಪೊಲೀಸರು** ಹೀಗೆ ಹಲ್ಲೆ ನಡೆಸಿದ ವಿಡಿಯೊ ಪಶ್ಚಿಮ ಬಂಗಾಳದ್ದೇ ಆಗಿದೆ. ಆದರೆ ಆ ವಿಡಿಯೊಗೂ ಸಂದೇಶ್‌ಖಾಲಿಗೂ ಯಾವುದೇ ಸಂಬಂಧವಿಲ್ಲ. ಈ ವಿಡಿಯೊವನ್ನು 2020ರ ಏಪ್ರಿಲ್‌ನಲ್ಲಿ ಚಿತ್ರೀಕರಿಸಲಾಗಿತ್ತು. ಕೋವಿಡ್ ಅವಧಿಯಲ್ಲಿ ಪಶ್ಚಿಮ ಬಂಗಾಳದ ಬದೂರಿಯಾ ಪ್ರದೇಶದಲ್ಲಿ ಪಡಿತರ ವಿತರಣೆ ಸಂಬಂಧ ಘರ್ಷಣೆ ನಡೆದಿತ್ತು. ಆ ಸ್ಥಳದಲ್ಲಿದ್ದ ಪೊಲೀಸರು ಮತ್ತು ಸಾರ್ವಜನಿಕರ ಮಧ್ಯೆ ಜಟಾಪಟಿ ನಡೆದು, ಜನರು ಪ್ರತಿಭಟನೆ ನಡೆಸಿದ್ದರು. ಆ ಜನರ ಮೇಲೆ ಪೊಲಿಸರು ಲಾಠಿ ಪ್ರಹಾರ ನಡೆಸಿದ್ದರು. ಆ ವಿಡಿಯೊವನ್ನೇ ಈಗ ಸಂದೇಶ್‌ಖಾಲಿಯ ಘಟನೆ ಎಂದು ಸುಳ್ಳು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಗೌರವವನ್ನು ಗಳಿಸಿಕೊಳ್ಳಬೇಕು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದೂರಿನಲ್ಲಿ ಕ್ರೂರಿಯಾದ ರಾಜನೊಬ್ಬನಿದ್ದ. ತನ್ನನ್ನು ವಿರೋಧಿಸಿದವರಿಗೆ ಹಣ ಮತ್ತು ಅಧಿಕಾರದ ಬಲದಿಂದ ತೊಂದರೆ ಕೊಡುತ್ತಿದ್ದ. ಈ ಮೂರ್ಖನ ಸಹವಾಸ ಯಾರಿಗೆ ಬೇಕೆಂದು ಜನರು ಅವನನ್ನು ಎದುರು ಹಾಕಿಕೊಳ್ಳಲು ಹೋಗುತ್ತಿರಲಿಲ್ಲ. ಅದನ್ನೇ ಆತ ತಪ್ಪಾಗಿ ತಿಳಿದುಕೊಂಡು ಎಲ್ಲರೂ ತನ್ನನ್ನು ಬಹಳ ಗೌರವಿಸುತ್ತಾರೆಂದು ಗರ್ವ ಪಡುತ್ತಿದ್ದ.

ಆ ರಾಜನ ಹತ್ತಿರ ಒಂದು ನಾಯಿಯಿತ್ತು. ಅದನ್ನು ಕಂಡರೆ ಆತನಿಗೆ ಬಹಳ ಪ್ರೀತಿ. ವಿಹಾರಕ್ಕೆ ಹೋಗುವಾಗ ಆ ನಾಯಿಯನ್ನು ಕರೆದುಕೊಂಡು ಹೋಗುತ್ತಿದ್ದ. ಊಟ ಮಾಡುವಾಗಲೂ ಪಕ್ಕದಲ್ಲೇ, ದರ್ಬಾರು ನಡೆಸಬೇಕಾದರೂ ಜತೆಯಲ್ಲೇ... ಜನರಿಗೆ ಸಿಕ್ಕದ ವೈಭವ ಆ ನಾಯಿಯದಾಗಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದು ಆ ನಾಯಿ ಸತ್ತುಹೋಯಿತು. ದುಃಖಿತನಾದ ರಾಜ ನಾಯಿಯ ಶವಸಂಸ್ಕಾರಕ್ಕೆ ಭರ್ಜರಿ ಏರ್ಪಾಡು ಮಾಡಿದ. ಕಾರ್ಯಕ್ರಮದಲ್ಲಿ ರಾಜಧಾನಿಯ ಎಲ್ಲ ಜನರೂ ಹಾಜರಿದ್ದರು. ಅದನ್ನು ನೋಡಿ ರಾಜ, ‘ಅಬ್ಬಾ, ಜನರೆಲ್ಲ ನನ್ನನ್ನು ಎಷ್ಟು ಗೌರವಿಸುತ್ತಾರೆ, ನಾನೆಷ್ಟು ಜನಪ್ರಿಯ ಅರಸ’ ಎಂದು ಹೆಮ್ಮೆ ಪಟ್ಟ.

ಕೆಲವು ದಿನಗಳ ನಂತರ ಆ ರಾಜ ಕುದುರೆ ಸವಾರಿ ಮಾಡುವಾಗ ಬಿದ್ದು ಸಾವನ್ನಪ್ಪಿದ. ಆದರೆ ಅವನ ಅಂತಿಮ ಸಂಸ್ಕಾರದಲ್ಲಿ ಅರಮನೆಯ ಕೆಲವು ಜನರು ಮತ್ತು ಸೇವಕರನ್ನು ಬಿಟ್ಟರೆ ಬೇರೆ ಯಾರೊಬ್ಬರೂ ಭಾಗವಹಿಸಲಿಲ್ಲ.

ಈ ಪುಟ್ಟ ಕಥೆ ನೀಡುವ ಸಂದೇಶ ಅಮೂಲ್ಯವಾದದ್ದು. ಗೌರವವೆನ್ನುವುದು ಯೋಗ್ಯತೆಯಿಂದ ಗಳಿಸಬೇಕಾದುದು. ಅದನ್ನು ಸಂಪತ್ತಿನಿಂದಲೋ, ಅಧಿಕಾರದಿಂದಲೋ, ಒತ್ತಾಯದಿಂದಲೋ ಅಥವಾ ಹಿಂಸೆಯಿಂದಲೋ ಪಡೆಯಲಾಗದು. ಹೆದರಿಕೆಯಿಂದ ಜನರು ತೋರುವ ಸುಳ್ಳು ಗೌರವವನ್ನೇ ತಪ್ಪಾಗಿ ಅರ್ಥ ಮಾಡಿಕೊಂಡು ತಮ್ಮನ್ನು ತಾವು ಮಹಾನ್ ಎಂದುಕೊಳ್ಳುವ ಈ ಮೂರ್ಖ ರಾಜನಂತಹ ವ್ಯಕ್ತಿಗಳಿಗೇನು ಕಮ್ಮಿಯಿಲ್ಲ. ಏಕೆಂದರೆ ಗೌರವವೆನ್ನುವುದು ಖರೀದಿಸಬಹುದಾದ ವಸ್ತುವಲ್ಲ. ಸಂಪತ್ತು, ಅಧಿಕಾರದಿಂದ ಹೊಗಳಿಕೆಯನ್ನು ಪಡೆಯಬಹುದು, ತೋರಿಕೆಯ ಗೌರವವನ್ನೂ ಪಡೆಯಬಹುದು. ಆದರೆ ನಿಜವಾದ ಗೌರವ ಸಿಗುತ್ತದೆ ಎಂದು ಹೇಳಲಾಗದು.

ಹಣ, ಅಧಿಕಾರ ಇರಲಿ ಇಲ್ಲದಿರಲಿ ಸದಾ ತಾವು ಎತ್ತಿ ಹಿಡಿಯುವ ಮಾನವೀಯ ಮೌಲ್ಯಗಳಿಂದ, ಎದೆಯಲ್ಲಿ ಜಿನುಗುವ ಕರುಣೆಯಿಂದ, ಇತರರನ್ನೂ ತಮ್ಮಂತೆ ಕಾಣುವ ಮನೋಭಾವದಿಂದ, ನುಡಿದಂತೆ ನಡೆವ ಸ್ವಭಾವದಿಂದ, ತನ್ನನ್ನು ತಾನು ಹೊಗಳಿಕೊಳ್ಳದ ವ್ಯಕ್ತಿತ್ವದಿಂದ, ಸಮಾಜಮುಖಿ ಕೆಲಸಗಳಿಂದ, ಪ್ರಾಮಾಣಿಕತೆಯಿಂದ, ಇತರರ ಅಭಿಪ್ರಾಯ ಹಾಗೂ ಭಾವನೆಗಳನ್ನು ಗೌರವಿಸುವುದರಿಂದ, ಜವಾಬ್ದಾರಿಯನ್ನು ನಿರ್ವಹಿಸುವ ಗುಣದಿಂದ ಮತ್ತು ತಮ್ಮ ತಪ್ಪನ್ನು ಒಪ್ಪಿಕೊಳ್ಳುವ ದೊಡ್ಡತನದಂತಹ ಹಲವಾರು ಸಂಗತಿಗಳಿಂದ ಸಿಗುವ ಗೌರವ ನೈಜ ಗೌರವ. ಇಂತಹ ಗುಣಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸೋಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 7, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಾದಶಿ ಗಂ. 25-20 ನಕ್ಷತ್ರ: ಉತ್ತರಾಷಾಢ ಗಂ. 13-03 ಯೋಗ: ವರಿಯಾನ್ ಗಂ. 08-24 ನಂತರ ಪರಿಘ ಗಂ. 28-46 ಕರಣ: ಕೌಲವ ಗಂ. 14-51, ಕುಂಭ ಮಾಸದ 23 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1. ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-46 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 25 ಶಬನ್
ಅದೃಷ್ಟ ಸಂಖ್ಯೆ : 6, 12

ಮೇಷ: ಕಳೆದು ಹೋಗಿರಬಹುದೆಂದು ತಿಳಿದಿದ್ದ ದಾಖಲೆ ಪತ್ರಗಳು ಸಿಕ್ಕು ಮನಸ್ಸಿಗೆ ನೆಮ್ಮದಿ. ಇತರರಿಗೆ ನೀವೇನೆಂದು ತೋರಿಸಲು ಇಂದು ಸೂಕ್ತ ದಿನ. ಹೊಸ ವಾತಾವರಣಕ್ಕೆ ಮನೆಯವರೆಲ್ಲರೂ ಹೊಂದಿಕೊಳ್ಳಲು ಯತ್ನಿಸುವರು.

ವೃಷಭ: ಔಷಧಿ ಹಾಗೂ ರಾಸಾಯನಿಕ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಈ ದಿನ ಹರ್ಷದಾಯಕವಾಗಿರುತ್ತದೆ. ಕೆಲವು ಸೂಕ್ಷ್ಮ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಂಡು ಎಚ್ಚರಿಕೆಯಿಂದ ವರ್ತಿಸಿ.

ಮಿಥುನ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆ ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ಇನ್ನೊಬ್ಬರಿಗೆ ಸಹಾಯ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿರಿ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿದೆ.

ಕರ್ಕಾಟಕ: ರಸ್ತೆ ಗುತ್ತಿಗೆದಾರರಿಗೆ, ಮರ-ಮುಟ್ಟುಗಳ ಮತ್ತು ಕಲ್ಲಿನ ವ್ಯಾಪಾರ ಮಾಡುವವರು ತಮ್ಮ ಶ್ರಮದ ದುಪ್ಪಟ್ಟು ಸಂಪಾದನೆಯನ್ನು ಅಪೇಕ್ಷಿಸಬಹುದು. ನ್ಯಾಯಾಲಯದ ಮೊರೆ ಹೋಗುವಂಥ ಕೃತ್ಯಗಳು ನಡೆಯಲಿದೆ.

ಸಿಂಹ: ಸಿವಿಲ್ ಎಂಜಿನಿಯರ್‌ಗಳು ಯಾವುದೇ ಕೆಲಸ ಮಾಡಿದರೂ ಅದನ್ನು ವೈವಿಧ್ಯಮಯವಾಗಿ ಯೋಚಿಸಿ ಮಾಡುವುದು ಉತ್ತಮ. ಉದ್ಯೋಗದಲ್ಲಿ ಸಮಸ್ಯೆ ಕಂಡು ಬಂದರೂ ನಿವಾರಣೆಯಾಗುವುದು.

ಕನ್ಯಾ: ಕೃಷಿ ಉತ್ಪನ್ನಗಳ ಬೆಲೆ ಏರುವುದರಿಂದ ಸಾಲವನ್ನು ತೀರಿಸಿಕೊಳ್ಳುವ ಅವಕಾಶ ಒದಗುವುದು. ಸ್ನೇಹಿತರು ಆಲೋಚನೆಗಳನ್ನು ಗೌರವಿಸುವುದಲ್ಲದೆ ಸಲಹೆಗಳನ್ನು ಕೇಳಲಿದ್ದಾರೆ. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿರಿ.

ತುಲಾ: ಕಚೇರಿಯಲ್ಲಿ ಬೇಸರ ತರುವಂಥ ಘಟನೆಗಳು ನಡೆದರೂ ಧೃತಿಗೆಡದೆ, ನಾಳೆ ಎಂಬುದೊಂದಿದೆ ಎಂಬ ಆಶಾಭಾವನೆ ಇರಲಿ. ಸಕ್ರಿಯ ಹಾಗೂ ಕಾರ್ಯ ಮಗ್ನತೆಯ ದಿನವು ಇದಾಗಿದೆ. ವಾಹನ ಚಾಲನೆ ಮಾಡುವಾಗ ಜಾಗೃತರಾಗಿರಿ.

ವೃಶ್ಚಿಕ: ಮೇಲಧಿಕಾರಿಗಳ ವಿರುದ್ಧ ವಾದವನ್ನು ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿ ಹಾಗೆ ಮಾಡಿದಲ್ಲಿ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಆಶಾವಾದಿಗಳಾಗಿರುವಿರಿ.

ಧನು: ಹೆಚ್ಚಿನ ಕೆಲಸದ ಬಗ್ಗೆ ಪ್ರೀತಿ ಪಾತ್ರರೊಡನೆ ಸಮಾಲೋಚನೆಯನ್ನು ನಡೆಸುವಿರಿ. ಮದುವೆಯ ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳಲು ಓಡಾಟ ಹೆಚ್ಚುವುದು. ಧನಾಗಮನ ಹೆಚ್ಚಿದ್ದರೂ ಖರ್ಚಿನ ಪಟ್ಟಿ ದೊಡ್ಡದಿದೆ.

ಮಕರ: ಯೋಚಿಸಿದ ಶುಭ ಕಾರ್ಯಗಳಿಗೆ ಸಣ್ಣ-ಪುಟ್ಟ ವಿಘ್ನಗಳು ಎದುರಾಗಬಹುದು. ಆದರೆ, ಹೆದರುವ ಅವಶ್ಯಕತೆ ಇರುವುದಿಲ್ಲ. ಜೀವನದಲ್ಲಿ ಭಾರಿ ಬದಲಾವಣೆಯನ್ನು ಕಾಣಲಿದ್ದೀರಿ. ಉದರ ವ್ಯಾಧಿಗಳು ದೂರವಾಗುತ್ತದೆ.

ಕುಂಭ: ಸೃಜನಶೀಲತೆಗೆ ಉತ್ತಮ ವೇದಿಕೆ ಲಭಿಸಲಿದೆ. ಸಂಶೋಧನಾಕಾರರಿಗೆ, ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನ. ಕುಟುಂಬದಲ್ಲಿ ಶಾಂತಿ ನೆಮ್ಮದಿ ಇರುವುದು. ಮಕ್ಕಳ ಆರೋಗ್ಯವು ಸುಖಕರವಾಗಿರುತ್ತದೆ.

ಮೀನ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಈಶ್ವರನ ಕೃಪೆಯಿಂದ ಆರ್ಥಿಕ ಸ್ಥಿತಿಗತಿ ಇನ್ನಷ್ಟು ಉತ್ತಮಗೊಳ್ಳಲಿದೆ. ಯೋಗಾಭ್ಯಾಸದಿಂದ ಮನಸ್ಸಿಗೆ ಹಿತವೆನಿಸಲಿದೆ.

ಪದಬಂಧ 5613

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದುಸ್ತರದಲ್ಲೇ ಮಡಿಕೆ ಇದೆ! (2)
3.ವಿಧಿಯನ್ನು ಬರೆಯುವವನು (3)
5.ಮರದ ಹತ್ತಿರ ನಡೆದ ಯುದ್ಧ (3)
7.ಆನಾಂದಾನುಭವಕ್ಕೆ ಉಂಟಾದ ಅಡ್ಡಿ (4)
9.ಗೆಲುವ ಸಲುವಾಗಿಯೇ ಇಷ್ಟು ಸದರ! (3)
10.ಸರಸದ ಮಾತುಕತೆ (3)
11. ಯುದ್ಧಭೂಮಿ ಇಲ್ಲಿದೆ (4)
13.ಕಡಲು ಇಲ್ಲಿ ಕಾಣುತ್ತಿದೆ (3)
15.ಜರೂರಾಗಿ ಒಪ್ಪಿಸಿರುವ ಕಾಣಿಕೆ (3)
16.ಬಿದಿರಿನಿಂದ ಹೆಣೆದ ಬುಟ್ಟಿ (2)

ಮೇಲಿಂದ ಕೆಳಕ್ಕೆ
2.ಸರಕ್ಕನೆ ನೋಡಿದಾಗ ಅಸುರ ಕಾಣಿಸುತ್ತಿದ್ದಾನಲ್ಲಾ! (3)
3.ವರ ನೀಡಿದ ವಿಸ್ತಾರವಾದ ಹೇಳಿಕೆ (3)
4.ಕೊಳ್ಳೆ ಹೊಡೆಯುವುದೋಸ್ಕರ ಬಂದಿರುವ ಕಳ್ಳ! (3)
6.ಕಡೆದ ಮೊಸರು (3)
8.ಗಣಪತಿ ಚಿಕ್ಕದಾಗಿ ಬಂದಿದ್ದಾನೆ (3)
9.ಸರ ನೀಡಿದವಗೆ ತೋರಿದ ಮನ್ನಣೆ (3)
10.ಒಳ್ಳೆಯ ಮನೆತನ (3)
12.ಗಮನವಿಟ್ಟು ನೋಡಿದ ಆಕಾಶ (3)
13.ಊರು ಕೊನೆಗಿದ್ದಾಗ ಕೂಡಲೇ ಆಗಬೇಕಾದ್ದು! (3)
14.ವಂಧಿ ಮಾಗದರು ಪರಾಕು ಹೇಳಿದ್ದಕ್ಕೇ ಇಷ್ಟು ಸೊಕ್ಕು! (3)



5612ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸದಾಚಾರ 4.ನಗಾರಿ
5.ವಿರಾಡ್ರೂಪ 7.ಗಡಿಬಿಡಿ
8.ಸಹಜ 9.ತಿರುಪತಿ
12.ಕನ್ನಡಕ 14.ಪಾಮರ
15.ವಿರೇಚಕ

ಮೇಲಿಂದ ಕೆಳಕ್ಕೆ:
1.ಧನಮದ 2.ಸರಿಪಾಲು
3.ರವಿ 6.ಪಗಡಿ
7.ಗಜ 8.ಸತಿ
9.ತಿರುಕ 10.ನಳಪಾಕ
11.ಮನೋರಥ 13.ಕವಿ

ಸುಡೊಕು 5998

					7		1	
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5997 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು 408



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,356
ಇಂದಿನ ಅಂತ್ಯ	22,474
▲	117
ದಿನದ ಗರಿಷ್ಠ	22,497

ವಿನಿಮಯ ದರ

$ ಡಾಲರ್	82.83
£ ಪೌಂಡ್	105.47
€ ಯುರೊ	90.11
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹930 (930)
ಸೂರ್ಯಕಾಂತಿ (ರಿಫೈನ್ಡ್)	₹925 (920)
ಪಾಮೋಲಿನ್	₹902 (885)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹271-460

ದ್ವಿತಳಿ (ಬಿ.ವಿ) ₹286-555

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4 ₹164

ಆರ್‌ಎಸ್‌ಎಸ್-5 ₹159

ಗುಡ್ ಲಾಟ್ ₹147

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹13900
ಎಸಿ	₹7950
ಆರ್‌ಪಿ	₹13650
ಆರ್‌ಸಿ	₹7700

74 ಸಾವಿರ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಬುಧವಾರ ನಡೆದ ವಹಿವಾಟಿನಲ್ಲಿ ಮುಂಬೈ ಷೇರು ಸೂಚ್ಯಂಕ ಸೆನ್ಸೆಕ್ಸ್ 74 ಸಾವಿರ ಅಂಶಗಳ ಗಡಿ ದಾಟಿ, ಸಾರ್ವಕಾಲಿಕ ದಾಖಲೆ ಬರೆದಿದೆ.

ಬ್ಯಾಂಕ್ ಮತ್ತು ಐ.ಟಿ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಸೂಚ್ಯಂಕಗಳು ಏರಿಕೆ ಕಂಡಿವೆ. ಸೆನ್ಸೆಕ್ಸ್ 408 ಅಂಶ ಏರಿಕೆಯಾಗಿ 74,085ಕ್ಕೆ ಸ್ಥಿರಗೊಂಡಿದೆ. ದಿನದ ವಹಿವಾಟಿನ ವೇಳೆ 74,151ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 117 ಅಂಶ ಹೆಚ್ಚಳವಾಗಿ 22,474ಕ್ಕೆ ಕೊನೆಗೊಂಡಿತು.

ಜೆಎಂ ಫೈನಾನ್ಷಿಯಲ್ ಷೇರು ಇಳಿಕೆ: ಸಾಲ ನೀಡದಂತೆ ಜೆಎಂ ಫೈನಾನ್ಷಿಯಲ್ ಪ್ರಾಡಕ್ಟ್ಸ್ ಕಂಪನಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ವಿಧಿಸಿದ ಬೆನ್ನಲ್ಲೇ ಕಂಪನಿಯ ಷೇರಿನ ಮೌಲ್ಯ ಶೇ 11ರಷ್ಟು ಇಳಿಕೆ ಆಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಮೌಲ್ಯ ಶೇ 10.73 ಮತ್ತು ಶೇ 10.42 ಇಳಿಕೆಯಾಗಿದೆ. ಕಂಪನಿಯ ಮಾರುಕಟ್ಟೆ ಮೌಲ್ಯ ಒಂದೇ ದಿನ ₹979 ಕೋಟಿ ಕಡಿಮೆಯಾಗಿದೆ. ಒಟ್ಟು ಮಾರುಕಟ್ಟೆ ಮೌಲ್ಯ ₹8,149 ಕೋಟಿ ಆಗಿದೆ.

ಐಐಎಫ್‌ಎಲ್ ಫೈನಾನ್ಸ್ ಷೇರು ಕುಸಿತ: ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ಷೇರಿನ ಮೌಲ್ಯ ಶೇ 20ರಷ್ಟು ಕುಸಿದಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಕ್ರಮವಾಗಿ 52 ವಾರಗಳ ಕನಿಷ್ಠ ಮಟ್ಟವಾದ ₹382.80 ಮತ್ತು ₹382.20ಕ್ಕೆ ಮುಟ್ಟಿದೆ.

ಕಂಪನಿಯ ಸಾಲ ಮಂಜೂರಾತಿ, ಹರಾಜಿನ ವೇಳೆ ಚಿನ್ನದ ಶುದ್ಧತೆ, ನಿವ್ವಳ ತೂಕದ ಪರೀಕ್ಷೆಯನ್ನು ಪ್ರಮಾಣೀಕರಿಸುವಲ್ಲಿ ವ್ಯತ್ಯಾಸ ಕಂಡುಬಂದಿದೆ. ಹಾಗಾಗಿ, ಚಿನ್ನದ ಸಾಲ ಮಂಜೂರು ಮಾಡದಂತೆ ಆರ್‌ಬಿಐ ಸೂಚಿಸಿದೆ. ಇದರಿಂದ ಮಂಗಳವಾರವೂ ಕಂಪನಿಯ ಷೇರುಗಳ ಮೌಲ್ಯ ಶೇ 20ರಷ್ಟು ಕುಸಿದಿತ್ತು. ಕಂಪನಿಯ ಒಟ್ಟು ಮಾರುಕಟ್ಟೆ ಬಂಡವಾಳ ₹14,603 ಕೋಟಿ ಇದ್ದು, ಈ ಪೈಕಿ ಎರಡು ದಿನಗಳಲ್ಲಿ ₹8,395 ಕೋಟಿ ಕರಗಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-34000
ಕಾರ್ಕಳ	
ಹೊಸತು	25000-34500
ಹಳತು	30000-43500
ಕುಮಟ	
ಬೆಟ್ಟೆ	38709-43109
ಚಿಪ್ಪು	25019-28509
ಕೋಕ	16019-25509
ಫ್ಯಾಕ್ಟರಿ	10169-21319
ಹಳೆಚಾಲಿ	33019-36109
ಹೊಸಚಾಲಿ	30569-34001
ಪುತ್ತೂರು	
ಹೊಸತು	26500-34000
ಶಿವಮೊಗ್ಗ	
ಬೆಟ್ಟೆ	44119-54569
ಗೊರಬಲು	18009-33558
ರಾಶಿ	32366-48399
ಸರಕು	41000-81700
ಸಿದ್ದಾಪುರ	
ಬಿಳಿಗೋಟು	25209-29269
ಚಾಲಿ	35139-37239
ಕೋಕ	24099-29119
ಹೊಸಚಾಲಿ	30509-33599
ಕೆಂಪುಗೋಟು	28200-32689
ರಾಶಿ	42869-46699
ತಟ್ಟಿಬೆಟ್ಟೆ	38069-42109
ಶಿರಸಿ	
ಬೆಟ್ಟೆ	36202-45399
ಬಿಳಿಗೋಟು	22000-30606
ಚಾಲಿ	31099-34791
ಕೆಂಪುಗೋಟು	26131-35699
ರಾಶಿ	43698-46979

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹4000-4000
ತಿಪಟೂರು	₹8100-9405

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹300-1000

ಮುಂಬೈ ಧಾರಣೆ

ಶೇಂಗಾ

06-03-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	925 (920)
ಪಾಮ್ ವಾರದ ಡೆಲಿವರಿ	900 (883)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹64,300 (64,500)

ಬೆಳ್ಳಿ ಕೆ.ಜಿ ₹71,700 (72,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹಣಕ್ಕಾಗಿ ಸಕ್ಕರೆ ಕಾರ್ಖಾನೆಗಳಿಗೆ ರೈತರ ಅಲೆದಾಟ • ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹ

₹3,545 ಕೋಟಿ ಕಬ್ಬು ಬಿಲ್ ಬಾಕಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದಲ್ಲಿ ಕಬ್ಬು ನುರಿಸುವ ಹಂಗಾಮು ಪೂರ್ಣಗೊಳ್ಳುವ ಹಂತದಲ್ಲಿದ್ದರೂ ರೈತರಿಗೆ ಇನ್ನೂ ₹3,545 ಕೋಟಿ ಬಿಲ್ ಬಾಕಿ ಇದೆ. ಹಲವು ಕಾರ್ಖಾನೆಗಳಲ್ಲಿ ಡಿಸೆಂಬರ್ ತಿಂಗಳಿನಿಂದ ಬಿಲ್ ಪಾವತಿಸಿಲ್ಲ.

ರಾಜ್ಯದಲ್ಲಿನ 76 ಸಕ್ಕರೆ ಕಾರ್ಖಾನೆಗಳ ಪೈಕಿ ಮುಧೋಳದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ಆರಂಭ ಆಗಿಲ್ಲ. 75 ಕಾರ್ಖಾನೆಗಳಲ್ಲಿ 5.29 ಕೋಟಿ ಮೆಟ್ರಿಕ್ ಟನ್ ಕಬ್ಬು ನುರಿಸಿ, 46.68 ಲಕ್ಷ ಕ್ವಿಂಟಲ್ ಸಕ್ಕರೆ ಉತ್ಪಾದಿಸ ಲಾಗಿದೆ. ಕಳೆದ ವರ್ಷ 6.20 ಕೋಟಿ ಮೆಟ್ರಿಕ್ ಟನ್ ಕಬ್ಬು ಅರೆದು, 59.52 ಲಕ್ಷ ಕ್ವಿಂಟಲ್ ಸಕ್ಕರೆ ಉತ್ಪಾದಿಸಲಾಗಿತ್ತು.

14 ಸಹಕಾರಿ ಸಕ್ಕರೆ ಕಾರ್ಖಾನೆಗಳು ₹1,322 ಕೋಟಿ ಬಿಲ್ ಪಾವತಿಸಿದ್ದು, ₹622 ಕೋಟಿ ಬಾಕಿ ಉಳಿಸಿಕೊಂಡಿವೆ. ಲೀಸ್ ಆಧಾರದ ಮೇಲೆ ನೀಡಲಾದ 8 ಸಹಕಾರಿ ಸಕ್ಕರೆ ಕಾರ್ಖಾನೆಗಳು ₹1,101 ಕೋಟಿ ಬಿಲ್ ಪಾವತಿಸಿದ್ದು, ₹103 ಕೋಟಿ ಬಾಕಿ ಉಳಿಸಿಕೊಂಡಿವೆ.

ಖಾಸಗಿ ಕಂಪನಿಗಳ 52 ಸಕ್ಕರೆ ಕಾರ್ಖಾನೆಗಳು ₹11,963 ಕೋಟಿ ಬಿಲ್ ಪಾವತಿಸಿದ್ದು, ಇನ್ನೂ ₹2,819 ಕೋಟಿ ಬಿಲ್ ಪಾವತಿಸಬೇಕಿದೆ. ರಾಜ್ಯದಲ್ಲಿ 35ಕ್ಕೂ ಹೆಚ್ಚು ಕಾರ್ಖಾನೆಗಳು ಕಬ್ಬು ಅರೆಯುವಿಕೆ ನಿಲ್ಲಿಸಿವೆ. ಬಿಲ್ ಪಾವತಿಸಿಲ್ಲ.

‘ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) ಪ್ರಕಾರ, ಕಬ್ಬು ಪೂರೈಸಿದ 14 ದಿನಗಳಲ್ಲಿ ಬಿಲ್ ಪಾವತಿಸಬೇಕು. ಆದರೆ, ಡಿಸೆಂಬರ್‌ನಿಂದ ಬಿಲ್ ಪಾವತಿಸಿಲ್ಲ. ಪ್ರಶ್ನಿಸಿದರೆ, ಸಕ್ಕರೆ ಬೆಲೆ ಕಡಿಮೆ, ಸಾಲ ಪಡೆಯಲಾಗುತ್ತದೆ ಎಂಬ ನೆಪ ಹೇಳಲಾಗುತ್ತದೆ’ ಎಂದು ಕಬ್ಬು ಬೆಳೆಗಾರರ ಸಂಘದ ಮಾಜಿ ಅಧ್ಯಕ್ಷ ನಾಗೇಶ ಸೊರಗಾವಿ ತಿಳಿಸಿದರು.

‘ಪ್ರತಿ ಎಕರೆಗೆ 45 ರಿಂದ 50 ಟನ್ ಬರುತ್ತಿದ್ದ ಇಳುವರಿ ಈ ಬಾರಿ ಮಳೆ ಕೊರತೆಯಿಂದ 35 ಟನ್ ಆಸುಪಾಸಿನಲ್ಲಿದೆ. ಎಷ್ಟೋ ರೈತರು ಸಾಲ ಮಾಡಿ ಕೊಳವೆಬಾವಿ ಕೊರೆಯಿಸಿ ಬೆಳೆ ಉಳಿಸಿಕೊಂಡಿದ್ದಾರೆ. ಬಿಲ್ ಬಾರದ್ದರಿಂದ ಸಾಲಕ್ಕೆ ಬಡ್ಡಿ ಪಾವತಿಸುತ್ತಿದ್ದಾರೆ’ ಎಂದು ತಿಳಿಸಿದರು.

ಈ ವಿಷಯದ ಕುರಿತು ಪ್ರತಿಕ್ರಿಯೆಗೆ ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ಲಭ್ಯವಾಗಲಿಲ್ಲ.

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದಲ್ಲಿ ಕಬ್ಬು ಕಟಾವು ಮಾಡುತ್ತಿರುವ ಕಾರ್ಮಿಕರು

> ಡಿಸೆಂಬರ್‌ನಿಂದ ಕಬ್ಬಿನ ಬಾಕಿ ಬಿಲ್‌ಗಾಗಿ ರೈತರು ಸಕ್ಕರೆ ಕಾರ್ಖಾನೆಗಳಿಗೆ ಅಲೆದಾಡಿ ಚಪ್ಪಲಿ ಸವೆದಿವೆ. ನಾಳೆ ಬಾ ಎನ್ನುವುದಷ್ಟೇ ಅವರ ಉತ್ತರವಾಗಿದೆ
>
> **ನಾಗೇಶ ಸೊರಗಾವಿ,** ಮಾಜಿ ಅಧ್ಯಕ್ಷ, ಕಬ್ಬು ಬೆಳೆಗಾರರ ಸಂಘ, ಬಾಗಲಕೋಟೆ

ಪೂರ್ಣ ಬಿಲ್ ಪಾವತಿಸಿದ ಕಾರ್ಖಾನೆಗಳು

ರಾಜ್ಯದ ಮಂಡ್ಯದ ಮೈಷುಗರ್ ಸೇರಿ ಪಾಂಡವಪುರದ ಎಂಆರ್‌ಎನ್ ಕೇನ್ ಪಾವರ್, ಕೆ.ಆರ್. ಪೇಟೆಯ ಕೋರಮಂಡಲ, ನಂಜನಗೂಡಿನ ಬನ್ನಾರಿ ಅಮ್ಮನ್, ಕೊಪ್ಪದ ಎನ್‌ಎಸ್‌ಎಲ್, ಬೀದರ್‌ನ ಶ್ರೀಭವಾನಿ ಶುಗರ್ಸ್, ಹಾವೇರಿ ಜಿಲ್ಲೆಯ ವಿಐಎನ್‌ಪಿ, ಬೆಳಗಾವಿ ಜಿಲ್ಲೆಯ ಸೌಭಾಗ್ಯ ಲಕ್ಷ್ಮಿ, ಉತ್ತರ ಕನ್ನಡ ಜಿಲ್ಲೆಯ ಇಐಡಿ ಪ್ಯಾರಿ ಕಾರ್ಖಾನೆಗಳು ಶೇ 100ರಷ್ಟು ಬಿಲ್ ಪಾವತಿಸಿವೆ.

2024–25ರಲ್ಲಿ ಜಿಡಿಪಿ ಶೇ 6.8ರಷ್ಟು ಪ್ರಗತಿ: ಕ್ರಿಸಿಲ್

ನವದೆಹಲಿ (ಪಿಟಿಐ): 2024–25ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆಯ ಬೆಳವಣಿಗೆ ದರವು (ಜಿಡಿಪಿ) ಶೇ 6.8ರಷ್ಟು ದಾಖಲಾಗಲಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಕ್ರಿಸಿಲ್ ಹೇಳಿದೆ.

2031ರ ವೇಳೆಗೆ ತಲಾ ಆದಾಯವು ₹3.72 ಲಕ್ಷಕ್ಕೆ (4,500 ಡಾಲರ್) ಏರಲಿದ್ದು, ಭಾರತವು ಮೇಲ್ಮಧ್ಯಮ ಆದಾಯ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದು ಭಾರತದ ಮುನ್ನೋಟ ಕುರಿತ ಕ್ರಿಸಿಲ್ ವರದಿ ತಿಳಿಸಿದೆ.

2024–25ರಿಂದ 2030–31ರ ವರೆಗಿನ ಹಣಕಾಸು ವರ್ಷಗಳಲ್ಲಿ ಭಾರತದ ಜಿಡಿಪಿ ಗಾತ್ರವು ₹415 ಲಕ್ಷ ಕೋಟಿ (5 ಟ್ರಿಲಿಯನ್) ದಾಟಲಿದ್ದು, ₹581 ಲಕ್ಷ ಕೋಟಿಯ (7 ಟ್ರಿಲಿಯನ್ ಡಾಲರ್) ಸಮೀಪಕ್ಕೆ ತಲುಪಲಿದೆ. ಈ ಆರ್ಥಿಕ ವರ್ಷಗಳಲ್ಲಿ ಸರಾಸರಿ ಜಿಡಿಪಿ ಶೇ 6.7ರಷ್ಟು ಇರಲಿದ್ದು, ಭಾರತ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ತಿಳಿಸಿದೆ. ಸದ್ಯ ಭಾರತದ ಜಿಡಿಪಿ ಗಾತ್ರವು ₹298.6 ಲಕ್ಷ ಕೋಟಿ ಇದ್ದು, ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ.

ಉಂಡೆ ಕೊಬ್ಬರಿ ದಾಸ್ತಾನಿಲ್ಲದ ರೈತರಿಂದ ನೋಂದಣಿ: ಆರೋಪ

ಹಿಂಬಾಗಿಲಿನಿಂದ ವರ್ತಕರ ಪ್ರವೇಶ

ಪ್ರಜಾವಾಣಿ ವಾರ್ತೆ

ಹಾಸನ: ‘ಉಂಡೆ ಕೊಬ್ಬರಿ ಖರೀದಿ ನೋಂದಣಿ ಪ್ರಕ್ರಿಯೆಯಲ್ಲಿ ಕಳೆದ ಬಾರಿ ನೇರವಾಗಿಯೇ ಭಾಗವಹಿಸಿದ್ದ ವರ್ತಕರು ಈ ಬಾರಿ ಹಿಂಬಾಗಿಲಿನಿಂದ ನೋಂದಣಿ ಮಾಡಿಸಿದ್ದಾರೆ’

–ಹೀಗೆಂದು ಆರೋಪಿಸಿದ್ದು, ಹಿರೀಸಾವೆ ಖರೀದಿ ಕೇಂದ್ರಕ್ಕೆ ಹೆಸರು ನೋಂದಾಯಿಸಲು ಬಂದಿದ್ದ ದಿಡಗ ತುಮಕೂರು ಗ್ರಾಮದ ರೈತ ಮಂಜಣ್ಣ.

‘ಕೊಬ್ಬರಿ ದಾಸ್ತಾನು ಇರುವವರು ಮಾತ್ರ ನೋಂದಣಿ ಪ್ರಕ್ರಿಯೆಯಲ್ಲಿ ಭಾಗವಹಿಸಿದರೆ ನಿಜವಾದ ಬೆಳೆಗಾರರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ರೈತರೇ ಯೋಚಿಸಬೇಕು’ ಎಂದರು.

‘ಕಮಿಷನ್ ಆಸೆಗಾಗಿ ಶೇ 40ರಷ್ಟು ರೈತರು ತಮ್ಮ ಬಳಿ ಕೊಬ್ಬರಿ ದಾಸ್ತಾನು ಇಲ್ಲದಿದ್ದರೂ ನೋಂದಣಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ’ ಎಂದು ದೂರಿದರು. ಆದರೆ, ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿಲ್ಲ.

ಫೆಬ್ರುವರಿಯಲ್ಲಿ ನಡೆದಿದ್ದ ನೋಂದಣಿ ಪ್ರಕ್ರಿಯೆಯಲ್ಲಿ ರೈತರ ಹೆಸರಿನಲ್ಲಿ ವರ್ತಕರು ಹೆಸರು ನೋಂದಾಯಿಸಿದ್ದರಿಂದ ರಾಜ್ಯ ಸರ್ಕಾರವು, ನೋಂದಣಿಯನ್ನು ರದ್ದುಪಡಿಸಿತ್ತು.

ರೈತರ ಪಹಣಿ, ಫ್ರೂಟ್ಸ್ ಐಡಿ, ಆಧಾರ್, ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಯ ಪಾಸ್‌ಬುಕ್ ಇದ್ದರಷ್ಟೇ ನೋಂದಣಿ ಸಾಧ್ಯ. ಈ ಕುರಿತು ಕೊಬ್ಬರಿ ದಾಸ್ತಾನು ಇಲ್ಲದ ರೈತರೊಂದಿಗೆ ಮಾತುಕತೆ ನಡೆಸಿರುವ ವರ್ತಕರು, ‘ನಿಮ್ಮ ದಾಖಲೆಗಳನ್ನು ನೀಡಿ ಹೆಸರು ನೋಂದಾಯಿಸಿ. ಕೊಬ್ಬರಿ ಖರೀದಿ ಶುರುವಾದ ಸಂದರ್ಭದಲ್ಲಿ ನಮ್ಮ ಬಳಿ ದಾಸ್ತಾನು ಇರುವ ಕೊಬ್ಬರಿಯನ್ನು ನಿಮಗೆ ನೀಡುತ್ತೇವೆ. ಖಾತೆಗೆ ಬರುವ ಹಣದಲ್ಲಿ ನಿಮಗೆ ಕಮಿಷನ್ ಕೊಡುತ್ತೇವೆಂದು ಹೇಳಿದ್ದಾರೆ’ ಎಂದು ಹೇಳಲಾಗಿದೆ.

ಮಂಡ್ಯದಲ್ಲೂ ವರ್ತಕರು ಹಿಂಬಾಗಿಲ ಮೂಲಕ ನೋಂದಣಿ ಮಾಡಿಸಿದ್ದಾರೆ ಎಂದು ರೈತ ಮುಖಂಡರು ದೂರಿದ್ದಾರೆ.

35,649 ರೈತರು ನೋಂದಣಿ: ರಾಜ್ಯದ 9 ಜಿಲ್ಲೆಗಳಲ್ಲಿ ಮೂರನೇ ದಿನವಾದ ಬುಧವಾರ ಕೊಬ್ಬರಿ ಮಾರಾಟಕ್ಕೆ 35,649 ರೈತರು ಹೆಸರು ನೋಂದಾಯಿಸಿದ್ದಾರೆ.

ಹೊಸದುರ್ಗದ ಕೊಬ್ಬರಿ ಖರೀದಿ ಕೇಂದ್ರದ ಬಳಿ ಸರದಿಯಲ್ಲಿ ರೈತರು ನಿಂತಿದ್ದರು

ನೋಂದಣಿ ಸ್ಥಗಿತ: ರೈತರ ಪರದಾಟ

ಚಿಕ್ಕಮಗಳೂರು: ಕೊಬ್ಬರಿ ಮಾರಾಟಕ್ಕೆ ರೈತರ ನೋಂದಣಿ ಪ್ರಕ್ರಿಯೆ ಮೂರೇ ದಿನಗಳಲ್ಲಿ ಅಂತ್ಯಗೊಂಡಿದ್ದು, ನೋಂದಣಿಗೆ ಅವಕಾಶ ಸಿಗದೆ ಸಾವಿರಾರು ರೈತರು ಪರದಾಡಿದರು.

ಜಿಲ್ಲೆಯಲ್ಲಿ ಏಳು ನೋಂದಣಿ ಕೇಂದ್ರಗಳನ್ನು ತೆರೆಯಲಾಗಿತ್ತು. ಒಟ್ಟು 55 ಸಾವಿರ ಕ್ವಿಂಟಲ್ ಖರೀದಿಗೆ ಸರ್ಕಾರ ಅವಕಾಶ ನೀಡಿತ್ತು. ಬುಧವಾರ ಸಂಜೆ 5ಗಂಟೆ ವೇಳೆಗೆ ನಿಗದಿಪಡಿಸಿರುವ ಮಿತಿ ಮುಟ್ಟಿದ್ದರಿಂದ ನೋಂದಣಿ ಸ್ಥಗಿತವಾಯಿತು.

‘ವರ್ತಕರೇ ಊರೂರು ಸುತ್ತಿ ರೈತರನ್ನು ಕರೆತಂದು ಸಾಲಿನಲ್ಲಿ ನಿಲ್ಲಿಸಿದ್ದಾರೆ. ತೋಟದಲ್ಲಿ ತೆಂಗಿನ ಫಸಲು ಇರಲಿ, ಇಲ್ಲದಿರಲಿ ಪಹಣಿಯಲ್ಲಿ ತೆಂಗು ಎಂದು ನಮೂದಾಗಿದ್ದರೆ ಅಂತಹ ರೈತರನ್ನು ಹುಡುಕಿ ತಂದಿದ್ದಾರೆ. ಅವರಿಗೆ ಆಯಾ ದಿನಗಳಂದು ಖರ್ಚಿಗೆ ಹಣ ನೀಡಿರುವ ವರ್ತಕರು ಅದರ ಲಾಭ ಪಡೆದುಕೊಳ್ಳುತ್ತಿದ್ದಾರೆ. ಆದ್ದರಿಂದಲೇ ಮೂರೇ ದಿನದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನೋಂದಣಿಯಾಗಿದೆ’ ಎಂದು ತೆಂಗಿನ ನಾರಿನ ಮಹಾಮಂಡಳದ ನಿರ್ದೇಶಕ ಕುಮಾರಸ್ವಾಮಿ ಆರೋಪಿಸಿದರು.

ರೈತರ ಹೆಸರಿನಲ್ಲಿ ಟೋಕನ್‌ಗೆ ಯತ್ನ

ತುಮಕೂರು: ಕೊಬ್ಬರಿ ನೋಂದಣಿ ಕೇಂದ್ರದ ಬಳಿ ಬೇರೊಬ್ಬರ ಹೆಸರಿನಲ್ಲಿ ಟೋಕನ್ ಪಡೆಯಲು ಬುಧವಾರ ಸರದಿಯಲ್ಲಿ ನಿಂತಿದ್ದವರನ್ನು ಎಪಿಎಂಸಿ ಅಧಿಕಾರಿಗಳು ಹೊರಗೆ ಕಳುಹಿಸಿದ್ದಾರೆ.

ತುರುವೇಕೆರೆ ತಾಲ್ಲೂಕು ಮಾಯಸಂದ್ರ ನೋಂದಣಿ ಕೇಂದ್ರದಲ್ಲಿ ಟೋಕನ್ ಪಡೆಯಲು ನಿಂತಿದ್ದ 20ಕ್ಕೂ ಹೆಚ್ಚು ಮಹಿಳೆಯರನ್ನು ಹೊರಗೆ ಕಳುಹಿಸಲಾಗಿದೆ. ದೂರು ಬಂದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿದ್ದ ಎಪಿಎಂಸಿ ಉಪ ನಿರ್ದೇಶಕ ರಾಜಣ್ಣ ಅವರು, ಎಚ್ಚರಿಕೆ ನೀಡಿದ ನಂತರ ಮಹಿಳೆಯರು ಸ್ಥಳದಿಂದ ತೆರಳಿದ್ದಾರೆ.

‘ವರ್ತಕರು, ರವಾನೆದಾರರ ಪರವಾಗಿ ಬಂದು ಟೋಕನ್ ಪಡೆಯುವುದು, ನೋಂದಣಿ ಮಾಡಿಸುವುದು ಗೊತ್ತಾದರೆ ವರ್ತಕರ ಪರವಾನಗಿ ರದ್ದುಪಡಿಸಲಾಗುವುದು. ಅಂತಹವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು’ ಎಂದು ಅವರು ಎಚ್ಚರಿಸಿದ್ದಾರೆ.

ಸಾಲಿನಲ್ಲಿ ನಿಲ್ಲಲು ಕೂಲಿ ನೀಡಿದ ದಲ್ಲಾಳಿಗಳು

ಚಿತ್ರದುರ್ಗ: ಜಿಲ್ಲೆಯ ಖರೀದಿ ಕೇಂದ್ರಗಳಲ್ಲಿ ಕೂಲಿ ಆಧಾರದಲ್ಲಿ ಜನರನ್ನು ಸರದಿ ಸಾಲಿನಲ್ಲಿ ನಿಲ್ಲಿಸುವ ವರ್ತಕರು, ನೋಂದಣಿ ಸಮಯಕ್ಕೆ ಅರ್ಹ ರೈತರನ್ನು ಸ್ಥಳಕ್ಕೆ ಕರೆಯಿಸಿ ಹೆಸರು ನೋಂದಾಯಿಸಿರುವುದು ಬೆಳಕಿಗೆ ಬಂದಿದೆ.

‘ಒಬ್ಬ ವ್ಯಕ್ತಿ ಮೂರು ದಿನಗಳಿಂದಲೂ ನೋಂದಣಿಗೆ ಸರದಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಇದರಿಂದ ಅರ್ಹ ರೈತರಿಗೆ ತೊಂದರೆಯಾಗಿದೆ. ಹೊಸದುರ್ಗ ತಾಲ್ಲೂಕಿನ ಗ್ರಾಮವೊಂದರ ಮೂರು ಮನೆಗಳಲ್ಲಿ ಮಾತ್ರ ಕೊಬ್ಬರಿ ದಾಸ್ತಾನಿದೆ. ಆದರೆ, ಆ ಊರಿನ 100 ಜನರು ನೋಂದಣಿ ಮಾಡಿಸಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ದೂರಿದರು.

ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕಿನ ಕೇಂದ್ರಗಳಲ್ಲೂ ಹೊಸದುರ್ಗದ ವರ್ತಕರು ಬೀಡುಬಿಟ್ಟಿದ್ದರು.

ಜಿಲ್ಲೆಯ ಆರು ಖರೀದಿ ಕೇಂದ್ರಗಳಲ್ಲಿ ಮೂರು ದಿನಗಳಲ್ಲಿ ಒಟ್ಟು 3,358 ರೈತರು, 42,112 ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ನೋಂದಣಿ ಮಾಡಿಸಿದ್ದಾರೆ.

‘ಚಿತ್ರದುರ್ಗ ಜಿಲ್ಲೆಗೆ 40,000 ಕ್ವಿಂಟಲ್ ಖರೀದಿ ಮಿತಿ ನಿಗದಿಪಡಿಸಲಾಗಿದೆ. ಹಾಗಾಗಿ, ಬುಧವಾರ ಸಂಜೆ ವೇಳೆಗೆ ನೋಂದಣಿ ಪ್ರಕ್ರಿಯೆ ಸ್ಥಗಿತವಾಗಿದೆ’ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಜಿಲ್ಲಾ ಶಾಖಾ ವ್ಯವಸ್ಥಾಪಕ ಬಸವೇಶ ಎಸ್. ನಾಡಿಗರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಜಲರಾಶಿ ಸಮೀಕ್ಷೆ: ಒಪ್ಪಂದ ನವೀಕರಣ ಇಲ್ಲ

ಮಾಲೆ (ಪಿಟಿಐ): ಭಾರತದ ಯಾವೊಬ್ಬ ಸೇನಾ ಸಿಬ್ಬಂದಿಗೂ ತನ್ನ ದೇಶದ ನೆಲದಲ್ಲಿ ಇರಲು ಬಿಡುವುದಿಲ್ಲ ಎಂದು ಹೇಳಿದ್ದ ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು, ಇದೀಗ ಜಲರಾಶಿ ಸಮೀಕ್ಷೆಗೆ ಭಾರತದ ಜೊತೆಗಿನ ಒಪ್ಪಂದವನ್ನು ಮುಂದುವರಿಸುವುದಿಲ್ಲ ಎಂದು ಹೇಳಿದ್ದಾರೆ.

ಜೊತೆಗೆ ಈ ಸಮೀಕ್ಷೆಗೆ ಅಗತ್ಯವಿರುವ ಎಲ್ಲ ಸಾಧನಗಳು ಮತ್ತು ಪರಿಕರಗಳನ್ನು ತಾನೇ ಖರೀದಿಸುವ ಯೋಜನೆಯನ್ನು ಸರ್ಕಾರ ಹೊಂದಿದೆ.

ವಿಶೇಷ ಹಣಕಾಸು ವಲಯವನ್ನು ನಿಯಂತ್ರಿಸಲು ಮಾಲ್ದೀವ್ಸ್ ನೀರಿನ ಮೇಲೆ ದಿನದ 24 ಗಂಟೆಯೂ ನಿಗಾ ವಹಿಸುವ ವ್ಯವಸ್ಥೆಯನ್ನು ಈ ತಿಂಗಳಲ್ಲಿ ಸ್ಥಾಪಿಸಲು ಸರ್ಕಾರ ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡಿದ್ದ ಮೊಹಮ್ಮದ್ ಮುಯಿಜು, ‘ಜಲರಾಶಿ ಸಮೀಕ್ಷೆಗೆ ಅಗತ್ಯವಿರುವ ವ್ಯವಸ್ಥೆಯನ್ನು ಸ್ಥಾಪಿಸಲು ದೇಶದ ಭದ್ರತಾ ಇಲಾಖೆ ಯತ್ನಿಸುತ್ತಿದೆ. ಇದರಿಂದ ನೀರಿನ ಒಳಗೆ ಸಮೀಕ್ಷೆಗಳನ್ನು ನಡೆಸಲು ಸಾಧ್ಯವಾಗಲಿದೆ’ ಎಂದು ಹೇಳಿದ್ದರು.

ಕ್ರೆಡಿಟ್ ಕಾರ್ಡ್ ವಿತರಣೆಗೆ ಹೊಸ ಮಾರ್ಗಸೂಚಿ

ಮುಂಬೈ (ಪಿಟಿಐ): ಕ್ರೆಡಿಟ್ ಕಾರ್ಡ್‌ಗಳ ವಿತರಣೆಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳು ಹಾಗೂ ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ (ಎನ್‌ಬಿಎಫ್‌ಸಿ), ಭಾರತೀಯ ರಿಸರ್ವ್ ಬ್ಯಾಂಕ್ ಬುಧವಾರ ಹೊಸ ಮಾರ್ಗ ಸೂಚಿಯನ್ನು ಪ್ರಕಟಿಸಿದೆ.

ಇದರ ಅನ್ವಯ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ವಿತರಿಸುವ ವೇಳೆ ಅರ್ಹ ಗ್ರಾಹಕರಿಗೆ ಒಂದಕ್ಕಿಂತ ಹೆಚ್ಚು ಕಾರ್ಡ್ ನೆಟ್‌ವರ್ಕ್‌ಗಳ ಆಯ್ಕೆಯನ್ನು ನೀಡುವುದು ಕಡ್ಡಾಯವಾಗಿದೆ. ಇದರಿಂದ ಗ್ರಾಹಕರು ತಾವು ಇಚ್ಛಿಸಿದ ನೆಟ್‌ವರ್ಕ್‌ನಿಂದ ಕಾರ್ಡ್ ಪಡೆಯಲು ಅನುಕೂಲವಾಗಲಿದೆ.

ಕಾರ್ಡ್ ವಿತರಕರು ಹಾಗೂ ನೆಟ್‌ವರ್ಕ್‌ಗಳೊಟ್ಟಿಗೆ ಒಪ್ಪಂದ ಮಾಡಿಕೊಳ್ಳಬಾರದು ಎಂದು ಸೂಚಿಸಿದೆ. ಈಗಾಗಲೇ, ಕ್ರೆಡಿಟ್ ಕಾರ್ಡ್ ಹೊಂದಿದವರು ನವೀಕರಣದ ವೇಳೆ ನೆಟ್‌ವರ್ಕ್ ಅನ್ನು ಬದಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ ನೆಟ್‌ವರ್ಕ್‌ಗಳು ಮತ್ತು ಕಾರ್ಡ್ ವಿತರಕರ ನಡುವೆ ಅಸ್ತಿತ್ವದಲ್ಲಿರುವ ವ್ಯವಸ್ಥೆಯು ಗ್ರಾಹಕರಿಗೆ ಆಯ್ಕೆಯ ಅವಕಾಶ ಕಲ್ಪಿಸುವುದಿಲ್ಲ. ಹಾಗಾಗಿ, ಈ ಮಾರ್ಗಸೂಚಿ ಪ್ರಕಟಿಸಲಾಗಿದೆ ಎಂದು ಆರ್‌ಬಿಐ ಸುತ್ತೋಲೆಯಲ್ಲಿ ತಿಳಿಸಿದೆ.

ಆದರೆ, 10 ಲಕ್ಷಕ್ಕಿಂತಲೂ ಕಡಿಮೆ ಸಂಖ್ಯೆಯ ಕಾರ್ಡ್‌ಗಳನ್ನು ವಿತರಿಸಿರುವ ಸಂಸ್ಥೆಗಳಿಗೆ ಹೊಸ ಮಾರ್ಗಸೂಚಿ ಅನ್ವಯ ಆಗುವುದಿಲ್ಲ.

ಸುತ್ತೋಲೆ ಪ್ರಕಟವಾದ ದಿನದಿಂದ ಆರು ತಿಂಗಳವರೆಗೆ ಈ ನಿಯಮಗಳು ಜಾರಿಯಲ್ಲಿ ಇರುತ್ತವೆ ಎಂದು ತಿಳಿಸಿದೆ.

ಏನಿದು ಕಾರ್ಡ್ ನೆಟ್‌ವರ್ಕ್?: ದೇಶದಲ್ಲಿ ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕಿಂಗ್ ಕಾರ್ಪೊರೇಷನ್, ಡೈನರ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಮಾಸ್ಟರ್‌ಕಾರ್ಡ್ ಏಷ್ಯಾ/ಫೆಸಿಫಿಕ್ ಲಿಮಿಟೆಡ್, ರಾಷ್ಟ್ರೀಯ ಪಾವತಿಗಳ ನಿಗಮದ (ಎನ್‌ಪಿಸಿಐ) ರುಪೇ ಹಾಗೂ ವೀಸಾ ವರ್ಲ್ಡ್‌ವೈಡ್ ಕಂಪನಿಯನ್ನು ಕಾರ್ಡ್ ನೆಟ್‌ವರ್ಕ್‌ಗಳೆಂದು ಆರ್‌ಬಿಐ ಅಧಿಕೃತಗೊಳಿಸಿದೆ. ರುಪೇ ದೇಶೀಯ ಕಾರ್ಡ್ ನೆಟ್‌ವರ್ಕ್ ಆಗಿದೆ.

ದೇಶದಲ್ಲಿ 2023ರ ಡಿಸೆಂಬರ್‌ವರೆಗೆ 9.79 ಕೋಟಿ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದು ಆರ್‌ಬಿಐ ಅಂಕಿಅಂಶಗಳು ತಿಳಿಸಿವೆ.

ಈ ಪೈಕಿ ಶೇ 70ರಷ್ಟು ಕಾರ್ಡ್‌ಗಳನ್ನು ಎಚ್‌ಡಿಎಫ್‌ಸಿ ಬ್ಯಾಂಕ್, ಎಸ್‌ಬಿಐ, ಐಸಿಐಸಿಐ ಬ್ಯಾಂಕ್ ಹಾಗೂ ಎಕ್ಸಿಸ್ ಬ್ಯಾಂಕ್ ವಿತರಿಸಿವೆ. ಸುಮಾರು 2 ಕೋಟಿ ಕಾರ್ಡ್ ವಿತರಿಸಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಮುಂಚೂಣಿಯಲ್ಲಿದೆ. ಎಸ್‌ಬಿಐ 1.84 ಕೋಟಿ ಕಾರ್ಡ್‌ಗಳನ್ನು ವಿತರಿಸಿದೆ.

ಕರ್ನಾಟಕದಲ್ಲಿ 3 ಇಎಸ್‌ಐ ಆಸ್ಪತ್ರೆ

ನವದೆಹಲಿ (ಪಿಟಿಐ): ಕರ್ನಾಟಕ ಸೇರಿದಂತೆ ದೇಶದ ನಾಲ್ಕು ರಾಜ್ಯಗಳಲ್ಲಿ ₹1,128.21 ಕೋಟಿ ವೆಚ್ಚದಡಿ ಏಳು ಇಎಸ್‌ಐ ಆಸ್ಪತ್ರೆಗಳ ನಿರ್ಮಾಣಕ್ಕೆ ಕಾರ್ಮಿಕರ ರಾಜ್ಯ ವಿಮಾ ನಿಗಮವು (ಇಎಸ್‌ಐಸಿ) ಅನುಮೋದನೆ ನೀಡಿದೆ.

ಕೇಂದ್ರ ಕಾರ್ಮಿಕ ಕಾರ್ಯದರ್ಶಿ ಸುಮಿತಾ ದಾವ್ರಾ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ನಿಗಮದ ಸ್ಥಾಯಿಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕಾರ್ಮಿಕ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕರ್ನಾಟಕದ ಹಾರೋಹಳ್ಳಿ, ನರಸಾಪುರ ಹಾಗೂ ಬೊಮ್ಮಸಂದ್ರದಲ್ಲಿ ಇಎಸ್‌ಐ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತದೆ. ಉಳಿದಂತೆ ಉತ್ತರ ಪ್ರದೇಶದಲ್ಲಿ 2, ಮಧ್ಯಪ್ರದೇಶ ಹಾಗೂ ಒಡಿಶಾದಲ್ಲಿ ತಲಾ ಒಂದು ಆಸ್ಪತ್ರೆ ನಿರ್ಮಿಸಲಾಗುತ್ತಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದೆ.

ಈ ಹೊಸ ಆಸ್ಪತ್ರೆಗಳ ನಿರ್ಮಾಣದಿಂದ ರೋಗಿಗಳ ಸೇವೆಗೆ ಹೆಚ್ಚುವರಿಯಾಗಿ 800 ಹಾಸಿಗೆಗಳು ದೊರೆಯಲಿವೆ ಎಂದು ಹೇಳಿದೆ.

ದೇಶದಲ್ಲಿ ಕಳೆದ ಒಂದು ದಶಕದ ಅವಧಿಯಲ್ಲಿ ಜಿಲ್ಲಾವಾರು ಇಎಸ್‌ಐ ಯೋಜನೆಯ ವಿಸ್ತರಣೆ ಹಾಗೂ ವಿಮಾ ಸೌಲಭ್ಯ ಹೊಂದಿದ ಕಾರ್ಮಿಕರ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಸದ್ಯ ದೇಶದ 666 ಜಿಲ್ಲೆಗಳು ಈ ಯೋಜನೆಗೆ ಒಳಪಟ್ಟಿದ್ದು, 3.43 ಕೋಟಿ ಕಾರ್ಮಿಕರು ಇಎಸ್‌ಐ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ವಿವರಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ವಾಸ್ತುವಿದ್ಯಾಪೀಠ ಮಹಾಮಾಂತ್ರಿಕ ಜ್ಯೋತಿಷ್ಯ ವಿದ್ವಾನ್. ಶ್ರೀಗುರುದೇವಾನಂದನ್ ರವರಿಂದ 100008 ಅತೀಂದ್ರಿಯ 888 ಛಾರಣ,ಮಾರಣ, ಸಂಮೋಹನ,ಸ್ತಂಭನ,ಮನಇಚ್ಛಾ ವಶೀಕರಣ,ಉಚ್ಚಾಟನಗಳಿಂದ ನಿಮ್ಮ ಯಾವುದೇ ಧೀರ್ಘಕಾಲದ ಪರಿಹಾರವಾಗದ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರಕ್ಕೆ ಇಂದೇ ಸಂಪರ್ಕಿಸಿ:9845005009

ಸಾರ್ವಜನಿಕ ಪ್ರಕಟಣೆ

IN THE COURT OF THE 6th Addl DISTRICT AND SESSIONS JUDGE AT TUMAKURU
R.A. No.353/2018
APPELLANT: Chandra Mouli and Another, S/o Gangadhar Swamy, Age 55 Yrs, Residing at 8th Cross, Someshwarapuram, Tumakur
RESPONDENTS: Arifunnisa and others
To,
Arifunnisa and Others
R-4 Mohammed Hafeez S/o Mohammed Ghouse, Aged about 50 yrs C/o T.V. Venkatesh Muni Shooting Bldg Vijayalakshmi Layout Pipeline, T. Dasarahalli, Bangalore.
(Defendant No.2 in O.S.333/2013
R-7 Sri. Mohammed Zabiulla Son of late Mohammed Ghouse, Aged about 40 years, Residing at H.T.M. Cutting Centre No.40/24, 2nd Cross, 2nd Main, Kempanna Layout, Lakshmidevi Nagar, Nandini Layout Post, Bangalore-560 096.
(Defendant No.7in.O.S.333/2013)
NOTICE
The appellant filed Appeal in R.A. No.353/2018 on the file of the 6th District and Sessions Judge at Tumakuru, seeking relief sought in appeal memo, that you are the respondents No.4 & 7 in the above case. Hence, your appearance is required in person or through pleader on 28th March 2024 at 11.00 A.M. before the Hon'ble 6th District and Sessions Judge at Tumakuru to defend the case and in default of your appearance on that day specified, the case will be heard and placing you ex-parte. Given under my hand the seal of the court this 29th day of Feb. 2024.
By Order of The Court
Chief Administrative Officer, District and Sessions Court Tumakuru -572101
Advocate for Appellant
S.R.Ramakrishnaiah
Advocate,
Sri Sannidi, 2nd Cross, 2nd Block, Kuvempu Nagar,Tumakuru.

PUBLIC NOTICE

This is to notify the general public that, my client has intended to purchase the Schedule Property. Which is more fully described in the schedule below and hereinafter referred to as the "Schedule Property" from the owner, Sri. S Kumar Residing at No. 10, Bilagumba Village, Kasaba Hobli, Ramanagara District, Karnataka-562159.
Any persons including an individual, a Hindu undivided Family, a company, any government authority, Banks, Financial Institution(s), non-Banking financial Institutions(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Scheduled Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien attachment, development rights, right of way, lispendens, reservation, agreement, FSI consumption, development rights, or any liability or commitments or otherwise or demand of any nature whatsoever are hereby requested to inform the same in writing, supported with the documents, to the undersigned address within a period of 21 (twenty one) days from the date of the publications of this notice, failing which, the claim or claims, if any, of such person or persons shall be considered to have been waived and/or abandoned.
SCHEDULE PROPERTY
All that piece and parcel of the portion of building built in Bangalore Development Authority site no 2, 4th block, Banasankari 3rd phase, 3rd stage, 100 feet road Kathriguppe, Bangalore. Coming within Bruhath Bangalore Mahanagara Palike ward no 163, Kathriguppe, 100 feet road, Property PID no 54-84-2. Total Built up area 418.52 square meters built-up area in Measurement and boundaries as under (east to west 15.2 meters and north to south 27.8+27.4/2, Boundaries: East by: site no 1, West by site no : 3, north by site no : 19, south by 100 feet ring road.
Sd/- (Mohankumar H V, Advocate.)
Subhas Nagar, 5th Cross Mandya Phone no : 9844585308
Date: 7.3.2024

ಉದ್ಯೋಗಾವಕಾಶ

General

ದೊಡ್ಡಬಳ್ಳಾಪುರದ ಎಪಿಎಂಸಿಯಲ್ಲಿ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.ಸಂಬಳ 12 ಸಾವಿರದಿಂದ 15 ಸಾವಿರದವರೆಗೆ. ಸಂಪರ್ಕಿಸಿರಿ: 9845455640

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿ ಆಫೀಸ್, ವರ್ಕ್ ಫ್ರಂ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Multiple Vacancy

REQUIRED, EXPERIENCED Telecaller, & Loan Recovery Supervisor For BankLoan collection. Salary 30,000+ Incentive. 9620206756.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

16.3.2024 ರಿಂದ 5ದಿನಗಳು, ಕಾಶಿ, ಅಯೋಧ್ಯ, ಗಯಾ,ಅಲಹಾಬಾದ್. 23.3.2024 ರಿಂದ 8 ದಿನಗಳು ಉಜ್ಜಯಿನಿ, ಓಂಕಾರೇಶ್ವರ, ಭೀಮಾಶಂಕರ, ಶಿರಡಿ,ತುಳಜಾಪುರ, ಎಲ್ಲೋರ,ಪಂಡರಾಪುರ. 28.3.2024 ರಿಂದ 4ದಿನಗಳು ರಾಮೇಶ್ವರ, ಕನ್ಯಾಕುಮಾರಿ, ಮಧುರೈ. 21.4.2024 ರಿಂದ 10ದಿನಗಳು ವೈಷ್ಣೋದೇವಿ, ದೆಹಲಿ, ಕುಲುಮನಾಲಿ, ವಾಘಾವಾರ್ಡರ್ 7.5.2024 ರಿಂದ 7ದಿನಗಳು ಸಿಂಗಾಪುರ, ಮಲೇಷಿಯಾ. 12.6.2024 ರಿಂದ 13ದಿನಗಳು ಕೇದಾರನಾಥ, ಬದರೀನಾಥ,ಯಮನೋತ್ರಿ, ಗಂಗೋತ್ರಿ. ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ: 9900124333, 9611082432, 8123099913

8 ದಿನಗಳ ಸೌತ್ ಆಫ್ರಿಕಾ, 18 ದಿನಗಳ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, 7 ದಿನಗಳ ಜಪಾನ್, 8 ದಿನಗಳ ಭೂತಾನ್, 10 ದಿನಗಳ ವಿಯೆಟ್ನಾಂ, ಕಾಂಬೋಡಿಯಾ. ಭಟ್ ಟ್ರಾವೆಲ್ಸ್. 9844166555, 7975132507

6 ದಿನಗಳ ಬಾಲಿ. 7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9880079588 9900080793

17.05.2024 19.06.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.04.2024 05.05.2024 ಭೂತಾನ್ 8 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. 16.04.2024 17.05.2024 ಕಾಶ್ಮೀರ್ ವೈಷ್ಣೋದೇವಿ 6/8 ದಿನಗಳು. 28.04.2024 26.05.2024 ಅಸ್ಸಾಂ ಮೇಘಾಲಯ ಅರುಣಾಚಲ 9 ದಿನಗಳು. 21.04.2024 21.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 16.04.2024 14.05.2024 ಶಿಮ್ಲಾ ಕುಲುಮನಾಲಿ 8 ದಿನಗಳು. 18.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

ಕೋರ್ಟ್ ಮಧ್ಯಪ್ರವೇಶ ಮಾಡಿದ್ದರೂ ಆರೋಪಿಗಳ ಬಂಧನಕ್ಕೆ ವಿಳಂಬ ಮಾಡಿದ ಟಿಎಂಸಿ ಸರ್ಕಾರ; ಮೋದಿ ಟೀಕೆ

ಬಂಗಾಳ: ವ್ಯಾಪಿಸಲಿದೆ ಸಂದೇಶ್‌ಖಾಲಿ ಗಾಳಿ

ಬಾರಾಸತ್(ಪಶ್ಚಿಮ ಬಂಗಾಳ) (ಪಿಟಿಐ): 'ಸಂದೇಶ್‌ಖಾಲಿ ಬಿರುಗಾಳಿ ಪಶ್ಚಿಮ ಬಂಗಾಳದ ಮೂಲೆ ಮೂಲೆಗೂ ವ್ಯಾಪಿಸಲಿದೆ. ಲೋಕಸಭಾ ಚುನಾವಣೆಗಳಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಧೂಳೀಪಟ ಮಾಡುವಲ್ಲಿ 'ನಾರಿ ಶಕ್ತಿ' ಪ್ರಮುಖ ಪಾತ್ರ ವಹಿಸಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಉತ್ತರ 24 ಪರಗಣ ಜಿಲ್ಲೆಯ ಕೇಂದ್ರ ಸ್ಥಾನವಾದ ಬಾರಾಸತ್‌ನಲ್ಲಿ ನಡೆದ 'ನಾರಿ ಶಕ್ತಿ ವಂದನ ಅಭಿನಂದನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂದೇಶ್ ಖಾಲಿಯಲ್ಲಿ ಮಹಿಳೆಯರಿಗೆ ಆಗಿರುವ ಅನ್ಯಾಯ, ಅವರ ಮೇಲಿನ ದೌರ್ಜನ್ಯ ನಾಚಿಕೆಗೇಡಿನದು ಎಂದು ಹೇಳಿದರು.

'ಆಡಳಿತಾರೂಢ ಟಿಎಂಸಿ ರಾಜ್ಯದ ಮಹಿಳೆಯರ ಸುರಕ್ಷತೆಯ ಬದಲಾಗಿ, ಓಲೈಕೆ ರಾಜಕಾರಣಕ್ಕೆ ಆದ್ಯತೆ ನೀಡುತ್ತಿದೆ' ಎಂದು ಆರೋಪಿಸಿದರು.

'ರಾಜ್ಯ ಹಲವೆಡೆ, ಬಡವರು, ದಲಿತರು ಹಾಗೂ ಬುಡಕಟ್ಟು ಕುಟುಂಬಗಳ ಹೆಣ್ಣು ಮಕ್ಕಳ ಮೇಲೆ ಟಿಎಂಸಿ ನಾಯಕರು ದೌರ್ಜನ್ಯ ಎಸಗುತ್ತಿದ್ದಾರೆ. ಈ ವಿಚಾರವಾಗಿ ಪಶ್ಚಿಮ ಬಂಗಾಳವಲ್ಲದೇ ದೇಶದ ಇತರ ಭಾಗಗಳ ಮಹಿಳೆಯರು ಆಕ್ರೋಶ ಗೊಂಡಿದ್ದಾರೆ. ಮಹಿಳೆಯರ ಈ ಆಕ್ರೋಶದ ಬಿರುಗಾಳಿ ದೇಶದ ಎಲ್ಲೆಡೆ ವ್ಯಾಪಿಸಲಿದ್ದು, ತೃಣಮೂಲ ಕಾಂಗ್ರೆಸ್ ಪಕ್ಷವನ್ನು ನಾಶ ಮಾಡಲಿದೆ' ಎಂದು ಮೋದಿ ಹೇಳಿದರು.

ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಬಾರಾಸತ್‌ನಲ್ಲಿ ಬುಧವಾರ ನಡೆದ 'ನಾರಿ ಶಕ್ತಿ ವಂದನ ಅಭಿನಂದನ' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಭಿಕರಿಗೆ ಬಾಗಿ ನಮಿಸಿದರು – ಪಿಟಿಐ ಚಿತ್ರ

ಬಿಜೆಪಿ ನಾಯಕರು ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವಾಗ ಮಹಿಳಾ ಸುರಕ್ಷತೆ ಬಗ್ಗೆ ಮಾತನಾಡಲು ಪ್ರಧಾನಿಗೆ ಹಕ್ಕಿಲ್ಲ

ಡೆರೆಕ್ ಒಬ್ರಿಯಾನ್

ಟಿಎಂಸಿಯ ರಾಜ್ಯಸಭಾ ಸದಸ್ಯ

ಅಪರಾಧಿಗಳ ರಕ್ಷಣೆಗೆ ಟಿಎಂಸಿ ಅಧಿಕಾರ ಬಳಸಿಕೊಂಡಿದೆ. ಮೊದಲು ಹೈಕೋರ್ಟ್, ನಂತರ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ

ನರೇಂದ್ರ ಮೋದಿ

ಪ್ರಧಾನಿ

'ಟಿಎಂಸಿ ಪಕ್ಷ ಕ್ರಿಮಿನಲ್‌ಗಳನ್ನು ರಕ್ಷಣೆ ಮಾಡುತ್ತಿದೆ. ನ್ಯಾಯಾಲಯ ಮಧ್ಯಪ್ರವೇಶ ಮಾಡಿದ್ದರೂ, ರಾಜ್ಯದ ಅಧಿಕಾರಿಗಳು ಸಂದೇಶ್‌ಖಾಲಿ ಘಟನೆಗಳಿಗೆ ಕಾರಣರಾದವರನ್ನು ಬಂಧಿಸಲಿಲ್ಲ. ಓಲೈಕೆ ರಾಜಕಾರಣದಲ್ಲಿ ತೊಡಗಿರುವ ಟಿಎಂಸಿ, ದಲ್ಲಾಳಿಗಳ ಆಣತಿಯಂತೆ ಕಾರ್ಯ ನಿರ್ವಹಿಸುತ್ತಿದೆ. ಹೀಗಾಗಿ, ಪುತ್ರಿಯರಿಗೆ, ಸಹೋದರಿಯರಿಗೆ ಎಂದಿಗೂ ಟಿಎಂಸಿ ಸರ್ಕಾರ ರಕ್ಷಣೆ ಕೊಡುವುದಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು, ಮಹಿಳಾ ಸಹಾಯವಾಣಿ ಸೇರಿದಂತೆ ಕೇಂದ್ರದ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಸಂಕಷ್ಟದಲ್ಲಿರುವ ಮಹಿಳೆಯರು ಸುಲಭವಾಗಿ ತಮ್ಮ ದೂರುಗಳನ್ನು ದಾಖಲಿಸಬೇಕು ಎಂಬ ದೃಷ್ಟಿಯಿಂದ ಈ ಸಹಾಯವಾಣಿಯನ್ನು ಆರಂಭಿಸಲಾಗಿದೆ. ಆದರೆ, ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಟಿಎಂಸಿ ಸರ್ಕಾರ ಅನುಮತಿ ನೀಡುತ್ತಿಲ್ಲ.' ಎಂದು ಮೋದಿ ಟೀಕಿಸಿದರು. 'ರಾಜ್ಯದ ಅಭಿವೃದ್ಧಿಗೆ ಟಿಎಂಸಿ ಅಡ್ಡಿಯಾಗಿದೆ. ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ವನ್ನು ತಿರಸ್ಕರಿಸಿ, ಬಿಜೆಪಿಗೆ ಮತ ಹಾಕಿ' ಎಂದು ಮನವಿ ಮಾಡಿದರು.

ನ್ಯಾಯ ದೊರಕಿಸುವಂತೆ ಮಹಿಳೆಯರ ಮೊರೆ

ಟಿಎಂಸಿ ಮುಖಂಡರಿಂದ ಲೈಂಗಿಕ ದೌರ್ಜನ್ಯ ನಡೆದಿದ್ದ ಆರೋಪಗಳಿಂದಾಗಿ ಸುದ್ದಿಯಲ್ಲಿರುವ ಸಂದೇಶ್‌ಖಾಲಿಯ ಮಹಿಳೆಯರ ಗುಂಪನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಭೇಟಿ ಮಾಡಿದರು.

'24 ಉತ್ತರ ಪರಗಣ ಜಿಲ್ಲೆಯ ಬಾರಾಸತ್‌ನಲ್ಲಿ ನಡೆದ ಪಕ್ಷದ ರ‍್ಯಾಲಿ ಬಳಿಕ, ಮೋದಿ ಅವರು ಸಂದೇಶ್‌ಖಾಲಿಯಿಂದ ಬಂದಿದ್ದ ಮಹಿಳೆಯರನ್ನು ಭೇಟಿ ಮಾಡಿದರು.' ಎಂದು ಬಿಜೆಪಿಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಗ್ನಿಮಿತ್ರ ಪೌಲ್ ತಿಳಿಸಿದ್ದಾರೆ.

ಪ್ರಧಾನಿ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂದೇಶ್‌ಖಾಲಿಯಿಂದ ಬಂದಿದ್ದ ಮಹಿಳೆಯೊಬ್ಬರು, 'ಪ್ರಧಾನಿ ಮಂತ್ರಿ ನಮ್ಮ ಮಾತುಗಳನ್ನು ಸಮಾಧಾನದಿಂದ ಆಲಿಸಿದರು. ನಮಗೆ ನ್ಯಾಯ ದೊರಕಿಸಿ ಕೊಡುವಂತೆ ಮನವಿ ಮಾಡಿದೆವು' ಎಂದು ತಿಳಿಸಿದರು.

'ರಾಜ್ಯ ಸರ್ಕಾರದ ಮೇಲೆ ನಮಗೆ ವಿಶ್ವಾಸ ಇಲ್ಲ. ಹೀಗಾಗಿ, ನಮಗೆ ನ್ಯಾಯ ಸಿಗುವುದನ್ನು ಖಾತ್ರಿಪಡಿಸುವಂತೆ ಕೋರಿದೆವು' ಎಂದೂ ಮಹಿಳೆ ತಿಳಿಸಿದರು.

'ಲಾಲು ಕುಟುಂಬದವರು ದೊಡ್ಡ ಅಪರಾಧಿಗಳು'

ಬೇತಿಯಾ (ಬಿಹಾರ) (ಪಿಟಿಐ): 'ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಮತ್ತು ಅವರ ಕುಟುಂಬದವರು ಬಿಹಾರದ ಅತಿದೊಡ್ಡ ಅಪರಾಧಿಗಳಾಗಿದ್ದು, ದಶಕಕ್ಕೂ ಹೆಚ್ಚು ಕಾಲದ ಆಡಳಿತ ಅವಧಿಯಲ್ಲಿ ಬಿಹಾರವನ್ನು ಜಂಗಲ್ ರಾಜ್ ಮಾಡಲು ನಾಂದಿ ಹಾಡಿದರು' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಆರೋಪಿಸಿದರು.

ಪಶ್ಚಿಮ ಚಂಪಾರಣ ಜಿಲ್ಲೆಯ ಬೇತಿಯಾದಲ್ಲಿ ನಡೆದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಆರ್‌ಜೆಡಿ– ಕಾಂಗ್ರೆಸ್ ಮೈತ್ರಿಯ ದುರಾಡಳಿತದಿಂದ ಬಿಹಾರದ ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಹೋಗಬೇಕಾಯಿತು' ಎಂದರು. ಎನ್‌ಡಿಎ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಸುಧಾರಣೆ ಕಾಣಲಾರಂಭಿಸಿದೆ ಎಂದು ಅವರು ಪ್ರತಿಪಾದಿಸಿದರು.

ತನಗೆ ಕುಟುಂಬ ಇಲ್ಲ ಎಂದು ಹೇಳಿದ ಲಾಲು ವಿರುದ್ಧ ಹರಿಹಾಯ್ದ ಪ್ರಧಾನಿ ಅವರು, 'ಇಂಡಿಯಾ ಮೈತ್ರಿ ಕೂಟದವರಿಗೆ ನನಗೆ ಕುಟುಂಬ ಇಲ್ಲ ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಅವರು ತಮ್ಮ ಭ್ರಷ್ಟ ಕುಟುಂಬ ರಾಜಕಾರಣ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳಲು ಬಯಸುತ್ತಿದ್ದಾರೆ. ಅವರಿಗೆ ಲೂಟಿ ಮಾಡಲು ಪರವಾನಗಿ ಬೇಕಾಗಿದೆ' ಎಂದು ಆರೋಪಿಸಿದರು.

ಸಿಬಿಐ ವಶಕ್ಕೆ ಶಹಜಹಾನ್

ಕೋಲ್ಕತ್ತ(ಪಿಟಿಐ): ಸಂದೇಶ್‌ಖಾಲಿಯಲ್ಲಿ ಇ.ಡಿ ಅಧಿಕಾರಿಗಳ ಮೇಲೆ ನಡೆದ ದಾಳಿ ಪ್ರಕರಣದ ಆರೋಪಿ ಶಹಜಹಾನ್ ಶೇಖ್ ಅವರನ್ನು, ಕಲ್ಕತ್ತ ಹೈಕೋರ್ಟ್ ಆದೇಶದಂತೆ, ಸಿಬಿಐ ಬುಧವಾರ ತನ್ನ ವಶಕ್ಕೆ ಪಡೆಯಿತು.

ಸಿಬಿಐ ಅಧಿಕಾರಿಗಳು ಭವಾನಿ ಭವನದಲ್ಲಿರುವ ಸಿಐಡಿ ಕೇಂದ್ರ ಕಚೇರಿಗೆ ಸಂಜೆ 4ಕ್ಕೂ ಮುಂಚೆಯೇ ತೆರಳಿದ್ದರು. ಆದರೆ, ಸಂಜೆ 6.48ರ ಹೊತ್ತಿಗೆ ಸಿಐಡಿ, ಶಹಜಹಾನ್ ಅವರನ್ನು ಸಿಬಿಐಗೆ ಹಸ್ತಾಂತರಿಸಿತು.

ದಾಳಿ ತನಿಖೆಯನ್ನು ಸಿಬಿಐಗೆ ವಹಿಸಬೇಕು ಹಾಗೂ ಆರೋಪಿ ಶಹಜಹಾನ್ ಶೇಖ್ ಅವರನ್ನು ಸಂಜೆ 4.30ರ ಒಳಗೆ ಸಿಬಿಐಗೆ ಹಸ್ತಾಂತರಿಸಬೇಕು ಎಂದು ಕಲ್ಕತ್ತ ಹೈಕೋರ್ಟ್ ಮಂಗಳವಾರ ಆದೇಶಿಸಿತ್ತು.

ತನಿಖೆಯನ್ನು ಸಿಬಿಐಗೆ ವಹಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಕಾರಣ ನೀಡಿ, ಸಿಐಡಿ ಅಧಿಕಾರಿಗಳು ಶಹಜಹಾನ್ ಅವರನ್ನು ಸಿಬಿಐ ವಶಕ್ಕೆ ನೀಡಲು ನಿರಾಕರಿಸಿದ್ದರು.

ಇ.ಡಿಗೆ ಅವಕಾಶ: ಶಹಜಹಾನ್ ಅವರನ್ನು ರಾಜ್ಯ ಪೊಲೀಸರು ಸಿಬಿಐ ವಶಕ್ಕೆ ನೀಡಲು ನಿರಾಕರಿಸಿದ್ದಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವುದಕ್ಕೆ ಇ.ಡಿಗೆ ಕಲ್ಕತ್ತ ಹೈಕೋರ್ಟ್ ಅವಕಾಶ ನೀಡಿತು.

ಇ.ಡಿ ಅಧಿಕಾರಿಗಳ ಮೇಲೆ ನಡೆದಿದ್ದ ಹಲ್ಲೆಗೆ ಸಂಬಂಧಿಸಿದಂತೆ ಸಿಬಿಐ ಇನ್ನೂ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿಕೊಂಡಿದೆ.

'ವಿಚಾರಣಾ ಪಟ್ಟಿಗೆ ತುರ್ತಾಗಿ ಸೇರಿಸಿ'

ನವದೆಹಲಿ(ಪಿಟಿಐ): ಸಂದೇಶ್‌ಖಾಲಿಯಲ್ಲಿ ಇ.ಡಿ ಅಧಿಕಾರಿಗಳ ಮೇಲಿನ ದಾಳಿ ಕುರಿತ ತನಿಖೆಯನ್ನು ಸಿಬಿಐಗೆ ವರ್ಗಾಯಿಸಿ ಕಲ್ಕತ್ತ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ತಾನು ಸಲ್ಲಿಸಿರುವ ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ಪಶ್ಚಿಮ ಬಂಗಾಳ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಮನವಿ ಮಾಡಿತು.

ಪಶ್ಚಿಮ ಬಂಗಾಳ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ತನಿಖೆಯನ್ನು ತನಗೆ ವರ್ಗಾಯಿಸುವುದಕ್ಕೆ ಸಂಬಂಧಿಸಿ ಕಲ್ಕತ್ತ ಹೈಕೋರ್ಟ್ ಆದೇಶವನ್ನು ತಕ್ಷಣವೇ ಪಾಲನೆ ಮಾಡಬೇಕು ಎಂದು ಸಿಬಿಐ ಬಯಸುತ್ತಿದೆ' ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಸಂಜೀವ್ ಖನ್ನಾ, 'ನೀವು ಅರ್ಜಿ ಸಲ್ಲಿಸಿ. ಅರ್ಜಿಯನ್ನು ತುರ್ತು ವಿಚಾರಣೆ ಪಟ್ಟಿಗೆ ಸೇರಿಸುವ ಕುರಿತು ಮುಖ್ಯ ನ್ಯಾಯಮೂರ್ತಿಯವರು ನಿರ್ಧಾರ ತೆಗೆದುಕೊಂಡು, ಸೂಕ್ತ ಆದೇಶ ನೀಡುತ್ತಾರೆ' ಎಂದು ಹೇಳಿದರು.

ಕ್ರಿಪ್ಟೋಕರೆನ್ಸಿ: 10 ಮಂದಿ ವಿರುದ್ಧ ಆರೋಪ ಪಟ್ಟಿ

ನವದೆಹಲಿ (ಪಿಟಿಐ): ಬಿಟ್‌ಕಾಯಿನ್‌ಗಳಂತಹ ಕ್ರಿಪ್ಟೋಕರೆನ್ಸಿಗಳ ಹೆಸರಿನಲ್ಲಿ ಹೂಡಿಕೆದಾರರನ್ನು ವಂಚಿಸಿದ ಆರೋಪ ಎದುರಿಸುತ್ತಿರುವ ಚೀನಾ ಮೂಲದ 10 ಜನರು ಸೇರಿದಂತೆ 299 ಘಟಕಗಳ ವಿರುದ್ಧ ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ (ಪಿಎಂಎಲ್‌ಎ) ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಆರೋಪ ಪಟ್ಟಿ ಸಲ್ಲಿಸಿದೆ.

ಪಿಎಂಎಲ್‌ಎ ಅಡಿ ಸಲ್ಲಿಸಲಾಗಿರುವ ದೂರನ್ನು ನಾಗಾಲ್ಯಾಂಡ್‌ನ ದಿಮಾಪುರ್‌ನಲ್ಲಿರುವ ವಿಶೇಷ ನ್ಯಾಯಾಲಯ ಪರಿಗಣನೆಗೆ ತೆಗೆದುಕೊಂಡಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಚೀನಾದವರ ನಿಯಂತ್ರಣದ 76 ಘಟಕಗಳು ಸೇರಿದಂತೆ ಒಟ್ಟು 299 ಘಟಕಗಳ ಮುಖ್ಯಸ್ಥರನ್ನು ಆರೋಪಿಗಳೆಂದು ಹೆಸರಿಸಲಾಗಿದೆ. ಇದರಲ್ಲಿ ಚೀನಾ ಮೂಲದ 10 ನಿರ್ದೇಶಕರು ಮತ್ತು ಇಬ್ಬರು ಇತರ ವಿದೇಶಿ ಪ್ರಜೆಗಳ ಹೆಸರೂ ಇದೆ ಎಂದು ಅದು ಹೇಳಿದೆ.

ಕೊಹಿಮಾದ ಸೈಬರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧರಿಸಿ ಇ.ಡಿ ಪಿಎಂಎಲ್‌ಎ ಪ್ರಕರಣದಡಿ ತನಿಖೆ ನಡೆಸಿದೆ. ಬಿಟ್‌ಕಾಯಿನ್‌ಗಳು ಮತ್ತು ಇತರ ಕ್ರಿಪ್ಟೋಕರೆನ್ಸಿಗಳ ಹೆಸರಿನಲ್ಲಿ ಹೂಡಿಕೆದಾರರನ್ನು ವಂಚಿಸಿದ ಆರೋಪದ ಮೇರೆಗೆ ಕೊಹಿಮಾ ಪೊಲೀಸರು ಭಾರತೀಯ ದಂಡ ಸಂಹಿತೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಹಲವರ ವಿರುದ್ಧ ಪ್ರಕರಣ ದಾಖಲಿಸಿದ್ದರು.

'ಡಮ್ಮಿ' ನಿರ್ದೇಶಕರನ್ನು ಹೊಂದಿರುವ ವಿವಿಧ 'ಶೆಲ್ ಕಂಪನಿ'ಗಳು ಬ್ಯಾಂಕ್ ಖಾತೆ ಮತ್ತು ವ್ಯಾಪಾರಿ ಐ.ಡಿಗಳನ್ನು ತೆರೆದು ಹಣಕಾಸಿನ ಅಪರಾಧಗಳನ್ನು ಎಸಗಿವೆ ಎಂದು ಇ.ಡಿ ತಿಳಿಸಿದೆ. ಅಕ್ರಮ ಆನ್‌ಲೈನ್ ಗೇಮಿಂಗ್, ಬೆಟ್ಟಿಂಗ್, ಬಿಟ್‌ಕಾಯಿನ್‌ಗಳಲ್ಲಿ ಹೂಡಿಕೆ ಮಾಡಿಸಿ ಜನರನ್ನು ವಂಚಿಸಲಾಗಿದೆ ಎಂದು ಅದು ಹೇಳಿದೆ.

ಈ ಪ್ರಕರಣದಲ್ಲಿ ದೇಶದಾದ್ಯಂತ ಶೋಧ ನಡೆಸಿ ₹455 ಕೋಟಿ ಮೌಲ್ಯದ ಸ್ಥಿರ ಆಸ್ತಿ ಮತ್ತು ಠೇವಣಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

ರೈತ ಮುಖಂಡರ ಪ್ರತಿಪಾದನೆ • ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ

'ಪ್ರತಿಭಟನೆಯ ಬಿರುಸು ಒಪ್ಪಿದ ಕೇಂದ್ರ'

ಚಂಡೀಗಢ/ ನವದೆಹಲಿ (ಪಿಟಿಐ): ರೈತರು ದೆಹಲಿ ಪ್ರವೇಶಿಸುವುದನ್ನು ತಡೆಯುವ ಉದ್ದೇಶದಿಂದ ದೆಹಲಿಯ ಸುತ್ತ ಪೊಲೀಸರನ್ನು ಭಾರಿ ಪ್ರಮಾಣದಲ್ಲಿ ನಿಯೋಜಿಸುವ ಮೂಲಕ ಕೇಂದ್ರ ಸರ್ಕಾರವು ರೈತರ ಹೋರಾಟವು ರಾಷ್ಟ್ರದಾದ್ಯಂತ ನಡೆಯುತ್ತಿದೆ ಎಂಬುದನ್ನು ಒಪ್ಪಿಕೊಂಡಂತಾಗಿದೆ ಎಂದು ರೈತ ಮುಖಂಡ ಸರವಣ್ ಸಿಂಗ್ ಪಂಧೇರ್ ಹೇಳಿದರು.

ದೆಹಲಿಯ ಕಡೆ ಸಾಗುತ್ತಿದ್ದ 100ಕ್ಕೂ ಹೆಚ್ಚು ರೈತರನ್ನು ರಾಜಸ್ಥಾನದಲ್ಲಿ ಬಂಧಿಸಲಾಗಿದೆ ಎಂದು ಪಂಧೇರ್ ತಿಳಿಸಿದರು. ರೈತರು ರಾಷ್ಟ್ರದ ಎಲ್ಲೆಡೆಗಳಿಂದ ರಾಜಧಾನಿ ದೆಹಲಿಗೆ ಮಾರ್ಚ್ 6ರಂದು ತಲುಪಬೇಕು ಎಂದು ಪಂಧೇರ್ ಮತ್ತು ಇನ್ನೊಬ್ಬ ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಕರೆ ನೀಡಿದ್ದರು.

ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಮಾನ್ಯತೆಯನ್ನು ನೀಡಬೇಕು ಎಂಬ ಬೇಡಿಕೆಯೊಂದಿಗೆ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮಜ್ದೂರ್ ಸಂಘ 'ದೆಹಲಿ ಚಲೋ' ಹೋರಾಟ ಆರಂಭಿಸಿವೆ.

'ದೂರದ ರಾಜ್ಯಗಳ ರೈತರು ದೆಹಲಿಗೆ ರೈಲು ಅಥವಾ ಇತರ ಮಾರ್ಗಗಳ ಮೂಲಕ ತಲುಪಬಹುದು ಎಂದು ನಾವು ತೀರ್ಮಾನಿಸಿದ್ದೆವು. ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುವುದು ನಮ್ಮ ಆಲೋಚನೆ. ಆದರೆ, ಈ ಪ್ರತಿಭಟನೆಯು ಪಂಜಾಬ್‌ಗೆ ಸೀಮಿತವಾಗಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಲೇ ಇತ್ತು. ಹಾಗಿದ್ದರೆ, ಜಂತರ್ ಮಂತರ್‌ನಲ್ಲಿ ಹಾಗೂ ದೆಹಲಿಯ ಇತರ ಪ್ರದೇಶಗಳಲ್ಲಿ ನಿಷೇಧಾಜ್ಞೆಯನ್ನು ಹೊರಡಿಸಿರುವುದು ಏಕೆ ಎಂಬುದು ನಮಗೆ ಗೊತ್ತಾಗಬೇಕು. ಟಿಕ್ರಿ ಹಾಗೂ ಸಿಂಘು ಗಡಿಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಬ್ಯಾರಿಕೇಡ್ ಹಾಕಿರುವುದು ಏಕೆ? ಇದರ ಅರ್ಥ ಈ ಪ್ರತಿಭಟನೆಯು ದೇಶದಾದ್ಯಂತ ನಡೆಯುತ್ತಿದೆ ಎಂಬುದನ್ನು ಕೇಂದ್ರವು ಒಪ್ಪಿಕೊಂಡಿದೆ' ಎಂದು ಅವರು ಹೇಳಿದರು.

'ಹೀಗಾಗಿಯೇ ಅವರು ಇಷ್ಟೊಂದು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದ್ದಾರೆ, ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಹಾಗೆಯೇ, ರೈತರು ದೆಹಲಿಗೆ ಬರಲು ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದಾರೆ' ಎಂದರು.

ಮಹಿಳಾ ದಿನಾಚರಣೆಯ ಅಂಗವಾಗಿ ಮಾ.8ರಂದು ಶಂಭು , ಖಾನೌರಿ ಗಡಿಗಳಲ್ಲಿ ಮಹಿಳಾ ರೈತರು ಕೂಡ ಭಾರಿ ಪ್ರಮಾಣದಲ್ಲಿ ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ

ಸರವಣ್ ಸಿಂಗ್ ಪಂಧೇರ್

ರೈತ ಮುಖಂಡ

ರೈತರ 'ದೆಹಲಿ ಚಲೋ' ಹಿನ್ನೆಲೆಯಲ್ಲಿ ಗಾಜಿಪುರ ಗಡಿಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಬುಧವಾರ ಬ್ಯಾರಿಕೇಡ್‌ಗಳನ್ನು ಹಾಕಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿತ್ತು – ಪಿಟಿಐ ಚಿತ್ರ

ನವದೆಹಲಿಯಲ್ಲಿ ಸಂಚಾರ ದಟ್ಟಣೆ: ರೈತರ ಪ್ರತಿಭಟನೆಯಿಂದಾಗಿ ಬುಧವಾರ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿತ್ತು ಎಂದು ಪೊಲೀಸರು ಹೇಳಿದರು.

ವರದಿಗಳ ಪ್ರಕಾರ, ಬೆಳಿಗ್ಗೆಯಿಂದಲೇ ದೆಹಲಿ–ಹರಿಯಾಣ ಮಾರ್ಗದ ಸಿಂಘು ಗಡಿಯಲ್ಲಿ ಭಾರಿ ಸಂಖ್ಯೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಟಿಕ್ರಿ, ಸಿಂಘು ಮತ್ತು ಗಾಜಿಪುರ ಗಡಿಗಳು, ರೈಲು ಹಾಗೂ ಮೆಟ್ರೊ ನಿಲ್ದಾಣಗಳಲ್ಲಿ ಭಾರಿ ನಿಗಾ ವಹಿಸಲಾಗಿದೆ. ಎಲ್ಲಾ ಗಡಿಗಳಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಗಡಿ ಅಥವಾ ರಸ್ತೆಯನ್ನು ಮುಚ್ಚಿಲ್ಲ. ಬದಲಾಗಿ ವಾಹನ ತಪಾಸಣೆ ನಡೆಸಲಾಗುತ್ತಿದೆ ಎಂದು ಹೇಳಿದರು.

ದೆಹಲಿಯಲ್ಲಿ 144ನೇ ಸೆಕ್ಷನ್ ಅಡಿಯಲ್ಲಿ ನಿಷೇಧಾಜ್ಞೆಯನ್ನು ಈಗಾಗಲೇ ಜಾರಿ ಮಾಡಲಾಗಿದೆ. ಜನರು ಗುಂಪುಗೂಡಲು ಅವಕಾಶ ನೀಡುತ್ತಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದರು.

ರೈತರು ಬುಧವಾರ ರಾಷ್ಟ್ರ ರಾಜಧಾನಿ ತಲುಪಬೇಕು ಎಂದು ಕಿಸಾನ್ ಮಜ್ದೂರ್ ಮೋರ್ಚಾ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಭಾನುವಾರ ಕರೆ ನೀಡಿದ್ದವು.

ದೆಹಲಿ: ಬಿಜೆಪಿ ಶಾಸಕರ ಅಮಾನತು ರದ್ದು

ನವದೆಹಲಿ (ಪಿಟಿಐ): ಬಜೆಟ್ ಅಧಿವೇಶನದ ಆರಂಭದಲ್ಲಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ಭಾಷಣಕ್ಕೆ ಅಡ್ಡಿ ಉಂಟುಮಾಡಿದ ಕಾರಣಕ್ಕೆ ಬಿಜೆಪಿಯ ಏಳು ಶಾಸಕರನ್ನು ವಿಧಾನಸಭೆಯಿಂದ ಅಮಾನತು ಮಾಡಿದ್ದ ಕ್ರಮವನ್ನು ದೆಹಲಿ ಹೈಕೋರ್ಟ್ ಬುಧವಾರ ರದ್ದುಪಡಿಸಿದೆ.

ಅಮಾನತಿಗೆ ಗುರಿಯಾಗಿದ್ದ ಶಾಸಕರಾದ ಮೋಹನ್ ಸಿಂಗ್ ಬಿಶ್ತ್, ಅಜಯ್ ಮಹವರ್, ಒ.ಪಿ. ಶರ್ಮ, ಅಭಯ್ ವರ್ಮ, ಅನಿಲ್ ಬಾಜಪೇಯಿ, ಜಿತೇಂದ್ರ ಮಹಾಜನ್ ಮತ್ತು ವಿಜೇಂದರ್ ಗುಪ್ತಾ ಅವರು ಹೈಕೋರ್ಟ್‌ಗೆ ಕಳೆದ ತಿಂಗಳು ಅರ್ಜಿ ಸಲ್ಲಿಸಿದ್ದರು. ಹಕ್ಕುಬಾಧ್ಯತಾ ಸಮಿತಿಯ ಮುಂದೆ ವಿಚಾರಣೆ ಪೂರ್ಣಗೊಳ್ಳುವವರೆಗೆ ಅವರನ್ನು ಅಮಾನತಿನಲ್ಲಿ ಇರಿಸಲಾಗಿತ್ತು.

'ಅರ್ಜಿಗಳನ್ನು ಮಾನ್ಯ ಮಾಡಲಾಗಿದೆ' ಎಂದು ನ್ಯಾಯಮೂರ್ತಿ ಸುಬ್ರಮಣಿಯಂ ಪ್ರಸಾದ್ ಅವರು ಆದೇಶದಲ್ಲಿ ಹೇಳಿದ್ದಾರೆ. ಹಕ್ಕುಬಾಧ್ಯತಾ ಸಮಿತಿಯ ಎದುರು ವಿಚಾರಣೆ ಪೂರ್ಣಗೊಳ್ಳುವವರೆಗೆ ತಮ್ಮನ್ನು ಅಮಾನತಿನಲ್ಲಿ ಇರಿಸುವುದು ನಿಯಮಗಳ ಉಲ್ಲಂಘನೆ ಎಂದು ಅರ್ಜಿದಾರರು ವಾದಿಸಿದ್ದರು.

ಶಾಸಕರನ್ನು ಅಮಾನತು ಮಾಡಿರುವುದು ಭಿನ್ನ ದನಿಗಳನ್ನು ಹತ್ತಿಕ್ಕುವ ಯತ್ನ ಅಲ್ಲ. ಬದಲಿಗೆ, ವಿರೋಧ ಪಕ್ಷಗಳಿಗೆ ಸೇರಿದ ಶಾಸಕರು ಮತ್ತೆ ಮತ್ತೆ ತಪ್ಪು ಮಾಡುತ್ತಿರುವ ಕಾರಣಕ್ಕೆ ಕೈಗೊಂಡ ಶಿಸ್ತಿನ ಕ್ರಮ ಎಂದು ವಿಧಾನಸಭೆಯ ಅಧಿಕಾರಿಗಳು ಕೋರ್ಟ್‌ಗೆ ವಿವರಣೆ ನೀಡಿದ್ದರು.

ಸಕ್ಸೇನಾ ಅವರು ಎಎಪಿ ನೇತೃತ್ವದ ದೆಹಲಿ ಸರ್ಕಾರದ ಸಾಧನೆಗಳನ್ನು ಫೆಬ್ರುವರಿ 15ರಂದು ಹೇಳುವ ಸಂದರ್ಭದಲ್ಲಿ ಬಿಜೆಪಿ ಶಾಸಕರು ಅವರ ಭಾಷಣಕ್ಕೆ ಹಲವು ಬಾರಿ ಅಡ್ಡಿ ಉಂಟುಮಾಡಿದ್ದರು. ಇದಾದ ನಂತರ, ಎಎಪಿ ಶಾಸಕ ದಿಲೀಪ್ ಪಾಂಡೆ ಅವರು, ಏಳು ಶಾಸಕರ ಅಮಾನತಿಗೆ ಸದನದಲ್ಲಿ ಗೊತ್ತುವಳಿಯೊಂದನ್ನು ಮಂಡಿಸಿದ್ದರು. ಗೊತ್ತುವಳಿಯನ್ನು ಒಪ್ಪಿದ್ದ ಸ್ಪೀಕರ್ ರಾಮ್ ನಿವಾಸ್ ಗೋಯಲ್ ಅವರು ಅದನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿದ್ದರು.

ವಿರೋಧ ಪಕ್ಷದ ನಾಯಕ ರಾಮವೀರ್ ಸಿಂಗ್ ಬಿಧೂಢಿ ಅವರನ್ನು ಹೊರತುಪಡಿಸಿ, ಬಿಜೆಪಿಯ ಇತರ ಎಲ್ಲ ಶಾಸಕರನ್ನು ಸದನದಿಂದ ಅಮಾನತು ಮಾಡಲಾಗಿತ್ತು.

ನೌಕಾಪಡೆ: 'ಐಎನ್‌ಎಸ್ ಜಟಾಯು' ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಡಲ ಗಡಿ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುವ ನೂತನ ನೌಕಾನೆಲೆ 'ಐಎನ್‌ಎಸ್ ಜಟಾಯು' ಮಿನಿಕಾಯ್ ದ್ವೀಪದಲ್ಲಿ ಬುಧವಾರ ಕಾರ್ಯಾರಂಭ ಮಾಡಿತು.

ಜೊತೆಗೆ, 'ಎಂಎಚ್–60ಆರ್' ಹೆಲಿಕಾಪ್ಟರ್‌ಗಳನ್ನು ಒಳಗೊಂಡ ನೌಕಾಪಡೆಯ ಮೊದಲ ತುಕಡಿಯನ್ನು ಕೊಚ್ಚಿಯಲ್ಲಿ ನಿಯೋಜಿಸಲಾಯಿತು.

ಇದೇ ಸಂದರ್ಭದಲ್ಲಿ, 'ಐಎನ್‌ಎಸ್ ಜಟಾಯು'ವಿನ ಮೊದಲ ಕಮಾಂಡಿಂಗ್ ಆಫೀಸರ್ ಆಗಿ ನೇಮಕವಾಗಿರುವ ಕಮಾಂಡರ್ ವ್ರತ ಬಘೇಲ್ ಅಧಿಕಾರ ವಹಿಸಿಕೊಂಡರು. ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿಕುಮಾರ್ ಉಪಸ್ಥಿತರಿದ್ದರು.

ವಾಯುಪಡೆ ಸಿಬ್ಬಂದಿ ಸೇರಿದಂತೆ ಭಾರತದ ಎಲ್ಲ ಸಿಬ್ಬಂದಿ ತನ್ನ ನೆಲದಿಂದ ಹೊರ ಹೋಗಬೇಕು ಎಂದು ಮಾಲ್ದೀವ್ಸ್ ಘೋಷಿಸಿದ ಹಿನ್ನೆಲೆಯಲ್ಲಿ ಉಭಯ ದೇಶಗಳ ಸಂಬಂಧದಲ್ಲಿ ಕಂದಕ ಸೃಷ್ಟಿಯಾಗಿದೆ. ಹೀಗಾಗಿ, ಕಡಲ ಗಡಿ ರಕ್ಷಣೆ ವಿಚಾರದಲ್ಲಿ ಈ ನೌಕಾನೆಲೆಗಳ ಕಾರ್ಯಾರಂಭಕ್ಕೆ ಮಹತ್ವ ಬಂದಿದೆ.

ನೂತನ 'ಐಎನ್‌ಎಸ್ ಜಟಾಯು' ಹಾಗೂ ಈಗಾಗಲೇ ಅಂಡಮಾನ್‌ನಲ್ಲಿರುವ ನೌಕಾನೆಲೆ ದೇಶದ ರಕ್ಷಣೆ ವಿಷಯದಲ್ಲಿ 'ಕಣ್ಣು ಮತ್ತು ಕಿವಿ'ಗಳಂತೆ ಕಾರ್ಯ ನಿರ್ವಹಿಸಲಿವೆ ಎಂದು ನೌಕಾಪಡೆ ಹೇಳಿದೆ.

ಐಎನ್‌ಎಸ್ ಜಟಾಯು ನೌಕಾನೆಲೆಯಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸಲು ನೌಕಾಪಡೆ ಮುಂದಾಗಿದ್ದು, ಇದರ ಭಾಗವಾಗಿ ಏರ್‌ಸ್ಟ್ರಿಪ್ ನಿರ್ಮಾಣಕ್ಕೆ ಅನುಮೋದನೆ ನೀಡುವ ಪ್ರಕ್ರಿಯೆ ಅಂತಿಮ ಘಟ್ಟದಲ್ಲಿದೆ. ಇದರ ಜೊತೆಗೆ, ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸುವ ನಿಟ್ಟಿನಲ್ಲಿಯೂ ಪ್ರಯತ್ನಗಳು ನಡೆಯುತ್ತಿವೆ.

ಕವರತ್ತಿಯಲ್ಲಿ ದಿನದ 24 ಗಂಟೆಗಳ ಕಾಲ ಹೆಲಿಕಾಪ್ಟರ್‌ಗಳಿಂದ ಕಣ್ಗಾವಲು ವ್ಯವಸ್ಥೆಗೆ ಶೀಘ್ರವೇ ಚಾಲನೆ ನೀಡಲಾಗುತ್ತಿದ್ದು, ರೇಡಾರ್ ವ್ಯವಸ್ಥೆ ಅಳವಡಿಕೆಗಾಗಿ ವಾಯುಪಡೆಗೆ ಜಮೀನು ಹಂಚಿಕೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಕೇಜ್ರಿವಾಲ್ ವಿರುದ್ಧ ಇ.ಡಿ. ದೂರು

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಗೆ ಹಾಜರಾಗದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ ಜಾರಿ ನಿರ್ದೇಶನಾಲಯವು ದೆಹಲಿಯ ನ್ಯಾಯಾಲಯವೊಂದರಲ್ಲಿ ಹೊಸದಾಗಿ ದೂರು ದಾಖಲಿಸಿದೆ.

ಸಂಖ್ಯೆ 4ರಿಂದ 8ರವರೆಗಿನ ಸಮನ್ಸ್‌ಗಳಿಗೆ ಪ್ರತಿಯಾಗಿ ಕೇಜ್ರಿವಾಲ್ ಅವರು ವಿಚಾರಣೆಗೆ ಹಾಜರಾಗಿಲ್ಲ ಎಂದು ದೂರು ಸಲ್ಲಿಸಲಾಗಿದೆ ಎಂದು ಮೂಲಗಳು ಹೇಳಿವೆ. ನ್ಯಾಯಾಲಯವು ಈ ದೂರಿನ ವಿಚಾರಣೆಯನ್ನು ಗುರುವಾರ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

ಮೊದಲ ಮೂರು ಸಮನ್ಸ್‌ಗಳಿಗೆ ಪ್ರತಿಯಾಗಿ ವಿಚಾರಣೆಗೆ ಹಾಜರಾಗದೆ ಇದ್ದ ಕಾರಣಕ್ಕಾಗಿ ಕೇಜ್ರಿವಾಲ್ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕೋರಿ ಇ.ಡಿ. ಈ ಮೊದಲು ಕೂಡ ಅರ್ಜಿ ಸಲ್ಲಿಸಿದೆ. ಇದರ ವಿಚಾರಣೆಯನ್ನು ಕೋರ್ಟ್ ಮಾರ್ಚ್ 16ಕ್ಕೆ ನಿಗದಿ ಮಾಡಿದೆ. ಇ.ಡಿ. ಸಮನ್ಸ್‌ಗಳನ್ನು ಅರವಿಂದ ಕೇಜ್ರಿವಾಲ್ ಅವರು ಕಾನೂನುಬಾಹಿರ ಎಂದು ಕರೆದಿದ್ದಾರೆ.

ನ್ಯಾಯಾಲಯದ ಮುಂದೆ ಹಾಜರಾದ ಜಯಪ್ರದಾ

ರಾಮಪುರ (ಪಿಟಿಐ): 2019ರ ಲೋಕಸಭೆ ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದ ಎರಡು ಪ್ರಕರಣಗಳ ವಿಚಾರಣೆಗಾಗಿ ಮಾಜಿ ಸಂಸದೆ ಮತ್ತು ನಟಿ ಜಯಪ್ರದಾ ಅವರು ಬುಧವಾರ ವಿಶೇಷ ನ್ಯಾಯಾಲಯದ ಮುಂದೆ ಹಾಜರಾದರು.

'ಜಯಪ್ರದಾ ಅವರು ತಮ್ಮ ವಕೀಲರೊಂದಿಗೆ ವಿಚಾರಣೆಗೆ ಹಾಜರಾಗಿದ್ದು, ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ಮಾರ್ಚ್ 22ಕ್ಕೆ ಮುಂದೂಡಿದೆ' ಎಂದು ಪ್ರಾಸಿಕ್ಯೂಷನ್ ಅಧಿಕಾರಿ ನೀರಜ್ ಕುಮಾರ್ ತಿಳಿಸಿದ್ದಾರೆ.

2019ರ ಲೋಕಸಭೆ ಚುನಾವಣೆ ವೇಳೆ ಬಿಜೆಪಿಯ ಅಭ್ಯರ್ಥಿಯಾಗಿದ್ದ ಜಯಪ್ರದಾ ಅವರು ನೀತಿ ಸಂಹಿತೆ ಜಾರಿಯಲ್ಲಿರುವಾಗ ಅಭಿವೃದ್ಧಿ ಯೋಜನೆಗಳನ್ನು ಲೋಕಾರ್ಪಣೆಗೊಳಿಸಿದ್ದಾರೆ ಎಂದು ಕೆಮ್ರಿ ಮತ್ತು ಸ್ವರ್ ಠಾಣೆಯ ಪೊಲೀಸರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದರು.

ಉದಯನಿಧಿ, ಬಾಬು ವಿರುದ್ಧದ ಅರ್ಜಿ ವಜಾ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿರುವ ಉದಯನಿಧಿ ಸ್ಟಾಲಿನ್ ಮತ್ತು ಪಿ.ಕೆ. ಶೇಖರ್ ಬಾಬು ಹಾಗೂ ಸಂಸದ ಎ. ರಾಜಾ ಅವರ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ಬುಧವಾರ ತಿರಸ್ಕರಿಸಿದೆ.

ಸನಾತನ ಧರ್ಮದ ವಿರುದ್ಧ ಹೇಳಿಕೆ ನೀಡಿದ ನಂತರದಲ್ಲಿ ಇವರಿಗೆ ಅಧಿಕಾರದಲ್ಲಿ ಇರಲು ಯಾವ ಹಕ್ಕಿದೆ ಎಂದು ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿತ್ತು. ನ್ಯಾಯಮೂರ್ತಿ ಅನಿತಾ ಸುಮಂತ್ ಅವರು ಅರ್ಜಿಯನ್ನು ವಜಾಗೊಳಿಸಿದರು. ಆದರೆ, ಉನ್ನತ ಸ್ಥಾನಗಳಲ್ಲಿ ಇರುವವರು ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕು ಎಂದು ನ್ಯಾಯಮೂರ್ತಿ ಹೇಳಿದರು.

ನೀರಿನೊಳಗಿನ ಮೊದಲ ಮೆಟ್ರೊ ಮಾರ್ಗ ಉದ್ಘಾಟನೆ

ಕೋಲ್ಕತ್ತ(ಪಿಟಿಐ): ದೇಶದಲ್ಲಿ ಮೊದಲ ಬಾರಿಗೆ ನೀರಿನೊಳಗಿನ ಸುರಂಗ ಮಾರ್ಗದ ಮೆಟ್ರೊ ರೈಲು ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಬುಧವಾರ ಇಲ್ಲಿ ಹಸಿರು ನಿಶಾನೆ ತೋರಿಸಿದರು.

ಕೋಲ್ಕತ್ತ ಮೆಟ್ರೊದ ಎಸ್‌ಪ್ಲನೇಡ್–ಹೌರಾ ಮೈದಾನ ಸೆಕ್ಷನ್‌ನಲ್ಲಿ ಈ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ.

ಸಂಚಾರಕ್ಕೆ ಚಾಲನೆ ನೀಡಿದ ನಂತರ, ಮೋದಿ ಅವರು ಹೌರಾ ಮೈದಾನ ನಿಲ್ದಾಣಕ್ಕೆ ಮೆಟ್ರೊ ರೈಲಿನಲ್ಲಿ ಸಂಚರಿಸಿದರು. ಈ ವೇಳೆ, ಅವರು ಶಾಲಾ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಅದೇ ಮಾರ್ಗವಾಗಿ, ಎಸ್ಪಲನೇಡ್ ನಿಲ್ದಾಣಕ್ಕೆ ಮೋದಿ ಮರಳಿದರು. ಪಶ್ಚಿಮ ಬಂಗಾಳ ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಈ ವೇಳೆ ಇದ್ದರು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಾರ್ಯಕ್ರಮದಿಂದ ದೂರ ಉಳಿದಿದ್ದರು.

ಹೂಗ್ಲಿ ನದಿಯಲ್ಲಿ, ನೆಲಮಟ್ಟದಿಂದ 32 ಮೀಟರ್ ಆಳದಲ್ಲಿ ಈ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ.

ಪೂರ್ವ–ಪಶ್ಚಿಮ ಕಾರಿಡಾರ್‌ನ ಭಾಗವಾಗಿರುವ, 4.8 ಕಿ.ಮೀ. ಉದ್ದದ ಎಸ್‌ಪ್ಲನೇಡ್–ಹೌರಾ ಮೈದಾನ ಸೆಕ್ಷನ್ ಅನ್ನು ₹4,960 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಬಿಜೆಪಿ– ಬಿಜೆಡಿ ಮೈತ್ರಿ?

ಭುವನೇಶ್ವರ(ಪಿಟಿಐ): ಲೋಕಸಭೆ ಹಾಗೂ ಒಡಿಶಾ ವಿಧಾನಸಭೆ ಚುನಾವಣೆಗೂ ಮುನ್ನ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಬಿಜೆಪಿ ಹಾಗೂ ಬಿಜೆಡಿ ಪಕ್ಷಗಳು ಬುಧವಾರ ಸುಳಿವು ನೀಡಿವೆ.

ಈ ಕುರಿತು ಯಾವುದೇ ಅಧಿಕೃತ ಘೋಷಣೆಯಾಗಿಲ್ಲ. ಆದರೆ, ಉಭಯ ಪಕ್ಷಗಳ ನಾಯಕರು ಇಂತಹ ನಡೆ ಕುರಿತು ಸುಳಿವು ನೀಡಿದ್ದಾರೆ.

ಬಿಜೆಡಿ ನಾಯಕರು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ನಿವಾಸದಲ್ಲಿ ಸುದೀರ್ಘ ಸಭೆ ನಡೆಸಿದರು. ಅತ್ತ, ನವದೆಹಲಿಯಲ್ಲಿ ಬಿಜೆಪಿ ನಾಯಕರು ಕೂಡ ಚುನಾವಣೆ ಕುರಿತು ಬಿರುಸಿನ ಚರ್ಚಿಸಿದ್ದಾರೆ. ಉಭಯ ಪಕ್ಷಗಳ ನಡುವೆ ಚುನಾವಣಾಪೂರ್ವ ಮೈತ್ರಿ ಬಗ್ಗೆಯೂ ಈ ಸಭೆಗಳಲ್ಲಿ ಚರ್ಚೆ ನಡೆಯಿತು ಎಂದು ಮೂಲಗಳು ಹೇಳಿವೆ.

ಬಿಜೆಪಿ ಸೇರಲು ನಿರ್ಧರಿಸಿದ ಗುಜರಾತ್ ಕಾಂಗ್ರೆಸ್ ಶಾಸಕ: (ಅಹಮದಾಬಾದ್ ವರದಿ): ಕಾಂಗ್ರೆಸ್ ಶಾಸಕರಾಗಿದ್ದ ಅರವಿಂದ್ ಲಡಾಣಿ ಅವರು ಬುಧವಾರ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಬಿಜೆಪಿ ಸೇರಲು ನಿರ್ಧರಿಸಿದ್ದಾರೆ.

ರಾಜೀನಾಮೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಲಡಾಣಿ ಅವರು 'ನಾನು ಬಿಜೆಪಿಯನ್ನು ಸೇರಲು ನಿರ್ಧರಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಟಿಎಂಸಿಯ ತಪಸ್ ರಾಯ್ ಬಿಜೆಪಿಗೆ

ಪಶ್ಚಿಮ ಬಂಗಾಳದ ಆಡಳಿತಾರೂಢ ಟಿಎಂಸಿ ಪಕ್ಷದಿಂದ ಎರಡು ದಿನಗಳ ಹಿಂದೆ ಹೊರ ನಡೆದಿದ್ದ ತಪಸ್ ರಾಯ್ ಅವರು ಬುಧವಾರ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಬಿಜೆಪಿ ಪಶ್ಚಿಮ ಬಂಗಾಳ ರಾಜ್ಯ ಘಟಕದ ಅಧ್ಯಕ್ಷ ಸುಕಾಂತ ಮಜುಮ್‌ದಾರ್ ಮತ್ತು ಸುವೇಂದು ಅಧಿಕಾರಿ ಅವರು ಪಕ್ಷದ ಬಾವುಟವನ್ನು ನೀಡುವ ಮೂಲಕ ರಾಯ್ ಅವರನ್ನು ಬರಮಾಡಿಕೊಂಡರು.

ಏಜೆಂಟ್ ವಂಚನೆಯಿಂದ ರಷ್ಯಾ ಸೇನೆಗೆ ಬಲವಂತದ ನೇಮಕ

ಯುದ್ಧ: ತೆಲಂಗಾಣದ ಯುವಕ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬಲವಂತದಿಂದ ರಷ್ಯಾ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ತೆಲಂಗಾಣದ ಇಬ್ಬರು ಯುವಕರ ಪೈಕಿ ಒಬ್ಬ ರಷ್ಯಾ–ಉಕ್ರೇನ್ ನಡುವಿನ ಯುದ್ಧದಲ್ಲಿ ಮಡಿದಿದ್ದಾನೆ.

ಹೈದರಾಬಾದ್‌ನ ಹಳೆನಗರದ ಬಜಾರ್ ಘಾಟ್‌ನ ಮೊಹಮ್ಮದ್ ಅಫ್ಸಾನ್ (30) ಮತ್ತು ನಾರಾಯಣಪೇಟೆಯ ಮೊಹಮ್ಮದ್ ಸೂಫಿಯಾನ್ ಅವರು ರಷ್ಯಾ ಸೇನೆಯಲ್ಲಿ ಸಹಾಯಕರಾಗಿ ಕೆಲಸ ಮಾಡಲು ತೆರಳಿದ್ದರು. ಇದರಲ್ಲಿ ಅಫ್ಸಾನ್ ಮೃತಪಟ್ಟಿರುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಿಬ್ಬಂದಿಯೊಬ್ಬರು ಬುಧವಾರ ಅಫ್ಸಾನ್ ಕುಟುಂಬ ಸದಸ್ಯರಿಗೆ ತಿಳಿಸಿದ್ದಾರೆ.

'ಈಗ ನಾನು ಏನನ್ನೂ ಮಾತನಾಡುವುದಿಲ್ಲ. ನಾವು ಹೆಚ್ಚಿನ ವಿವರಗಳಿಗಾಗಿ ಕಾಯುತ್ತಿದ್ದೇವೆ' ಎಂದು ಅಫ್ಸಾನ್ ಅವರ ಸಹೋದರ ಮೊಹಮ್ಮದ್ ಇಮ್ರಾನ್ 'ಪ್ರಜಾವಾಣಿ'ಗೆ ತಿಳಿಸಿದರು.

ವಾಪಸಾಗುವೆ ಎಂದಿದ್ದ ಅಫ್ಸಾನ್: ಸಣ್ಣ ವ್ಯಾಪಾರ ನಡೆಸುತ್ತಿರುವ ಇಮ್ರಾನ್, ಹೈದರಾಬಾದ್‌ನ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ತನ್ನ ಸಹೋದರನಿಗೆ ರಷ್ಯಾ ಸೇನೆಯಲ್ಲಿ ಸಹಾಯಕ ಉದ್ಯೋಗ ನೀಡುವುದಾಗಿ ದುಬೈನ ಏಜೆಂಟ್ ಒಬ್ಬರು ವಂಚಿಸಿದ್ದಾರೆ ಎಂದು ಕೆಲ ದಿನಗಳ ಹಿಂದೆ ತಿಳಿಸಿದ್ದರು.

ಕಳೆದ ನವೆಂಬರ್‌ನಲ್ಲಿ ಅಫ್ಸಾನ್ ಇತರ ಇಬ್ಬರೊಂದಿಗೆ ಚೆನ್ನೈನಿಂದ ಶಾರ್ಜಾ ಮೂಲಕ ಮಾಸ್ಕೊಗೆ ತೆರಳಿದ್ದರು. ಕಳೆದ ಡಿಸೆಂಬರ್ 31ರಂದು ಅಫ್ಸಾನ್ ತಮ್ಮ ಕುಟುಂಬ ಸದಸ್ಯರೊಂದಿಗೆ ಮಾತನಾಡಿ, ಹೈದರಾಬಾದ್‌ಗೆ ವಾಪಸ್ ಬರುವುದಾಗಿ ತಿಳಿಸಿದ್ದನ್ನು ಇಮ್ರಾನ್ ಖಚಿತಪಡಿಸಿದ್ದರು.

ಡಿಸೆಂಬರ್ ನಂತರ ಅಸ್ಫಾನ್ ಅವರು ಕುಟುಂಬ ಸದಸ್ಯರ ಸಂಪರ್ಕಕ್ಕೆ ಸಿಕ್ಕಿಲ್ಲ. ಹಾಗಾಗಿ, ನಾಮಪಲ್ಲಿ ಪೊಲೀಸರನ್ನು ಸಂಪರ್ಕಿಸಿ ಎಫ್‌ಐಆರ್ ದಾಖಲಿಸಿದ್ದರು. ಪ್ರಕರಣದಲ್ಲಿ ಹೆಚ್ಚಿನ ಪ್ರಗತಿ ಕಾಣದ ಕಾರಣ ಅವರು ಹೈದರಾಬಾದ್ ಸಂಸದ ಅಸಾದುದ್ದೀನ್ ಓವೈಸಿ ಅವರನ್ನು ಸಂಪರ್ಕಿಸಿದ್ದರು.ಇಮ್ರಾನ್ ಕೂಡ ತನ್ನ ಸಹೋದರನನ್ನು ಪತ್ತೆಹಚ್ಚಿ, ಕರೆತರಲು ಮಾಸ್ಕೊಗೆ ಹೋಗಲು ಸಿದ್ಧರಾಗಿದ್ದರು. ಅಷ್ಟರಲ್ಲಿ ಅವರ ಸಾವಿನ ಮಾಹಿತಿ ಬಂದಿದೆ.

ಮುಖ್ಯಾಂಶಗಳು

- ₹1.5 ಲಕ್ಷ ಸಂಬಳದ ಭರವಸೆ ಕೊಡಲಾಗಿತ್ತು
- ಕಳೆದ ಡಿಸೆಂಬರ್‌ನಿಂದ ಕುಟುಂಬ ಸಂಪರ್ಕಕ್ಕೆ ಸಿಕ್ಕಿರಲಿಲ್ಲ

ಪ್ರಕರಣ ಬಯಲಿಗೆ ಬಂದ ಬಗೆ?

ಈ ವಿಷಯ ಕುರಿತು ಓವೈಸಿಯವರು ವಿದೇಶಾಂಗ ಸಚಿವಾಲಯದ ಗಮನಕ್ಕೆ ತಂದಿದ್ದರು. ಉದ್ಯೋಗ ಕೊಡಿಸುವ ಏಜೆಂಟರ ವಂಚನೆಯ ಜಾಲದಲ್ಲಿ ಸಿಲುಕಿ ಭಾರತದ ಸುಮಾರು 20 ಯುವಕರು ರಷ್ಯಾ ಸೇನೆಯಲ್ಲಿ ಸಹಾಯಕರ ಕೆಲಸಕ್ಕೆ ಸೇರಿದ್ದಾರೆ. ಇದರಲ್ಲಿ ಇಬ್ಬರು ತೆಲಂಗಾಣದ ಯುವಕರು ಸೇರಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಇತ್ತೀಚೆಗಷ್ಟೇ ದೃಢಪಡಿಸಿತ್ತು.

'ಯೂಟ್ಯೂಬ್ ಚಾನೆಲ್ ನಡೆಸುತ್ತಿರುವ ದುಬೈನ ಏಜೆಂಟ್ ಫೈಸಲ್ ಖಾನ್ ಎಂಬಾತ ತನ್ನ ಸಹೋದರನಿಗೆ ರಷ್ಯಾದ ಸೇನೆಯಲ್ಲಿ ಸಹಾಯಕ ಕೆಲಸಕ್ಕೆ ಆರಂಭದಲ್ಲಿ ತಿಂಗಳಿಗೆ ₹30 ಸಾವಿರ ಮತ್ತು ನಂತರ ₹1.5 ಲಕ್ಷ ಸಂಬಳ ನೀಡುವುದಾಗಿ ಭರವಸೆ ನೀಡಿದ್ದ. ಆತನಿಗೆ ನನ್ನ ಸಹೋದರ ₹3 ಲಕ್ಷ ಹಣ ಕೊಟ್ಟಿದ್ದಾನೆ. ಮಾಸ್ಕೊ ತಲುಪಿದ ಅಫ್ಸಾನ್‌ನನ್ನು ಇತರರೊಂದಿಗೆ ಉಕ್ರೇನ್ ಗಡಿಯಿಂದ 100 ಕಿ.ಮೀ. ದೂರದಲ್ಲಿರುವ ರೋಸ್ಟೊವ್-ಆನ್-ಡಾನ್‌ಗೆ ಕರೆದೊಯ್ಯಲಾಗಿದೆ. ಆರಂಭದಲ್ಲಿ ಬಲವಂತವಾಗಿ ಆತನನ್ನು ಸೇನಾ ತರಬೇತಿ ಶಿಬಿರಕ್ಕೆ ಸೇರಿಸಿ, ನಂತರ ಯುದ್ಧಭೂಮಿಗೆ ದೂಡಿದ್ದಾರೆ. ಅಫ್ಸಾನ್‌ಗೆ ಪತ್ನಿ ಮತ್ತು ಎಂಟು ತಿಂಗಳ ಹೆಣ್ಣು ಮಗು ಮತ್ತು ಎರಡು ವರ್ಷದ ಗಂಡು ಮಗು ಇದೆ' ಎಂದು ಇಮ್ರಾನ್ ಇತ್ತೀಚೆಗೆ ತಿಳಿಸಿದ್ದರು.

ಖೇಲೊ ಇಂಡಿಯಾ ಪದಕ ವಿಜೇತರು ಸರ್ಕಾರಿ ನೌಕರಿಗೆ ಅರ್ಹರು

ನವದೆಹಲಿ (ಪಿಟಿಐ): ಪರಿಷ್ಕೃತ ಮಾನದಂಡಗಳ ಪ್ರಕಾರ, ಖೇಲೊ ಇಂಡಿಯಾ ಕ್ರೀಡಾಕೂಟದಲ್ಲಿ ಪದಕ ಗೆದ್ದವರು ಈಗ ಸರ್ಕಾರಿ ಉದ್ಯೋಗ ಪಡೆಯಲು ಅರ್ಹರಾಗುತ್ತಾರೆ ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಬುಧವಾರ ತಿಳಿಸಿದ್ದಾರೆ.

ಮೋದಿ ಅವರ ಕನಸಾದ ಪರಿಣಾಮಕಾರಿ ಕ್ರೀಡಾ ವಾತಾವರಣ ನಿರ್ಮಿಸಲು, ಬೇರುಮಟ್ಟದಲ್ಲಿ ಪ್ರತಿಭೆಗಳನ್ನು ಬೆಳೆಸಲು ಮತ್ತು ವೃತ್ತಿಯನ್ನಾಗಿ ಹೊಂದಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಕ್ರೀಡಾ ಸಚಿವಾಲಯದ ಜೊತೆ ಸಮಾಲೋಚನೆ ನಡೆಸಿದ್ದು, ಸರ್ಕಾರಿ ಹುದ್ದೆಗೆ ಸೇರಬಯಸುವ ಕ್ರೀಡಾಪಟುಗಳಿಗೆ ಮಾನದಂಡವನ್ನು ಪರಿಷ್ಕರಿಸಲಾಗಿದೆ ಎಂದು ಅವರು ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಡ್ರಾ ಪಂದ್ಯದಲ್ಲಿ ಗುಕೇಶ್– ಪ್ರಜ್ಞಾನಂದ

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ, ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಏಳನೇ ಸುತ್ತಿನ ಪಂದ್ಯದಲ್ಲಿ ಉತ್ತಮ ಸ್ಥಿತಿಯಲ್ಲಿದ್ದರೂ, ಸ್ವದೇಶದ ಡಿ.ಗುಕೇಶ್ ವಿರುದ್ಧ ಅದನ್ನು ಗೆಲುವನ್ನಾಗಿ ಪರಿವರ್ತಿಸಲು ವಿಫಲರಾದರು. ಬುಧವಾರ ಈ ದೀರ್ಘ ಪಂದ್ಯ 91 ನಡೆಗಳ ನಂತರ 'ಡ್ರಾ' ಆಯಿತು.

ಕಪ್ಪು ಕಾಯಿಗಳಲ್ಲಿ ಆಡಿದ ಗುಕೇಶ್ ಸೋಲಿನಿಂದ ತಪ್ಪಿಸಿಕೊಂಡರನ್ನೆಬಹುದು. ಇನ್ನೊಂದೆಡೆ, ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ (5) ಅವರು ಜರ್ಮನಿಯ ವಿನ್ಸೆಂಟ್ ಕೀಮರ್ (3) ಅವರನ್ನು ಸೋಲಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. 10 ಆಟಗಾರರ ಟೂರ್ನಿಯಲ್ಲಿ ಇನ್ನೆರಡು ಸುತ್ತಿನ ಪಂದ್ಯಗಳು ಉಳಿದಿವೆ. ವಿದಿತ್ ಗುಜರಾತಿ (2) ಹಿನ್ನಡೆ ಕಂಡರು. ಅವರು ಇರಾನ್‌ನ ಪರ್ಹಾಮ್ ಮಘಸೂಡ್ಲು ಎದುರು ಸೋಲನುಭವಿಸಿದರು. ಮಘಸೂಡ್ಲು (4.5) ಎರಡನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ ಮತ್ತು ಎನ್ಗುಯೆನ್ ಥಾಯ್ ದೈ ವಾನ್ (ಝೆಕ್ ರಿಪಬ್ಲಿಕ್) ತಲಾ ನಾಲ್ಕು ಪಾಯಿಂಟ್ಸ್ ಕಲೆಹಾಕಿದ್ದಾರೆ. ಗುಕೇಶ್ (3) ಅವರಿಗಿಂತ ಹಿಂದಿದ್ದಾರೆ.

ಶೀತಹವೆಯಲ್ಲಿ 'ಟೆಸ್ಟ್' ಕಾವು

ಅಶ್ವಿನ್, ಬೇಸ್ಟೊಗೆ 100ನೇ ಟೆಸ್ಟ್ • ವೇಗಿಗಳಿಗೆ ನೆರವು ನೀಡುವ ಪಿಚ್‌ನಲ್ಲಿ ಬೂಮ್ರಾ ಮರುಪ್ರವೇಶ

ಧರ್ಮಶಾಲಾ (ಪಿಟಿಐ): ಭಾರತದ ಪ್ರಮುಖ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರಿಗೆ ತಮ್ಮ ನೂರನೇ ಟೆಸ್ಟ್ ಕ್ರಿಕೆಟ್ ಪಂದ್ಯವನ್ನು ಸ್ಮರಣೀಯವಾಗಿಸಿಕೊಳ್ಳುವ ಗುರಿ. ಫಾರ್ಮ್ ಕಂಡುಕೊಳ್ಳಲು ತಡಕಾಡಿರುವ, ಇಂಗ್ಲೆಂಡ್‌ನ ಅನುಭವಿ ಬ್ಯಾಟ್ಸ್‌ಮನ್ ಜಾನಿ ಬೇಸ್ಟೊ ಅವರಿಗೆ ತಮ್ಮ ಬದುಕಿನ ನೂರನೇ ಟೆಸ್ಟ್‌ನಲ್ಲಾದರೂ ಲಯಕ್ಕೆ ಮರಳುವ ತುಡಿತ.

ಭಾರತ ಹಾಗೂ ಇಂಗ್ಲೆಂಡ್ ನಡುವೆ ಗುರುವಾರ ಇಲ್ಲಿ ಆರಂಭವಾಗಲಿರುವ ಟೆಸ್ಟ್ ಸರಣಿಯ ಐದನೇ ಹಾಗೂ ಕೊನೆಯ ಪಂದ್ಯದಲ್ಲಿ ಕುತೂಹಲಿಗಳ ಕಣ್ಣು ಈ ಇಬ್ಬರೂ ಆಟಗಾರರ ಮೇಲೆ ನೆಟ್ಟಿದೆ. ಸರಣಿಯಲ್ಲಿ ಭಾರತ ಈಗಾಗಲೇ 3–1 ಮುನ್ನಡೆ ಸಾಧಿಸಿದ್ದು, ಇನ್ನೂ ಒಂದು ಗೆಲುವಿನ ನಿರೀಕ್ಷೆಯಲ್ಲಿದೆ. ಈ ಪಂದ್ಯದಲ್ಲಿ ಗೆದ್ದರೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ದೃಷ್ಟಿಯಿಂದ ಆತಿಥೇಯ ತಂಡ ಪಟ್ಟಿಯಲ್ಲಿ ಇನ್ನಷ್ಟು ಕಾಲ ಅಗ್ರಸ್ಥಾನದಲ್ಲಿ ಉಳಿಯಬಹುದು.

ಧರ್ಮಶಾಲಾದ ಪಿಚ್ ಹಾಗೂ ಶೀತ ಹವೆ ಇಂಗ್ಲೆಂಡ್ ಆಟಗಾರರಿಗೆ ತಮ್ಮ ತವರಿನಲ್ಲಿ ಇರುವಂತಹುದೇ ವಾತಾವರಣ ಕಲ್ಪಿಸಿಕೊಟ್ಟಿದೆ. ಇಲ್ಲಿ ಪಂದ್ಯದ ಮೊದಲ ಎರಡು ದಿನ ಗರಿಷ್ಠ ಉಷ್ಣಾಂಶ 10 ಡಿಗ್ರಿ ಸೆಲ್ಸಿಯಸ್ ಇರಲಿದೆ. ವಾರಾಂತ್ಯದ ಹೊತ್ತಿಗೆ ಉಷ್ಣಾಂಶ ತುಸು ಹೆಚ್ಚಾಗಬಹುದು.

ಸಮತಟ್ಟಾಗಿ ಕಾಣುವ ಪಿಚ್‌ನಲ್ಲಿ ತೇವಾಂಶವಿದೆ. ಪ್ರತಿ ದಿನದಾಟದ ಮೊದಲ ಅವಧಿಯಲ್ಲಿ ವೇಗದ ಬೌಲರ್‌ಗಳಿಗೆ ಅದರಿಂದ ಅನುಕೂಲವಾಗುವ ಸಾಧ್ಯತೆ ಇದೆ.

ಸಾಂಪ್ರದಾಯಿಕವಾಗಿ ವೇಗದ ಬೌಲರ್‌ಗಳಿಗೆ ಈ ಪಿಚ್ ನೆರವು ನೀಡುತ್ತದೆಯಾದರೂ, ಸ್ಪಿನ್ನರ್‌ಗಳಿಗೆ ಫಲ ದೊರೆತ ಉದಾಹರಣೆಯೂ ಇದೆ. 2017ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಭಾರತದ ಗೆಲುವಿನಲ್ಲಿ ಸ್ಪಿನ್ನರ್‌ಗಳ ಪಾತ್ರ ಮಹತ್ವದ್ದಾಗಿತ್ತು. ಈ ಕ್ರೀಡಾಂಗಣದಲ್ಲಿ ನಡೆದಿರುವ ಏಕೈಕ ಟೆಸ್ಟ್ ಪಂದ್ಯ ಅದು.

ಇತ್ತೀಚೆಗೆ ಇಲ್ಲಿ ನಾಲ್ಕು ರಣಜಿ ಟ್ರೋಫಿ ಪಂದ್ಯಗಳು ನಡೆದಿವೆ. ಬಹುತೇಕ ಇನಿಂಗ್ಸ್‌ಗಳಲ್ಲಿ ತಂಡಗಳು 300ಕ್ಕೂ ಹೆಚ್ಚು ರನ್ ದಾಖಲಿಸಿದ್ದವು. ಬರೋಡಾ ತಂಡವು 482 ರನ್‌ಗಳನ್ನು ಒಂದೇ ಇನಿಂಗ್ಸ್‌ನಲ್ಲಿ ಕಲೆಹಾಕಿದ್ದು ಈ ಬಾರಿಯ ರಣಜಿ ಋತುವಿನಲ್ಲಿ ಇಲ್ಲಿ ದಾಖಲಾದ ಅತಿ ಗರಿಷ್ಠ ಸ್ಕೋರ್.

ಅಶ್ವಿನ್ ಹಾಗೂ ಜಾನಿ ಬೇಸ್ಟೊ ಇಬ್ಬರಿಗೂ ಇದು ನೂರನೇ ಟೆಸ್ಟ್. ಪಿಚ್ ಕುರಿತು ಇಬ್ಬರ ಅಭಿಪ್ರಾಯಗಳೂ ಭಿನ್ನವಾಗಿವೆ. ಬೇಸ್ಟೊ ಪ್ರಕಾರ ಇದು ಒಳ್ಳೆಯ ಪಿಚ್. ಅಶ್ವಿನ್ ಗಮನಿಸಿರುವಂತೆ, ಶೀತ ವಾತಾವರಣದ ಕಾರಣದಿಂದಾಗಿ ಇದು ಮರ್ಮ ಅರಿಯಲಾಗದ ಪಿಚ್.

ಭಾರತ ತಂಡದ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ —ಎಎಫ್‌ಪಿ ಚಿತ್ರ

ಇಬ್ಬರು ವೇಗದ ಬೌಲರ್‌ಗಳು ಹಾಗೂ ಮೂವರು ಸ್ಪಿನ್ನರ್‌ಗಳನ್ನು ಆಡಿಸುವ ತಂತ್ರವನ್ನೇ ಭಾರತ ಇಲ್ಲಿಯೂ ಮುಂದುವರಿಸುವ ಸಾಧ್ಯತೆ ಇದೆ. ಸ್ಪಿನ್ ವಿಭಾಗದಲ್ಲಿ ಅಶ್ವಿನ್, ರವೀಂದ್ರ ಜಡೇಜ ಇಬ್ಬರ ಅನುಭವ ಒಂದು ಕಡೆ. 2017ರಲ್ಲಿ ಪದಾರ್ಪಣೆ ಮಾಡಿದಾಗಿನಿಂದ ಇಲ್ಲಿಯವರೆಗೆ ಕೇವಲ 11 ಟೆಸ್ಟ್‌ಗಳಲ್ಲಿ ಆಡಿರುವ ಕುಲದೀಪ್ ಯಾದವ್ ಇನ್ನೊಂದು ಕಡೆ. ಅವರಿಗೆ ಇದು ಸಾಮರ್ಥ್ಯ ರುಜುವಾತು ಪಡಿಸಲು ಒಳ್ಳೆಯ ಅವಕಾಶ.

ಕೆ.ಎಲ್.ರಾಹುಲ್ ಅವರು ದೈಹಿಕವಾಗಿ ಇನ್ನೂ ಫಿಟ್ ಆಗಿಲ್ಲ. ಹೀಗಾಗಿ, ರಜತ್ ಪಾಟೀದಾರ್ ಅವರಿಗೆ ಮಗದೊಂದು ಅವಕಾಶ ಸಿಗಬಹುದು. ಈ ಸರಣಿಯಲ್ಲಿ ಇದುವರೆಗೆ ಆರು ಇನಿಂಗ್ಸ್‌ಗಳಲ್ಲಿ ಅವರು ಕೇವಲ 63 ರನ್ ಗಳಿಸಿದ್ದಾರೆ. ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವರಿಗಿದು ಕೊನೆಯ ಅವಕಾಶ ಎನ್ನಬಹುದು.

ಮೇಲಿನ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ, ಕರ್ನಾಟಕದವರೇ ಆದ ದೇವದತ್ತ ಪಡಿಕ್ಕಲ್ ಅವರೂ ಆಡುವ ಹನ್ನೊಂದರ ತಂಡದಲ್ಲಿ ಒಬ್ಬರಾಗುವ ಸಾಧ್ಯತೆ ಇದೆ. ಒಂದು ವೇಳೆ ಆಯ್ಕೆಯಾದರೆ ಮಧ್ಯಮ ಕ್ರಮಾಂಕದಲ್ಲಿ ಆಡಿಸಬಹುದು. ಎರಡು ಟೆಸ್ಟ್ ಪಂದ್ಯಗಳ ಚಿಕ್ಕ ಅನುಭವ ಪಡೆದುಕೊಂಡಿರುವ ಸರ್ಫರಾಜ್ ಖಾನ್, ರಾಜ್‌ಕೋಟ್‌ನಲ್ಲಿ ಚೆನ್ನಾಗಿ ಆಡಿದ್ದರು. ರಾಂಚಿಯಲ್ಲಿ ಮಂಕಾಗಿದ್ದರು. ಅವರಿಗೂ ತಂಡದಲ್ಲಿ ಸ್ಥಾನ ಗಟ್ಟಿಗೊಳಿಸಲು ಇದು ಅವಕಾಶವಾಗಿದೆ.

ಸುನಿಲ್ ಗಾವಸ್ಕರ್ ಅವರಷ್ಟೆ ಇದುವರೆಗೆ ಟೆಸ್ಟ್ ಸರಣಿಯೊಂದರಲ್ಲಿ 700ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ ಸಾಧನೆ ಮಾಡಿದ್ದರು. ಯಶಸ್ವಿ ಜೈಸ್ವಾಲ್ ಈ ಸರಣಿಯಲ್ಲಿ ಆ ಸಾಲಿಗೆ ಸೇರಿ ಗಮನ ಸೆಳೆದಿದ್ದಾರೆ.

ತಂಡಕ್ಕೆ ವುಡ್: ಇಂಗ್ಲೆಂಡ್‌ನ ಹೊಸ ಸ್ಪಿನ್ನರ್ ಶೋಯಬ್ ಬಶೀರ್ ಕಳೆದ ಟೆಸ್ಟ್‌ನಲ್ಲಿ ಭಾರತವನ್ನು ಕಾಡಿದ್ದರು. ಅವರು ಬೆರಳಿನ ಊತಕ್ಕೆ ಚಿಕಿತ್ಸೆ ಪಡೆದ ನಂತರ ಕಣಕ್ಕೆ ಮರಳಲಿದ್ದು, ಹೇಗೆ ಆಡುವರು ಎನ್ನುವ ಕುತೂಹಲವಿದೆ. ಕಳೆದ ಪಂದ್ಯದಲ್ಲಿ ಆಡಿದ್ದ ರಾಬಿನ್‌ಸನ್ ಬದಲಿಗೆ ಮಾರ್ಕ್ ವುಡ್ ಆಡಲಿದ್ದಾರೆ.

ಜಸ್‌ಪ್ರೀತ್ ಬೂಮ್ರಾ ಕಣಕ್ಕೆ ಇಳಿಯಲಿದ್ದು, ಭಾರತದ ವೇಗದ ಬೌಲಿಂಗ್‌ಗೆ ಹಳೆಯ ಕಸುವು ದೊರೆಯಲಿದೆ. ಕಡಿಮೆ ಅನುಭವಿಗಳು, ಹೆಚ್ಚು ಉತ್ಸಾಹಿ ಯುವಕರನ್ನು ಒಳಗೊಂಡ ಭಾರತ ತಂಡ ಕೊನೆಯ ಟೆಸ್ಟ್ ಅನ್ನು ಗೆಲ್ಲುವ ಉತ್ಸಾಹದಲ್ಲಿದೆ. ಇನ್ನೊಂದೆಡೆ, 'ಬಾಝ್‌ಬಾಲ್' ತಂತ್ರ ಅನುಸರಿಸಲು ಶುರುಮಾಡಿದಾಗಿನಿಂದ ಇದೇ ಮೊದಲ ಬಾರಿಗೆ ಸರಣಿ ಸೋತಿರುವ ಇಂಗ್ಲೆಂಡ್ ಸೋಲಿನ ಅಂತರ ಕಡಿಮೆ ಮಾಡಿಕೊಳ್ಳುವ ಇರಾದೆ ಇಟ್ಟುಕೊಂಡು ಕಣಕ್ಕೆ ಇಳಿಯಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

> **ಯಾವುದೇ ಆಟಗಾರನಿಗೆ 100ನೇ ಟೆಸ್ಟ್ ಪಂದ್ಯ ಆಡುವುದು ದೊಡ್ಡ ಸಾಧನೆ. ಅಶ್ವಿನ್ ಅವರಿಗೆ ಇದೊಂದು ದೊಡ್ಡ ಮೈಲಿಗಲ್ಲು. ಅವರು ನಮ್ಮ ಮ್ಯಾಚ್ ವಿನ್ನರ್ ಕೂಡ**
> **ರೋಹಿತ್ ಶರ್ಮಾ,** ಭಾರತ ತಂಡದ ನಾಯಕ

> **ಆಟಗಾರರಿಗೆ ದಣಿವೆಂಬುದು ಇಲ್ಲ. ಯಾವ ನೆಲದಲ್ಲಿಯೇ ಆಗಲಿ ಕ್ರಿಕೆಟ್ ಆಡಲು ನಾವು ಸದಾ ಕಾತರರಾಗಿರುತ್ತೇವೆ**
> **ಬೆನ್ ಸ್ಟೋಕ್ಸ್,** ಇಂಗ್ಲೆಂಡ್ ತಂಡದ ನಾಯಕ

ಇಂಗ್ಲೆಂಡ್ ತಂಡದ ಜಾನಿ ಬೇಸ್ಟೊ —ಪಿಟಿಐ ಚಿತ್ರ

ಇಂಗ್ಲೆಂಡ್ ಆಟಗಾರರಿಂದ ದಲೈಲಾಮಾ ಭೇಟಿ

ಧರ್ಮಶಾಲಾ (ಪಿಟಿಐ): ಇಂಗ್ಲೆಂಡ್ ಕ್ರಿಕೆಟ್ ತಂಡದ ಕೆಲವು ಆಟಗಾರರು ಬುಧವಾರ ಟಿಬೇಟಿಯನ್ನರ ಆಧ್ಯಾತ್ಮಿಕ ನಾಯಕ ದಲೈ ಲಾಮಾ ಅವರನ್ನು ಇಲ್ಲಿನ ಮೆಕ್‌ಲೋಡ್ ಗಂಜ್‌ನಲ್ಲಿರುವ ಅವರ ನಿವಾಸದಲ್ಲಿ ಬುಧವಾರ ಭೇಟಿಯಾದರು.

ಭಾರತ ವಿರುದ್ಧ ಟೆಸ್ಟ್ ಸರಣಿಯ ಅಂತಿಮ ಪಂದ್ಯ ಆಡಲು ಇಂಗ್ಲೆಂಡ್ ತಂಡ ಇಲ್ಲಿಗೆ ಬಂದಿದೆ. ನೊಬೆಲ್ ಶಾಂತಿ ಪಾರಿತೋಷಕ ಪುರಸ್ಕೃತ ಲಾಮಾ ಅವರ ಜೊತೆ ಇಂಗ್ಲೆಂಡ್ ಆಟಗಾರರು ಇರುವ ಚಿತ್ರವನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಸಂಸ್ಥೆ (ಇಸಿಬಿ) ಬುಧವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಜಾಕ್ ಕ್ರಾಲಿ, ಟಾಮ್ ಹಾರ್ಟ್ಲಿ, ಡಾನ್ ಲಾರೆನ್ಸ್, ಓಲಿ ಪೋಪ್, ಗಸ್ ಅಟ್ಕಿನ್ಸನ್ ಮತ್ತು ಸಹಾಯಕ ಕೋಚ್ ಮಾರ್ಕಸ್ ಟ್ರೆಸ್ಕೋಥಿಕ್ ಭೇಟಿ ಮಾಡಿದ ತಂಡದಲ್ಲಿ ಇದ್ದರು.

ರಣಜಿ ಟ್ರೋಫಿ: ಮಧ್ಯಪ್ರದೇಶ ತಂಡಕ್ಕೆ ನಿರಾಸೆ

ಗೆಲುವಿನೊಡನೆ ಫೈನಲ್‌ಗೆ ವಿದರ್ಭ

ಮಧ್ಯಪ್ರದೇಶ ತಂಡದ ಕುಲವಂತ್ ಖೆಜ್ರೋಲಿಯಾ ಅವರ ವಿಕೆಟ್ ಪಡೆದ ಸಂಭ್ರಮದಲ್ಲಿ ವಿದರ್ಭದ ಬೌಲರ್ ಯಶ್ ಠಾಕೂರ್ —ಪಿಟಿಐ ಚಿತ್ರ

ನಾಗ್ಪುರ (ಪಿಟಿಐ): ವೇಗದ ಬೌಲರ್‌ಗಳಾದ ಆದಿತ್ಯ ಠಾಕರೆ (45ಕ್ಕೆ2) ಮತ್ತು ಯಶ್ ಠಾಕೂರ್ (60ಕ್ಕೆ3) ಅವರು ಮಧ್ಯಪ್ರದೇಶದ ಬಾಲಂಗೋಚಿಗಳ ವಿಕೆಟ್‌ಗಳನ್ನು ಬೇಗನೇ ಪಡೆದರು. ವಿದರ್ಭ ತಂಡ ರಣಜಿ ಟ್ರೋಫಿ ಸೆಮಿಫೈನಲ್ ಪಂದ್ಯದ ಐದನೇ ಹಾಗೂ ಅಂತಿಮ ದಿನವಾದ ಬುಧವಾರ 62 ರನ್‌ಗಳಿಂದ ಮಧ್ಯಪ್ರದೇಶ ತಂಡವನ್ನು ಸೋಲಿಸಿತು.

ವಿದರ್ಭ ಮಾರ್ಚ್ 10ರಿಂದ ಮುಂಬೈನ ಬಿಕೆಸಿ ಕ್ರೀಡಾಂಗಣದಲ್ಲಿ ನಡೆಯುವ ಫೈನಲ್‌ನಲ್ಲಿ ಮುಂಬೈ ತಂಡವನ್ನು ಎದುರಿಸಲಿದೆ.

ಗೆಲುವಿಗೆ 321 ರನ್‌ಗಳ ಗುರಿ ಎದುರಿಸಿದ್ದ ಮಧ್ಯಪ್ರದೇಶ ಮಂಗಳವಾರ, ನಾಲ್ಕನೇ ದಿನದಾಟದ ಕೊನೆಗೆ 6 ವಿಕೆಟ್‌ಗೆ 228 ರನ್ ಗಳಿಸಿ ಹೋರಾಟದ ವಿಶ್ವಾಸದಲ್ಲಿತ್ತು. ಆದರೆ ಆದಿತ್ಯ ಮತ್ತು ಯಶ್ ದಾಳಿಗೆ ಸಿಲುಕಿದ ಮಧ್ಯಪ್ರದೇಶ ಹೋರಾಟ ತೋರದೇ 81.3 ಓವರುಗಳಲ್ಲಿ 258 ರನ್‌ಗಳಿಗೆ ಆಲೌಟ್ ಆಯಿತು. ಮೂರನೇ ಬಾರಿಯ ಫೈನಲ್ ಕನಸು ಭಗ್ನಗೊಂಡಿತು.

ಮೊದಲ ಇನಿಂಗ್ಸ್‌ನಲ್ಲಿ 82 ರನ್‌ಗಳಿಂದ ಹಿಂದುಳಿದಿದ್ದರೂ ಚೇತರಿಸಿಕೊಂಡ ಆತಿಥೇಯ ವಿದರ್ಭ ಸ್ಮರಣೀಯ ಗೆಲುವು ದಾಖಲಿಸಿತು. ವಿದರ್ಭ ಮೂರನೇ ಬಾರಿ ಫೈನಲ್‌ಗೇರಿದ್ದು, ಈ ಹಿಂದಿನ ಎರಡೂ ಸಂದರ್ಭಗಳಲ್ಲಿ ಪ್ರಶಸ್ತಿ ಗೆದ್ದಿತ್ತು. 2017–18ರಲ್ಲಿ ದೆಹಲಿ ತಂಡವನ್ನು, 2018–19 ರಲ್ಲಿ ಸೌರಾಷ್ಟ್ರ ತಂಡವನ್ನು ಸೋಲಿಸಿತ್ತು.

ಕುಮಾರ ಕಾರ್ತಿಕೇಯ (0) ದಿನದ ನಾಲ್ಕನೇ ಎಸೆತದಲ್ಲಿ ಠಾಕರೆ ಎಸೆತದಲ್ಲಿ ಬೌಲ್ಡ್ ಆದರು. ಅನುಭವ ಅಗರವಾಲ್ ಕೂಡ ಇದೇ ರೀತಿ ನಿರ್ಗಮಿಸಿದಾಗ ಮೊತ್ತ 8 ವಿಕೆಟ್‌ಗೆ 234. ವಿದರ್ಭ ಗೆಲುವು ಖಚಿತವಾಯಿತು. ಮಂಗಳವಾರ 16 ರನ್ ಗಳಿಸಿದ್ದ ಸಾರಾಂಶ್ ಜೈನ್ ಆ ಮೊತ್ತಕ್ಕೆ 9 ರನ್ ಸೇರಿಸುವಷ್ಟರಲ್ಲಿ ಯಶ್ ಠಾಕೂರ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಕೊನೆಯವರಾಗಿ ಕುಲವಂತ್ ಖೆಜ್ರೋಲಿಯಾ (11) ಕೂಡ ಬೌಲ್ಡ್ ಆದರು.

ಸ್ಕೋರುಗಳು: ಮೊದಲ ಇನಿಂಗ್ಸ್: ವಿದರ್ಭ: 170, ಮಧ್ಯಪ್ರದೇಶ: 252; ಎರಡನೇ ಇನಿಂಗ್ಸ್: ವಿದರ್ಭ: 402; ಮಧ್ಯಪ್ರದೇಶ: 81.3 ಓವರುಗಳಲ್ಲಿ 258 (ಸಾರಾಂಶ್ ಜೈನ್ 25; ಆದಿತ್ಯ ಸರ್ವಟೆ 56ಕ್ಕೆ2, ಅದಿತ್ಯ ಥಾಕರೆ 45ಕ್ಕೆ2, ಯಶ್ ಠಾಕೂರ್ 60ಕ್ಕೆ3, ಅಕ್ಷಯ್ ವಾಖರೆ 34ಕ್ಕೆ2).

ಬಾಕ್ಸಿಂಗ್: ನಿಶಾಂತ್ ಶುಭಾರಂಭ

ನಿಶಾಂತ್ ದೇವ್

ಬುಸ್ತೊ ಅರ್ಸಿಝಿಯೊ (ಇಟಲಿ), (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ನಿಶಾಂತ್ ದೇವ್, ಪ್ರಥಮ ಒಲಿಂಪಿಕ್ ಬಾಕ್ಸಿಂಗ್ ಅರ್ಹತಾ ಟೂರ್ನಿಯಲ್ಲಿ 3–1 ರಿಂದ ಇಂಗ್ಲೆಂಡ್‌ನ ಲೂಯಿಸ್ ರಿಚರ್ಡ್ಸನ್ ಅವರನ್ನು ರೋಚಕ ಹೋರಾಟದಲ್ಲಿ ಸೋಲಿಸಿ ಬುಧವಾರ ಶುಭಾರಂಭ ಮಾಡಿದರು. ಆದರೆ ಇನ್ನೊಬ್ಬ ಅನುಭವಿ ಬಾಕ್ಸರ್ ಶಿವ ಥಾಪಾ ಸೋಲನುಭವಿಸಿದರು.

71 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ ನಿಶಾಂತ್ ಅವರು ಎದುರಾಳಿಯಾದ ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ರಿಚರ್ಡ್ಸನ್ ಎದುರು ಬೇಗನೇ ಹೊಂದಿಕೊಂಡು ಆಕ್ರಮಣಕ್ಕೆ ಇಳಿದು ಗೆಲ್ಲುವಲ್ಲಿ ಯಶಸ್ವಿ ಆದರು.

ಆದರೆ, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಆರು ಸಲ ಪದಕ ಗೆದ್ದಿರುವ ಶಿವ ಥಾಪಾ (63.5 ಕೆ.ಜಿ) ಹೊರಬಿದ್ದರು. ಹಾಲಿ ಚಾಂಪಿಯನ್ ಆಗಿರುವ ಉಜ್ಬೇಕಿಸ್ತಾನದ ರಸ್ಲಾನ್ ಅಬ್ದುಲ್ಲೇವ್, ಭಾರತದ ಎದುರಾಳಿಯನ್ನು ಸೋಲಿಸಿದರು.

ಬಾಂಗ್ಲಾಕ್ಕೆ ಜಯ

ಸಿಲ್ಹೆಟ್ (ಎಪಿ): ನಾಯಕ ನಜ್ಮುಲ್ ಹುಸೇನ್ ಶಾಂಟೊ ಅವರ ಅಜೇಯ ಅರ್ಧಶತಕದ ಬಲದಿಂದ ಬಾಂಗ್ಲಾದೇಶ ತಂಡವು ಶ್ರೀಲಂಕಾ ವಿರುದ್ಧದ ಎರಡನೇ ಟಿ–20 ಪಂದ್ಯದಲ್ಲಿ ಎಂಟು ವಿಕೆಟ್‌ಗಳ ಜಯ ಸಾಧಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ ಉಭಯ ತಂಡಗಳು 1–1ರಿಂದ ಸಮಬಲ ಸಾಧಿಸಿದಂತಾಗಿದೆ.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 20 ಓವರುಗಳಲ್ಲಿ 5 ವಿಕೆಟ್‌ಗೆ 165 (ಕಮಿಂದು ಮೆಂಡಿಸ್ 37, ಕುಶಾಲ್ ಮೆಂಡಿಸ್ 36; ಸೌಮ್ಯ ಸರ್ಕಾರ್ 5ಕ್ಕೆ 1). ಬಾಂಗ್ಲಾದೇಶ 18.1 ಓವರುಗಳಲ್ಲಿ 2 ವಿಕೆಟ್‌ಗೆ 170 (ನಜ್ಮುಲ್ ಹುಸೇನ್ ಶಾಂಟೊ ಔಟಾಗದೆ 53, ಲಿಟ್ಟನ್ ದಾಸ್ 36; ಮಥೀಷ ಪಥಿರಾಣ 28ಕ್ಕೆ2)

ಡಬ್ಲ್ಯುಪಿಎಲ್: ವೋಲ್ವಾರ್ಟ್, ಮೂನಿ ಬಿರುಸಿನ ಆಟ

ಗುಜರಾತ್‌ಗೆ ಮೊದಲ ಗೆಲುವು

ನವದೆಹಲಿ (ಪಿಟಿಐ): ಆರಂಭ ಆಟಗಾರ್ತಿಯರಾದ ಲಾರಾ ವೋಲ್ವಾರ್ಟ್ ಮತ್ತು ಬೆತ್ ಮೂನಿ ಅವರು ಭರ್ಜರಿ ಅರ್ಧ ಶತಕಗಳನ್ನು ಗಳಿಸಿದರು. ಇವರಿಬ್ಬರ ಅಮೋಘ 141 ರನ್ ಜೊತೆಯಾಟದ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡ ಬುಧವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 19 ರನ್‌ಗಳಿಂದ ಸೋಲಿಸಿತು. ಇದು ಗುಜರಾತ್‌ಗೆ ಎರಡನೇ ಆವೃತ್ತಿಯಲ್ಲಿ ಮೊದಲ ಜಯ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಗುಜರಾತ್ ತಂಡ 20 ಓವರುಗಳಲ್ಲಿ 5 ವಿಕೆಟ್‌ಗೆ 199 ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ವೋಲ್ವಾರ್ಟ್ 45 ಎಸೆತಗಳಲ್ಲಿ 76 ರನ್ (4x13) ಸಿಡಿಸಿದರೆ, ನಾಯಕಿ, ವಿಕೆಟ್ ಕೀಪರ್ ಬೆತ್ ಮೂನಿ 51 ಎಸೆತಗಳಲ್ಲಿ ಅಜೇಯ 85 ರನ್ (4x12, 6x1) ಚಚ್ಚಿದರು. ಈ ದೊಡ್ಡ ಗುರಿಯ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡು 8 ವಿಕೆಟ್‌ಗೆ 180 ರನ್ ಗಳಿಸಲಷ್ಟೇ ಶಕ್ತವಾಯಿತು.

ಆರ್‌ಸಿಬಿ ನಾಯಕಿ ಸ್ಮೃತಿ ಮಂದಾನ (24) ಪವರ್‌ಪ್ಲೇಯೊಳಗೆ ನಿರ್ಗಮಿಸಿದ್ದು ತಂಡಕ್ಕೆ ಹಿನ್ನಡೆಯಾಯಿತು. ಮಧ್ಯಮ ಕ್ರಮಾಂಕದಲ್ಲಿ ಯಾರಿಂದಲೂ ದೊಡ್ಡ ಕೊಡುಗೆ ಬರಲಿಲ್ಲ. ಜಾರ್ಜಿಯಾ ವೇರ್‌ಹಾಮ್ (48, 22ಎ, 4x6, 6x2) ಕೊನೆಯಲ್ಲಿ ಮಿಂಚಿನ ಆಟ ಪ್ರದರ್ಶಿಸಿದರೂ ಗುರಿ ದೂರದಲ್ಲಿತ್ತು. ಕೊನೆಯ ಮೂವರು ಸೇರಿದಂತೆ ಒಟ್ಟು ನಾಲ್ಕು ಮಂದಿ ರನೌಟ್ ಆದರು.

ಗುಜರಾತ್ ಜೈಂಟ್ಸ್ ತಂಡದ ಬೆತ್ ಮೂನಿ ಬ್ಯಾಟಿಂಗ್ —ಪಿಟಿಐ ಚಿತ್ರ

ಭರ್ಜರಿ ಜೊತೆಯಾಟ: ಜೈಂಟ್ಸ್ ಆರಂಭ ಆಟಗಾರ್ತಿ ವೋಲ್ವಾರ್ಟ್ ವಿಶ್ವಾಸದಿಂದಲೇ ಬ್ಯಾಟ್ ಬೀಸತೊಡಗಿದರು. ಸೋಫಿ ಡಿವೈನ್ ಅವರ ಮೊದಲ ಓವರಿನಲ್ಲೇ 13 ರನ್‌ಗಳು ಬಂದವು. ಎಲ್ಲಿಸ್ ಪೆರಿ ಅವರು ಮಾಡಿದ ಪಂದ್ಯದ 10ನೇ ಓವರ್‌ನ ಮೊದಲ ಮೂರು ಎಸೆತಗಳಲ್ಲಿ ವೋಲ್ವಾರ್ಟ್ ಬ್ಯಾಟಿನಿಂದ ಹ್ಯಾಟ್ರಿಕ್ ಬೌಂಡರಿಗಳು ಬಂದವು. ಎರಡನೇ ಬೌಂಡರಿ ಬಿರುಸಿನ ನೇರ ಡ್ರೈವ್ ಆಗಿದ್ದು ಆ ಹೊಡೆತದ ಮೂಲಕವೇ ಅವರು 32 ಎಸೆತಗಳಲ್ಲಿ ಅರ್ಧ ಶತಕ ದಾಟಿದರು.

ಆರ್‌ಸಿಬಿಗೆ ಮೊದಲ ವಿಕೆಟ್ ದಕ್ಕಿದ್ದೇ 13ನೇ ಓವರಿನಲ್ಲಿ ರನೌಟ್ ಮೂಲಕ. ಇನ್ನೊಂದೆಡೆ ಮೂನಿ ಬಿರುಸಿನ ಆಟ ಮುಂದುವರಿಸಿ ಎರಡನೇ ವಿಕೆಟ್‌ಗೆ ಫೋಬಿ ಲಿಚ್‌ಫೀಲ್ಡ್ ಜೊತೆಗೆ 33 ಎಸೆತಗಳಲ್ಲಿ 52 ರನ್ ಸೇರಿಸಿದರು. ಕೊನೆಯ 10 ಎಸೆತಗಳಲ್ಲಿ ಏಳು ರನ್‌ಗಳಷ್ಟೇ ಬಂದು ಮೂರು ವಿಕೆಟ್‌ಗಳೂ ಬಿದ್ದವು. ಹೀಗಾಗಿ 200 ರನ್‌ಗಳ ಗಡಿ ದಾಟುವ ಗುರಿ ಈಡೇರಲಿಲ್ಲ.

ಸ್ಕೋರುಗಳು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 199 (ಲಾರಾ ವೋಲ್ವಾರ್ಟ್ 76, ಬೆತ್ ಮೂನಿ ಔಟಾಗದೇ 85). **ಆರ್‌ಸಿಬಿ:** 20 ಓವರುಗಳಲ್ಲಿ 7 ವಿಕೆಟ್‌ಗೆ 180 (ಸ್ಮೃತಿ ಮಂದಾನ 24, ಎಲ್ಲಿಸ್ ಪೆರಿ 24, ರಿಚಾ ಘೋಷ್ 30, ಜಾರ್ಜಿಯಾ ವೇರ್‌ಹಾಮ್ 48; ಆಶ್ಲೆ ಗಾರ್ಡನರ್ 23ಕ್ಕೆ2, ಕ್ಯಾಥ್ರಿನ್ ಬ್ರೈಸ್ 26ಕ್ಕೆ1). **ಪಂದ್ಯದ ಆಟಗಾರ್ತಿ:** ಬೆತ್ ಮೂನಿ

ಇಂದಿನ ಪಂದ್ಯ (ರಾತ್ರಿ 7.30) ಯುಪಿ ವಾರಿಯರ್ಸ್– ಮುಂಬೈ ಇಂಡಿಯನ್ಸ್, ನೇರಪ್ರಸಾರ: ಸ್ಪೋರ್ಟ್ಸ್ 18

ರ‍್ಯಾಂಕಿಂಗ್: ಅಗ್ರ 10ರಲ್ಲಿ ಜೈಸ್ವಾಲ್

ದುಬೈ (ಪಿಟಿಐ): ಭಾರತದ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಬುಧವಾರ ಪ್ರಕಟವಾದ ಐಸಿಸಿ ಟೆಸ್ಟ್ ಬ್ಯಾಟರ್‌ಗಳ ಕ್ರಮಾಂಕ ಪಟ್ಟಿಯಲ್ಲಿ ಮೊದಲ ಬಾರಿ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ. ಇಂಗ್ಲೆಂಡ್ ವಿರುದ್ಧ ಹಾಲಿ ಸರಣಿಯಲ್ಲಿ ರನ್‌ಹೊಳೆ ಹರಿಸಿರುವ ಜೈಸ್ವಾಲ್ 12 ರಿಂದ 10ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಕಳೆದ ವರ್ಷ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಜೈಸ್ವಾಲ್ 727 ರೇಟಿಂಗ್ ಪಾಯಿಂಟ್ಸ್ ಹೊಂದಿದ್ದಾರೆ. 22 ವರ್ಷದ ಜೈಸ್ವಾಲ್ ಟೆಸ್ಟ್ ಸರಣಿಯೊಂದರಲ್ಲಿ 600ಕ್ಕೂ ಹೆಚ್ಚು ರನ್ ಹೊಡೆದ ಭಾರತದ ಐದನೇ ಆಟಗಾರ ಎನಿಸಿದ್ದಾರೆ. ಸುನಿಲ್ ಗಾವಸ್ಕರ್, ದಿಲೀಪ್ ಸರ್ದೇಸಾಯಿ, ರಾಹುಲ್ ದ್ರಾವಿಡ್ ಮತ್ತು ವಿರಾಟ್ ಕೊಹ್ಲಿ ಇತರ ನಾಲ್ವರು.

ಇಂಗ್ಲೆಂಡ್ ವಿರುದ್ಧ ನಾಲ್ಕು ಟೆಸ್ಟ್‌ಗಳಲ್ಲಿ ಅವರು 93.57 ಸರಾಸರಿ ಯಲ್ಲಿ 655 ರನ್ ಕಲೆಹಾಕಿದ್ದಾರೆ. ಇದರಲ್ಲಿ ಎರಡು ದ್ವಿಶತಕ, ಎರಡು ಅರ್ಧ ಶತಕಗಳಿವೆ. ಗಾವಸ್ಕರ್ ಸರಣಿಯೊಂದರಲ್ಲಿ ಅತ್ಯಧಿಕ (774) ರನ್ ಗಳಿಸಿದ ದಾಖಲೆ ಹೊಂದಿದ್ದಾರೆ.

ಇಂಗ್ಲೆಂಡ್ ವಿರುದ್ಧ ಮೂರನೇ ಟೆಸ್ಟ್‌ನಲ್ಲಿ 131 ರನ್ ಹೊಡೆದ ರೋಹಿತ್ ಶರ್ಮಾ ಕ್ರಮಾಂಕಪಟ್ಟಿಯಲ್ಲಿ 11ನೇ ಸ್ಥಾನಕ್ಕೆ ಏರಿದ್ದಾರೆ. ವಿರಾಟ್ ಕೊಹ್ಲಿ ಒಂದು ಸ್ಥಾನ ಬಡ್ತಿ ಪಡೆದು 8ನೇ ಕ್ರಮಾಂಕದಲ್ಲಿದ್ದಾರೆ.

ರೂಪದರ್ಶಿ ಆತ್ಮಹತ್ಯೆ: ಕ್ರಿಕೆಟಿಗನ ವಿಚಾರಣೆ

ಸೂರತ್ (ಪಿಟಿಐ): ರೂಪದರ್ಶಿ ತಾನ್ಯಾ ಸಿಂಗ್ ಅವರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಐಪಿಎಲ್ ಆಟಗಾರ ಅಭಿಷೇಕ್ ಶರ್ಮಾ ಅವರನ್ನು ನಗರದಲ್ಲಿ ಪೊಲೀಸರು ಸುಮಾರು ನಾಲ್ಕು ಗಂಟೆಗಳ ಕಾಲ ವಿಚಾರಣೆ ನಡೆಸಿದ್ದಾರೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಏಳು ತಿಂಗಳ ಹಿಂದಿನವರೆಗೆ ಶರ್ಮಾ ಅವರು ತಾನ್ಯಾ ಜೊತೆ ಸಂಬಂಧ ಹೊಂದಿದ್ದರು ಎನ್ನಲಾಗಿದೆ. ಅವರನ್ನು ಮಂಗಳವಾರ ವೆಸು ಪೊಲೀಸ್ ಠಾಣೆಗೆ ಕರೆಸಿ ವಿಚಾರಣೆ ನಡೆಸಿ ನಂತರ ಕಳುಹಿಸಲಾಯಿತು. 28 ವರ್ಷದ ತಾನ್ಯಾ ಅವರ ಮೃತದೇಹ ಇಲ್ಲಿನ ವೆಸು ಪ್ರದೇಶದ ಅವರ ಅಪಾರ್ಟ್‌ಮೆಂಟ್‌ನಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಫೆ. 19ರಂದು ಪತ್ತೆಯಾಗಿತ್ತು. ಪಂಜಾಬ್‌ನವರಾದ ಶರ್ಮಾ ಅವರನ್ನು ಹೇಳಿಕೆ ನೀಡಲು ಬರುವಂತೆ ಪೊಲೀಸರು ಸೂಚಿಸಿದ್ದರು.

ಈ ಹಿಂದೆ ಇಬ್ಬರೂ ಸಂಪರ್ಕದಲ್ಲಿದ್ದರು ಮತ್ತು ರೂಪದರ್ಶಿಯು ಅಭಿಷೇಕ್ ಅವರಿಗೆ ಮೊಬೈಲ್ ಸಂದೇಶಗಳನ್ನು ಕಳುಹಿಸಿದ್ದರು ಎಂಬುದು ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು.

ರಣಜಿ ಆಡಿರುವ ಅಭಿಷೇಕ್, ಐಪಿಎಲ್‌ನಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ (ಹಾಲಿ ಡೆಲ್ಲಿ ಕ್ಯಾಪಿಟಲ್ಸ್) ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಪ್ರತಿನಿಧಿಸಿದ್ದಾರೆ.

ಫ್ರೆಂಚ್ ಓಪನ್: ಕಿದಂಬಿ ಮುನ್ನಡೆ



ಪ್ಯಾರಿಸ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಬುಧವಾರ ಎರಡನೇ ಸುತ್ತು ಪ್ರವೇಶಿಸಿದರು. ಆದರೆ, ಭಾರತದ ಅಗ್ರಗಣ್ಯ ಆಟಗಾರ ಎಚ್.ಎಸ್. ಪ್ರಣಯ್ ಆರಂಭಿಕ ಸುತ್ತಿನಲ್ಲೇ ಆಘಾತ ಅನುಭವಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಶ್ರೀಕಾಂತ್ ಅವರು 21-15, 20-22, 21-8 ರಿಂದ ಚೀನಾ ತೈಪೆಯ ಚೌ ಟಿಯೆನ್ ಚೆನ್ ಅವರನ್ನು ಮಣಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವುದಕ್ಕಾಗಿ ವಿಶ್ವ ರ‍್ಯಾಂಕಿಂಗ್ (ಪ್ರಸ್ತುತ 24ನೇ ರ‍್ಯಾಂಕ್) ಸುಧಾರಿಸಲು ಪ್ರಯತ್ನಿಸುತ್ತಿರುವ ಶ್ರೀಕಾಂತ್, 66 ನಿಮಿಷಗಳ ಹೋರಾಟದಲ್ಲಿ ತನಗಿಂತ 10 ಕ್ರಮಾಂಕ ಮೇಲಿರುವ ಆಟಗಾರನನ್ನು ಹಿಮ್ಮೆಟ್ಟಿಸಿದರು.

ಮುಂದಿನ ಸುತ್ತಿನಲ್ಲಿ ಶ್ರೀಕಾಂತ್, ವಿಶ್ವದ 17ನೇ ರ‍್ಯಾಂಕ್‌ನ ಲು ಗುವಾಂಗ್ ಜು (ಚೀನಾ) ವಿರುದ್ಧ ಸೆಣಸಲಿದ್ದಾರೆ. ಗುವಾಂಗ್ ಅವರು 21–17, 21–17 ರಿಂದ ಪ್ರಣಯ್ ಅವರನ್ನು ನೇರ ಗೇಮ್‌ಗಳಿಂದ ಮಣಿಸಿದರು. ಆರಂಭದಲ್ಲಿ ಮುನ್ನಡೆ ಸಾಧಿಸಿದ್ದ ವಿಶ್ವದ ಏಳನೇ ಕ್ರಮಾಂಕದ ಪ್ರಣಯ್ ನಂತರ ಹಿನ್ನಡೆ ಅನುಭವಿಸಿದರು.

ಎರಡನೇ ಸುತ್ತಿಗೆ ಸಿಂಧು: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ 20-22, 22-20, 21-19ರಿಂದ ಕೆನಡಾದ ಮಿಚೆಲ್ ಲೀ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಒಂದು ಗಂಟೆ 20 ನಿಮಿಷ ನಡೆದ ಹೋರಾಟದಲ್ಲಿ ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತದ ಆಟಗಾರ್ತಿ ನಂತರ ತಿರುಗೇಟು ನೀಡಿದರು. ಲೀ ವಿರುದ್ಧದ 13ನೇ ಮುಖಾಮುಖಿಯಲ್ಲಿ ಸಿಂಧು ಅವರಿಗೆ ಇದು 10ನೇ ಗೆಲುವಾಗಿದೆ.

ಒಲಿಂಪಿಕ್ಸ್ ಹಾಕಿ: ವೇಳಾಪಟ್ಟಿ ಪ್ರಕಟ

ಲುಸಾನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಜುಲೈ 27ರಂದು ನ್ಯೂಜಿಲೆಂಡ್ ವಿರುದ್ಧ ಆಡಲಿದೆ. ಬುಧವಾರ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತ ಈ ಸಲ 'ಬಿ' ಗುಂಪಿನಲ್ಲಿದೆ. ಭಾರತ ಜುಲೈ 29ರಂದು ಅರ್ಜೆಂಟೀನಾ ತಂಡವನ್ನು, 30ರಂದು ಐರ್ಲೆಂಡ್ ವಿರುದ್ಧ, ಆಗಸ್ಟ್ 1ರಂದು ಬೆಲ್ಜಿಯಂ ವಿರುದ್ಧ, 2ರಂದು ಆಸ್ಟ್ರೇಲಿಯಾ ವಿರುದ್ಧ ಆಡಲಿದೆ. 'ಎ' ಗುಂಪಿನಲ್ಲಿ ನೆದರ್ಲೆಂಡ್ಸ್, ಸ್ಪೇನ್, ಜರ್ಮನಿ, ಫ್ರಾನ್ಸ್, ಬ್ರಿಟನ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳಿವೆ. ಕ್ವಾರ್ಟರ್‌ಫೈನಲ್ ಪಂದ್ಯಗಳು ಆ. 4ರಂದು ಮತ್ತು ಸೆಮಿಫೈನಲ್ ಪಂದ್ಯಗಳು ಆ. 6 ರಂದು ನಡೆಯಲಿವೆ. ಕಂಚಿನ ಪದಕ ಪಡೆಯುವ ತಂಡ ನಿರ್ಧರಿಸಲು ಪಂದ್ಯ ಮತ್ತು ಫೈನಲ್ ಆ 8ರಂದು ನಡೆಯಲಿವೆ.

ಸಂಕ್ಷಿಪ್ತ ಸುದ್ದಿ

ಧೀರಜ್, ತನುಶ್ರೀಗೆ ನಾಯಕತ್ವ

ಮಂಗಳೂರು: ಪಟ್ನಾದಲ್ಲಿ ಇದೇ 10ರಿಂದ 14ರ ವರೆಗೆ ನಡೆಯಲಿರುವ ರಾಷ್ಟ್ರೀಯ ಜೂನಿಯರ್ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ಬಾಲಕ ಮತ್ತು ಬಾಲಕಿಯರ ತಂಡಗಳನ್ನು ಕ್ರಮವಾಗಿ ಧೀರಜ್ ರೆಡ್ಡಿ ಮತ್ತು ತನುಶ್ರೀ ಮುನ್ನಡೆಸುವರು.

ತುಮಕೂರಿನಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯ ನಂತರ ರಾಜ್ಯ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್ ಬುಧವಾರ ತಂಡಗಳನ್ನು ಪ್ರಕಟಿಸಿದ್ದಾರೆ.

ತಂಡಗಳು: ಬಾಲಕರು: ಧೀರಜ್ ರೆಡ್ಡಿ (ನಾಯಕ), ಪ್ರಜ್ವಲ್, ಕಾರ್ತಿಕ್, ಸಂಜಯ್, ವಿನಯ್, ಆಕಾಶ್, ಸುದೀಪ್, ಪ್ರಕಾಶ್, ತರುಣ್, ಕೌಶಿಕ್. ಕೋಚ್: ಕೆ.ಜೆ.ಗಿರಿಪ್ರಸಾದ್; ಮ್ಯಾನೇಜರ್: ಕೌಶಲ್ ರಾಮ್. ಬಾಲಕಿಯರು: ತನುಶ್ರೀ, ಗೀತಾ, ಭವ್ಯ, ಧನುಶ್ರೀ, ಸುಚಿತ್ರಾ, ಅಂಕಿತಾ, ವಿಷ್ಣು ಪ್ರಿಯಾ, ನಂದಿನಿ, ಸ್ಮಿತಾ, ಶ್ರೀನಿಧಿ. ಕೋಚ್: ಜಂಬಣ್ಣ, ಮ್ಯಾನೇಜರ್: ದುರ್ಗಾದೇವಿ.

ಟೆನಿಸ್: ನಗಾಲ್‌ಗೆ ಸೋಲು

ಇಂಡಿಯನ್ ವೆಲ್ಸ್ (ಅಮೆರಿಕ), (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್, ಇಂಡಿಯನ್ ವೆಲ್ಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಅರ್ಹತಾ ವಿಭಾಗದ ಅಂತಿಮ ಸುತ್ತಿನಲ್ಲಿ ದಕ್ಷಿಣ ಕೊರಿಯಾದ ಸಿಯಾಂಗ್–ಚಾನ್ ಹಾಂಗ್ ಅವರನ್ನು ಸೋಲಿಸಿದರು.

26 ವರ್ಷದ ನಗಾಲ್ ಮಂಗಳವಾರ ನಡೆದ ಪಂದ್ಯದಲ್ಲಿ 6–2, 2–6, 6–7 (4–7) ರಲ್ಲಿ ಸೋಲನುಭವಿಸಿದರು. ಈ ಮೊದಲು ಅವರು ಅರ್ಹತಾ ಟೂರ್ನಿಯ ಮೊದಲ ಸುತ್ತಿನಲ್ಲಿ ಅಮೆರಿಕದ ಸ್ಟಿಫಾನ್ ದೊಸ್ತಾನಿಕ್ ಅಬರನ್ನು ಸೋಲಿಸಿದ್ದರು.

ಐಪಿಎಲ್ ಟೂರ್ನಿಗೆ ರಾಹುಲ್?

ಬೆಂಗಳೂರು: ಕ್ರಿಕೆಟಿಗ ಕೆ.ಎಲ್. ರಾಹುಲ್ ಅವರು ತೊಡೆಯ ನೋವಿಗಾಗಿ ಲಂಡನ್‌ಗೆ ತೆರಳಿ ವೈದ್ಯರ ಸಲಹೆ ಪಡೆದು ಬೆಂಗಳೂರಿಗೆ ಮರಳಿದ್ದು, ಎನ್‌ಸಿಎನಲ್ಲಿ ತರಬೇತಿ ಪಡೆಯುತ್ತಿರುವ ಫೋಟೊಗಳನ್ನು ಬುಧವಾರ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಆ ಮೂಲಕ ಅವರು ಐಪಿಎಲ್‌ಗೆ ಮರಳುವ ಸೂಚನೆ ನೀಡಿದ್ದಾರೆ.

ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿರುವ ರಾಹುಲ್, 'ಹಾಯ್' ಎಂಬ ಶೀರ್ಷಿಕೆಯೊಂದಿಗೆ ಫೋಟೊಗಳನ್ನು ಹಂಚಿಕೊಂಡಿದ್ದಾರೆ.

ಚಿನ್ನಸ್ವಾಮಿಯಲ್ಲಿ ಫೈನಲ್ ಪಂದ್ಯ

ಬೆಂಗಳೂರು: ಕರ್ನಲ್ ಸಿ.ಕೆ. ನಾಯ್ಡು ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ಇದೇ 10ರಿಂದ 14ರವರೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಕರ್ನಾಟಕ ತಂಡವು ಫೈನಲ್‌ನಲ್ಲಿ ಉತ್ತರ ಪ್ರದೇಶವನ್ನು ಎದುರಿಸಲಿದೆ.

ಭಯೋತ್ಪಾದಕರ ಪಟ್ಟಿಗೆ ಕ್ಯಾಸ್ಪರೋವ್

ಮಾಸ್ಕೊ (ಎಎಫ್‌ಪಿ): ರಷ್ಯಾದ ಆರ್ಥಿಕ ನಿಗಾ ಸಮಿತಿಯು ಚೆಸ್ ಗ್ರ್ಯಾಂಡ್‌ಮಾಸ್ಟರ್ ಹಾಗೂ ರಾಜಕೀಯ ಹೋರಾಟಗಾರ ಗ್ಯಾರಿ ಕ್ಯಾಸ್ಪರೋವ್ ಅವರನ್ನು 'ಭಯೋತ್ಪಾದಕರು ಹಾಗೂ ಉಗ್ರಗಾಮಿಗಳ' ಪಟ್ಟಿಗೆ ಬುಧವಾರ ಸೇರಿಸಿದೆ.

ರಷ್ಯಾದಲ್ಲಿ ಜನಿಸಿದ, ವಿಶ್ವದ ಮಾಜಿ ಚೆಸ್ ಚಾಂಪಿಯನ್ ಕ್ಯಾಸ್ಪರೋವ್, ಬಹುಕಾಲದಿಂದಲೂ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ವಿರೋಧಿಸುತ್ತಾ ಬಂದಿದ್ದಾರೆ. ದಶಕಕ್ಕೂ ಹೆಚ್ಚು ಕಾಲದಿಂದ ಅವರು ಅಮೆರಿಕದಲ್ಲಿ ನೆಲೆಸಿದ್ದಾರೆ.